ಶುಕ್ರವಾರ, ಜೂನ್ 3, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಚಿತ್ರನಟ, ನಿರ್ದೇಶಕ ಕಮಲ್ ಹಾಸನ್ ಅವರು ಗುರುವಾರ ಬೆಂಗಳೂರಿನ ಮಂತ್ರಿ ಮಾಲ್‌ನಲ್ಲಿ ತಮ್ಮ 'ವಿಕ್ರಮ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಶುಕ್ರವಾರ, ಜೂನ್ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 153 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಚಾರ್ಲಿ’ ಜೊತೆ ದೇಶಸುತ್ತಿದ ಸಂಗೀತಾ ಶೃಂಗೇರಿ ಹೊಸ ಚಿತ್ರಗಳನ್ನು ಒಪ್ಪಿಕೊಳ್ಳದಿರಲು ಕಾರಣವಿದೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,818 ▲	16,628 ▲	₹52,850 (ಬೆಂಗಳೂರು) ▲	₹63,700 (ಬೆಂಗಳೂರು) ▲	77.60 ▼

ಹಾರ್ದಿಕ್ ಪಟೇಲ್ ಬಿಜೆಪಿಗೆ ಸೇರ್ಪಡೆ 5

ಉಕ್ರೇನ್ ಸಂಘರ್ಷ: ನಿರ್ಬಂಧದಿಂದ ಕಂಗೆಟ್ಟ ರಷ್ಯಾದಿಂದ ಭಾರತಕ್ಕೆ ಪೂರೈಕೆ

ಕಚ್ಚಾ ತೈಲ 40 ಡಾಲರ್ ಅಗ್ಗ

ಲಾನ್‌ಸೆಸ್ಟನ್ (ಆಸ್ಟ್ರೇಲಿಯಾ) (ರಾಯಿಟರ್ಸ್): ಭಾರತದ ತೈಲ ಸಂಸ್ಕರಣ ಕಂಪನಿಗಳು ರಷ್ಯಾದಿಂದ ಭಾರಿ ಕಡಿಮೆ ದರದಲ್ಲಿ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿವೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರಕ್ಕಿಂತ 40 ಡಾಲರ್ ವರೆಗೆ ಕಡಿಮೆ ದರದಲ್ಲಿ ಖರೀದಿ ಮಾಡಲಾಗುತ್ತಿದೆ. ಸರಕು ವಹಿವಾಟು ವಿಶ್ಲೇಷಣಾ ಸಂಸ್ಥೆ ಕೆಪ್ಲರ್ ಪ್ರಕಾರ, ರಷ್ಯಾ ದಿಂದ ಭಾರತಕ್ಕೆ ಕಚ್ಚಾ ತೈಲದ ಆಮದು ಮೇ ತಿಂಗಳಲ್ಲಿ ದಾಖಲೆ ಮಟ್ಟ ಮುಟ್ಟಿದೆ. ಜೂನ್‌ನಲ್ಲಿ ಇದು ಇನ್ನೂ ಹೆಚ್ಚಬಹುದು ಎಂದು ಅಂದಾಜಿಸಲಾಗಿದೆ.

ಬ್ರೆಂಟ್ ಕಚ್ಚಾ ತೈಲದ ದರವು ಗುರುವಾರ ಪ್ರತಿ ಬ್ಯಾರಲ್‌ಗೆ 113.3 ಡಾಲರ್ ಇತ್ತು. ರಷ್ಯಾದಿಂದ ಆಮದಾಗುವ ಕಚ್ಚಾ ತೈಲಕ್ಕೆ ಪ್ರತಿ ಬ್ಯಾರಲ್‌ಗೆ ಇದಕ್ಕಿಂತ 40 ಡಾಲರ್ ಕಡಿಮೆ ಪಾವತಿಸಲಾಗುತ್ತಿದೆ. ಅಂದರೆ, ಪ್ರತಿ ಬ್ಯಾರಲ್‌ಗೆ ಸುಮಾರು 73 ಡಾಲರ್ ಪಾವತಿಸಲಾಗುತ್ತಿದೆ. 2021ರ ಮೇ ತಿಂಗಳಲ್ಲಿ ಅಂತರರಾಷ್ಟ್ರೀಯ ಮಾರು-ಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಪ್ರತಿ ಬ್ಯಾರಲ್‌ಗೆ 70 ಡಾಲರ್ ಆಸುಪಾಸಿನಲ್ಲಿ ಇತ್ತು. ಆಗ ಭಾರತದಲ್ಲಿ ಪೆಟ್ರೋಲ್ ದರವು ಲೀಟರ್‌ಗೆ ₹93 ಇತ್ತು. ಅಂತರರಾಷ್ಟ್ರೀಯ ಮಾರುಕಟ್ಟೆ-ಯಲ್ಲಿ ದರ ಕಡಿಮೆ ಇದ್ದರೂ ಅದನ್ನು ಗ್ರಾಹಕರಿಗೆ ವರ್ಗಾಯಿಸಿಲ್ಲ ಎಂಬ ಆಕ್ಷೇಪ ಆಗ ಕೇಳಿ ಬಂದಿತ್ತು.

ರಷ್ಯಾದಿಂದ ಆಮದು: ರಿಲಯನ್ಸ್ ಇಂಡಸ್ಟ್ರೀಸ್ ಸಿಂಹಪಾಲು

3.42 ಕೋಟಿ ಬ್ಯಾರಲ್
ಫೆಬ್ರುವರಿ 24ರಿಂದ ಮೇ 26ರವರೆಗೆ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಕಚ್ಚಾತೈಲ



1.5 ಕೋಟಿ ಬ್ಯಾರಲ್
ಈ ಅವಧಿಯಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಂಡ ಕಚ್ಚಾತೈಲ

90 ಲಕ್ಷ ಬ್ಯಾರಲ್
ಈ ಅವಧಿಯಲ್ಲಿ ನಯಾರಾ ಎನರ್ಜೀಸ್ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಂಡ ಕಚ್ಚಾತೈಲ

1.02 ಕೋಟಿ ಬ್ಯಾರಲ್
ಈ ಅವಧಿಯಲ್ಲಿ ಎಲ್ಲಾ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಂಡ ಕಚ್ಚಾತೈಲ

ಖಾಸಗಿ ಕಂಪನಿಗಳ ಪಾಲು ಶೇ 70ಕ್ಕೂ ಹೆಚ್ಚು

- **43.85**% ಈ ಅವಧಿಯಲ್ಲಿ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಒಟ್ಟು ಕಚ್ಚಾತೈಲದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಪಾಲು
- **26.31**% ಈ ಅವಧಿಯಲ್ಲಿ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಒಟ್ಟು ಕಚ್ಚಾತೈಲದಲ್ಲಿ ನಯಾರಾ ಎನರ್ಜೀಸ್‌ನ ಪಾಲು
- **70.16**% ಈ ಅವಧಿಯಲ್ಲಿ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಒಟ್ಟು ಕಚ್ಚಾತೈಲದಲ್ಲಿ ಖಾಸಗಿ ಕಂಪನಿಗಳ (ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜೀಸ್) ಪಾಲು
- **29.84**% ಈ ಅವಧಿಯಲ್ಲಿ ರಷ್ಯಾದಿಂದ ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಒಟ್ಟು ಕಚ್ಚಾತೈಲದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳ ಪಾಲು

ಪ್ರಜಾವಾಣಿ ಗ್ರಾಫಿಕ್ಸ್

ಮೇ ತಿಂಗಳಲ್ಲಿ ರಷ್ಯಾದಿಂದ ಆಗಿರುವ ಕಚ್ಚಾ ತೈಲ ಆಮದು ಪ್ರತಿ ದಿನಕ್ಕೆ 8,40,645 ಬ್ಯಾರಲ್. ಏಪ್ರಿಲ್ ತಿಂಗಳಿಗೆ ಹೋಲಿಸಿದರೆ ಇದು 3,88,666 ಬ್ಯಾರಲ್‌ನಷ್ಟು ಹೆಚ್ಚು. ಕಳೆದ ವರ್ಷ ಮೇಯಲ್ಲಿ ರಷ್ಯಾದಿಂದ ಬರುತ್ತಿದ್ದ ಕಚ್ಚಾ ತೈಲವು ಪ್ರತಿ ದಿನಕ್ಕೆ 1,36,774 ಬ್ಯಾರಲ್.

ಜೂನ್ ತಿಂಗಳಲ್ಲಿ ಭಾರತದ ಆಮದು ಪ್ರತಿ ದಿನಕ್ಕೆ 10 ಲಕ್ಷ ಬ್ಯಾರಲ್ ಅನ್ನು ಮೀರಲಿದೆ ಎಂದು ಅಂದಾಜಿಸಲಾಗಿದೆ. ಒಂದೇ ತ್ರೈಮಾಸಿಕದ ಅವಧಿಯಲ್ಲಿ ರಷ್ಯಾದಿಂದ ಭಾರತದ ಆಮದು ತೀವ್ರಗತಿಯಲ್ಲಿ ಏರಿಕೆಯಾಗಲಿದೆ.

ಉಕ್ರೇನ್ ಮೇಲೆ ರಷ್ಯಾವು ಫೆಬ್ರುವರಿ 24ರಿಂದ ದಾಳಿ ಆರಂಭಿಸಿದೆ. ಆ ಕಾರಣದಿಂದ ರಷ್ಯಾದ ಮೇಲೆ ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ನಿರ್ಬಂಧ ಹೇರಿವೆ. ಐರೋಪ್ಯ ಒಕ್ಕೂಟದ ಎಲ್ಲ 27 ದೇಶಗಳು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಿವೆ ಅಥವಾ ಕಡಿಮೆ ಮಾಡಿವೆ. ಆ ನಷ್ಟವನ್ನು ಸರಿದೂಗಿಸಿಕೊಳ್ಳುವುದಕ್ಕಾಗಿ ರಷ್ಯಾವು ಕಡಿಮೆ ದರದಲ್ಲಿ ತೈಲವನ್ನು ಭಾರತ ಮತ್ತು ಚೀನಾಕ್ಕೆ ಪೂರೈಸುತ್ತಿದೆ.

ಆಳ-ಅಗಲ
ರಷ್ಯಾದಿಂದ ಅಗ್ಗದ ಕಚ್ಚಾತೈಲ ಭಾರತದ ಕಂಪನಿಗಳಿಗೆ ಸುಗ್ಗಿ

ಅನಧಿಕೃತ ಫಲಕ 10 ದಿನಗಳ ಗಡುವು

ಬೆಂಗಳೂರು: ವಾಹನಗಳ ನೋಂದಣಿ ಸಂಖ್ಯೆಯ ಫಲಕಗಳ ಮೇಲೆ ನಿಯಮಬಾಹಿರವಾಗಿ ಹಾಕಿರುವ ಸಂಘ–ಸಂಸ್ಥೆಯ ಹೆಸರು, ಚಿಹ್ನೆ, ಸರ್ಕಾರದ ಲಾಂಛನ ತೆರವುಗೊಳಿಸಲು ಸಾರಿಗೆ ಇಲಾಖೆ ಹತ್ತು ದಿನಗಳ ಗಡುವು ನೀಡಿದೆ.

ಸರ್ಕಾರಿ ಸೌಮ್ಯದ ಸಂಸ್ಥೆಗಳ ಮತ್ತು ಸ್ವಂತ ವಾಹನಗಳ ಮೇಲೆ ಅನಧಿಕೃತವಾಗಿ ಸರ್ಕಾರದ ಲಾಂಛನ, ರಾಷ್ಟ್ರೀಯ ಮಾನವ ಹಕ್ಕಗಳ ಆಯೋಗ, ರಾಜ್ಯ ಮಾನವ ಹಕ್ಕುಗಳ ಆಯೋಗದ ಹೆಸರುಗಳನ್ನು ಹೋಲುವಂತೆ ಹೆಸರುಗಳನ್ನು ಹೊಂದಿರುವ ಫಲಕಗಳನ್ನು ತೆರವುಗೊಳಿಸ ಬೇಕು ಎಂದು 2022ರ ಜನವರಿಯಲ್ಲಿ ಹೈಕೋರ್ಟ್ ಆದೇಶ ನೀಡಿತ್ತು. ಈ ರೀತಿಯ ಫಲಕಗಳನ್ನು ತೆರವುಗೊಳಿಸದಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುವುದು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಕೂಡ ಎಚ್ಚರಿಕೆ ನೀಡಿದ್ದರು.

‘ವಾಹನಗಳ ಮಾಲೀಕರು ಸ್ವಯಂ ಪ್ರೇರಿತವಾಗಿ ಇಂತಹ ಫಲಕಗಳನ್ನು ತೆರವುಗೊಳಿಸಬೇ-ಕು. ಇಲ್ಲದಿದ್ದರೆ ಕಾರ್ಯಾಚರಣೆ ನಡೆಸಿ ವಾಹನಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾ-ಗುತ್ತದೆ. ಇಂತಹ ವಾಹನಗಳ ಬಗ್ಗೆ ಸಾರ್ವಜನಿಕರು ಚಿತ್ರ ಸಹಿತ ವಾಟ್ಸ್‌ಆ್ಯಪ್ ಸಂಖ್ಯೆಗೆ (94498 63459) ದೂರು ನೀಡಬಹುದು’ ಎಂದು ಸಾರಿಗೆ ಆಯುಕ್ತ ಟಿ.ಎಚ್.ಎಂ. ಕುಮಾರ್ ತಿಳಿಸಿದರು.

ಕಾಶ್ಮೀರ: ಉಗ್ರರ ಗುಂಡಿಗೆ ಮತ್ತೊಬ್ಬ ಹಿಂದೂ ಬಲಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂನ ಬ್ಯಾಂಕ್ ವ್ಯವಸ್ಥಾಪಕ, ರಾಜಸ್ಥಾನ ಮೂಲದ ವಿಜಯಕುಮಾರ್ ಅವರನ್ನು ಉಗ್ರರು ಗುರುವಾರ ಗುಂಡಿಟ್ಟು ಕೊಂದಿದ್ದಾರೆ. ಭದ್ರತಾ ವ್ಯವಸ್ಥೆಯು ಉತ್ತಮಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದರೂ 2022ರಲ್ಲಿ ಈ ರೀತಿಯಲ್ಲಿ ನಡೆದ 17ನೇ ಹತ್ಯೆ ಇದು. ಕಾಶ್ಮೀರದಲ್ಲಿ ಉಗ್ರರು ಮುಸ್ಲಿಮೇತರರನ್ನು ಗುರಿಯಾಗಿಸಿ ಕೊಲ್ಲುವ ತಂತ್ರ ಅನುಸರಿಸುತ್ತಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕ್ ಪ್ರಾ-ಯೋಜಕತ್ವದ ಇಲಾಕ್ವಾಯ್ ದೆಹಾತಿ ಬ್ಯಾಂಕ್ ಎಂಬ ಗ್ರಾಮೀಣ ಬ್ಯಾಂಕ್‌ನ ಸ್ಥಳೀಯ ಕಚೇರಿಯ ಮುಖ್ಯಸ್ಥರಾಗಿ ವಿಜಯಕುಮಾರ್ ಕೆಲಸಮಾಡುತ್ತಿದ್ದರು.

ಪಿಸ್ತೂಲ್ ಹಿಡಿದ ವ್ಯಕ್ತಿಯೊಬ್ಬ ಬ್ಯಾಂಕ್ ಶಾಖೆಯೊಳಗೆ ನುಗ್ಗಿ, ಗುಂಡು ಹಾರಿಸಿ ಪರಾರಿಯಾಗುವ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮರಾದಲ್ಲಿ ಸೆರೆಯಾಗಿವೆ. ವಿಜಯಕುಮಾರ್ ಅವರು ಇತ್ತೀಚೆಗಷ್ಟೇ ಕುಲ್ಗಾಂನಲ್ಲಿ ಕೆಲಸಕ್ಕೆ ನಿಯೋಜನೆಗೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ಇಂತಹ ಹತ್ಯೆ ಪ್ರಕರಣಗಳು ಹೆಚ್ಚಾಗಿವೆ. ಮೇ 31ರಂದು ಇದೇ ಜಿಲ್ಲೆಯಲ್ಲಿ ಮುಸ್ಲಿಮೇತರ ಶಿಕ್ಷಕಿಯೊಬ್ಬರನ್ನು ಹತ್ಯೆ ಮಾಡಲಾಗಿತ್ತು. ಕೇಂದ್ರ ಕಾಶ್ಮೀರದ ಚಡೂರ ಎಂಬಲ್ಲಿ ಅಮ್ರೀನ್ ಭಟ್ ಎಂಬ ಟಿ.ವಿ. ಕಲಾವಿದೆಯ ಹತ್ಯೆ ಆಗಿತ್ತು. ಮೇ 12ರಂದು ತಹಶೀಲ್ದಾರ್ ಕಚೇರಿಯೊಳಗೆ ಕೆಲಸ ಮಾಡುತ್ತಿದ್ದ ಪಂಡಿತ ಸಮುದಾಯದ ವ್ಯಕ್ತಿಯೊಬ್ಬರನ್ನು ಕೊಲ್ಲಲಾಗಿತ್ತು. ಕರ್ತವ್ಯದಲ್ಲಿ ಇಲ್ಲದ ಹೊತ್ತಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರನ್ನೂ ಮೇ ತಿಂಗಳಲ್ಲಿ ಹತ್ಯೆ ಮಾಡಲಾಗಿದೆ.

ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಬೇಕು ಎಂದು ಕಾಶ್ಮೀರಿ ಪಂಡಿತರು ಪ್ರತಿಭಟನೆ ನಡೆಸುತ್ತಿರುವುದರ ನಡುವೆಯೇ ಮತ್ತೊಂದು ಹತ್ಯೆ ನಡೆದಿದೆ.

ಬ್ಯಾಂಕ್ ವ್ಯವಸ್ಥಾಪಕನ ಹತ್ಯೆ ಖಂಡಿಸಿ ಶಿವಸೇನಾ ಡೋಗ್ರಾ ಫ್ರಂಟ್ ಕಾರ್ಯಕರ್ತರು ಗುರುವಾರ ಜಮ್ಮುವಿನಲ್ಲಿ ಪ್ರತಿಭಟನೆ ನಡೆಸಿ, ಪಾಕಿಸ್ತಾನದ ಧ್ವಜ ಸುಟ್ಟರು —ಪಿಟಿಐ ಚಿತ್ರ

ಕಾರ್ಮಿಕನ ಹತ್ಯೆ

ಜಮ್ಮು ಮತ್ತು ಕಾಶ್ಮೀರದ ಬುದ್ಗಾಮ್ ಜಿಲ್ಲೆಯಲ್ಲಿ ಉಗ್ರರು ಗುರುವಾರ ರಾತ್ರಿ ವಲಸೆ ಕಾರ್ಮಿಕ, ಬಿಹಾರದ ದಿಲ್‌ಕುಶ್ ಕುಮಾರ್ ಎಂಬುವರನ್ನು ಗುಂಡಿಟ್ಟು ಕೊಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

5 ನೇ ಪುಟ ನೋಡಿ

ಬೇಗೂರು–ಸುಬ್ರಹ್ಮಣ್ಯಪುರ ಕೆರೆ ಒತ್ತುವರಿ ತೆರವಿಗೆ ಹೈಕೋರ್ಟ್ ಆದೇಶ

ಬೆಂಗಳೂರು: ‘ಬೇಗೂರು ಕೆರೆ ಮತ್ತು ಸುಬ್ರಹ್ಮಣ್ಯಪುರ ಕೆರೆಗಳ ಒತ್ತುವರಿಯನ್ನು ಆರು ವಾರಗಳಲ್ಲಿ ತೆರವುಗೊಳಿಸಿ ವರದಿ ಸಲ್ಲಿಸಿ’ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಅರಣ್ಯ ಇಲಾಖೆಯ ನಿಯೋಜಿತ ಅಧಿಕಾರಿಗಳಿಗೆ ಹೈಕೋರ್ಟ್ ಆದೇಶಿಸಿದೆ. 3

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪೂರೈಕೆಯಲ್ಲಿ ವಿಳಂಬ: ಶಾಲಾ ವಿದ್ಯಾರ್ಥಿಗಳ ಆಗ್ರಹ

‘ಮೊದಲು ಪಠ್ಯಪುಸ್ತಕ ನೀಡಿ’

ರಾಜ್ಯದ ಶಾಲಾ ವಿದ್ಯಾರ್ಥಿಗಳಿಗೆ ಈ ಸಾಲಿನ ಕನ್ನಡ ಭಾಷಾ ಮತ್ತು ಸಮಾಜವಿಜ್ಞಾನ ಪಠ್ಯಪುಸ್ತಕಗಳನ್ನು ಇನ್ನೂ ನೀಡಿಲ್ಲ. ಪಠ್ಯಪುಸ್ತಕ ಪರಿಷ್ಕರಣೆಯ ಕಾರಣದಿಂದ, ಈ ಪುಸ್ತಕಗಳ ಪೂರೈಕೆಯಲ್ಲಿ ವಿಳಂಬವಾಗಿದೆ. ಪರಿಷ್ಕೃತ ಪಠ್ಯ ಪುಸ್ತಕಗಳಿಗೆ ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯ ವಲಯದಿಂದ ಭಾರಿ ವಿರೋಧ ವ್ಯಕ್ತವಾಗಿದೆ. ಇದರ ಮಧ್ಯೆಯೇ ವಿದ್ಯಾರ್ಥಿಗಳು, ‘ಮೊದಲು ನಮಗೆ ಪಠ್ಯ ಪುಸ್ತಕ ನೀಡಿ’ ಎಂದು ಆಗ್ರಹಿಸಿದ್ದಾರೆ.

ತಪ್ಪು ಮಾಹಿತಿ ಇರಬಾರದು

ಹಿಂದಿನ ಪಠ್ಯಪುಸ್ತಕಗಳನ್ನೇ ಮುಂದುವರಿಸಬೇಕು. ಅವುಗಳಲ್ಲಿ ಗದ್ಯ–ಪದ್ಯ ಎಲ್ಲವೂ ಚೆನ್ನಾಗಿವೆ. ಎಲ್ಲ ಮಾಹಿತಿ ಇದೆ. ಮಹನೀಯರ ವಿಚಾರಧಾರೆಗಳು ಇವೆ. ಅವುಗಳನ್ನು ಬದಲಾಯಿಸುವುದು ಸರಿಯಲ್ಲ. ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು ಪಠ್ಯಪುಸ್ತಕಗಳಲ್ಲಿನ ಪಾಠ, ಪದ್ಯಗಳನ್ನು ಕೈಬಿಡಲೂಬಾರದು, ತಿದ್ದುಪಡಿಯನ್ನೂ ಮಾಡಬಾರದು. ಅನಿವಾರ್ಯ ಇದ್ದರೆ ಹೊಸ ಪಾಠ ಸೇರಿಸಲಿ. ಅದು ನಮ್ಮ ಜ್ಞಾನಾರ್ಜನೆಗೆ ಪೂರಕವಾಗಿರಬೇಕು. ಪಠ್ಯದಲ್ಲಿ ತಪ್ಪು ಮಾಹಿತಿ, ಗೊಂದಲದ ಅಂಶಗಳು ಇರಬಾರದು.

ಎಚ್.ಎಸ್. ಜೀವನ್, 10ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಹಿರೇಗೌಜ, ಚಿಕ್ಕಮಗಳೂರು ತಾಲ್ಲೂಕು

ಸಲಹೆ ಪಡೆಯಿರಿ

ಜೂನ್ ಆರಂಭವಾಗಿದ್ದರೂ ಪಠ್ಯಪುಸ್ತಕ ವಿತರಣೆಯಾಗಿಲ್ಲ. ಇನ್ನೂ ಪಠ್ಯಪುಸ್ತಕ ಪರಿಷ್ಕರಣೆ ನಡೆಯುತ್ತಿದ್ದು ನಮ್ಮ ಕೈಗೆ ಯಾವಾಗ ಪುಸ್ತಕ ಸಿಗುತ್ತವೆ ಎನ್ನುವುದೇ ಗೊತ್ತಿಲ್ಲ. ಕಳೆದೆರಡು ವರ್ಷ ಕೋವಿಡ್‌ನಿಂದಾಗಿ ಶಾಲೆಗಳು ಸರಿಯಾಗಿ ನಡೆದಿಲ್ಲ. ಸರಿಯಾಗಿ ವ್ಯಾಸಂಗ ಮಾಡಲೂ ಸಾಧ್ಯವಾಗಿಲ್ಲ. ನಮ್ಮ ಕಲಿಕೆಗೆ, ವ್ಯಕ್ತಿತ್ವ ವಿಕಸನಕ್ಕೆ ಏನು ಬೇಕಾಗಿದೆ ಎಂಬುದನ್ನು ಅರಿತು ಅಂತಹ ಪಾಠಗಳನ್ನು ಪುಸ್ತಕದಲ್ಲಿ ಸೇರ್ಪಡೆ ಮಾಡ ಬೇಕು. ಅದಕ್ಕಾಗಿ ಸಾಹಿತಿಗಳು ಹಾಗೂ ಪರಿಣತರ ಸಲಹೆ ಪಡೆಯಬೇಕು.

ಡಿ.ಹೊನ್ನು, 9ನೇ ತರಗತಿ ವಿದ್ಯಾರ್ಥಿನಿ, ಪಣ್ಣೆದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ

ವಾರದ ಒಳಗೆ ಪಠ್ಯ ಪುಸ್ತಕ ನೀಡಿ

ಶಿಕ್ಷಕರು ಪಾಠ ಮಾಡುವಾಗ ನಮ್ಮ ಕೈಯಲ್ಲಿ ಪುಸ್ತಕ ಇದ್ದರೆ ಚೆನ್ನಾಗಿ ಅರ್ಥವಾಗುತ್ತದೆ. ಆದರೆ, ಸರ್ಕಾರ ಪುಸ್ತಕ ಕೊಟ್ಟಿಲ್ಲ. ರಜೆಯಲ್ಲಿ ಪರಿಷ್ಕರಣೆಗಳನ್ನು ಮುಗಿಸಿಕೊಂಡು ಶಾಲೆ ಶುರುವಾಗುವ ಹೊತ್ತಿಗೆ ಪುಸ್ತಕ ನೀಡಿದ್ದರೆ ಚೆನ್ನಾಗಿತ್ತು. ಈಗಲಾದರೂ ಒಂದು ವಾರದ ಒಳಗೆ ಕೊಡಬೇಕು. ಇಲ್ಲದೇ ಇದ್ದರೆ ನಮಗೆ ಕಲಿಯಲು ಕಷ್ಟವಾಗಲಿದೆ.

ಇಂದೂ ಆರ್., 10ನೇ ತರಗತಿ, ಸರ್ಕಾರಿ ಉನ್ನತೀಕರಿಸಿದ ಪ್ರೌಢಶಾಲೆ, ನಿಟುವಳ್ಳಿ, ದಾವಣಗೆರೆ

ರಾಜಕೀಯ ಬೆರೆಸಬಾರದು

ಪಠ್ಯಪುಸ್ತಕ ಪರಿಷ್ಕರಣೆ ಬೇಡ. ಮೊದಲಿದ್ದ ಇತಿಹಾಸ, ಭಾಷೆಯನ್ನು ಓದಲು ಇಚ್ಛಿಸುತ್ತೇನೆ. ಎಲ್ಲಾ ಸಾಹಿತಿಗಳು ಹಾಗೂ ಇತಿಹಾಸಕಾರರ ಜ್ಞಾನ ಅತ್ಯವಶ್ಯಕ. ಪಠ್ಯ ಪರಿಷ್ಕರಣೆ-ಯಿಂದ ವಿದ್ಯಾರ್ಥಿಗಳಿಗೆ ಗೊಂದಲ ಉಂಟಾಗಬಾರದು. ಪಠ್ಯಪುಸ್ತಕ ವಿಷಯದಲ್ಲಿ ರಾಜಕೀಯ ಬೆರೆಸಬಾರದು. ಪರಿಷ್ಕರಣೆ ಅಗತ್ಯ ಎನಿಸಿದರೆ, ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಸಾಹಿತಿಗಳು, ಪ್ರಗತಿಪರರು ಹಾಗೂ ಶಿಕ್ಷಕರು ಇದ್ದರೆ ಒಳ್ಳೆಯದು.

ಮಲ್ಲಿಕಾರ್ಜುನ ಅಗಸರ, ಪ್ರೇರಣಾ ಪಬ್ಲಿಕ್ ಆಂಗ್ಲ ಮಾಧ್ಯಮ ಸ್ಕೂಲ್, ಸಿಂದಗಿ, ವಿಜಯಪುರ ಜಿಲ್ಲೆ

www.lendingkart.com

“ಬ್ಯುಸಿನೆಸ್ ಲೋನ್ ಅಂದ್ರೆ ಕೇವಲ ಲೆಂಡಿಂಗ್‌ಕಾರ್ಟ್”

ಬ್ಯುಸಿನೆಸ್ ಲೋನ್ಸ್ = ಲೆಂಡಿಂಗ್‌ಕಾರ್ಟ್. ಇದು ಎಲ್ಲರಿಗೂ ತಿಳಿದಿದೆ; ಎಲ್ಲರೂ ಯಶಸ್ಸಿನ ಹಾದಿಯಲ್ಲಿ. ಯಾವುದೇ ಮೇಲಾಧಾರವಿಲ್ಲ, ಪಕ್ಷಪಾತ ಇಲ್ಲ. ಎಲ್ಲಿಂದಲೇ ಆದರೂ ತ್ವರಿತ ಬ್ಯುಸಿನೆಸ್ ಲೋನ್ ಪಡೆಯುವ ಸಂತೋಷ ಮಾತ್ರ, ತಂತ್ರಜ್ಞಾನಕ್ಕೆ ಧನ್ಯವಾದಗಳು. 21ನೇ ಶತಮಾನದ ಬ್ಯುಸಿನೆಸ್‌ಗಳು ಈ ಶತಮಾನದ ಪಾಲುದಾರರಾಗಲು ಸಹ ಅರ್ಹವಾಗಿವೆ. ಮತ್ತು ಅದರ ಅರ್ಥ ಕೇವಲ ಒಂದೇ ಹೆಸರು – ಲೆಂಡಿಂಗ್‌ಕಾರ್ಟ್.

- ಯಾವುದೇ ಮೇಲಾಧಾರವಿಲ್ಲದೇ ಬ್ಯುಸಿನೆಸ್ ಲೋನ್
- ತ್ವರಿತ, ನ್ಯಾಯೋಚಿತ, ಪಾರದರ್ಶಕ
- ಮನೆಯಲ್ಲಿ ಕುಳಿತು ಬ್ಯುಸಿನೆಸ್ ಲೋನ್ ಪಡೆಯಿರಿ

LENDINGKART
Simplifying MSME Finance

ಆ್ಯಂಡ್ರೈಡ್ ಆ್ಯಪ್ ಡೌನ್‌ಲೋಡ್ ಮಾಡಿ

Lendingkart Finance Limited is RBI registered NBFC. Terms & conditions apply.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 10 ಯುಬಿಎಲ್ 2022-23
ದಿನಾಂಕ : 26-05-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಅಳ್ನಾವರ - ಅಂಬೇವಾಡಿ ಸೆಕ್ಷನ್‌ನಲ್ಲಿ ಹಾಲಿ ಇರುವ ಸ್ಲೀಪರ್‌ಗಳ ಮೇಲೆ ರೈಲ್ ಸೀಟ್‌ಗಳನ್ನು ಬಳಸಿ ಅಪಘಾತಗಳು ಉಂಟಾದಾಗ ಹಾನಿಗೊಳಗಾದ ಟ್ರ್ಯಾಕ್‌ನ ರಿಪೇರಿಗಳು.	ರೂ. 24,78,000/-
2	ಹುಬ್ಬಳ್ಳಿ ಜಂಕ್ಷನ್ : ಹುಬ್ಬಳ್ಳಿಯಲ್ಲಿ ಆರ್ಮರಿಯ ಉದ್ದೇಶಿತ ನಿರ್ಮಾಣ.	ರೂ. 1,06,57,549/-
3	ಹುಬ್ಬಳ್ಳಿ : ಹುಬ್ಬಳ್ಳಿಯಲ್ಲಿ ಬ್ರಾಕ್ ರೋಡ್ ಮತ್ತು ಆಫೀಸರ್ಸ್ ಕಾಲೋನಿಯಲ್ಲಿ ಆರ್‌ವಿಎನ್‌ಎಲ್ ನಿರ್ಮಿತ 1539 ಮತ್ತು 1515 ಬ್ಲಾಕ್‌ಗಳಲ್ಲಿ ಡ್ರೈನೇಜ್ ಲೈನ್, ಸ್ಯಾನಿಟರಿ ಲೈನ್, ಬೌಂಡರಿ ವಾಲ್, ಫೆನ್ಸಿಂಗ್, ಪಾರ್ಕಿಂಗ್ ಪ್ರದೇಶಕ್ಕೆ ರಿಪೇರಿಗಳು.	ರೂ. 34,95,286/-
4	ಹುಬ್ಬಳ್ಳಿ ವಿಭಾಗ : ಬೆಳಗಾವಿ ನಿಲ್ದಾಣದಲ್ಲಿ 2.50 ಲಕ್ಷ ಲೀಟರ್ ಸಾಮರ್ಥ್ಯದ ಓಹೆಚ್‌ಟಿಯ ಉದ್ದೇಶಿತ ನಿರ್ಮಾಣ.	ರೂ. 75,53,393/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23-06-2022ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಇಂಜಿನಿಯರ್
ಸಮನ್ವಯ / ಹುಬ್ಬಳ್ಳಿ

ಪಿಯುಬಿ/115/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways | SWRRLY | SWRRLY

ಉಪಾಧ್ಯಕ್ಷರಾಗಿ ಎಂ.ವೆಂಕಟೇಶ್ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಉಪಾಧ್ಯಕ್ಷರಾಗಿ ಡಾ.ಎಂ. ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಒಕ್ಕೂಟದ ಸರ್ವ ಸದಸ್ಯರ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ವೆಂಕಟೇಶ್ ಅವರು ರಾಷ್ಟ್ರೀಯ ಸರ್ಕಾರಿ ನೇತ್ರಾಧಿಕಾರಿಗಳ ಸಂಘದ ಅಧ್ಯಕ್ಷರೂ ಆಗಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ: [illegible]/29/2022 ದಿನಾಂಕ: 31.05.2022

[illegible]

ಕಾಮಗಾರಿ ವಿವರ	ಅಂದಾಜು ಮೌಲ್ಯ
ಬೆಂಗಳೂರು [illegible] ನಿಲ್ದಾಣದ [illegible]	Rs. 442 ಕೋಟಿ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.07.2022 ಸಮಯ: 15:00 [illegible]

ಹೆಚ್ಚಿನ ಮಾಹಿತಿಗಾಗಿ www.ireps.gov.in [illegible]

[illegible] / ಬೆಂಗಳೂರು

S.W.Railways | SWRRLY | SWRRLY

ಕೊಪ್ಪಳ ವಿಮಾನ ನಿಲ್ದಾಣ: ಶೀಘ್ರವೇ ವರದಿ

ಕೊಪ್ಪಳ: ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಸಂಬಂಧಿಸಿದಂತೆ ಕಾರ್ಯ ಸಾಧ್ಯತೆ ವರದಿ ಸಿದ್ಧಪಡಿಸಲು ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದ ಸದಸ್ಯರ ತಂಡವು ಗುರುವಾರ ಇಲ್ಲಿಗೆ ಭೇಟಿ ನೀಡಿತು.

ಕೊಪ್ಪಳ ತಾಲ್ಲೂಕಿನ ನಾಲ್ಕು ಗ್ರಾಮಗಳ ವ್ಯಾಪ್ತಿಯಲ್ಲಿ ಗುರುತಿಸಿರುವ 382 ಎಕರೆ, ವಣಬಾಳ ಮತ್ತು ಕುಕನೂರು ತಾಲ್ಲೂಕಿನ ಅಮಾಪುರದ ಗ್ರಾಮ ವ್ಯಾಪ್ತಿಯಲ್ಲಿ ಗುರುತಿಸಿರುವ 352 ಎಕರೆ ಜಮೀನು ಪರಿಶೀಲಿಸಿದರು. 'ಕಾರ್ಯಸಾಧ್ಯತಾ ವರದಿ 3 ವಾರದೊಳಗೆ ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗುವುದು' ಎಂದು ಸದಸ್ಯರು ತಿಳಿಸಿದರು.

ರಾಜ್ಯ ಕ್ರೀಡಾ ಇಲಾಖೆ ವತಿಯಿಂದ ರ‍್ಯಾಲಿ
ವಿಶ್ವ ಸೈಕಲ್ ದಿನಾಚರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕ್ರೀಡಾ ಇಲಾಖೆ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಶುಕ್ರವಾರ ವಿಶ್ವ ಸೈಕಲ್ ದಿನಾಚರಣೆ ಅಂಗವಾಗಿ ರಾಜ್ಯದ ವಿವಿಧೆಡೆ ಸೈಕಲ್ ರ‍್ಯಾಲಿ ಆಯೋಜಿಸಿದೆ.

ಬೆಂಗಳೂರಿನಲ್ಲಿ ಈ ರ‍್ಯಾಲಿಗೆ ಸಚಿವರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಮುರುಗೇಶ ನಿರಾಣಿ ಅವರು ವಿಧಾನಸೌಧದ ಮುಂಭಾಗ ಚಾಲನೆ ನೀಡಲಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಅವರು ತಿಳಿಸಿದರು.

ದೇಶದ 75 ಐತಿಹಾಸಿಕ ಸ್ಥಳಗಳಲ್ಲಿ ಬೈಸಿಕಲ್ ರ‍್ಯಾಲಿಗಳು ನಡೆಯಲಿದ್ದು, ನಮ್ಮ ರಾಜ್ಯದ ಏಳು ಐತಿಹಾಸಿಕ ಸ್ಥಳಗಳಾದ ಹಂಪಿ, ಬೇಲೂರು, ರಾಣಿ ಅಬ್ಬಕ್ಕ ಕೋಟೆ, ಗೋಲ್ ಗುಂಬಜ್, ಮೈಸೂರು ಅರಮನೆ, ಮಲ್ಪೆ ಮತ್ತು ಮಡಿಕೇರಿ ಕೋಟೆಗಳಲ್ಲಿ ಬೈಸಿಕಲ್ ರ‍್ಯಾಲಿ ಆಯೋಜಿಸಲಾಗಿದೆ.

'ನಮ್ಮ- ನಿಮ್ಮ ಸೈಕಲ್ ಫೌಂಡೇಷನ್' ಸಹಯೋಗದಲ್ಲಿ 'ಲೀಡ್ ಬೆಂಗಳೂರು ರೈಡ್-2022' ಆಯೋಜಿಸುತ್ತಿದ್ದು, ಇದರಲ್ಲಿ ಜರ್ಮನಿಯ ವಿವಿಧ ಕಂಪನಿಗಳ ಸಿಇಒಗಳು ಭಾಗವಹಿಸುತ್ತಿದ್ದಾರೆ. ಇದರ ಜೊತೆಗೆ ಸುಮಾರು 200 ಸೈಕಲ್ ಸವಾರರು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಸೈಕಲ್ ಬಳಕೆಯಿಂದ ಆರೋಗ್ಯದಲ್ಲಾಗುವ ಉತ್ತಮ ಬದಲಾವಣೆಗಳ ಕುರಿತು ಜನರಲ್ಲಿ ಅರಿವು ಮೂಡಿಸಲಾಗುವುದು. ದೈನಂದಿನ ಕಾರ್ಯಚಟುವಟಿಕೆಗಳಿಗೆ ಸೈಕಲ್ ಬಳಸಲು ಉತ್ತೇಜನ ನೀಡುವುದೇ ವಿಶ್ವ ಬೈಸಿಕಲ್ ದಿನಾಚರಣೆಯ ಉದ್ದೇಶ. ಸೈಕಲ್ ಬಳಕೆ ಹೆಚ್ಚಾದರೆ ಪರಿಸರ ಮಾಲಿನ್ಯ ತಡೆಗಟ್ಟಬಹುದು. ಟ್ರಾಫಿಕ್ ಸಮಸ್ಯೆಯನ್ನೂ ತಗ್ಗಿಸಬಹುದಾಗಿದೆ. ಆದ್ದರಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೈಕಲ್ ಬಳಸಬೇಕು ಎಂದು ನಾರಾಯಣ ಗೌಡ ಅವರು ತಿಳಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕಾಮಗಾರಿ ಪರಿಶೀಲಿಸಿದ ವಿಧಾನಸಭೆ ಅರ್ಜಿಗಳ ಸಮಿತಿ
ಕೆಂಪೇಗೌಡ ಬಡಾವಣೆ: ವಿದ್ಯುತ್ ಸಂಪರ್ಕಕ್ಕೆ ₹ 59 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸುತ್ತಿರುವ ಕೆಂಪೇಗೌಡ ಬಡಾವಣೆಗೆ ವಿಧಾನಸಭೆ ಅರ್ಜಿಗಳ ಸಮಿತಿ ಅಧ್ಯಕ್ಷ ವಿಶ್ವನಾಥ್ ಚಂದ್ರಶೇಖರ ಮಾಮನಿ ನೇತೃತ್ವದಲ್ಲಿ ಸದಸ್ಯರು ಗುರುವಾರ ಭೇಟಿ ನೀಡಿ ಪರಿಶೀಲಿಸಿದರು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸುತ್ತಿರುವ ಕೆಂಪೇಗೌಡ ಬಡಾವಣೆಗೆ ಗುರುವಾರ ವಿಧಾನಸಭೆಯ ಅರ್ಜಿಗಳ ಸಮಿತಿ ಭೇಟಿ ನೀಡಿ ಪರಿಶೀಲಿಸಿತು.

ಇದೇ ವೇಳೆ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಮಾಧ್ಯಮಗಳೊಂದಿಗೆ ಮಾತನಾಡಿ, 'ಕೋವಿಡ್ ಹಾಗೂ ತಾಂತ್ರಿಕ ಸಮಸ್ಯೆಯಿಂದ ಬಡಾವಣೆಯ ಕಾಮಗಾರಿ ಮೂರು ವರ್ಷಗಳಿಂದ ಕುಂಠಿತಗೊಂಡಿದೆ. ಪರಿಸ್ಥಿತಿ ಈಗ ಸುಧಾರಣೆಯಾಗಿದ್ದು, ಕಾಮಗಾರಿಗೆ ವೇಗ ನೀಡಲಾಗಿದೆ. ನಿವೇಶನದಾರರು ಮನೆ ನಿರ್ಮಿಸಲು ಬಂದರೆ ತಕ್ಷಣವೇ ನೀರು, ವಿದ್ಯುತ್ ಮತ್ತು ರಸ್ತೆ ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ವಿಶ್ವನಾಥ್ ತಿಳಿಸಿದರು.

ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹ 59 ಕೋಟಿ ಬಿಡುಗಡೆ ಮಾಡಲಾಗುವುದು. ಮುಂದೆ ವಿದ್ಯುತ್ ಸಮಸ್ಯೆ ಎದುರಾಗುವುದಿಲ್ಲ ಎಂದರು.

ಕನ್ನಳ್ಳಿಕೆರೆಯ ಸಮೀಪದ ನಿವೇಶನಗಳಲ್ಲಿ ತೇವಾಂಶ ಸಮಸ್ಯೆಯಿದೆ. ತಜ್ಞರು ಪರಿಶೀಲನೆ ನಡೆಸಲಿದ್ದಾರೆ. ₹ 12 ಕೋಟಿ ಅನುದಾನದಲ್ಲಿ 12 ಮೀಟರ್ ಆಳದಿಂದ ತಡೆಗೋಡೆ ನಿರ್ಮಿಸಲು ಮುಂದಾಗಿದ್ದು, ತೇವಾಂಶ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಬಿಡಿಎ ಆಯುಕ್ತ ರಾಜೇಶ್‌ಗೌಡ ತಿಳಿಸಿದರು.

ಸಮಿತಿ ಅಧ್ಯಕ್ಷ ವಿಶ್ವನಾಥ್ ಚಂದ್ರಶೇಖರ ಮಾಮನಿ ನೇತೃತ್ವದಲ್ಲಿ ಸದಸ್ಯರಾದ ಎಸ್.ಸುರೇಶ್ ಕುಮಾರ್, ಎಂ.ಪಿ.ಅಪ್ಪಚ್ಚು ರಂಜನ್, ರಮೇಶ್ ಭೂಸನೂರು, ಅಮೃತ ಅಯ್ಯಪ್ಪ ದೇಸಾಯಿ, ಉಮಾನಾಥ್ ಕೋಟ್ಯಾನ್, ವೀರಭದ್ರಯ್ಯ ಕೆಂಪೇಗೌಡ ಬಡಾವಣೆಯ ಕೊಡಿಗೇಹಳ್ಳಿ, ಕನ್ನಳ್ಳಿ, ಅರ್ಚಕರ ಬಡಾವಣೆ, ಕಡಬಗೆರೆ ಭೇಟಿ ನೀಡಿ ಪರಿಶೀಲಿಸಿತು.

ಇದೇ ವೇಳೆ ನಿವೇಶನದಾರರಿಂದ ಸಮಿತಿಯು ಅಹವಾಲು ಸ್ವೀಕರಿಸಿತು.

ತುರ್ತು ಚಿಕಿತ್ಸಾ ತರಬೇತಿಗೆ ಅಕಾಡೆಮಿ ಆರಂಭ

ಬೆಂಗಳೂರು: ವೈದೇಹಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ರಿಸರ್ಚ್ ಸೆಂಟರ್, ತುರ್ತು ಸಂದರ್ಭದಲ್ಲಿ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲು ವೈದೇಹಿ ಅಡ್ವಾನ್ಸ್ಡ್ ಸಿಮ್ಯುಲೇಷನ್ ಅಕಾಡೆಮಿ ಆರಂಭಿಸಿದೆ.

ಅಕಾಡೆಮಿಯು ಶೀಘ್ರದಲ್ಲಿಯೇ ಉದ್ಘಾಟನೆಗೊಳ್ಳಲಿದೆ. ಇಲ್ಲಿ ವಿವಿಧ ರೀತಿಯ ಒಟ್ಟು 11 ಪ್ರಕಾರದ ಚಿಕಿತ್ಸೆಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುವುದು ಎಂದು ಕಾಲೇಜಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಬಾಂಬ್ ಸ್ಫೋಟ, ಅಪಘಾತಕ್ಕೆ ಒಳಗಾದವರಿಗೆ ತುರ್ತು ಚಿಕಿತ್ಸೆ ಅವಶ್ಯಕ. ಆ ವೇಳೆ ಚಿಕಿತ್ಸಾ ವಿಧಾನದಲ್ಲಿ ತೊಂದರೆಯಾದರೆ, ರೋಗಿ ಪ್ರಾಣಕ್ಕೆ ಆಪತ್ತು ತರಲಿದೆ. ಇಂತಹ ಸಂದರ್ಭದಲ್ಲಿ ಯಾವೆಲ್ಲಾ ಅಂಶಗಳನ್ನು ಗಮನಿಸಬೇಕು, ಹೇಗೆ ಪರೀಕ್ಷೆಗೆ ಒಳಪಡಿಸಿ, ತಕ್ಷಣ ಚಿಕಿತ್ಸೆ ನೀಡಬೇಕು ಎಂಬುದರ ಕುರಿತು ಅಕಾಡೆಮಿಯಲ್ಲಿ ಕಲಿಸಲಾಗುವುದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

WATCH THE HINDI VERSION WITH ENGLISH SUBTITLES

a yash raj films™ worldwide release

PVR CINEMAS {Phoenix Market City, 10:00, 1:00, 4:00, 4:25, 7:00, 10:00 p.m. | Forum Mall, 9:35, 10:00, 12:35, 1:00, 4:10, 4:25, 7:10, 10:10, 10:30 p.m. | Arena Mall, 9:15, 10:00, 1:00, 4:00, 7:00, 10:00 p.m. | Orion Mall, 9:00, 10:00, 12:00, 1:00, 4:00, 4:25, 7:00, 10:00, 10:30 p.m. | Orion Uptown Mall, 10:00, 1:05, 7:10, 10:10 p.m. | MSR Regalia Mall, 10:00, 1:00, 4:00, 7:00, 10:00 p.m. | Spirit Mall, 9:05, 1:00, 7:30, 10:10 p.m. | VR Mall, 9:00, 10:00, 12:30, 1:30, 3:30, 4:30, 6:30, 7:30, 9:30, 10:30 p.m. | Vaishnavi Saphire Mall, 10:30, 1:30, 4:30, 7:30 10:30 p.m. | Superplex Vegacity Mall, 9:00, 10:30, 12:00, 1:30, 4:00, 4:30, 6:30, 7:30, 10:00, 10:30 p.m. | The Cinema @ GT Mall, Magadi Road, 9:35, 12:35, 6:40, 9:40 p.m. | The Aura, Whitefield, 10:00, 1:05, 7:10, 10:10 p.m.} | INOX {Garuda Mall, 9:50, 12:40, 4:15, 7:35, 10:30 p.m. | Swagath Mall, 10:45, 4:10, 10:10 p.m. | Central Mall, 9:45, 1:05, 7:35, 10:10 p.m. | Lido, 10:10, 1:30, 7:35, 10:30 p.m. | Forum Value Mall, 9:50, 1:15, 3:30, 7:35, 10:30 p.m. | Mantri Mall, 10:50, 1:45, 4:40, 7:35, 10:30 p.m. | Brookefield Mall, 10:00, 4:25, 10:30 p.m. | SBR Horizon, Seegehalli, 9:50, 12:45, 4:05, 7:35, 10:30 p.m. | Garuda, Yelahanka, 9:50, 12:35, 7:05, 10:30 p.m. | Galleria Mall, RMZ Yelahanka, 10:05, 4:05, 7:20, 10:00 p.m.} | CINEPOLIS {Royal Meenakshi Mall | ETA Mall, Binny Mill | East Orion Mall | Shantiniketan | SJR Spectrum Mall | Sigma Mall} | ROCKLINE MALL {Jalahalli Cross, 10:30, 4:05, 9:45 p.m.} | GOPALAN {Innovation Mall, 11:45, 4:30, 9:30 p.m. | Arch Mall, 4:15, 10:00 p.m. | Signature Mall, 12:00, 7:15 p.m. | Grand Mall, 10:30, 4:45, 9:30 p.m. | Legacy Mall, 10:15, 1:45, 6:15, 9:45 p.m.} | INNOVATIVE MULTIPLEX {Marathahalli, 10:15, 1:30, 4:00, 7:15, 9:45 p.m.} | SWAGATH SHANKARNAG {MG Road, 1:40, 7:30 p.m.} | KINO CINEMAS {Seegehalli Road, 10:00, 7:00, 10:00 p.m.} | MUKTA A2 CINEMAS {Uttarahalli, 11:45, 5:15 10:30 p.m.} | BALAJI THEATRE {Tavarekere, 10:00, 1:00, 4:00, 7:00 10:00 p.m.} | SRI RAMA CHITRA MANDIRA {Ramnagara, 4:30, 7:30 p.m.} | BALAJI {Chikhalsandra, 1:30, 7:15 p.m.} | RAJKAMAL {Vinoba Road, 10:30, 1:30, 4:30, 7:30 p.m.} | ANAND THEATRE {Tanny Road, 11:00, 2:30, 6:00 9:30 p.m.} | SIDDALINGESHWARA {J. P. Nagar, 7:15, 9:15 p.m.}| VAIBHAV {Sanjay Nagar, 4:30, 9:30 p.m.} | VEERESHA {Magadi Road, 4:00, 7:00, 10:00 p.m.} | ABHINAY {K. G. Road, 10:30, 1:30, 4:30, 7:30 p.m.} | MARUTHI {B. H. Road, 10:30, 1:30, 8:30 p.m.} | NAVRANG {4:00, 7:00 p.m.} | SHARADA {10:30, 1:30, 4:30, 7:30 p.m.} | JAYALASKHMI {Mandya, 10:30, 1:30, 4:30, 7:30 p.m.} | BHARATH CINEMAS {Mangalore, 2:00, 4:30, 7:30 10:15 p.m. | Manipal, 10:00, 1:15, 7:15, 10:00 p.m. | Shivamoga, 10:30, 1:45, 7:30 10:15 p.m. | Kundapura, 10:15, 1:15, 4:15, 7:00, 10:00 p.m.} | DRC CINEMAS {Mysore, 4:00, 7:00 10:00 p.m.} | VISION CINEMAS {Myosre, 10:30, 4:00, 6:30 9:15 p.m.} | CINEPOLIS {City Centre Mall, Mangalore} | PVR CINEMAS {Fiza Mall, Mangalore, 10:00, 1:00, 4:10, 7:10, 10:10 p.m. | Forum Mall, Mysore, 10:00, 1:00, 4:00, 7:00 10:00 p.m. | Garuda Mall, Mysore, 10:05, 1:05, 7:10, 10:10 p.m.} | INOX {Central, Manipal, 10:40, 1:20, 7:40, 10:00 p.m. | Satyam Mall, Mysore, 9:50, 1:10, 7:15, 10:30 p.m. | S Mall, Tumkur, 9:50, 12:45, 4:15, 7:15, 10:10 p.m.} | MOVIETIME {Davangere, 9:00, 2:30, 7:00 10:45 p.m.} | TRINETRA {Davangere, 10:30, 1:30, 4:30, 7:30 p.m.} | CINE GALAXY NOVA CINEMAZ {Suratkal, 10:00, 12:30, 2:55, 5:25, 8:00 10:30 p.m.} | SRI GURU THEATRE {Hassan, 11:00, 2:30, 6:00, 9:30 p.m.} | VENKATESHWARA {Chitradurga, 11:00, 2:30, 6:00, 9:30 p.m.}.

farnazfever

PUBLIC NOTICE

NOTICE is hereby given to the public at large that we are investigating the clear & marketable title of 1) Sri. C.G. Channakeshava, S/o Late Sri. Giriraja Gowda and (2) Sri. C.G. Chinnaswamy, S/o Late Sri. Giriraja Gowda, both residing at # 540, 3rd Cross, 2nd Block, P & T Colony, R.T.Nagar, Bengaluru-560032 ("Owners") in respect of the all that piece and parcel of immovable property (converted land) bearing Sy.No. 28/6 (Old No.28/1) measuring abound 0-21.08 Guntas situated at Channasandra Village, Bidarahalli Hobli, Bangalore East Taluk ("Land"), within the jurisdiction of Bruhatha Bangalore Mahanagara Palike and bounded as follows:

East by : Land bearing Sy.No. 29.
West by : Land bearing Sy.NO. 28/1 and Sy.No. 28/4.
North by : Road (Bangalore to Devanagondi Road)
South by: Property bearing Sy.No.28/3.

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of Land or any part or portion thereof, by way of sale, exchange, mortgage, pledge, charge, gift, trust, inheritance, succession, family arrangement/settlement, bequest, possession, lease, tenancy, maintenance, easement, memorandum of under-standing, license, share, assignment, lien, attachment, development rights, partner-ship, right of way, *lis pendens*, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 10 (ten) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this day of 3rd June, 2022

B.N.Prakash
Partner
Lawyers Inc,
Advocates & Solicitors,
15/2, V.S.Raju Road,
12th Block,Kumarapark West
Bengaluru-560020.

ಪ್ರಾದೇಶಿಕ ಆಂಗ್ಲ ಭಾಷೆ ಸಂಸ್ಥೆ, ದಕ್ಷಿಣ ಭಾರತ
ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು-560056

ದೂ: 080-35101131 ಇ-ಮೇಲ್: director@riesi.ac.in/ riesi.bangalore@gmail.com ವೆಬ್‌ಸೈಟ್: riesi.ac.in

ಕೊಟೇಶನ್ ಆಹ್ವಾನ ಪ್ರಕಟಣೆ

ಆರ್‌ಐಇಎಸ್‌ಐ, ಬೆಂಗಳೂರು ಇವರು ಸಂಸ್ಥೆಯಲ್ಲಿ ಇ-ಆಫೀಸ್, ವೀಡಿಯೊ ಕಾನ್ಫರೆನ್ಸ್ (ಜೂಮ್/ಗೂಗಲ್ ಮೀಟಿಂಗ್ಸ್) ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಕೆಳಕಂಡವುಗಳಿಗಾಗಿ ಒಇಎಂ (Original Equipment Manfacturers) ಅಧಿಕೃತ ಸಂಸ್ಥೆಗಳಿಂದ ಕೊಟೇಶನ್‌ಗಳನ್ನು ಆಹ್ವಾನಿಸುವ ಮೂಲಕ ಉಪಕರಣಗಳನ್ನು ಪಡೆಯಲು ಕೋರಿದೆ. 1) ಜೂಮ್/ಗೂಗಲ್ ಮೀಟ್ ವೀಡಿಯೊ ಕಾನ್ಫರೆನ್ಸ್ ನಡೆಸಲು ಬೇಕಾಗುವ ಉಪಕರಣಗಳು. (Camera PTZ (01), Display 75" touch, (01) Speaker cum Microphone with extension 90DB ಉಪಕರಣಗಳನ್ನು ಸರಬರಾಜು ಮಾಡಲು ವಿವರಣೆಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಆರ್‌ಐಇಎಸ್‌ಐ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು ಅಥವಾ ಆರ್‌ಐಇಎಸ್‌ಐ ಕ್ಯಾಂಪಸ್‌ಗೆ ಕೆಲಸದ ಸಮಯದಲ್ಲಿ **(ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆವರೆಗೆ)** ಭೇಟಿನೀಡಿ ಪಡೆದುಕೊಳ್ಳಬಹುದು. ಕೊಟೇಶನ್ ಸಲ್ಲಿಸಲು ಕಡೆಯ ದಿನಾಂಕ **10.06.2022**.

ಸಹಿ/- ನಿರ್ದೇಶಕರು

THE BIG DISCOUNT SALE
All New 2022 Collection at Mill Rate

SINCE 1960® hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas
HEAVY DISCOUNT UPTO 50%
Shop online at www.hakoba.in
Venue :
Lady Jahangir Kotari Hall
Queens Circle, Near Indian Express
KALAVISION

ಭಾರತ ಸರ್ಕಾರ
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ
ಉದ್ಯೋಗ ಮಹಾ ನಿರ್ದೇಶನಾಲಯ

National Career Service — Right Opportunities, Right Time

ಪ.ಜಾ/ಪ.ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಸರ್ಕಾರಿ ಐಟಿಐ ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029 ಕರ್ನಾಟಕ.
ಇ-ಮೇಲ್: cgcempbg@nic.in, ಟೆಲಿಫೋನ್:080-29756192

11 ತಿಂಗಳ ವಿಶೇಷ ತರಬೇತಿ ನೀಡಲು ಬೆಂಗಳೂರಿನಲ್ಲಿರುವ ಪ್ರತಿಷ್ಠಿತ/ನೋಂದಾಯಿತ ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಭಾರತ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯ, ನವದೆಹಲಿಯ ಅಧೀನ ಕಛೇರಿಯಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಆವರಣ, ಕೌಶಲ್ಯ ಭವನ ಹಿಂಭಾಗ, ಡೈರಿ ಸರ್ಕಲ್, ಬೆಂಗಳೂರು-560029 ಕಛೇರಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 100 ನಿರುದ್ಯೋಗಿ ಯುವಕ/ಯುವತಿಯರಿಗೆ **"11 ತಿಂಗಳ ವಿಶೇಷ ತರಬೇತಿ"** ಯೋಜನೆಯಡಿ ಸಾಮಾನ್ಯ ಇಂಗ್ಲೀಷ್, ಸಾಮಾನ್ಯ ಜ್ಞಾನ, ಕಂಪ್ಯೂಟರ್ ಜ್ಞಾನ, ನ್ಯೂಮಿರಿಕಲ್ ಅಬಿಲಿಟಿ, ಶಾರ್ಟ್‌ಹ್ಯಾಂಡ್/ಸ್ಟೆನೋಗ್ರಾಫೀ (ಶೀಘ್ರಲಿಪಿ) ವಿಷಯಗಳ ತರಬೇತಿ ನೀಡಲು ಬೆಂಗಳೂರಿನಲ್ಲಿರುವ ಅರ್ಹ ಶೈಕ್ಷಣಿಕ ಪ್ರತಿಷ್ಠಿತ/ನೋಂದಾಯಿತ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಗೊಂಡ ಸಂಸ್ಥೆಗೆ ನಿಯಮಾವಳಿಯಂತೆ ಸೇವಾ ಶುಲ್ಕ ನೀಡಲಾಗುತ್ತದೆ. ಕಚೇರಿಯ ಸಮಯದಲ್ಲಿ ಸಂಪರ್ಕಿಸಿ ಅರ್ಜಿಯನ್ನು ಹಾಗೂ ಸೇವಾ ಷರತ್ತುಗಳನ್ನು ಪಡೆಯಬಹುದು. ಅಗತ್ಯ ದಾಖಲೆಗಳ ಜೊತೆಗೆ ಭರ್ತಿ ಮಾಡಿದ ಅರ್ಜಿಯನ್ನು **ದಿನಾಂಕ: 15.06.2022 ಸಂಜೆ 5:00** ಒಳಗಾಗಿ ಕಛೇರಿಗೆ ನೋಂದಾಯಿತ ಪೋಸ್ಟ್ ಅಥವಾ ಖುದ್ದಾಗಿ ಬಂದು ಸಲ್ಲಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ಪಡೆಯಲು ಕಛೇರಿಯ ಮುಖ್ಯಸ್ಥರಾದ ಶಿವಶಾಂತವೀರ ದಿವಾಕರ, ಉಪ-ಪ್ರಾದೇಶಿಕ ಉದ್ಯೋಗಾಧಿಕಾರಿಗಳು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಬೆಂಗಳೂರುರವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

(ಶಿವಶಾಂತವೀರ ದಿವಾಕರ) ಕೇ.ಸಾ.ಸೇ
ಉಪ-ಪ್ರಾದೇಶಿಕ ಉದ್ಯೋಗಾಧಿಕಾರಿ, ಪ.ಜಾ/ಪ.ಪಂ.ದವರ
ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಬೆಂಗಳೂರು-560 029
(Ph:080-29756192,Mob:09916188914)

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101,
ದೂರವಾಣಿ ಸಂಖ್ಯೆ: ಕಛೇರಿ: 08156-295427, ಫ್ಯಾಕ್ಸ್: 08156 295427, ಇಮೇಲ್ eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಸ/ಸ.ಇಂ-1/ ಟೆಂಡರ್ ಪ್ರಕಟಣೆ ಸಂಖ್ಯೆ: 05/2022-23, ದಿನಾಂಕ : 31/05/2022.

4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 3 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ **ಮೊತ್ತ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ.** ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 13/06/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 16/06/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156-270427 ಮತ್ತು ಇ-ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-25501216 ಮತ್ತು 080-25501227 ರಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಪಾರಂಪರಿಕ ಕೃಷಿಯನ್ನು ಇಟ್ಟುಕೊಂಡು, ಆಧುನಿಕ ಕೃಷಿಯನ್ನು ಅಳವಡಿಸಿಕೊಂಡು ರೈತರಿಗೆ ಮಾರ್ಗದರ್ಶಕವಾಗಿರುವ ಮಹಾಲಿಂಗಪುರ-ರನ್ನಬೆಳಗಲಿಯ ಪ್ರತಿಷ್ಠಿತ **ರೋಹಿಣಿ ಸಮೂಹ ಸಂಸ್ಥೆ** ನಿರುದ್ಯೋಗಿಗಳ ಪಾಲಿಗೆ ಆಶಾಕಿರಣವಾದರೆವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವಾಗಿದೆ.

ಕರ್ನಾಟಕ ಸರ್ಕಾರದಿಂದ **'ಕೃಷಿ ಪಂಡಿತ'** ಪ್ರಶಸ್ತಿ ಹಾಗೂ ತಮಿಳುನಾಡು ವಿಶ್ವವಿದ್ಯಾಲಯದಿಂದ 'ಗೌರವ ಡಾಕ್ಟರೇಟ್' ಪದವಿ ಪಡೆದಿರುವ **ಡಾ.ಮಲ್ಲಪ್ಪ ವೈ. ಕಟ್ಟಿ** ಅವರು ಈ ಸಂಸ್ಥೆಯ ರೂವಾರಿಗಳಾಗಿದ್ದು, ಅವರ ಮಕ್ಕಳಾದ **ಪ್ರವೀಣ, ವಿನೋದ** ಮುನ್ನಡೆಸುತ್ತಿದ್ದಾರೆ. ಕೃಷಿಯಲ್ಲಿ ಯಾವಾಗಲೂ ಹೊಸದನ್ನು ಸಂಶೋಧಿಸುತ್ತ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುತ್ತ ಸಾಗಿರುವ ಈ ಸಂಸ್ಥೆ ಬೃಹದಾಕಾರವಾಗಿ ಬೆಳೆದಿದೆ.

ಕರಾರುವಾಕ್ಕು ಮಣ್ಣು ಮತ್ತು ನೀರು ಪರೀಕ್ಷಾ ಅಭಿಯಾನ, ವಿವಿಧ ಬೆಳೆಗಳ ಪ್ರಾತ್ಯಕ್ಷಿಕೆ ಹಾಗೂ ಬೇಸಾಯ ತರಬೇತಿ ಕಾರ್ಯಕ್ರಮ, ಕೃಷಿ ಪದವಿಪೂರ್ವ ವಿದ್ಯಾರ್ಥಿಗಳಿಗೆ ಬಯೋಟೆಕ್, ಮೈಕ್ರೋನ್ಯೂಟ್ರಿಯಂಟ್, ಮೈಕ್ರೋಬಯೋಲಾಜಿ, ಮಣ್ಣು-ನೀರು ಪರೀಕ್ಷಾ ಪ್ರಾಯೋಗಿಕ ತರಬೇತಿ, ಸಾವಯವ ಕೃಷಿ ವಿಧಾನ ಮತ್ತು ಸುಲಭವಾಗಿ ಎಕರೆಗೆ ನೂರು ಟನ್‌ಕ್ಕಿಂತಲೂ ಅಧಿಕ ಇಳುವರಿ ಕಬ್ಬು ಬೇಸಾಯ ವಿಧಾನ ಸೇರಿದಂತೆ ಇನ್ನು ಹಲವಾರು ಸಮಾಜಮುಖಿ ಕಾರ್ಯಗಳು ಈ ಸಂಸ್ಥೆಯಿಂದ ನಿರಂತರವಾಗಿ ನಡೆಯುತ್ತಿವೆ.

ಕೃಷಿ ಸಂಬಂಧಿತ ಖಾಸಗಿ ಸಂಸ್ಥೆಗೆ ರಾಜೀನಾಮೆ ನೀಡಿದ ಡಾ.ಮಲ್ಲಪ್ಪ ಕಟ್ಟಿ ಅವರು 2003ರಲ್ಲಿ ಸ್ವಂತ ಸಂಸ್ಥೆ ಸ್ಥಾಪಿಸಿ ಅದರ ಮೂಲಕ ಹಲವಾರು ವಿಭಾಗಗಳಿಗೆ ಚಾಲನೆ ನೀಡಿ ರೈತರಿಗೆ ಸಲಹೆ, ಮಾರ್ಗದರ್ಶನ ನೀಡುತ್ತಿದ್ದಾರೆ.

ರೋಹಿಣಿ ಬಯೋಟೆಕ್‌ನಲ್ಲಿ ಟಿಶ್ಯೂಕಲ್ಚರ್ ಸಸಿಗಳನ್ನು ಉತ್ಪಾದಿಸಲಾಗುತ್ತಿದೆ. ಮಣ್ಣು ಮತ್ತು ನೀರು ಪರೀಕ್ಷೆಗೆ ರೋಹಿಣಿ ಅನಾಲ್ಯಾಬ್ ಒಳಗೊಂಡಿದೆ. ರೋಹಿಣಿ ಮೈಕ್ರೊನ್ಯೂಟ್ರಿಯಂಟ್ಸ್ ಇಂಡಸ್ಟ್ರೀಸ್ ಸಹ ಆರಂಭಿಸಲಾಗಿದೆ. ರೈತರಿಗೆ ಅನುಕೂಲವಾಗಲು ಸಂಚಾರಿ ಮಣ್ಣು ಪರೀಕ್ಷಾ ವಾಹನದ ವ್ಯವಸ್ಥೆಯೂ ಇಲ್ಲಿದೆ.

ರೋಹಿಣಿ ಬಯೋ ಎಜೆಂಟ್ಸ್ ಮೂಲಕ ಜೈವಿಕ ಗೊಬ್ಬರ ಮತ್ತು ಜೈವಿಕ ಹತೋಟಿ ಉತ್ಪಾದನೆ ಮಾಡಲಾಗುತ್ತಿದೆ. ಅಲಂಕಾರಿಕ ಸಸ್ಯಗಳಾದ ಆಸ್ಟ್ರೇಲಿಯನ್ ಆಟ್ರೋ , ರೆಡ್ ಸ್ಟಾರ್ ಮತ್ತು ಇನ್ನಿತರ ಸಸಿಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ರೋಹಿಣಿ ಬಯೋಕೆಮ್ ಮೈಕ್ರೋ ಇನ್‌ಪುಟ್ಸ್ ಪ್ರೈವೇಟ್ ಲಿಮಿಟೆಡ್ ಸ್ಥಾಪಿಸುವ ಮೂಲಕ ರೈತರಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ. ಕರ್ನಾಟಕ ಕೃಷಿ ಇಲಾಖೆ ಟೆಂಡರನಲ್ಲಿ ಭಾಗಿಯಾಗಿ ಮೈಕ್ರೋನ್ಯೂಟ್ರಿಯಂಟ್ಸ್ ಜೈವಿಕ ಗೊಬ್ಬರ, ಸಾವಯುವ ಗೊಬ್ಬರ ಹಾಗೂ ಸಸ್ಯ ಸಂರಕ್ಷಣಾ ಸಾಮಗ್ರಿಗಳ ಪ್ರಮುಖ ಪೂರೈಕೆದಾರರಾದ ಹೆಗ್ಗಳಿಕೆಯನ್ನು ಸಂಸ್ಥೆ ಹೊಂದಿದೆ.

ಹೈನೋದ್ಯಮದಲ್ಲಿ ಎಲ್ಲ ಡೇರಿಗಳು ವಿಫಲವಾಗುತ್ತಿವೆ. ಆದರೆ ಸಂಸ್ಥೆ ವತಿಯಿಂದ 'ರೋಹಿಣಿ ಡೇರಿ' ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇಲ್ಲಿ ಪ್ರತಿ ತ್ಯಾಜ್ಯ, ಕಸ ಕಡ್ಡಿಗಳನ್ನು ಮರಳಿ ಬಳಕೆ ಮಾಡುವ ಮೂಲಕ ಮಾದರಿಯಾಗಿದೆ. 50ಕ್ಕೂ ಅಧಿಕ ಕೀಟನಾಶಕ, ಶಿಲೀಂಧ್ರನಾಶಕ, ಕಳೆನಾಶಕಗಳ ತಯಾರಿಕೆಗೆ ಸೆಂಟ್ರಲ್ ಇನ್ಸೆಕ್ಟಿಸೈಡ್ ಬೋರ್ಡ್ ಫರೀದಾಬಾದ್ ನಿಂದ ಈಗಷ್ಟೇ ಪರವಾನಗಿ ಪತ್ರ ಲಭಿಸಿದ್ದು, ಸದ್ಯದಲ್ಲೇ ಉತ್ಪಾದನೆ ಆರಂಭವಾಗಲಿದೆ.

Rohini Bio-Chem Microinputs Pvt. Ltd.

WE ARE HIRING — JOIN OUR TEAM

RBM PVT. LTD.

www.rohinibiochems.com

Rohini Group of companies has been pioneers in agriculture sector since 2003. we are leading manufacturers and marketers of wide spectrum of agriculture inputs such as micronutrients plant growth promoters, soil conditioners, Bio-fertilizers, Bio-pesticides and water soluble fertilizers.

Looking for Dynamic, Experience Professionals in Agri Input Business Sales & Marketing

Senior sales officer / Market Development Officer.

Experience	-3 to 5 years
Agri input industry	-Micronutient Company
Qualification	-Good experience in Micro nutrients and Pesticides Company. Diploma Agri. B.Sc Agri/ B.Sc Life Sciences/ M.Sc Agri.

Job Location

Market Development Officer — No. of post 50
Bagalkot, Vijayapura, Belagavi, Davanagere, Haveri, Uttara Kannada, Shivamogga, Hassan, Bidar, Kalaburagi, Koppal, Dharwad, Raichuru, Gadag

Senior Sales Officer — No. of post 10
Yadagir, Kalaburagi, Koppal, Hosapete, Bidar, Hassan, Dharwad, Haveri, Raichuru. Gadag.

Note: Salary will be nogotiable as per candidature

Interested Candidate may send their resume to : rohinibiotech@yahoo.com
For Details contact Whatsapp: 9844520765

ನಗರದಲ್ಲಿ ಇಂದು

ವಾರ್ಷಿಕ ಘಟಿಕೋತ್ಸವ: ಉದ್ಘಾಟನೆ: ಕವಿತಾ ದೇವಿ, ಅಧ್ಯಕ್ಷತೆ: ಡಾ.ಅಬ್ರಹಾಮ್.ಎಂ.ಜಾರ್ಜ್, ಆಯೋಜಕರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಆ್ಯಂಡ್ ನ್ಯೂ ಮೀಡಿಯಾ, ಸ್ಥಳ: ಐಐಜೆಎನ್‌ಎಂ ಲಾನ್ಸ್, ಬೆಳಿಗ್ಗೆ: 10.30

ಆರ್ಟ್ ಹೌಸ್ ಪುಸ್ತಕ ಉದ್ಘಾಟನೆ: ಅತಿಥಿಗಳು: ಸಿ.ಎಸ್.ಕೃಷ್ಣ ಶೆಟ್ಟಿ, ಪ್ರೊ. ಎಂ.ಜೆ.ಕಮಲಾಕ್ಷಿ, ಆಯೋಜಕರು: ಆರ್ಟ್ ಹೌಸ್, ಸ್ಥಳ: ಪ್ಯಾಲೆಸ್ ರಸ್ತೆ, ಅಬ್‌ಶೂಟ್ ಲೇಔಟ್, ವಸಂತನಗರ, ಬೆಳಿಗ್ಗೆ 11

ವಿದ್ಯಾಗಣಪತಿ ದೇವಾಲಯದ ಪ್ರತಿಷ್ಠಾನ ಪೂಜಾ ಮಹೋತ್ಸವ: ಶೃಂಗೇರಿ ಪೀಠದ ಭಾರತಿ ತೀರ್ಥ ಸ್ವಾಮೀಜಿ, ವಿಧುಶೇಖರ ಭಾರತಿ ಸ್ವಾಮೀಜಿ, ಆಯೋಜಕರು: ಶ್ರೀಕೃಷ್ಣದೇವರಾಯ ಶಿಕ್ಷಣ ದತ್ತಿ, ಸ್ಥಳ: ವಿಶ್ವೇಶ್ವರಯ್ಯ ತಂತ್ರಜ್ಞಾನ ಸಂಸ್ಥೆ, ಕೃಷ್ಣದೇವರಾಯನಗರ ಹುಣಸಮಾರನಹಳ್ಳಿ, ಬೆಳಿಗ್ಗೆ 11.30

ಸಸಿ ನೆಡುವ ಕಾರ್ಯಕ್ರಮ, ಮಕ್ಕಳಿಗೆ ಶಾಲಾ ಪುಸ್ತಕ ವಿತರಣೆ ಮತ್ತು ಉಚಿತ ನೇತ್ರ ತಪಾಸಣಾ ಶಿಬಿರ: ಉದ್ಘಾಟನೆ: ಸಚಿವ ಬಿ.ಸಿ.ನಾಗೇಶ, ಪುಸ್ತಕ ವಿತರಣೆ: ಮಹೇಂದ್ರ ಮುಣೋತ್, ಶಾಸಕಿ ಸೌಮ್ಯ ರೆಡ್ಡಿ, ಆಯೋಜಕರು: ವಿನಾಯಕ ಮಿತ್ರ ಮಂಡಳಿ ಟ್ರಸ್ಟ್ ಮತ್ತು ಪ್ರಭಾ ಐ ಕ್ಲಿನಿಕ್ ಆ್ಯಂಡ್ ರಿಸರ್ಚ್ ಸೆಂಟರ್, ಸ್ಥಳ: 40ನೇ ಅಡ್ಡ ರಸ್ತೆ, 8ನೇ ಬ್ಲಾಕ್ ಜಯನಗರ, ಮಧ್ಯಾಹ್ನ 2.30

ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಕಾರ್ಯಕ್ರಮಗಳ ಉದ್ಘಾಟನೆ: ಉದ್ಘಾಟನೆ: ಪ್ರೊ.ಡಿ.ಎಸ್.ಚೌಗಲೆ, ದತ್ತಿ ಉಪನ್ಯಾಸ: ಆರ್.ಜಿ.ಹಳ್ಳಿ ನಾಗರಾಜ್, ಅಧ್ಯಕ್ಷತೆ: ಕೆ.ವಿ.ನಾಗರಾಜಮೂರ್ತಿ, ಉಪಸ್ಥಿತಿ: ದಿಬ್ಬೂರು ಸಿದ್ಧಲಿಂಗಪ್ಪ, ಆಯೋಜಕರು: ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ದಿಬ್ಬೂರು ಸಿದ್ಧಲಿಂಗಪ್ಪ ಎಂಡೋಮೆಂಟ್ ಟ್ರಸ್ಟ್, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, 8ನೇ ಬ್ಲಾಕ್ ಜಯನಗರ, ಸಂಜೆ 5.30

ಡಾ.ಎಚ್. ನರಸಿಂಹಯ್ಯ ನೆನಪಿನ ಸಾಂಸ್ಕೃತಿಕ ಉತ್ಸವ: ಗಾಯನ: ಆರ್.ಕೆ.ಪದ್ಮನಾಭ, ಪಿಟೀಲು: ಸಿ.ಎಸ್.ಚಂದ್ರಶೇಖರ್, ಮೃದಂಗ: ಸಿ.ಚೆಲುವರಾಜ್, ಘಟ: ರಾಘವೇಂದ್ರ ಪ್ರಕಾಶ, ಆಯೋಜಕರು: ಲಲಿತಕಲಾ ಪರಿಷತ್ ಮತ್ತು ರಾಮಸುಧಾ ಚಾರಿಟಬಲ್ ಟ್ರಸ್ಟ್, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, 7ನೇ ಬ್ಲಾಕ್, ಜಯನಗರ, ಸಂಜೆ: 6.30

ಉಡುಪ ಮ್ಯೂಸಿಕ್ ಫೆಸ್ಟಿವಲ್: **ಗಾಯನ**: ವಿದುಷಿ ಬಾಂಬೆ ಜಯಶ್ರೀ, ವೀಣೆ: ವಿದುಶಿ ಜಯಂತಿ ಕುಮಾರೇಶ್, ಪಿಟೀಲು: ವಿದ್ವಾನ್ ಎಚ್.ಎನ್. ಭಾಸ್ಕರ್, ಮೃದಂಗ: ವಿದ್ವಾನ್ ವಿ.ವಿ. ರಮಣಮೂರ್ತಿ, ಮೃದಂಗ: ವಿದ್ವಾನ್ ಜಯಚಂದ್ರ ರಾವ್, ಚೌಡಯ್ಯ ಮೆಮೋರಿಯಲ್ ಹಾಲ್ ಸಂಜೆ: 7

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಧನ್ಯಾ. ಜೆ.ಆರ್, ಉಪಸ್ಥಿತಿ: ಕೃಷ್ಣ ಬೈರೇಗೌಡ, ಶಿವಾನಂದ ತಗಡೂರು, ಎಂ.ರುದ್ರೇಶ, ಎಂ.ಎ.ಗೋಪಾಲಸ್ವಾಮಿ, ಸನ್ಮಾನ: ದ್ವಾರಕಿ ಕೃಷ್ಣಸ್ವಾಮಿ, ಆಯೋಜಕರು: ನೃತ್ಯ ದಿಶಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4.30

ಏರೋಕಾನ್‌ಗೆ ಚಾಲನೆ

ಬೆಂಗಳೂರು: ಅಂತರರಾಷ್ಟ್ರೀಯ ವೈಮಾಂತರಿಕ್ಷ ಸಮ್ಮೇಳನದ ಎರಡನೇ ಆವೃತ್ತಿ 'ಏರೋಕಾನ್-2022'ಕ್ಕೆ ನಗರದಲ್ಲಿ ಬುಧವಾರ ಚಾಲನೆ ನೀಡಲಾಯಿತು.

ಎರಡು ದಿನಗಳ ಈ ಸಮ್ಮೇಳನವನ್ನು ಸೊಸೈಟಿ ಆಫ್ ಆಟೊಮೊಟಿವ್ ಎಂಜಿನಿಯರ್ಸ್ ಇಂಡಿಯಾ(ಎಸ್‌ಎಇಇಂಡಿಯಾ) ಮತ್ತು ಎಸ್‌ಎಇ ಇಂಟರ್‌ನ್ಯಾಷನಲ್ ಸಹಯೋಗದಲ್ಲಿ ಆಯೋಜಿಸಲಾಗಿದೆ.

ಎಚ್‌ಎಎಲ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ಹಲವಾರು ದೇಶಿ ಮತ್ತು ವಿದೇಶಿ ವೈಮಾನಿಕ ಮತ್ತು ಬಾಹ್ಯಾಕಾಶ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಡ್ರೋನ್‌ಗಳು, ಮಿನಿ ವಿಮಾನಗಳು, ಹೆಲಿಕಾಪ್ಟರ್‌ಗಳ ಪ್ರದರ್ಶನವನ್ನು ಸಮ್ಮೇಳನದಲ್ಲಿ ಆಯೋಜಿಸಲಾಗಿತ್ತು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಎಸ್‌ಎಇ ಇಂಡಿಯಾದ ಅಧ್ಯಕ್ಷೆ ರಶ್ಮಿ ಊರ್ಧ್ವರ್ಸೆ, ಎಸ್‌ಎಇ ಇಂಟರ್‌ನ್ಯಾಷನಲ್‌ನ ಜಾಗತಿಕ ವ್ಯವಹಾರಗಳ ಕಾರ್ಯನಿರ್ವಾಹಕ ಸಲಹೆಗಾರ ಡಾ. ಮುರಳಿ ಅಯ್ಯರ್, ಕಾಲಿನ್ಸ್ ಏರೋಸ್ಪೇಸ್‌ನ ಡಾ.ರವಿಶಂಕರ್ ಮೈಸೂರು, ಎಚ್‌ಎಎಲ್‌ನ ಡಾ.ಶ್ರೀಕಾಂತ್ ಶರ್ಮಾ, ಏರೊನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯ (ಎಡಿಎ) ಡಾ.ಗಿರೀಶ್ ಎಸ್. ದೇಡೋಧರೆ, ಬೋಯಿಂಗ್ ಸಂಶೋಧನೆ ಮತ್ತು ತಂತ್ರಜ್ಞಾನ ನಿರ್ದೇಶಕ ಡಾ.ಬಾಲಗುರುನಾ ಚಿದಂಬರಂ ಭಾಗವಹಿಸಿದ್ದರು.

ಏರೋಕಾನ್ ಸಮ್ಮೇಳನದಲ್ಲಿ ಪ್ರದರ್ಶನಕ್ಕಿಡಲಾಗಿದ್ದ ಡ್ರೋನ್‌ಗಳು

ಬೇಗೂರು–ಸುಬ್ರಹ್ಮಣ್ಯಪುರ ಕೆರೆ ಒತ್ತುವರಿ ತೆರವಿಗೆ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆರು ವಾರಗಳಲ್ಲಿ ಒತ್ತುವರಿ ತೆರವುಗೊಳಿಸಿ ವರದಿ ಸಲ್ಲಿಸಲು ಸೂಚನೆ
- 'ಸಿಟಿಜನ್ಸ್ ಆಕ್ಷನ್ ಗ್ರೂಪ್' ಸಲ್ಲಿಸಿದ್ದ ಅರ್ಜಿ
- ಎಲ್ಲಾ ರೀತಿಯ ಸಹಕಾರ ನೀಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಬೆಂಗಳೂರು: 'ಬೇಗೂರು ಕೆರೆ ಮತ್ತು ಸುಬ್ರಹ್ಮಣ್ಯಪುರ ಕೆರೆಗಳ ಒತ್ತುವರಿಯನ್ನು ಆರು ವಾರಗಳಲ್ಲಿ ತೆರವುಗೊಳಿಸಿ ವರದಿ ಸಲ್ಲಿಸಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಅರಣ್ಯ ಇಲಾಖೆಯ ನಿಯೋಜಿತ ಅಧಿಕಾರಿಗಳಿಗೆ ಹೈಕೋರ್ಟ್ ಆದೇಶಿಸಿದೆ.

ಕೆರೆ ಒತ್ತುವರಿ ತೆರವುಗೊಳಿಸಲು ಕೋರಿ 'ಸಿಟಿಜನ್ಸ್ ಆಕ್ಷನ್ ಗ್ರೂಪ್' ಕಾರ್ಯದರ್ಶಿ ನೊಮಿತಾ ಚಾಂಡಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ಮತ್ತು ಜೆ.ಎಂ.ಖಾಜಿ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಯ್ದೆ-2014ರ ಕಲಂ 22ರ ಅನುಸಾರ ಬೇಗೂರು ಮತ್ತು ಸುಬ್ರಹ್ಮಣ್ಯಪುರ ಕೆರೆ ಪ್ರದೇಶದಲ್ಲಿನ ಅನಧಿಕೃತ ಒತ್ತುವರಿ ಮತ್ತು ಒತ್ತುವರಿದಾರರನ್ನು ತೆರವುಗೊಳಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಆ ಕುರಿತು ವರದಿಯನ್ನು ಜುಲೈ 14ರೊಳಗೆ ಸಲ್ಲಿಸಬೇಕು' ಎಂದು ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ಆದೇಶಿಸಿದೆ.

'ಒಂದೊಮ್ಮೆ ತೆರವು ಕಾರ್ಯಾಚರಣೆ ನಡೆಸಲು ಅಧಿಕಾರಿಗಳು ಸಹಕಾರ ಕೋರಿದರೆ ರಾಜ್ಯ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಬೇಕು' ಎಂದು ನಿರ್ದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಜುಲೈ 20ಕ್ಕೆ ಮುಂದೂಡಿದೆ.

ಬೇಗೂರು ಮತ್ತು ಸುಬ್ರಹ್ಮಣ್ಯಪುರ ಕೆರೆ ಪ್ರದೇಶದಲ್ಲಿ ಆಗಿರುವ ಒತ್ತುವರಿಯ ಅಂಕಿ-ಅಂಶಗಳ ಕುರಿತು 2022ರ ಏಪ್ರಿಲ್ 11ರಂದು ಹೈಕೋರ್ಟ್‌ಗೆ ಸಲ್ಲಿಸಿದ್ದ ಅನುಪಾಲನಾ ವರದಿಯಲ್ಲಿ ರಾಜ್ಯ ಸರ್ಕಾರ ಸಲ್ಲಿಸಿರುವ ವರದಿಯನ್ನು ವಿಚಾರಣೆ ವೇಳೆ ಉಲ್ಲೇಖಿಸಲಾಯಿತು.

ವರದಿಯ ಅಂಶಗಳು: 'ಸುಬ್ರಹ್ಮಣ್ಯಪುರ ಕೆರೆ ಪ್ರದೇಶದಲ್ಲಿ 1 ಎಕರೆ 7 ಗುಂಟೆ ಜಾಗವನ್ನು ಸುಬ್ರಹ್ಮಣ್ಯಪುರ ಮತ್ತು ಉತ್ತರಹಳ್ಳಿ ನಡುವಿನ ಲಿಂಕ್ ರಸ್ತೆಗೆ ಬಳಕೆ ಮಾಡಿಕೊಳ್ಳಲಾಗಿದೆ. ಈ ರಸ್ತೆಯನ್ನು ಸದ್ಯ ಸಾರ್ವಜನಿಕರು ಬಳಕೆ ಮಾಡುತ್ತಿದ್ದಾರೆ. 3 ಎಕರೆ 39 ಗುಂಟೆ ಜಾಗವನ್ನು ಉತ್ತರಹಳ್ಳಿಯ ಭುವನೇಶ್ವರಿ ನಗರ ಕೊಳಚೆ ಪ್ರದೇಶದ ನಿವಾಸಿಗಳು ಒತ್ತುವರಿ ಮಾಡಿದ್ದಾರೆ. ಇದು ಘೋಷಿತ ಕೊಳಚೆ ಪ್ರದೇಶವಾಗಿರದ ಹಿನ್ನೆಲೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ತೆರವು ಕಾರ್ಯಾಚರಣೆ ಕೈಗೊಳ್ಳಬೇಕಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಬೇಗೂರು ಕೆರೆ ಪ್ರದೇಶದ ಪೈಕಿ 6 ಎಕರೆ 37 ಗುಂಟೆ ಜಾಗವನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿದ್ದಾರೆ. ಅದರಲ್ಲಿ 1 ಎಕರೆ 36 ಗುಂಟೆಯನ್ನು ಈಗಾಗಲೇ ತೆರವುಗೊಳಿಸಲಾಗಿದೆ. ಉಳಿದ ಐದು ಎಕರೆ ಒಂದು ಗುಂಟೆ ಜಾಗದ ಒತ್ತುವರಿ ತೆರವುಗೊಳಿಸಬೇಕಿದೆ. ನೈಸ್ ರಸ್ತೆ ಮತ್ತು ಸಾರ್ವಜನಿಕ ರಸ್ತೆಗಾಗಿ 3 ಎಕರೆ 26 ಗುಂಟೆ ಜಾಗವನ್ನು ಸರ್ಕಾರವೇ ಒತ್ತುವರಿ ಮಾಡಿದೆ. ಇನ್ನೂ 11 ಗುಂಟೆ ಜಾಗವನ್ನು ಪ್ರವಾಸೋದ್ಯಮ ಹಿನ್ನೆಲೆಯಲ್ಲಿ ಕೆರೆಯ ನಡುವಿನಲ್ಲಿ ದ್ವೀಪವನ್ನು ಅಭಿವೃದ್ಧಿಪಡಿಸಲು ಬಳಸಿಕೊಳ್ಳಲಾಗಿದೆ' ಎಂದು ತಿಳಿಸಲಾಗಿದೆ.

'ಯುಪಿಎಸ್‌ಸಿ: ಪ್ರಾದೇಶಿಕ ಭಾಷೆಯಲ್ಲಿರಲಿ ಪರೀಕ್ಷೆ'

ಬೆಂಗಳೂರು: 'ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಇದೇ 5ರಂದು ನಡೆಸುವ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯನ್ನು ಕನ್ನಡ ಸೇರಿ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ನಡೆಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ. ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಸಲು ಅವಕಾಶ ನೀಡುವ ಬಗ್ಗೆ ಆದೇಶ ಹೊರಡಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

'ಪೂರ್ವಭಾವಿ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಗಳಲ್ಲಿ ನಡೆಸಲು ಅವಕಾಶ ಇರದಿರುವುದರಿಂದ ಗ್ರಾಮೀಣ ಭಾಗದ ಪ್ರತಿಭಾನ್ವಿತ ಅಭ್ಯರ್ಥಿಗಳು ಅವಕಾಶ ವಂಚಿತರಾಗುತ್ತಿದ್ದಾರೆ. ಪೂರ್ವಭಾವಿ ಪರೀಕ್ಷೆಯು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಯುವುದು ಸಮಸ್ಯೆಯಾಗಿದೆ. ಗೊತ್ತಿರದ ಭಾಷೆಗಳಲ್ಲಿ ಅಭ್ಯರ್ಥಿಗಳಿಗೆ ತಮ್ಮ ಸಂಪೂರ್ಣ ಸಾಮರ್ಥ್ಯ ಪ್ರದರ್ಶಿಸಲು ಸಾಧ್ಯವಾಗುವುದಿಲ್ಲ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ವಾಹನ ಹರಿದು ಕರಡಿ ಸಾವು

ಮಾಗಡಿ: ತಾಲ್ಲೂಕಿನ ರಾಮನಗರ ರಸ್ತೆಯ ಮಟ್ಟನದೊಡ್ಡಿ ಮಸೀದಿ ಮುಂದೆ ವಾಹನವೊಂದು ಹರಿದು ಗಂಡು ಕರಡಿಯೊಂದು ಮಂಗಳವಾರ ತಡ ರಾತ್ರಿ ಮೃತ ಪಟ್ಟಿದೆ ಎಂದು ವಲಯ ಅರಣ್ಯ ಅಧಿಕಾರಿ ಜಗದೀಶ್ ಗೌಡ ತಿಳಿಸಿದ್ದಾರೆ.

ಬುಧವಾರ ಬೆಳಿಗ್ಗೆ ಪಶು ವೈದ್ಯರೊಂದಿಗೆ ಸ್ಥಳಕ್ಕೆ ತೆರಳಿ ಶವ ಪರೀಕ್ಷೆ ನಡೆಸಲಾಯಿತು. ಬಳಿಕ ಅಂತ್ಯಕ್ರಿಯೆ ನಡೆಸಿದ್ದು, ಈ ಸಂಬಂಧ ಪ್ರಕರಣ ದಾಖಲಿಸಲಾಗಿದೆ ಎಂದರು.

ಸಂಶೋಧನಾ ಕ್ಷೇತ್ರಕ್ಕೆ ಬೆಂಗಳೂರು ಸೂಕ್ತ ತಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತವು ಎಲ್ಲ ಬಗೆಯ ತಾಂತ್ರಿಕ ಉತ್ಪಾದನೆ, ಸೇವೆ ಹಾಗೂ ನಿರ್ವಹಣೆಯ ತೊಟ್ಟಿಲು ಆಗಬೇಕು ಎಂಬುದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕನಸು' ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇಲ್ಲಿ ಹೇಳಿದರು.

ನಗರದಲ್ಲಿ ಗುರುವಾರ ಪ್ಯೂರ್ ಸ್ಟೋರೇಜ್ ಕಂಪನಿಯ ಸುಸಜ್ಜಿತ ಮತ್ತು ಅತ್ಯಾಧುನಿಕ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

'ಜಾಗತಿಕ ಮಟ್ಟದ ಕಂಪನಿಗಳಿಗೆ ಸಂಶೋಧನೆ ಹಾಗೂ ಅಭಿವೃದ್ಧಿಗೆ ಬೆಂಗಳೂರು ಪ್ರಶಸ್ತ ತಾಣ' ಎಂದು ಹೇಳಿದರು.

'ರಾಜ್ಯ ಸರ್ಕಾರವು ಶುದ್ಧ, ಪರಿಸರ ಸ್ನೇಹಿ ಮತ್ತು ದಕ್ಷ ತಂತ್ರಜ್ಞಾನಗಳನ್ನು ಉತ್ತೇಜಿಸಲು ಬದ್ಧವಿದೆ. ಸುಸ್ಥಿರತೆಯ ಮಾನದಂಡವನ್ನು ಕಂಪನಿಗಳು ಎಂದಿಗೂ ಮರೆಯಬಾರದು. ಸದ್ಯಕ್ಕೆ ದೇಶದಲ್ಲಿ ಡೇಟಾ ನಿರ್ವಹಣೆ ಕ್ಷೇತ್ರದಲ್ಲಿ 7 ಲಕ್ಷ ಮಂದಿ ದುಡಿಯುತ್ತಿದ್ದಾರೆ. ಬೆಂಗಳೂರಿನಲ್ಲೂ ಹೆಚ್ಚಿನ ಉದ್ಯೋಗಿಗಳು ಇದ್ದಾರೆ. ಈ ಸಂಖ್ಯೆ ಮತ್ತಷ್ಟು ಹೆಚ್ಚಲಿದೆ' ಅವರು ತಿಳಿಸಿದರು.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಜೇಯ ಮೋಟಗಾನಹಳ್ಳಿ ಮಾತನಾಡಿ, '2009ರಲ್ಲಿ ಸ್ಥಾಪನೆಯಾದ ಕಂಪನಿ, ವರ್ಷಕ್ಕೆ 2 ಶತಕೋಟಿ ಡಾಲರ್ ವಹಿವಾಟು ನಡೆಸುತ್ತಿದೆ. ಶೇ 20ರಷ್ಟು ಹಣವನ್ನು ಸಂಶೋಧನೆ ಮತ್ತು ಅಭಿವೃದ್ಧಿಗೆ ವಿನಿಯೋಗಿಸುತ್ತಿದೆ. ಜಗತ್ತಿನಾದ್ಯಂತ 10 ಸಾವಿರ ಗ್ರಾಹಕರು ಕಂಪನಿಯ ಸೇವೆಗಳ ಬಳಕೆದಾರರು' ಎಂದು ಅವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಅಜಯ್ ಸಿಂಗ್ ಹಾಜರಿದ್ದರು.

'ನವ ಉದ್ಯಮ ಸ್ಥಾಪನೆಗೆ ಬೆಂಬಲ'

ಬೆಂಗಳೂರಿನಲ್ಲಿ ಹೂಡಿಕೆದಾರರು, ಉದ್ಯಮಿಗಳೊಂದಿಗೆ ಮುಖ್ಯಮಂತ್ರಿ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ನವ ಉದ್ಯಮಗಳನ್ನು ಸ್ಥಾಪಿಸಲು ಸರ್ಕಾರದ ಸಂಪೂರ್ಣ ಬೆಂಬಲವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿ ತಿಳಿಸಿದರು.

ನಗರದಲ್ಲಿ ಗುರುವಾರದಿಂದ ಆರಂಭ ವಾದ 'ಜಾಗತಿಕ ಸ್ಟಾರ್ಟ್ ಅಪ್ ಸಮ್ಮೇಳನ' ಉದ್ಘಾಟಿಸಿ ಅವರು ಮಾತನಾಡಿದರು.

ಸ್ಟಾರ್ಟ್ ಅಪ್‌ಗಳಿಗೆ ಸದಾ ಸರ್ಕಾರದ ಬೆಂಬಲವಿದೆ. ಸ್ಟಾರ್ಟ್ ಅಪ್ ಆವಿಷ್ಕಾರದಲ್ಲಿ ರಾಜ್ಯವು ಮುಂಚೂಣಿಯಲ್ಲಿದೆ. ಫಾರ್ಚೂನ್ 500 ಕಂಪನಿಗಳ ಪೈಕಿ, 400 ಕಂಪನಿಗಳಿಗೆ ಬೆಂಗಳೂರು ನೆಲೆ ಒದಗಿಸಿದೆ ಎಂದು ಹೇಳಿದರು.

'ಸ್ಪರ್ಧೆಯ ಬಗ್ಗೆ ಚಿಂತಿಸುವುದಿಲ್ಲ. ಸಾಗುವ ದಾರಿಯಲ್ಲಿ ಸವಾಲುಗಳನ್ನು ಎದುರಿಸುತ್ತೇವೆ. ರಾಜ್ಯದಲ್ಲಿ ಹೂಡಿಕೆದಾರರನ್ನು ಸೆಳೆಯಲು ಎಲ್ಲ ರೀತಿಯಲ್ಲೂ ಪ್ರಯತ್ನ ಮುಂದುವರಿದಿದೆ' ಎಂದು ಮುಖ್ಯಮಂತ್ರಿ ಹೇಳಿದರು.

ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ.ನಾಯ್ಡು ಮಾತನಾಡಿ, 'ಹೊಸ ಸಂಶೋಧನೆ, ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ಜಾಗತಿಕ ಕೇಂದ್ರವಾಗಿಸಲು ಅವಿರತ ಪ್ರಯತ್ನ ಮುಂದುವರಿಸಲಾಗಿದೆ. ನೀತಿ ನಿರೂಪಕರು ಮತ್ತು ಉದ್ಯಮದ ನಡುವೆ ಸೇತುವೆ ನಿರ್ಮಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ತಿಳಿಸಿದರು. ದೇಶದಲ್ಲೇ ಸ್ಟಾರ್ಟ್ ಅಪ್ ನೀತಿಯನ್ನು ಪರಿಚಯಿಸಿದ ಮೊದಲ ರಾಜ್ಯ ಕರ್ನಾಟಕ ಎಂದು ಬಣ್ಣಿಸಿದರು.

ಸಮ್ಮೇಳನ ಉದ್ಘಾಟಿಸಿ ಸ್ಮಡ್ಡಾ ಅಧ್ಯಕ್ಷ ಕೌಡ್ ಸ್ಮಡ್ಡಾ ಅವರು, 'ಭಾರತವು ಈಗ ವಿಶ್ವದ 3ನೇ ಅತಿದೊಡ್ಡ ಸ್ಟಾರ್ಟ್ ಅಪ್ ವ್ಯವಸ್ಥೆ ಹೊಂದಿದೆ. ಪ್ರಪಂಚದ ಹೊಸ ಸಿಲಿಕಾನ್ ವ್ಯಾಲಿಯಾಗಿ ಹೊರಹೊಮ್ಮಿರುವುದು ಒಳ್ಳೆಯ ಬೆಳವಣಿಗೆ' ಎಂದು ತಿಳಿಸಿದರು.

ಸಿಂಗಾಪುರ, ಇಸ್ರೇಲ್, ಜಪಾನ್, ಕೊರಿಯಾ ಮತ್ತು ಜರ್ಮನಿಯ ಅಂತರರಾಷ್ಟ್ರೀಯ ಹೂಡಿಕೆದಾರರು ಹಾಗೂ ಉದ್ಯಮಿಗಳು ಪಾಲ್ಗೊಂಡಿದ್ದರು.

ಸಮಾರಂಭದಲ್ಲಿ ಕ್ಯಾಟಮಾರನ್ ವೆಂಚರ್ಸ್ ಅಧ್ಯಕ್ಷ ಎಂ.ಡಿ.ರಂಗನಾಥ್, ಪ್ರಶಾಂತ್ ಪ್ರಕಾಶ್, ಬಿಗ್ ಬಾಸ್ಕೆಟ್ ಇಂಡಿಯಾದ ಸಹ ಸಂಸ್ಥಾಪಕ ಹರಿ ಮೆನನ್ ಉಪಸ್ಥಿತರಿದ್ದರು.

ಬೆಂಗಳೂರಿನ ಹೋಟೆಲ್ ಕಾನ್ರಾಡ್‌ನಲ್ಲಿ ಗುರುವಾರ 'ಜಾಗತಿಕ ಸ್ಟಾರ್ಟ್ ಅಪ್ ಸಮ್ಮೇಳನ'ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ವಿ.ವಿ. ನಾಯ್ಡು, ಹರಿ ಮೆನನ್ ಹಾಜರಿದ್ದರು

ಜನಶಕ್ತಿ ಸಮ್ಮೇಳನ

ರಾಯಚೂರು: ಕರ್ನಾಟಕ ಜನಶಕ್ತಿ ಸಂಘಟನೆಯ ಮೂರನೇ ರಾಜ್ಯ ಸಮ್ಮೇಳನ ರಾಯಚೂರಿನಲ್ಲಿ ಜುಲೈ 3 ಮತ್ತು 4ರಂದು ನಡೆಯಲಿದೆ ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ನೂರ್ ಶ್ರೀಧರ್ ತಿಳಿಸಿದರು.



ಉಡುಪ ಫೌಂಡೇಷನ್ ನಗರದಲ್ಲಿ ಆಯೋಜಿಸಿದ್ದ 'ಉಡುಪ ಮ್ಯೂಸಿಕ್ ಫೆಸ್ಟಿವಲ್'ನಲ್ಲಿ ಉಸ್ತಾದ್ ಅಮ್ಜದ್ ಅಲಿ ಖಾನ್ ಸರೋದ್ ವಾದನ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

ನಟ ಉದಯ್ ಹುತ್ತಿನಗದ್ದೆ



ಬೆಂಗಳೂರು: ನಟ ಉದಯ್ ಹುತ್ತಿನಗದ್ದೆ (61) ಅವರು ಗುರುವಾರ ರಾಜಾಜಿನಗರದ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ನಟಿ ಲಲಿತಾಂಜಲಿ ಮತ್ತು ಇಬ್ಬರು ಪುತ್ರರು ಇದ್ದಾರೆ.

1980ರ ದಶಕದ ಕೊನೆಯಲ್ಲಿ 'ಆರಂಭ', 'ಕ್ರಮ', 'ಉಂಡೂ ಹೋದ ಕೊಂಡೂ ಹೋದ', 'ಶಿವಯೋಗಿ ಅಕ್ಕಮಹಾದೇವಿ', 'ಅಮೃತಬಿಂದು', 'ಉದ್ಭವ' ಚಿತ್ರಗಳಲ್ಲಿ ಅಭಿನಯಿಸಿ ಖ್ಯಾತರಾಗಿದ್ದರು. ಬಳಿಕ ನವರಂಗ್ ವೃತ್ತದ ಬಳಿ ಛಾಯಾಗ್ರಹಣ ಸ್ಟುಡಿಯೋ ಹೊಂದಿದ್ದರು. ಆನಂದರಾವ್ ವೃತ್ತದ ಬಳಿ ಕಲರ್‌ಲ್ಯಾಬ್ ನಡೆಸುತ್ತಿದ್ದರು. ಚಲನಚಿತ್ರ ಹಾಗೂ ಛಾಯಾಗ್ರಹಣ ಕ್ಷೇತ್ರದಲ್ಲಿ ಆಸಕ್ತಿ ವಹಿಸಿ ಬರುವವರಿಗೆ ಆಸರೆ ಹಾಗೂ ಉದ್ಯೋಗ ನೀಡಿದ್ದರು ಎಂದು ಅವರ ಆಪ್ತರು ಸ್ಮರಿಸಿದ್ದಾರೆ.

ಇತ್ತೀಚೆಗೆ ಅವರು ನರಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದರು. ಉಸಿರಾಟದ ತೊಂದರೆಯೂ ಅವರನ್ನು ಬಾಧಿಸಿತ್ತು. ಇತ್ತೀಚೆಗಷ್ಟೇ ಚಿಕಿತ್ಸೆ ಪಡೆದಿದ್ದರು.

ಪಾರ್ಥೀವ ಶರೀರವನ್ನು ರಾಜಾಜಿನಗರದ ಅವರ ನಿವಾಸದಲ್ಲಿ ಇರಿಸಲಾಗಿದೆ. ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಪುತ್ರ ಪ್ರಶಸ್ ತಿಳಿಸಿದರು.

₹442 ಕೋಟಿ ಮೊತ್ತದ ಯೋಜನೆ: ಟೆಂಡರ್ ಪ್ರಕ್ರಿಯೆ ಆರಂಭ

ದಂಡು ರೈಲು ನಿಲ್ದಾಣಕ್ಕೆ ಹೊಸ ವಿನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಂಪರಿಕ ಶೈಲಿಯನ್ನು ಉಳಿಸಿಕೊಂಡೇ ದಂಡು ರೈಲು ನಿಲ್ದಾಣಕ್ಕೆ ಹೊಸ ವಿನ್ಯಾಸ ನೀಡಲು ನೈರುತ್ಯ ರೈಲ್ವೆ ಮುಂದಾಗಿದೆ. ₹442 ಕೋಟಿ ಮೊತ್ತದ ಯೋಜನೆ ರೂಪಿಸಿದ್ದು, ಟೆಂಡರ್ ಪ್ರಕ್ರಿಯೆ ಆರಂಭಿಸಿದೆ.

ವಿಮಾನ ನಿಲ್ದಾಣ ಮಾದರಿಯ ವಿನ್ಯಾಸದೊಂದಿಗೆ ವಿವಿಧ ಹಂತದ ವಾಹನಗಳ ನಿಲುಗಡೆ ತಾಣ, ಮಳೆನೀರು ಸಂಗ್ರಹ, ಸೌರ ವಿದ್ಯುತ್ ಚಾವಣಿಯನ್ನು ಒಳಗೊಂಡಂತೆ ನಿಲ್ದಾಣದಲ್ಲಿ ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಿದೆ.

ಈಗಿರುವಂತೆಯೇ ವಸಂತನಗರ ಭಾಗಕ್ಕೆ ಮುಖ್ಯ ಪ್ರವೇಶ ದ್ವಾರ, ಮಿಲ್ಲರ್ಸ್ ರಸ್ತೆ ಕಡೆಗೆ ಎರಡನೇ ಪ್ರವೇಶ ದ್ವಾರ ನಿರ್ಮಿಸಲು ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ. ಪ್ರವೇಶ ದ್ವಾರಗಳಲ್ಲಿ ಪ್ರಯಾಣಿಕರ ಸಂಚಾರಕ್ಕೆ ತೊಂದರೆ ಆಗದಂತೆ ಎರಡೂ ಕಡೆ ಪ್ರತ್ಯೇಕ ಟಿಕೆಟ್ ವಿತರಿಸುವ ಕೌಂಟರ್‌ಗಳನ್ನು ತೆರೆಯಲು ಉದ್ದೇಶಿಸಿದೆ. ಎರಡೂ ಪ್ರವೇಶ ದ್ವಾರದ ಕಡೆಯೂ ಎರಡು ಮಹಡಿಗಳಲ್ಲಿ ವಾಹನಗಳ ನಿಲುಗಡೆ ತಾಣ ನಿರ್ಮಿಸವುದನ್ನು ಯೋಜನೆ ಒಳಗೊಂಡಿದೆ.

'ದಿನಕ್ಕೆ 100ಕ್ಕೂ ಹೆಚ್ಚು ರೈಲುಗಳು ಈ ನಿಲ್ದಾಣವನ್ನು ಹಾದು ಹೋಗುತ್ತಿದ್ದು, 55 ಸಾವಿರ ಪ್ರಯಾಣಿಕರು ನಿಲ್ದಾಣ ಬಳಕೆ ಮಾಡಿರುವ ದಿನಗಳೂ ಇವೆ. ಮುಂದಿನ ದಿನಗಳಲ್ಲಿ ಉಪನಗರ ರೈಲುಗಳು ಇದೇ ನಿಲ್ದಾಣಕ್ಕೆ ಬಂದು ಹೋಗಲಿದ್ದು, ಪ್ರಯಾಣಿಕರ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇದೆ. ಆದ್ದರಿಂದ ಮೂಲಸೌಕರ್ಯ ಹೆಚ್ಚಿಸಲಾಗುತ್ತಿದೆ' ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಹೇಳುತ್ತಾರೆ.

'ವಿಶ್ವ ದರ್ಜೆಯ ಪ್ರಯಾಣಿಕ ಸ್ನೇಹಿ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಅಂಗವಿಕಲರು, ವೃದ್ಧರು ನಿಲ್ದಾಣ ಪ್ರವೇಶಿಸಲು ಅನುಕೂಲ ಆಗುವ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ' ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗಡೆ 'ಪ್ರಜಾವಾಣಿ'ಗೆ ತಿಳಿಸಿದರು.

ಹೊಸ ರೂಪ ಪಡೆಯಲಿರುವ ದಂಡು ರೈಲು ನಿಲ್ದಾಣದ ವಿನ್ಯಾಸ

ರೈಲು ನಿಲ್ದಾಣದ ವಿಶೇಷತೆಗಳು

- ಪ್ರಯಾಣಿಕರ ಪ್ರವೇಶ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ವ್ಯವಸ್ಥೆ
- ಹವಾನಿಯಂತ್ರಿತ ವ್ಯವಸ್ಥೆ ಒಳಗೊಂಡ ಪಾದಚಾರಿ ಮೇಲ್ಸೇತುವೆ
- ಪ್ರಯಾಣಿಕರನ್ನು ವಾಹನಗಳಿಂದ ಇಳಿಸಲು ಮತ್ತು ಹತ್ತಿಸಿಕೊಳ್ಳಲು ಪ್ರತ್ಯೇಕ ಜಾಗ
- ತ್ಯಾಜ್ಯ ನೀರು ಸಂಸ್ಕರಣಾ ಘಟಕ
- ವಿಮಾನ ನಿಲ್ದಾಣ ಮಾದರಿಯಲ್ಲಿ ಪ್ರಯಾಣಿಕರ ವಿಶ್ರಾಂತಿ ತಾಣ
- ಆಧುನಿಕ ವಿನ್ಯಾಸದ ಅಂಗಡಿ ಮಳಿಗೆ

ಬಿಬಿಎಂಪಿ ಚುನಾವಣೆಗೆ ಬಿಜೆಪಿ ಸಿದ್ಧತೆ

ಬೆಂಗಳೂರು: ಬಿಬಿಎಂಪಿ ಚುನಾವಣೆಗೆ ಸಿದ್ಧತೆ ಆರಂಭಿಸಿದ್ದು, ಇದಕ್ಕೆ ಪೂರಕವಾಗಿ 'ವಿಷನ್ ಡಾಕ್ಯುಮೆಂಟ್' ಅನ್ನು ಸಿದ್ಧಪಡಿಸಲು ತಜ್ಞರ ಸಮಿತಿ ನೇಮಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬಿಬಿಎಂಪಿ ಚುನಾವಣೆ ಸಿದ್ಧತೆಯ ಕುರಿತು ಪಕ್ಷದ ಕಚೇರಿಯಲ್ಲಿ ಗುರುವಾರ ನಡೆದ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, 'ಈಗಾಗಲೇ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡಬೇಕು. ಮಳೆಗಾಲವನ್ನು ಗಮನದಲ್ಲಿ ಇಟ್ಟುಕೊಂಡು ಕಾಮಗಾರಿಗಳನ್ನು ಬೇಗನೇ ಮುಗಿಸಲು ನಿರ್ಧರಿಸಲಾಗಿದೆ' ಎಂದರು.

'ಚುನಾವಣೆಗೆ ಈಗಿನಿಂದಲೇ ತಯಾರಿ ನಡೆಸಲಿದ್ದೇವೆ. ಪಕ್ಷದ ವತಿಯಿಂದ ಬೂತ್ ಸಮಿತಿ ಮತ್ತು ವಾರ್ಡ್ ಸಮಿತಿಗಳನ್ನು ಚುರುಕುಗೊಳಿಸಲು ನಿರ್ಧರಿಸಲಾಗಿದೆ. ಮುಂದೆ ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಬೇಕು. ಸಂಘಟನೆ ಮತ್ತು ಅಭಿವೃದ್ಧಿ ವಿಚಾರದಲ್ಲಿ ನಿರಂತರವಾಗಿ ಚರ್ಚೆ ಮಾಡುತ್ತಿರಬೇಕು. ಜನಾಭಿಪ್ರಾಯ ಪಡೆದು ಪ್ರಣಾಳಿಕೆಯಲ್ಲಿ ಸೇರಿಸಿ ವಿಷನ್ ಡಾಕ್ಯುಮೆಂಟ್ ತಯಾರು ಮಾಡಲು ನಿರ್ಧರಿಸಲಾಗಿದೆ' ಎಂದರು.

'ನಮ್ಮ ಶಾಸಕರು, ಸಚಿವರಿಂದ ಹಲವಾರು ಸಲಹೆ–ಸೂಚನೆಗಳು ಬಂದಿವೆ. ಅವೆಲ್ಲವನ್ನೂ ಗಮನಿಸಿ ಚುನಾವಣಾ ಸಿದ್ಧತೆಯನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಬಿಬಿಎಂಪಿ ಚುನಾವಣೆ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲಿಸಲಾಗುವುದು' ಎಂದು ಬೊಮ್ಮಾಯಿ ಹೇಳಿದರು.

'ಬೆಂಗಳೂರಿಗೆ ಮೂಲಸೌಕರ್ಯ ಒದಗಿಸುವ ಕಾರ್ಯಕ್ಕೆ ಒತ್ತು ನೀಡಲಾಗುವುದು. ಸಬ್ ಅರ್ಬನ್ ಮತ್ತು ಮೆಟ್ರೋ ರೈಲಿನ ಎರಡನೇ ಹಂತದ ಕಾಮಗಾರಿಯನ್ನು ನಿಗದಿತ ಅವಧಿಗಿಂತ ಒಂದು ವರ್ಷ ಮೊದಲೇ ಪೂರ್ಣಗೊಳಿಸಲು ಪ್ರಯತ್ನ ನಡೆದಿದೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

URGENTLY REQUIRED
• **ACCOUNTANT** (Male / Female)
- Experienced / Freshers - Salary best in trade
Minimum Qualification : B.com
Apply with recent photograph
E-mail : corporateoffice@chemmanur.com
Chemmanur Jewellers
Chemmanur Corporate Office, #19/1, KCD Complex, 3rd Cross, Mission Rd, Bangalore-27
Tel: 080 22221928 / 22238539

Multiple Vacancy

REQUIRED TEAMLEADER, TELECALLER, & FIELD EXECUTIVE For Banking Loan collection (salary 20k). direct recruitment to company Contact:- 9620206756, 9620200756.

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

EXCELLENT OPPORTUNITY for Retired/ VRS Bank & Govt. Officers to Earn Huge Income With Possible Travel Abroad Age 50-70 Yrs. Call 9060033382

General

OFFICE ASSISTANT Male Experienced Wanted with Two Wheeler For Bommasandra, Bangalore. 'Kalyanapuri Flour Mills 9845398441

Teachers/ Professors

REQUIRED ACCOUNTANCY Lecturer for a Reputed College Near Yelahanka. vjpucmvs@gmail.com Contact: 9035319389

WANTED TEACHERS Teach Kannada, English, Maths, Science, Social, English Medium Classes. Contact: 080-23350778, 9448074071, 9480608715. Sree Manjunatha Vidyalaya, Magadi road tollgate, Bangalore- 560023

NEW HOLY SAINT SCHOOL HAMPINAGAR Requires Anglo Indian Nursery Teachers. Salary 15000/- Contact: 7892461960/ 9448737592.

Wanted

URGENT FRESHER & experience DATA ENTRY OPERATOR Required in Koramangala, Banaswadi, Whitefield, near Vidhana Soudha & Nimhans. 9844863432, 9322928212, 9331124144. sultu1432@gmail.com

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn upto 40,000/- Contact: 9741401834

REAL ESTATE SELLING

Commercial Land

North

3 ACRES Land For Sale in Survey No. 61/2/A, North of National Highway No.9 in Manik Nagar Village, Humnabad, Karnataka State.Contact : 9393333321/8074222930/ 9848038381.

1768 SQ.YARDS Commercial Land for Sale in Survey No.169/A&K, Main Highway Road No 9 Humnabad, Karnataka, State. Contact:9393333321/ 8074222930/9848038381

Flat

Jayanagar

SALE 2BHK FLAT FURNISHED WITH COVERED CAR PARKING AT SHANTHIPARK APT, 9th BLOCK JAYANAGAR.98440 64147

JAYANAGAR 4TH 'T' Block, Spacious 1580 sft 2 BHK Apartment for Sale, Near Cakewala 9,500/- Sft. Call:9886655869.

House

Banashankari

SALE BSK THIRD stage THIRD phase FIRST block Bangalore-560085 OPPOSITE WATER TANK East Facing With OLD house FIFTY feetRoad suitable FOR COMMERCIAL 40x60feet CONTACT KRISHNAMURTHY 8277305783 BROKERS PLEASE EXCUSE.

Sites

Airport Road

BDA BIAAPA approved Corner Sites for Sale 14 kms Before Airport 500 meters from Stone Hill School Direct Owner 7337616557 8904050690

Doddabalapur

SITE SALE: Doddaballapura Town, BIAAPA Approved, Clear Title, 'A' Katha, Ready For Registration. Contact: 9845915999.

Kanakapura Road

BALAJI LAYOUT, Vajarahalli 28x40 SITE SALE 8,750/- Sqft, S/F, 40 Feet Road, Walkable Metro Station/ Bus-Stop. 9945724472, 7829830333.

Nelamangala

MATHA VILLA.PLOT @.Arishinakunte Nelamangala Town Limit,DC Converted Sites For-Sale 30x50,30X45 Rs-2650/-Sft. Call-Owner 9980741687.

Villas/Bunglows

RMV

BDA 50X80 east facing RMV 2nd stage, 20,000/- persft, suitable for apartment, bunglows.9844092859/ 9632377775.

REAL ESTATE BUYING

Sites

General

REQUIRED : Land and Building
We are looking for OUTRIGHT PURCHASE of Educational institutions or Hospitals (running or closed down) with infrastructure to run college or school or hospital.
Even If it is inside BBMP limits - for 0.5 acres to 3 acres or If it is beyond BBMP limits- for greater than 10 acres.
If interested to sell please Contact : 76761 80236, No Brokers please.

Hebbal

WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR. Immediate settlement. "Spacelinks" 9845129934.

RENTAL PROPERTIES

Accommodation Available

Commercial

FOR RENT- Office space 1300sft, Fully furnished with Parking. @ Park Road, Near Shivaji Nagar Bus Stand, Bangalore. Contact. 9632121146.

Flats

3BHK FLAT for rent - Rustum Bagh. Fully refurbished with balcony, wardrobes and covered carpark. Immediately available. Rs.40,000 p.m. + maintenance. Contact: 9945860834 or 9845816914.

Villas/Bunglows

TO LET / LEASE. 5 BHK Villa, BAGALUR, 30 Minutes to KIA, Ideal for Startups Office, Company Lease Preferred. Contact: 9945618912, 7406901010

EDUCATIONAL

Admission

JOIN BEFORE 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

PUBLIC NOTICE

DOCUMENT LOST

I, MR. MOHAMMED TAREQUE HASHMI, S/o late Mohammed Idris Hashmi, Owner of Villa No-5, BLOOMINGDALE, situated at Pattandur Agrahara Village, K R Puram Hobli, Bangalore East Taluk, Bangalore, and Now presently residing at # 193, Summit Ave, Jersey City, NJ 07304 USA,
I am absolute Owner of the villa property Villa No-5, BLOOMINGDALE, situated at Pattandur Agrahara Village, K R Puram Hobli, Bangalore East Taluk, Bangalore, purchased by me from NAREN KOLLU S/o K S Appa Rao, dated 12-2-2013 the previous Owner/vendor of the Villa-5.
That I declare that I have misplaced and lost the Original Absolute Sale deed bearing Doc No-KRI-1-30666-2006-07, CD No-KRID278 dated 22-12-2006, of the previous VENDOR, also I declare that I have misplaced and lost ABSOLUTE SALE DEED of Mr. Sriganesh Bhagavathula and Mrs. Srilakshmi Bhagavathula, bearing Doc No-KRI-1-11199-2005-06, CD NO-KRID166, dated 24-12-2005, OF Villa No-5, BLOOMINGDALE, situated at Pattandur Agrahara Village, K R Puram Hobli, Bangalore East Taluk, Bangalore bounded by East by Villa No-6, West by Villa No-4 North by :Common area in Schedule "A" property and South by: Private Property known as Deen Garden.
Finders please contact: +1 (201) 234-2101 and +91 9886038855 / 8073999544 or inform near by Police Station.

PUBLIC NOTICE
I have lost the original Sale Deed of Property bearing Unit No.205 **"SOPHIA'S CHOICE"**, No.7/24, St. Mark's Road, Bangalore – 01 executed by Smt. Nagin Aslam and Smt. Firdaus Hashim in my favour registered as document No. 1334/1987-88, Book-I, Volume 2632, Pages 96 to 107, dated 14.08.1987 in the Office of the Sub-Registrar, Shivajinagar, Bangalore. I have lodged a Police Complaint vide Lost Report No. 0236002/2022, dated 01.06.2022. This Notice is hereby given for the information of General Public that If anybody finds I kindly request you to deliver the same to
Sri. Ramesh Chander Puri
Flat No.3, No.71, Shalimar Apartment D'Souza Road, Richmond Town Bangalore-560 025,
03.06.2022 Mobile:9448273366

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WEEKEND CORNER

ಕ್ಲಾಸಿಫೈಡ್ಸ್

10% DISCOUNT ON ONLINE BOOKING
20% DISCOUNT FOR STUDENTS
30% DISCOUNT ONLY FOR FUN WORLD
Call: 08431110000 Web: www.funworldblr.com Address: Jayamahal main rd, Bengaluru

BUSINESS

Business to Business

Finance

EXCELLENT INVESTMENT Looking for investors with ready funds of 3 to 5 cr in 2 acres on Kanakapura Road NH 209/548 Proposal for petrol /diesel/ fuel station along with CNG gas station, EV charging station, Hotel, Restaurant, CL7. Call : 9035963540

MATRIMONIAL

Grooms Wanted

Muslim

SMU/29/BEAUTIFUL/5'7'/Life Insurance Corporation/Belgaum/Seeking Educated Well Settled Job Holder/Contact 9164647183

PERSONAL

Change of Name

I, VIKAS have changed my name to VIKAS.R vide affidavit dated: 31/5/2022 Before Notary Manohar Jeerige Bangalore.

I, ASHA Manjunath, Residing at #2013, 12th A Cross 1st Main Road Hampinagar Vijayanagar 2nd Stage, Bangalore- 560040 Have Changed My Name to Asha Manjunatha Vide Affidavit Dated 01-06-2022 Before Notary H.S.Sakalesh Aradhya, Bangalore.

I. DILBER SAIT YASHRAJ MEHBOOB, S/o. Abdul Bashir, residing at No.34/02, Ranoji Rao Road, Basavanagudi, Bangalore-560004, have changed my name to MEHBOOB DILBER SAIT YASHRAJ, vide affidavit dated 30-05-2022 before Notary Gangaraju.B.N. Bangalore.

I MUBASHERA TABASSUM Age about. 51 Years W/o. Abdul Rasheed Altaf Pasha residing at Near Aqsa Masjid, 2nd street, Kannurahalli road. Karnataka Layout, Hosakote, Bangalore Rural- 562114 have changed my Name as MUBASHIRA TABASSUM, Vide affidavit dated 14/05/2022 before Notary V. Sadappa, Bangalore

I, SHAHANA daughter of #1086524Y, Rank: LD(TS), Ex-Army, Sailani Badashaha S Sayyadanavar, Residing at #442/24, 2nd Main Road, 1st Cross, Mathikere, Bangalore-54, have changed my name from SHAHANA to SHAHANA S SAYED vide affidavit dated 31.05.2022, before notary Onkarappa. N.R., Bangalore.

I MANGALAGOWRAMMA T M W/o Late T P Shivananda, aged 71 yrs, R/o NO.41, 1st A cross,Anubhavanagara, Nagarabhavi Road, Bangalore-72, do hereby declare that T M MANGALAGOWRI and MANGALAGOWRAMMA T M are my names only. I shall Retain the name MANGALAGOWRAMMA T M for all purposes. Vide affidavit dt. 2/6/22, Sworn before G S Susheela, advocate and Notary, Bangalore.

I SUSHMITHA Ravi residing at 1263/E, Srinivasa Nilaya,1st B cross, Hampi Nagar(RPC Layout), Bangalore - 560104 changed my name to Sushmitha Ravi Tenkasalai vide affidavit dated 16/04/2022 sworn before Notary M.K. Devaki. Bangalore

ADMISSION CORNER

RAMAN POLYTECHNIC
12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 080-23488623, 23284817, 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-22302

DH DECCAN HERALD ಪ್ರಜಾವಾಣಿ

Classifieds **EDUCATION SPECIAL**
SPECIAL RATES FOR
Admission Notice,
Education Success
Congratulation Ads
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

ಕೃಷಿ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ

ಬಿತ್ತನೆ ಬೀಜ ಕೊರತೆ ಆಗದಂತೆ ನಿಗಾ ವಹಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಗಾರು ಹಂಗಾಮಿಗೆ ಬಿತ್ತನೆ ಬೀಜ ಹಾಗೂ ಗೊಬ್ಬರದ ಕೊರತೆ ಆಗದಂತೆ ನಿಗಾ ವಹಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಕೃಷಿ ಇಲಾಖೆಯ ಆಯವ್ಯಯ ಅನುಷ್ಠಾನದ ಕುರಿತು ಮುಖ್ಯಮಂತ್ರಿ ಗುರುವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

'ಸದ್ಯ ರಾಜ್ಯದಲ್ಲಿ 1.26 ಲಕ್ಷ ಟನ್ ಡಿಎಪಿ ಲಭ್ಯವಿದ್ದು, ಒಟ್ಟಾರೆ 7.64 ಲಕ್ಷ ಟನ್ ರಸಗೊಬ್ಬರ ಲಭ್ಯವಿದೆ. ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ (7.81 ಲಕ್ಷ ಕ್ವಿಂಟಲ್) ಬಿತ್ತನೆ ಬೀಜ ಲಭ್ಯವಿದೆ. ರೈತರ ಬೇಡಿಕೆ ಪೂರೈಸಲು ಯಾವುದೇ ಕೊರತೆ ಇಲ್ಲ. ಆದರೆ, ನಕಲಿ ಬೀಜಗಳ ಹಾವಳಿ, ಕೃತಕ ಅಭಾವ ಸೃಷ್ಟಿ ಆಗದಂತೆ ಎಚ್ಚರಿಕೆ ವಹಿಸಬೇಕು' ಎಂದು ಸೂಚಿಸಿದರು.

'ಪ್ರಸಕ್ತ ಸಾಲಿನಲ್ಲಿ 114.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಅದರೊಂದಿಗೆ ಕಂದಾಯ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಗಳಿಂದ, ಬಂಜರು ಭೂಮಿ ಹಾಗೂ ಸವಳು-ಜವಳು ಭೂಮಿಯ ಮಾಹಿತಿ ಪಡೆದು, ಕನಿಷ್ಠ ತಲಾ ಒಂದು ಲಕ್ಷ ಹೆಕ್ಟೇರ್ ಬಂಜರು ಭೂಮಿ ಹಾಗೂ ಸವಳು-ಜವಳು ಭೂಮಿಯನ್ನು ಕೃಷಿಯೋಗ್ಯವಾಗಿ ಪರಿವರ್ತಿಸಬೇಕು' ಎಂದೂ ತಿಳಿಸಿದರು.

'ದ್ವಿದಳ ಧಾನ್ಯ ಮತ್ತು ಎಣ್ಣೆಕಾಳು ಬೆಳೆಗಳ ಉತ್ಪಾದಕತೆಯನ್ನು ಸುಸ್ಥಿರ ಅಭಿವೃದ್ಧಿ ಗುರಿಯ ಮಟ್ಟಕ್ಕೆ ಹೆಚ್ಚಿಸಲು ಕ್ರಿಯಾಯೋಜನೆ ರೂಪಿಸಬೇಕು, ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಹಂಚಿಕೆ ಮಾಡುವಾಗ ರೈತ ಉತ್ಪಾದಕ ಸಂಘಗಳಿಗೆ ಆದ್ಯತೆ ನೀಡಬೇಕು. ಕೃಷಿ ಸಿಂಚಾಯಿ ಯೋಜನೆಯಡಿ ಜಲಾನಯನ ಅಭಿವೃದ್ಧಿ ಕೆಲಸಗಳಿಗೇ ಒತ್ತು ನೀಡಬೇಕು, ಕೃಷಿ ಯಾಂತ್ರೀಕರಣ ಉತ್ತೇಜನಕ್ಕಾಗಿ ಪ್ರತಿ ಎಕರೆಗೆ ₹ 250 ರಂತೆ ಗರಿಷ್ಠ 5 ಎಕರೆಗೆ ಡೀಸೆಲ್ ಸಬ್ಸಿಡಿ ನೀಡುವ ರೈತ ಶಕ್ತಿ ಯೋಜನೆಯನ್ನು ತಿಂಗಳ ಅಂತ್ಯದೊಳಗೆ ಜಾರಿಳಿಸಬೇಕು' ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ಕೃಷಿ ಸಚಿವ ಬಿ.ಸಿ. ಪಾಟೀಲ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

'ರೈತರ ಖಾತೆಗೆ ₹956.71 ಕೋಟಿ ವರ್ಗಾವಣೆ'

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ 'ಪಿಎಂ– ಕಿಸಾನ್ ಕರ್ನಾಟಕ ಯೋಜನೆ'ಯಡಿ ಫಲಾನುಭವಿ ರೈತರಿಗೆ ತಲಾ ₹2,000 ಬಿಡುಗಡೆ ಮಾಡಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ನಡೆದ ಕಾರ್ಯಕ್ರಮದಲ್ಲಿ 47.86 ಲಕ್ಷ ರೈತರಿಗೆ ತಲಾ ₹2,000 ದಂತೆ ಒಟ್ಟು ₹956.71 ಕೋಟಿ ಮೊತ್ತವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಡಿಬಿಟಿ ಮೂಲಕ ವರ್ಗಾಯಿಸಿದರು. 'ರಾಜ್ಯ ಸರ್ಕಾರ ಈ ಯೋಜನೆಯಡಿ 2018 ರಿಂದ ಇಲ್ಲಿಯವರೆಗೆ ಒಟ್ಟು ₹3861.66 ಕೋಟಿ ನೆರವನ್ನು ಬಿಡುಗಡೆ ಮಾಡಿದೆ' ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ. ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 2019 ರಿಂದ 2022 ರ ಮಾರ್ಚ್‌ವರೆಗೆ ರಾಜ್ಯದ 53.83 ಲಕ್ಷ ರೈತರಿಗೆ ₹8,702 ಕೋಟಿ ನೆರವು ಬಿಡುಗಡೆ ಮಾಡಿದೆ. ಮೇ 31 ರಂದು ಪ್ರಧಾನಮಂತ್ರಿ ಮೋದಿ 49.30 ಲಕ್ಷ ರೈತರಿಗೆ₹1,279.86 ಕೋಟಿ ಬಿಡುಗಡೆ ಮಾಡಿದ್ದರು ಎಂದು ಹೇಳಿದೆ.

ಈ ಸಂದರ್ಭದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಮುಂತಾದವರು ಇದ್ದರು.

ಪ್ರತಿಭಟನೆ

ಸೇವಾ ಅವಧಿಯಲ್ಲಿ ಸ್ವಂತ ಅಥವಾ ಬಯಸಿದ ಜಿಲ್ಲೆಗೆ ಒಂದು ಬಾರಿ ವರ್ಗಾವಣೆಗೆ ಅವಕಾಶ ನೀಡುವಂತೆ ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರು ಗುರುವಾರ ಪ್ರತಿಭಟನೆ ನಡೆಸಿದರು

– ಪ್ರಜಾವಾಣಿ ಚಿತ್ರ

'ಮುಸ್ಲಿಮರೊಂದಿಗೆ ಮುಚ್ಚಿಟ್ಟಿರುವ ಸಂಬಂಧವೇನು?'

ಮೈಸೂರು: 'ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಮುಸ್ಲಿಮರ ನಡುವೆ ಮುಚ್ಚಿಟ್ಟ ಸಂಬಂಧವೇನು?' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಕೇಳಿದರು.

'ಅಪಾರ ಕೊಡುಗೆ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪರವಾಗಿ ಸಿದ್ದರಾಮಯ್ಯ ನಿಲ್ಲಬೇಕಾಗಿತ್ತು. ಆದರೆ, ಎಲ್ಲದಕ್ಕೂ ಅವರು ಟಿಪ್ಪು ಹೆಸರು ಹೇಳುತ್ತಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

'ಆರ್‌ಎಸ್‌ಎಸ್ ಉಚಿತ ಅಥವಾ ಕಡಿಮೆ ಶುಲ್ಕದಲ್ಲಿ ಶಿಕ್ಷಣ ನೀಡುತ್ತಿರುವ ಸಂಸ್ಥೆ. ನೆಹರೂ ಕೂಡ ತಮ್ಮ ನಿಲುವು ಬದಲಿಸಿ ಸಂಘವನ್ನು ಶ್ಲಾಘಿಸಿದ್ದರು. ಸಿದ್ದರಾಮಯ್ಯನವರ ಸುತ್ತಮುತ್ತ ಇರುವ ಭಯೋತ್ಪಾದಕರನ್ನು ನೋಡಿದರೆ ಅವರಿಗೆ ಆರ್‌ಎಸ್‌ಎಸ್ ಕೂಡ ಹಾಗೆಯೇ ಎನಿಸಿರಬಹುದು. ಅವರದ್ದೇ ಸರ್ಕಾರವಿದ್ದಾಗ ಆರ್‌ಎಸ್‌ಎಸ್ ವಿರುದ್ಧ ಆರೋಪಿಸಿ, ಕ್ರಮ ಕೈಗೊಳ್ಳಲಿಲ್ಲವೇಕೆ?' ಎಂದರು.

'ರಾಜ್ಯಸಭೆ ಚುನಾವಣೆಯಲ್ಲಿ ಮೂರೂ ಸ್ಥಾನಗಳನ್ನು ಗೆಲ್ಲಲು ರಣತಂತ್ರವನ್ನು ಮಾಡಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವ ಮೆಚ್ಚುವವರು ಬಿಜೆಪಿಯನ್ನು ಬೆಂಬಲಿಸುತ್ತಾರೆ. 32 ಹೆಚ್ಚುವರಿ ಮತಗಳು ನಮ್ಮ ಕಡೆಗಿವೆ' ಎಂದು ಪ್ರತಿಕ್ರಿಯಿಸಿದರು.

'ಧ್ವನಿವರ್ಧಕ ನಿರ್ಬಂಧ ಆದೇಶ ಪಾಲಿಸದಿದ್ದರೆ ಗುಂಡು ಹೊಡೆಯುವೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪ್ರಾರ್ಥನಾ ಮಂದಿರಗಳ ಧ್ವನಿವರ್ಧಕಗಳಿಗೆ ನಿರ್ಬಂಧ ವಿಧಿಸಿರುವ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗದ ಸರ್ಕಾರದ ವಿರುದ್ಧ ಜೂನ್ 8ರಂದು ರಾಜ್ಯವ್ಯಾಪಿ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ' ಎಂದು ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ತಿಳಿಸಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ಶಬ್ದಮಾಲಿನ್ಯ ಉಂಟು ಮಾಡುವ ಧ್ವನಿವರ್ಧಕಗಳ ನಿರ್ಬಂಧದ ಕುರಿತಾಗಿ ಸುಪ್ರೀಂಕೋರ್ಟ್ ಆದೇಶ ನೀಡಿದೆ. ರಾಜ್ಯ ಸರ್ಕಾರ 15 ದಿನಗಳ ಅವಕಾಶ ನೀಡಿದ್ದರೂ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಈ ಆದೇಶ ಕಸದಬುಟ್ಟಿ ಸೇರಿದೆ. ಕಟ್ಟುನಿಟ್ಟಿನ ನಿರ್ಧಾರ ಕೈಗೊಳ್ಳಲಾಗದಿದ್ದರೆ ರಾಜ್ಯ ಸರ್ಕಾರ ಅಧಿಕಾರದಿಂದ ಕೆಳಗಿಳಿದು, ನನಗೆ ಅಧಿಕಾರ ನೀಡಲಿ. 24 ಗಂಟೆಗಳಲ್ಲಿ ಕಟ್ಟುನಿಟ್ಟಿನ ನಿಯಮ ಜಾರಿಗೊಳಿಸುತ್ತೇನೆ. ಪಾಲಿಸದವರಿಗೆ ಗುಂಡು ಹಾರಿಸುತ್ತೇನೆ' ಎಂದು ಹೇಳಿದರು.

ವೈಟ್ ಟಾಪಿಂಗ್ 3ನೇ ಹಂತಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ವೈಟ್ ಟಾಪಿಂಗ್ ರಸ್ತೆಗಳು

ಮೊದಲ ಹಂತ	31 ರಸ್ತೆಗಳು(96.56 ಕಿ.ಮೀ)	₹972.68 ಕೋಟಿ
ಎರಡನೇ ಹಂತ	28 ರಸ್ತೆಗಳು(50.47 ಕಿ.ಮೀ)	₹756.58 ಕೋಟಿ
ಎರಡನೇ ಹಂತ	89 ರಸ್ತೆಗಳು(121.72 ಕಿ.ಮೀ)	₹1,183 ಕೋಟಿ

ಮೂರನೇ ಹಂತದಲ್ಲಿ ಗುರುತಿಸಿರುವ ರಸ್ತೆಗಳು

• ಕಬ್ಬನ್ ರಸ್ತೆ • ಬಿಇಎಲ್ ರಸ್ತೆ • ಎಚ್‌ಎಂಟಿ ಮುಖ್ಯರಸ್ತೆ • ಮತ್ತಿಕೆರೆ ಮುಖ್ಯರಸ್ತೆ • ಕತ್ರಿಗುಪ್ಪೆ ರಸ್ತೆ • ನಾಗರಭಾವಿ ಮುಖ್ಯರಸ್ತೆ • ಮಾಗಡಿ ರಸ್ತೆ • ರೈಲ್ವೆ ಪ್ಯಾರಲಲ್ ರಸ್ತೆ

ಬೆಂಗಳೂರು: ಎರಡು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ವೈಟ್ ಟಾಪಿಂಗ್ ಮೂರನೇ ಹಂತದ ಯೋಜನೆಗೆ ಮುಖ್ಯಮಂತ್ರಿ ಒಪ್ಪಿಗೆ ಸಿಕ್ಕಿದೆ. ಬಿಬಿಎಂಪಿ ಚುನಾವಣೆ ಸಮೀಪದಲ್ಲಿ ಇರುವಾಗ ಹಣಕಾಸು ಇಲಾಖೆ ಸೇರಿ ಹಲವು ಅನುಮತಿಗಳನ್ನು ಪಡೆಯುವ ಪ್ರಕ್ರಿಯೆ ಚುರುಕುಗೊಂಡಿದೆ.

ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ₹1,154 ಕೋಟಿ ವೆಚ್ಚದಲ್ಲಿ 89 ರಸ್ತೆಗಳನ್ನು(121.70 ಕಿಲೋ ಮೀಟರ್) ವೈಟ್ ಟಾಪಿಂಗ್ ಮಾಡುವ ಉದ್ದೇಶ ಹೊಂದಲಾಗಿತ್ತು. ಬಿಬಿಎಂಪಿ ಟೆಂಡರ್ ಪ್ರಕ್ರಿಯೆಯೂ ಆರಂಭವಾಗಿತ್ತು. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆದ ಕೂಡಲೇ ಅನುದಾನ ಹಿಂಪಡೆದಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೂರನೇ ಹಂತದ ಆರೂ ಪ್ಯಾಕೇಜ್‌ಗಳಿಗೆ ಈಗ ಒಪ್ಪಿಗೆ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮತ್ತು ನಗರಾಭಿವೃದ್ಧಿ ಇಲಾಖೆಯ ಉನ್ನತ ಮೂಲಗಳು ಖಚಿತಪಡಿಸಿವೆ. ಕಾನೂನು ತಜ್ಞರ ಅಭಿಪ್ರಾಯ ಪಡೆದು ಯೋಜನೆಗೆ ಸಮ್ಮತಿ ನೀಡಿದ್ದಾರೆ ಎಂದು ಹೇಳಿವೆ.

ಮೂರನೇ ಹಂತದಲ್ಲಿ ಗುರುತಿಸಿರುವ ರಸ್ತೆಗಳು ಬಹುತೇಕ ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಲ್ಲೇ ಹಾದು ಹೋಗಿದ್ದು, ಮುಖ್ಯಮಂತ್ರಿ ಅನುಮೋದನೆ ನೀಡಿರುವುದು ಆಡಳಿತ ಪಕ್ಷದ ಶಾಸಕರ ಅಸಮಾಧಾನಕ್ಕೆ ಕಾರಣವಾಗಬಹುದು ಎಂದು ಮೂಲಗಳು ತಿಳಿಸಿವೆ.

ಸದ್ಯ ನಗರದಲ್ಲಿ 100 ಕಿಲೋ ಮೀಟರ್‌ನಷ್ಟು ರಸ್ತೆಗಳು ವೈಟ್ ಟಾಪಿಂಗ್ ಆಗಿವೆ. 'ಡಾಂಬರ್ ರಸ್ತೆಗಳನ್ನು ನಿರ್ವಹಣೆ ಮಾಡುವಲ್ಲಿ ವಿಫಲವಾಗಿರುವುದರಿಂದ ವೈಟ್ ಟಾಪಿಂಗ್ ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡುವುದು ಸರಿಯಲ್ಲ. ವೈಟ್ ಟಾಪಿಂಗ್ ರಸ್ತೆಗಳು ನಗರದಲ್ಲಿ ಪ್ರವಾಹದ ಪ್ರಮಾಣ ಹೆಚ್ಚಿಸುತ್ತವೆ. ಅಲ್ಲದೇ ದೊಡ್ಡ ಪ್ರಮಾಣದಲ್ಲಿ ಹಣ ಕೂಡ ವ್ಯರ್ಥವಾಗುತ್ತದೆ. ಡಾಂಬರ್ ರಸ್ತೆಗಳನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡುತ್ತಿರುವ ದೇಶಗಳಿಗೆ ಹೋಗಿ ನಮ್ಮ ಎಂಜಿನಿಯರ್‌ಗಳು ಕಲಿಯುವ ಅಗತ್ಯವಿದೆ' ಎಂದು ಐಐಎಸ್‌ಸಿ ಪ್ರಾಧ್ಯಾಪಕರೂ ಆಗಿರುವ ಸಿವಿಲ್ ಎಂಜಿನಿಯರಿಂಗ್ ತಜ್ಞ ಆಶಿಷ್ ವರ್ಮಾ ಸಲಹೆ ನೀಡಿದರು.

ಮಳೆ ಅನಾಹುತ ತಡೆಗೆ ಕ್ರಮ ವಹಿಸಿ: ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆ ಹಾನಿ ತಡೆಗೆ ಶಾಶ್ವತ ಪರಿಹಾರ ರೂಪಿಸಿ ಅನಾಹುತಗಳಾಗದಂತೆ ಕ್ರಮ ಕೈಗೊಳ್ಳಬೇಕು' ಎಂದು ರಾಜರಾಜೇಶ್ವರಿನಗರ ವಲಯ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜರಾಜೇಶ್ವರಿ ನಗರ ವಲಯ ಕಚೇರಿಯಲ್ಲಿ ಮುಂಗಾರು ಮಳೆ ನಿರ್ವಹಣೆ ಕುರಿತ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, 'ಮಳೆ ಬಂದಾಗ ಅಧಿಕಾರಿಗಳು ಫೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂಬ ದೂರುಗಳು ಬರುತ್ತಿವೆ. ಈ ಆರೋಪಗಳು ಮರುಕಳಿಸಬಾರದು. ಚರಂಡಿ ನೀರು ಸರಾಗವಾಗಿ ಹರಿದು ಹೋಗುವಂತೆ ರಾಜಕಾಲುವೆಗಳನ್ನು ಸ್ವಚ್ಛಗೊಳಿಸಬೇಕು. ತಡೆಗೋಡೆಗಳನ್ನು ಎತ್ತರಿಸಬೇಕು' ಎಂದು ಹೇಳಿದರು.

'ಮೇ ತಿಂಗಳಲ್ಲಿ ಸುರಿದ ಮಳೆಯಿಂದ ಆರ್.ಆರ್. ನಗರ ವಲಯ ವ್ಯಾಪ್ತಿಯಲ್ಲಿ ಎಷ್ಟು ಮನೆಗಳಿಗೆ ಹಾನಿಯಾಗಿದೆ, ಸರ್ಕಾರ ಘೋಷಣೆ ಮಾಡಿರುವ ಪರಿಹಾರ ಎಷ್ಟು ಮಂದಿಗೆ ನೀಡಲಾಗಿದೆ' ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು, ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ 406, ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ 122 ಮನೆಗಳಿಗೆ ಹಾನಿಯಾಗಿದೆ. ಸಂತ್ರಸ್ತರ ಬ್ಯಾಂಕ್ ಖಾತೆಗೆ ₹1.32 ಕೋಟಿ ಜಮೆ ಮಾಡಲಾಗಿದೆ ಎಂದು ಉತ್ತರಿಸಿದರು.

'ರಸ್ತೆ ಗುಂಡಿಗಳ ವಿಚಾರವನ್ನು ಹೈಕೋರ್ಟ್ ಗಂಭೀರವಾಗಿ ಪರಿಗಣಿಸಿದೆ. ರಾಜರಾಜೇಶ್ವರಿನಗರ ವಲಯದಲ್ಲಿ ಎಷ್ಟು ಗುಂಡಿಗಳನ್ನು ಮುಚ್ಚಲಾಗಿದೆ' ಎಂದು ಪ್ರಶ್ನಿಸಿದರು. ಇನ್ನೆರಡು ದಿನದಲ್ಲಿ ಸ್ಥಳ ಪರಿಶೀಲನೆ ನಡೆಸಲಾಗುವುದು. ರಸ್ತೆಯಲ್ಲಿ ಗುಂಡಿಗಳು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

'1,228 ರಸ್ತೆ ಗುಂಡಿಗಳನ್ನು ಗುರುತಿಸಲಾಗಿದೆ. ಇದರಲ್ಲಿ 605 ಗುಂಡಿಗಳನ್ನು ಮುಚ್ಚಲಾಗಿದ್ದು, 625 ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯಪ್ರಗತಿಯಲ್ಲಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಗುತ್ತಿಗೆ ಪಡೆದವರು ಉಪಗುತ್ತಿಗೆ ನೀಡುತ್ತಿದ್ದಾರೆ. ಆದ್ದರಿಂದ ಕಾಮಗಾರಿ ವಿಳಂಬವಾಗುತ್ತಿದೆ ಎಂಬ ದೂರುಗಳಿವೆ. ಗುತ್ತಿಗೆದಾರರ ಸಮಸ್ಯೆ ಇದ್ದರೆ ಕೂಡಲೇ ವರದಿ ನೀಡಿ. ಅವರಿಗೆ ನೋಟಿಸ್ ನೀಡಿ' ಎಂದು ವಲಯ ಆಯುಕ್ತ ರಾಮ್ ಪ್ರಸಾದ್ ಮನೋಹರ್ ಸೂಚನೆ ನೀಡಿದರು.

ಕೋವಿಡ್: ಪ್ರಕರಣಗಳಲ್ಲಿ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕೊಂಚ ಏರಿಕೆ ಕಂಡಿದ್ದು, ಗುರುವಾರ 276 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಮಾರ್ಚ್ ಮೊದಲ ವಾರದ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿತ್ತು. ಏಪ್ರಿಲ್ ತಿಂಗಳಲ್ಲಿ ಈ ಸಂಖ್ಯೆ 50ರ ಗಡಿಯ ಆಸುಪಾಸಿನಲ್ಲಿತ್ತು. ವಾರದಿಂದ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ನಗರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 2 ಸಾವಿರದ ಗಡಿ (2,091) ದಾಟಿದೆ.

ಗುರುವಾರ ರಾಜ್ಯದಲ್ಲಿ 297 ಪ್ರಕರಣಗಳು ದೃಢಪಟ್ಟಿವೆ. ಒಂದು ದಿನದ ಅವಧಿಯಲ್ಲಿ 20,380 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.45 ರಷ್ಟು ಇದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.52 ಲಕ್ಷ ದಾಟಿದೆ. 39.10 ಲಕ್ಷಕ್ಕೂ ಅಧಿಕ ಮಂದಿ ಚೇತರಿಸಿಕೊಂಡಿದ್ದಾರೆ.

ಸಚಿವ ಸುಧಾಕರ್‌ಗೆ ಕೋವಿಡ್

ಬೆಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಕೋವಿಡ್ ದೃಢಪಟ್ಟಿದೆ.

ಈ ಸಂಬಂಧ ಅವರ ಟ್ವೀಟ್ ಮಾಡಿದ್ದಾರೆ.

'ಕೆಲ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದು ಹೋಮ್ ಐಸೋಲೇಷನ್‌ನಲ್ಲಿ ಇದ್ದುಕೊಂಡೇ ಚಿಕಿತ್ಸೆ ಪಡೆಯುತ್ತಿದ್ದೇನೆ' ಎಂದು ಹೇಳಿದ್ದಾರೆ.

2.5 ಲಕ್ಷ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ಕಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿನಿಯರಿಗೆ ನೀಡುವ 'ಓಬವ್ವ ಆತ್ಮರಕ್ಷಣೆ ಕಲೆ' ತರಬೇತಿಯನ್ನು ಆರನೇ ತರಗತಿಯಿಂದಲೇ ಆರಂಭಿಸಲಾಗುವುದು. ಸುಮಾರು 2.5 ಲಕ್ಷ ವಿದ್ಯಾರ್ಥಿನಿಯರು ಇದರ ಪ್ರಯೋಜನ ಪಡೆಯಲಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಈ ಹಿಂದೆ ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾರ್ಥಿನಿಯರಿಗೆ ಮಾತ್ರ ತರಬೇತಿ ನೀಡಲಾಗುತ್ತಿತ್ತು. ಈ ವರ್ಷದಿಂದ ಆರನೇ ತರಗತಿಯಿಂದಲೇ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ತರಬೇತಿ ನೀಡಲಾಗುತ್ತದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಅವರು, ಈಗ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನ 24 ಸಾವಿರ ವಿದ್ಯಾರ್ಥಿನಿಯರಿಗೆ ಓಬವ್ವ ಆತ್ಮ ರಕ್ಷಣೆ ಕಲೆ ತರಬೇತಿ ನೀಡಲಾಗುತ್ತಿದೆ. ಈ ಸಾಲಿನಲ್ಲಿ ಪ್ರಿ ಮೆಟ್ರಿಕ್ ವಿದ್ಯಾರ್ಥಿನಿಯರು ಸೇರಿ ಒಟ್ಟು 50 ಸಾವಿರ ವಿದ್ಯಾರ್ಥಿನಿಯರಿಗೆ ತರಬೇತಿ ನೀಡಲಾಗುವುದು. ಇದಕ್ಕೆ ಹೆಚ್ಚುವರಿಯಾಗಿ ₹5 ಕೋಟಿ ಖರ್ಚಾಗುತ್ತದೆ ಎಂದು ಹೇಳಿದರು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ 300 ಶಾಲೆಗಳಲ್ಲಿ ತಲಾ 100 ವಿದ್ಯಾರ್ಥಿನಿಯರಂತೆ ಒಟ್ಟು 30 ಸಾವಿರ ವಿದ್ಯಾರ್ಥಿನಿಯರು ಆತ್ಮ ರಕ್ಷಣಾ ಕಲೆ ತರಬೇತಿ ಪಡೆದಿದ್ದಾರೆ. ಈ ಸಾಲಿನಲ್ಲಿ ಹೆಚ್ಚುವರಿಯಾಗಿ 520 ವಸತಿ ಶಾಲೆಗಳ 82 ಸಾವಿರ ವಿದ್ಯಾರ್ಥಿನಿಯರು ತರಬೇತಿಗೆ ಒಳಪಡುತ್ತಾರೆ. ಒಟ್ಟು 1.15 ಲಕ್ಷ ವಿದ್ಯಾರ್ಥಿನಿಯರು ತರಬೇತಿ ಪಡೆಯಲಿದ್ದಾರೆ. ಇದರ ಅಂದಾಜು ವೆಚ್ಚ ₹17 ಕೋಟಿ ಆಗಲಿದೆ ಎಂದೂ ಹೇಳಿದರು.

ಕಳೆದ ಸಾಲಿನಲ್ಲಿ ಪ್ರಾಯೋಗಿಕವಾಗಿ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಯರಿಗೆ ಮಾತ್ರ ತರಬೇತಿ ನೀಡಲಾಗಿತ್ತು. ಈ ಸಾಲಿನಲ್ಲಿ 630 ಪೋಸ್ಟ್ ಮೆಟ್ರಿಕ್ ಮತ್ತು 290 ಪ್ರಿಮೆಟ್ರಿಕ್ ವಿದ್ಯಾರ್ಥಿನಿಲಯಗಳ ಸುಮಾರು 85 ಸಾವಿರ ವಿದ್ಯಾರ್ಥಿನಿಯರು ತರಬೇತಿಗೆ ಒಳಪಡುತ್ತಾರೆ ಎಂದರು.

ಖಾತೆಗೆ ನೇರ ವರ್ಗಾವಣೆ: 2021-22 ನೇ ಸಾಲಿನಲ್ಲಿ ಮೆಟ್ರಿಕ್ ನಂತರದ 3.74 ಲಕ್ಷ ವಿದ್ಯಾರ್ಥಿಗಳ ಪೈಕಿ 3.62 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗಿದೆ. 12 ಸಾವಿರ ವಿದ್ಯಾರ್ಥಿಗಳ ಆಧಾರ್ ಕಾರ್ಡ್ ಹೊಂದಾಣಿಕೆ ಕೊರತೆಯಿಂದ ವಿದ್ಯಾರ್ಥಿ ವೇತನ ಬಿಡುಗಡೆ ಆಗಿಲ್ಲ. ಈ ತಿಂಗಳ ಕೊನೆಯೊಳಗೆ ಸರಿಪಡಿಸಲಾಗುವುದು. ಮೊತ್ತವನ್ನು ವಿದ್ಯಾರ್ಥಿಗಳ ಖಾತೆಗೆ ನೇರ ವರ್ಗಾವಣೆ ಮಾಡಲಾಗುವುದು ಎಂದರು.

ಅಲ್ಲದೆ, ಮೆಟ್ರಿಕ್ ಪೂರ್ವದ 9.71 ಲಕ್ಷ ವಿದ್ಯಾರ್ಥಿಗಳ ಪೈಕಿ 9.13 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗಿದೆ. ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ₹437 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಅವರು ವಿವರಿಸಿದರು.



ಈ ವರ್ಷ ಧಾರವಾಡದಲ್ಲಿ ₹20 ಕೋಟಿ ವೆಚ್ಚದಲ್ಲಿ 5 ಬಿಸಿಎಂ ಹಾಸ್ಟೆಲ್‌ಗಳನ್ನು ತೆರೆಯಲು ಕೇಂದ್ರ ಸರ್ಕಾರದ ಮಂಜೂರಾತಿ ದೊರಕಿದ್ದು, ಸದ್ಯದಲ್ಲಿಯೇ ಕಾಮಗಾರಿ ಆರಂಭವಾಗಲಿದೆ. ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಕ್ಕಾಗಿ 9 ವಿದ್ಯಾರ್ಥಿ ನಿಲಯಗಳನ್ನು ಇಲಾಖೆಯಿಂದ ಮಂಜೂರು ಮಾಡಲಾಗಿದೆ. ಇದಕ್ಕೆ ₹30 ಕೋಟಿ ವೆಚ್ಚವಾಗಲಿದೆ ಎಂದು ಸಚಿವರು ಹೇಳಿದರು.

ಕನಕದಾಸರ ಹೆಸರಿನಲ್ಲಿ 50 ಹಾಸ್ಟೆಲ್

- ಕನಕದಾಸರ ಹೆಸರಿನಲ್ಲಿ 50 ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು. ಇದಕ್ಕೆ ₹165 ಕೋಟಿ ವೆಚ್ಚವಾಗಲಿದೆ.
- ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿಗಾಗಿ ಪಿಯುಸಿ ನಂತರದಿಂದ ಪಿಎಚ್‌ಡಿವರೆಗಿನ 8.5 ಲಕ್ಷ ವಿದ್ಯಾರ್ಥಿಗಳಿಗೆ ₹400 ಕೋಟಿ ಮೀಸಲಿರಿಸಲಾಗಿದೆ.
- 438 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 15 ದಿನಗಳಲ್ಲಿ 'ಶುಚಿ ಸಂಭ್ರಮ' ಕಿಟ್ ವಿತರಿಸಲಾಗುವುದು. ಇದಕ್ಕೆ ₹24 ಕೋಟಿ ವೆಚ್ಚವಾಗಲಿದೆ.
- ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಜಮಖಾನ, ಬೆಡ್‌ಶೀಟ್, ಹೊದಿಕೆ, ದಿಂಬು ಸರಬರಾಜು ಮಾಡಲು ₹16 ಕೋಟಿ ಬಿಡುಗಡೆ ಮಾಡಲಾಗುವುದು.

ಹದಗೆಟ್ಟ ಶಿರಾಡಿ ಘಾಟಿ ರಸ್ತೆ: ಸಂಚಾರ ದುಸ್ತರ

'ಕಡೇಪಕ್ಷ ಗುಂಡಿಯನ್ನಾದರೂ ಮುಚ್ಚಿ'

ಪ್ರಜಾವಾಣಿ ವಾರ್ತೆ

ಹಾಸನ: 'ಬೆಂಗಳೂರಿಂದ ಆಗಾಗ ಧರ್ಮಸ್ಥಳಕ್ಕೆ ಬರ್ತಾ ಇರ್ತಿವಿ. ಹಾಸನವರೆಗೂ ರಸ್ತೆ ಸರಿಯಾಗಿದೆ. ಹಾಸನದಿಂದ ಶಿರಾಡಿ ಘಾಟಿ ಇಳಿಯುವವರೆಗೂ ನಮ್ಮ ಪಾಡು ಹೇಳತೀರದು. ರಸ್ತೆಯಲ್ಲಿ ಕನಿಷ್ಠ ಗುಂಡಿಯನ್ನಾದರೂ ಮುಚ್ಚಿದರೆ ಜೀವ ಉಳಿಯುತ್ತದೆ.'

ಟಿಟಿ ವಾಹನದಲ್ಲಿ ಪ್ರವಾಸಕ್ಕೆ ಹೊರಟಿದ್ದ ಬೆಂಗಳೂರಿನ ಮುನಿಯಪ್ಪ ಹೀಗೆ ಹೇಳಿ ವಿಷಾದದ ನಗೆ ನಕ್ಕರು. 'ಗುಂಡಿಗಳು ತುಂಬಿದ ರಸ್ತೆಯಲ್ಲಿ ಪ್ರಯಾಣಿಸುವುದೇ ಕಷ್ಟಕರ. ಗುಂಡಿ ತಪ್ಪಿಸಲು ಸ್ವಲ್ಪ ಆಚೀಚೆ ಸರಿದರೂ ಧರ್ಮಸ್ಥಳದ ಮಂಜುನಾಥನೇ ಕಾಪಾಡಬೇಕು' ಎಂದು ಹೇಳಿದರು.

ಹಾಸನದ ಬೈಪಾಸ್‌ನಿಂದ ಸಕಲೇಶಪುರದ ಹೆಗ್ಗದ್ದೆಯವರೆಗೆ 45ಕಿ.ಮೀ. ಅಂತರದ ರಸ್ತೆ ಕಾಮಗಾರಿಯನ್ನು ₹ 700 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, 6 ವರ್ಷ ಕಳೆದರೂ ಕಾಮಗಾರಿ ಕುಂಟುತ್ತ ಸಾಗಿರುವುದು ಪ್ರಯಾಣಿಕರನ್ನು ಕಂಗೆಡಿಸಿದೆ.

'ಈ ರೂಟ್‌ನಲ್ಲಿ ಡ್ಯೂಟಿ ಮಾಡೋದಂದ್ರೆ ಪನಿಷ್‌ಮೆಂಟ್ ಇದ್ದಂಗೆ. ದೋಣಿಗಲ್ ಮತ್ತು ಮಾರನಹಳ್ಳಿ ಮಧ್ಯೆ 10 ಕಿ.ಮೀ.ರಸ್ತೆ ಸಂಚಾರಕ್ಕೆ ಅಯೋಗ್ಯವಾಗಿದೆ. ದಾರಿನೇ ಸಾಗಲ್ಲ. ಹೊಂಡ, ಗುಂಡಿಗಳನ್ನು ತಪ್ಪಿಸಿ ಬಸ್ ಓಡಿಸುವುದು ಪ್ರಯಾಸಕರ. ಈ ರೂಟ್‌ನಲ್ಲಿ ಒಮ್ಮೆ ಹೋಗಿ ಬಂದ್ರೆ, ಬಸ್ ದುರಸ್ತಿ ಆಗಲೇಬೇಕು. ನಮಗಂತೂ ಸಾಕಾಗಿ ಹೋಗಿದೆ' ಎನ್ನುವುದು ಕೆಎಸ್‌ಆರ್‌ಟಿಸಿ ಚಾಲಕರೊಬ್ಬರ ಅಳಲು.

ಗುಂಡಿ ಬಿದ್ದಿರುವ ಶಿರಾಡಿ ಘಾಟಿಯ ರಸ್ತೆ

'ರಾಷ್ಟ್ರೀಯ ಹೆದ್ದಾರಿ ಕಾಮಗಾರಿ 2016-17 ನೇ ಸಾಲಿನಲ್ಲಿ ಆರಂಭಗೊಂಡಿದೆ. 47 ಕಿ.ಮೀ. ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿದೆ. ಕಳಪೆ ಗುಣಮಟ್ಟದ್ದಾಗಿದೆ. ಸ್ಥಳೀಯ ಶಾಸಕರೂ ನಿರ್ಲಕ್ಷ್ಯ ವಹಿಸಿರುವುದು ಶಂಕೆ ಮೂಡಿಸಿದೆ. ಕೂಡಲೇ ಕಾಮಗಾರಿ ಚುರುಕುಗೊಳಿಸದಿದ್ದರೆ ಜೂನ್ 13ರ ನಂತರ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಲಿದೆ' ಎನ್ನುತ್ತಾರೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಿ.ಸಿ. ಸಣ್ಣಸ್ವಾಮಿ.

ಇನ್ನು ಚಾರ್ಮಾಡಿಯ ಮೂಲಕ ಪ್ರಯಾಣಿಸುವುದೂ ದುಸ್ತರ. ಹಾಸನ ಜಿಲ್ಲೆಯ ಬೇಲೂರು ವ್ಯಾಪ್ತಿಯಲ್ಲಿ ರಸ್ತೆ ಸರಿಯಾಗಿದೆ. ಆದರೆ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಿಂದ ಚಾರ್ಮಾಡಿ ಘಾಟಿಯ ರಸ್ತೆಯ ಹದಗೆಟ್ಟಿದೆ. ಈ ರಸ್ತೆಯಲ್ಲಿ ಲಘು ವಾಹನಗಳಿಗಷ್ಟೇ ಅವಕಾಶವಿದ್ದು, ಭಾರಿ ವಾಹನಗಳ ಸಂಚಾರ ನಿರ್ಬಂಧವಿದೆ. ಹಾಗಾಗಿ ಸರಕು ಸಾಗಣೆ ಲಾರಿಗಳು ಶಿರಾಡಿ ಮೂಲಕವೇ ಸಂಚರಿಸಬೇಕಾಗಿದೆ.

52 ಪೀಠೋಪಕರಣ ಕಂಪನಿಗಳು ಒಂದೇ ಸೂರಿನ ಅಡಿಯಲ್ಲಿ!

FURNITURE FAIR™

INTERIOR & EXTERIOR EXHIBITION

ಇಂದಿನಿಂದ ಆರಂಭ

3 | 4 | 5 | 6 ಜೂನ್ 2022

ಬೆಳಗ್ಗೆ 10.00 ರಿಂದ ರಾತ್ರಿ 8.30 ಗಂಟೆ

ತ್ರಿಪುರವಾಸಿನಿ ಅರಮನೆ ಮೈದಾನ

(ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು)

ಪೀಠೋಪಕರಣಗಳ ನಿಮ್ಮ ಹುಡುಕಾಟ ಇಲ್ಲಿ ಕೊನೆಗೊಳ್ಳುತ್ತದೆ!

ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಔಟ್‌ಡೋರ್ • ಹೋಮ್ ಡೆಕೋರ್ • ಬ್ರಾಸ್ & ಆರ್ಟಿಫ್ಯಾಕ್ಟ್ಸ್ • ರಿಕ್ಲೈನರ್ ಸೋಫಾ ಸೆಟ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸಸ್ • ಕರ್ಟನ್ಸ್ • ವಾಟರ್ ಫೌಂಟೇನ್ಸ್

Covid-19 protocol followed inside the venue

+91 93425 77908

ಪ್ರವೇಶ ಉಚಿತ

0% EMI

BAJAJ FINSERV

HDFC BANK We understand your world

ALL MAJOR CREDIT / DEBIT CARD ACCEPTED

AN EVENT BY

iads & events COMPLETE BUSINESS SOLUTIONS

ಕಾವೇರಿ ನಿಗಮ: ಶಂಕರೇಗೌಡಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೊಣೆಯನ್ನು ಹೆಚ್ಚುವರಿ ಪ್ರಭಾರ ಆಗಿ ನಿಗಮದ ಮೈಸೂರು ವಿಭಾಗದ ಮುಖ್ಯ ಎಂಜಿನಿಯರ್ (ನೀರಾವರಿ ವಲಯ - ದಕ್ಷಿಣ) ಶಂಕರೇಗೌಡ ಅವರಿಗೆ ವಹಿಸಿ ಸರ್ಕಾರ ಆದೇಶ ಹೊರಡಿಸಿದೆ.

ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಕೆ. ಜೈಪ್ರಕಾಶ್ ಅವರು ಮೇ 31ರಂದು ನಿವೃತ್ತರಾಗಿದ್ದರು. ಅವರು ನಿವೃತ್ತಿಯಾದ ತಕ್ಷಣವೇ ಹುದ್ದೆಯ ಹೊಣೆಯನ್ನು ಮತ್ತೊಬ್ಬ ಅಧಿಕಾರಿಗೆ ವಹಿಸದಿರುವ ಬಗ್ಗೆ ನಿಗಮದಲ್ಲಿ ಅಪಸ್ವರ ಕೇಳಿಬಂದಿತ್ತು.

ವಜ್ರಾಭರಣ ವ್ಯಾಪಾರಿಯ ಅಪಹರಣ: ₹ 15 ಲಕ್ಷ ಜಪ್ತಿ

ಸುಲಿಗೆ: ಸಿನಿಮಾ ಖಳನಟನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಜ್ರಾಭರಣ ವ್ಯಾಪಾರಿಯನ್ನು ಅಪಹರಿಸಿ ₹ 24.50 ಲಕ್ಷ ಸುಲಿಗೆ ಮಾಡಿದ್ದ ಆರೋಪದಡಿ ಸಿನಿಮಾ ಖಳನಟನೂ ಆದ ರೌಡಿ ನಾರಾಯಣ (55) ಸೇರಿ ಮೂವರನ್ನು ಹೈಗ್ರೌಂಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಈ ಸಂಬಂಧ ಮಂಡ್ಯದ ನಿವಾಸಿಯಾಗಿರುವ ವ್ಯಾಪಾರಿ, ದೂರು ನೀಡಿದ್ದರು. ರೌಡಿ ನಾರಾಯಣ ಹಾಗೂ ಆತನ ಸಹಚರರಾದ ಪಿ.ಪಿ. ಉಮೇಶ್ (37), ಕೆ. ನೂತನ್ (37) ಎಂಬುವವರನ್ನು ಬಂಧಿಸಲಾಗಿದೆ. ₹ 15 ಲಕ್ಷ ನಗದು, ಕಾರು ಜಪ್ತಿ ಮಾಡಲಾಗಿದೆ. ಬಾಕಿ ಹಣವನ್ನು ಆರೋಪಿಗಳು ಹಂಚಿಕೊಂಡು, ಖರ್ಚು ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ದೂರುದಾರ ವ್ಯಾಪಾರಿ, ಕೆಲಸ ನಿಮಿತ್ತ ಕಾರಿನಲ್ಲಿ ಬೆಂಗಳೂರಿಗೆ ಏಪ್ರಿಲ್ 20ರಂದು ಬಂದಿದ್ದರು. ಕೆಲಸ ಮುಗಿಸಿಕೊಂಡು ರಾತ್ರಿ ಕಾರಿನಲ್ಲಿ ಮಂಡ್ಯಕ್ಕೆ ಹೊರಟಿದ್ದರು. ಶಿವಾನಂದ ವೃತ್ತದ ಬಳಿ ಕಾರು ಅಡ್ಡಗಟ್ಟಿದ ಆರೋಪಿಗಳು, ಅಪಘಾತದ ನೆಪದಲ್ಲಿ ಜಗಳ ಮಾಡಿದ್ದರು. ನಂತರ, ತಮ್ಮ ಕಾರಿನಲ್ಲಿ ವ್ಯಾಪಾರಿಯನ್ನು ಅಪಹರಿಸಿದ್ದರು.'

'ಕನಕಪುರ, ಹಾರೋಹಳ್ಳಿ ಹಾಗೂ ಸುತ್ತಮುತ್ತ ವ್ಯಾಪಾರಿಯನ್ನು ಸುತ್ತಾಡಿಸಿದ್ದ ಆರೋಪಿಗಳು, ಚಾಕು ಸ್ಕ್ರೂನಿಂದ ಹಲ್ಲೆ ಮಾಡಿದ್ದರು. ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ವ್ಯಾಪಾರಿ ಬಳಿಯ ₹ 24.50 ಲಕ್ಷ ನಗದು ಹಾಗೂ ವಿವಿಧ ಬ್ಯಾಂಕ್‌ಗಳ 5 ಚೆಕ್ ಪುಸ್ತಕಗಳನ್ನು ಕಿತ್ತುಕೊಂಡಿದ್ದರು. ಮಾರ್ಗಮಧ್ಯೆಯೇ ವ್ಯಾಪಾರಿಯನ್ನು ಕಾರಿನಿಂದ ತಳ್ಳಿ ಆರೋಪಿಗಳು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಹಲ್ಲೆಯಿಂದ ಗಾಯಗೊಂಡಿದ್ದ ವ್ಯಾಪಾರಿ, ಚಿಕಿತ್ಸೆ ಪಡೆದುಕೊಂಡ ನಂತರ ಠಾಣೆಗೆ ಬಂದು ದೂರು ನೀಡಿದ್ದರು' ಎಂದೂ ಹೇಳಿದರು.

'ಆರೋಪಿ ಉಮೇಶ್, ಉದ್ಯಮಿಯೊಬ್ಬರ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಉದ್ಯಮಿ ಸ್ನೇಹಿತರಾಗಿದ್ದ ವಜ್ರಾಭರಣ ವ್ಯಾಪಾರಿ ಬಗ್ಗೆ ತಿಳಿದುಕೊಂಡಿದ್ದ. ರೌಡಿ ನಾರಾಯಣ ಹಾಗೂ ಇತರರ ಜೊತೆ ಸೇರಿ ಅಪಹರಣಕ್ಕೆ ಸಂಚು ರೂಪಿಸಿದ್ದ' ಎಂದೂ ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ನಗದು ಹಾಗೂ ಕಾರು

ಸಿನಿಮಾದಲ್ಲೂ ಅಭಿನಯ



'ಲಗ್ಗೆರೆಯ ಕಂಪೆನಿಗೌಡ ಲೇಔಟ್ ನಿವಾಸಿಯಾದ ಆರೋಪಿ ನಾರಾಯಣ, 'ವೀರಪರಂಪರೆ', 'ದುಷ್ಟ' ಸೇರಿ ಹಲವು ಸಿನಿಮಾಗಳಲ್ಲಿ ಖಳನಟನಾಗಿ ಅಭಿನಯಿಸಿದ್ದ. ಕೊಲೆ ಸೇರಿದಂತೆ 8 ಪ್ರಕರಣಗಳಲ್ಲಿ ಭಾಗಿಯಾಗಿದ್ದ ಈತನ ಹೆಸರು ಮಹಾಲಕ್ಷ್ಮಿ ಲೇಔಟ್ ಠಾಣೆಯ ರೌಡಿ ಪಟ್ಟಿಯಲ್ಲಿತ್ತು' ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಪುರಸಭೆಯಲ್ಲಿ ಕಳ್ಳತನಕ್ಕೆ ಯತ್ನ

ಬೆಂಗಳೂರು: ಹೆಸರಘಟ್ಟ ಬಳಿಯ ಚಿಕ್ಕಬಾಣಾವರ ಪುರಸಭೆ ಕಚೇರಿಯಲ್ಲಿ ಕಳ್ಳತನದ ಯತ್ನ ನಡೆದಿದ್ದು, ಈ ಬಗ್ಗೆ ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬುಧವಾರ ರಾತ್ರಿ ಕಳ್ಳತನಕ್ಕೆ ಯತ್ನ ನಡೆದಿದೆ. ಪುರಸಭೆ ಅಧಿಕಾರಿಗಳು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪುರಸಭೆ ಕಚೇರಿಯೊಳಗೆ ನುಗ್ಗಿದ ಕಳ್ಳರು, ಹಲವೆಡೆ ಹುಡುಕಾಡಿದ್ದಾರೆ. ಕೆಲ ಹೊತ್ತಿನ ನಂತರ ಅಲ್ಲಿಂದ ಹೊರಟು ಹೋಗಿದ್ದಾರೆ. ತಮ್ಮ ಗುರುತು ಸಿಗಬಾರದೆಂಬ ಕಾರಣಕ್ಕೆ, ಕಚೇರಿಯಲ್ಲಿ ಅಳವಡಿಸಿದ್ದ ಸಿ.ಸಿ. ಟಿ.ವಿ ಕ್ಯಾಮೆರಾದ ಡಿವಿಆರ್ ಕದ್ದೊಯ್ದಿದ್ದಾರೆ' ಎಂದು ತಿಳಿಸಿದರು.

'ಕಚೇರಿಯಲ್ಲಿ ಹಣ ಹಾಗೂ ಯಾವುದೇ ಬೆಲೆಬಾಳುವ ವಸ್ತುಗಳು ಇರಲಿಲ್ಲ. ಸದ್ಯಕ್ಕೆ ಯಾವ ವಸ್ತುಗಳೂ ಕಳ್ಳತನವಾಗಿಲ್ಲವೆಂದು ಸಿಬ್ಬಂದಿ ಹೇಳಿದ್ದಾರೆ. ಆದರೆ, ಕಳ್ಳರು ಕಚೇರಿಗೆ ನುಗ್ಗಿದ್ದು ಏಕೆ? ಎಂಬ ಅನುಮಾನವಿದೆ. ಎಲ್ಲ ಆಯಾಮದಲ್ಲಿ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದೂ ಹೇಳಿದರು.

ಹಳ್ಳಕ್ಕೆ ಬಿದ್ದ ಶಾಲಾ ಬಸ್: ಚಾಲಕನಿಗೆ ಗಾಯ

ಬೆಂಗಳೂರು: ವಿದ್ಯಾರ್ಥಿಗಳನ್ನು ಶಾಲೆಗೆ ಕರೆತರಲು ಹೊರಟಿದ್ದ ಮಿನಿ ಬಸ್ಸೊಂದು ಕ್ವಾರಿ ಹಳ್ಳಕ್ಕೆ ಉರುಳಿಬಿದ್ದಿದ್ದು, ಚಾಲಕ ಸುಬ್ರಮಣಿ (32) ತೀವ್ರವಾಗಿ ಗಾಯಗೊಂಡಿದ್ದಾರೆ.

'ಎಚ್‌ಎಸ್‌ಆರ್ ಲೇಔಟ್ ಬಳಿಯ ಫ್ರೀಡಂ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಸೇರಿದ್ದ ಬಸ್, ಕೊಡ್ಲು ಹಾಗೂ ಪರಪ್ಪನ ಅಗ್ರಹಾರ ನಡುವಿನ ರಸ್ತೆಯಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅದೃಷ್ಟವಶಾತ್ ಬಸ್ಸಿನಲ್ಲಿ ಮಕ್ಕಳು ಇರಲಿಲ್ಲ. ಅಪಘಾತದ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು ಹೇಳಿದರು.

'ಹಳ್ಳ ಹಾಗೂ ರಸ್ತೆ ಮಧ್ಯೆ ಯಾವುದೇ ತಡೆಗೋಡೆಗಳು ಇಲ್ಲ. ಮುಂಜಾಗ್ರತಾ ಕ್ರಮವಾಗಿ ಬ್ಯಾರಿಕೇಡ್ ನಿಲ್ಲಿಸಿ, ತಾತ್ಕಾಲಿಕ ತಂತಿ ಬೇಲಿ ಸುತ್ತಲಾಗಿತ್ತು. ಇದೇ ರಸ್ತೆಯಲ್ಲಿ ಬೆಳಿಗ್ಗೆ 7.30ರ ಸುಮಾರಿಗೆ ಬಸ್ ಹೊರಟಿತ್ತು.'

' ಸವಾರನೊಬ್ಬ ಅಡ್ಡಾದಿಡ್ಡಿಯಾಗಿ ಬೈಕ್ ಚಲಾಯಿಸುತ್ತ ಬಸ್ಸಿನ ಎದುರು ಬಂದಿದ್ದ. ಡಿಕ್ಕಿ ತಪ್ಪಿಸಲು ಹೋದ ಚಾಲಕ ಸುಬ್ರಮಣಿ, ಸ್ಟೇರಿಂಗ್ ತಿರುಗಿಸಿದ್ದರು. ನಿಯಂತ್ರಣ ಕಳೆದುಕೊಂಡ ಬಸ್, 40 ಅಡಿ ಆಳದ ಕ್ವಾರಿ ಹಳ್ಳಕ್ಕೆ ಬಿದ್ದು ಭಾಗಶಃ ನೀರಿನಲ್ಲಿ ಮುಳುಗಿತ್ತು. ಸ್ಥಳೀಯರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಜತೆ ಸೇರಿ ಚಾಲಕನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದರು.

ಬಿಬಿಎಂಪಿ ನಿರ್ಲಕ್ಷ್ಯ: 'ಕ್ವಾರಿ ಹಳ್ಳಗಳಿರುವ ರಸ್ತೆಗಳು ಅಪಾಯಕಾರಿಯಾಗಿವೆ. ಹಲವು ಬಾರಿ ದೂರು ನೀಡಿದರೂ ಹಳ್ಳ ಮುಚ್ಚಲು ಬಿಬಿಎಂಪಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಸ್ಥಳೀಯರು ಆರೋಪಿಸಿದರು.

ಬೇಳೂರು ರಾಘವೇಂದ್ರ ಶೆಟ್ಟಿ ಬಂಧನಕ್ಕೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರ ಆರೋಪವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅವರನ್ನು ಹುದ್ದೆಯಿಂದ ವಜಾಗೊಳಿಸಿ ಬಂಧಿಸಬೇಕು ಎಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

'ನಿಗಮದಿಂದ ಲಕ್ಷಾಂತರ ಮೌಲ್ಯದ ಗಂಧದ ವಸ್ತುಗಳನ್ನು ಬಿಲ್ ಪಾವತಿಸದೇ ಮಂತ್ರಿಗಳಿಗೆ ಉಡುಗೊರೆಯಾಗಿ ನೀಡಿದ್ದಾರೆ. ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ವಿನಯ್ ಗುರೂಜಿಯವರನ್ನು ಕರೆಸಿ ಪೂಜೆ ಮಾಡಿಸಿದ ಖರ್ಚನ್ನು ನಿಗಮದಿಂದಲೇ ಭರಿಸಲಾಗಿದೆ. ಈ ಕುರಿತು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ.ರೂಪಾ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಲಿಖಿತ ದೂರು ನೀಡಿದ್ದರೂ, ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಎಎಪಿ ಪಕ್ಷದ ರಾಜ್ಯ ವಕ್ತಾರ ಕೆ.ಮಥಾಯ್ ಆಕ್ರೋಶ ವ್ಯಕ್ತಪಡಿಸಿದರು.

'ನಿಗಮದ ಕೇಂದ್ರ ಕಚೇರಿಯ ಸಿಸಿಟಿವಿ ದೃಶ್ಯಾವಳಿಗಳನ್ನು ತಿರುಚಿದ್ದಾರೆ. ಅಕ್ರಮ ನಡೆಸಿ ವಜಾಗೊಂಡಿದ್ದ ವ್ಯವಸ್ಥಾಪಕ ನಿರ್ದೇಶಕ ಕಿಶೋರ್ ಕುಮಾರ್ ಎಂಬುವವರನ್ನು ಮರಳಿ ಅದೇ ಹುದ್ದೆಗೆ ನೇಮಿಸಲು ₹ 5 ಕೋಟಿ ವ್ಯವಹಾರ ಮಾತುಕತೆ ನಡೆದಿದೆ. ನಿಗಮದ ದೈನಂದಿನ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಕಚೇರಿ ಸಿಬ್ಬಂದಿ ಹಾಜರಾತಿ ಒದಗಿಸದೇ ಮಾಸಿಕ ₹5 ಲಕ್ಷ ವೇತನ ಮತ್ತು ಇತರೆ ವೆಚ್ಚ ಪಡೆಯುತ್ತಿದ್ದಾರೆ. ಮಹಿಳಾ ಆಪ್ತ ಸಹಾಯಕಿಯೇ ಬೇಕು ಎಂಬ ಬೇಡಿಕೆ, ಮಹಿಳಾ ಸಿಬ್ಬಂದಿ ಜೊತೆ ಅಸಭ್ಯವಾಗಿ ವರ್ತಿಸಿದ ಆರೋಪಗಳಿವೆ' ಎಂದರು.

ರಾಜ್ಯ ಸರ್ಕಾರ ಈ ಕೂಡಲೇ ಅವರನ್ನು ನಿಗಮದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಭ್ರಷ್ಟಾಚಾರ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿ ಸಿಐಡಿ ಮೂಲಕ ತನಿಖೆಗೊಳಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಮುಖ್ಯಕಾರ್ಯದರ್ಶಿಗೆ ದೂರು ನೀಡಿದ ರಾಘವೇಂದ್ರ ಶೆಟ್ಟಿ

ಅಧ್ಯಕ್ಷ– ಎಂಡಿ ಕಿತ್ತಾಟ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ಮತ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ. ರೂಪಾ ಮಧ್ಯದ ಕಿತ್ತಾಟ ಇನ್ನೂ ತಾರಕಕ್ಕೇರಿದೆ.

ರಾಘವೇಂದ್ರ ಶೆಟ್ಟಿ ಅವರು ರೂಪಾ ವಿರುದ್ಧ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರನ್ನು ಗುರುವಾರ ಭೇಟಿ ಮಾಡಿ ದೂರು ನೀಡಿದ್ದಾರೆ. ಈ ಮಧ್ಯೆ ಮೇ 27 ರಂದು ನಡೆದ ನಿಗಮದ ವಾರ್ಷಿಕ ಸಭೆಯಲ್ಲಿ ಇಬ್ಬರ ಮಧ್ಯದ ವಾಕ್ಸಮರದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. 'ತಾವು ಆತ್ಮಹತ್ಯೆ ಮಾಡಿಕೊಂಡರೆ ಅದಕ್ಕೆ ರೂಪಾ ಅವರೇ ಕಾರಣರು' ಎಂದು ಸಭೆಯಲ್ಲಿ ಎಲ್ಲರ ಮುಂದೆ ರಾಘವೇಂದ್ರ ಹೇಳಿರುವುದು ವಿಡಿಯೊದಲ್ಲಿದೆ.

ಆ್ಯಸಿಡ್ ಬೆದರಿಕೆ ಹಾಕಿದ್ದರು: ರೂಪಾ

'ಅಧ್ಯಕ್ಷ ರಾಘವೇಂದ್ರ ಶೆಟ್ಟಿ ನನ್ನ ಮುಖಕ್ಕೆ ಆ್ಯಸಿಡ್ ಎರಚಿಸುವ ಬೆದರಿಕೆ ಹಾಕಿದ್ದು, ನಾನು ಇಂತಹ ಬೆದರಿಕೆಗಳನ್ನು ಲೆಕ್ಕಿಸದೇ ಕೆಲಸ ಮಾಡುತ್ತಾ ಇದ್ದೇನೆ. ಸರ್ಕಾರಕ್ಕೆ ಮುಜುಗರ ಆಗಬಾರದು ಎಂಬ ಕಾರಣಕ್ಕೆ ಆ್ಯಸಿಡ್ ಬೆದರಿಕೆಯನ್ನು ಎಲ್ಲೂ ಹೇಳಿಲ್ಲ' ಎಂದು ಡಿ.ರೂಪಾ ಪ್ರತಿಕ್ರಿಯಿಸಿದ್ದಾರೆ.

'ನಿಗಮದ ಸಭೆಯಲ್ಲಿ ರಾಘವೇಂದ್ರ ಶೆಟ್ಟಿ ಅವರು ಮಾತನಾಡುತ್ತಾ ತಾನು ಖಿನ್ನತೆಗೆ ಒಳಗಾದರೆ ರೂಪಾ ಅವರೇ ಕಾರಣ ಎಂದು ಬೆದರಿಕೆ ಹಾಕಿದ್ದಾರೆ. ಸಭೆಯಲ್ಲಿ ಒಂದು ಗಂಟೆ ಕೂಗಾಡುತ್ತಾ, ಸಭೆ ನಡೆಸಲು ಬಿಡುವುದಿಲ್ಲ ಎಂದು, ಆತ್ಮಹತ್ಯೆ ಬೆದರಿಕೆ ಒಡ್ಡುವುದು ಐಪಿಸಿ ಪ್ರಕಾರ ಶಿಕ್ಷಾರ್ಹ ಅಪರಾಧ. ಇದರ ಬಗ್ಗೆ ಪ್ರಕರಣ ದಾಖಲಿಸಲು ಅನುಮತಿ ಕೊಡಬೇಕು ಎಂದು ಆರು ಪುಟಗಳ ವರದಿಯಲ್ಲಿ ಮುಖ್ಯಕಾರ್ಯದರ್ಶಿಯವರಿಗೆ ಕೋರಿದ್ದೇನೆ' ಎಂದು ಹೇಳಿದ್ದಾರೆ.

ಮುಖ್ಯ ಕಾರ್ಯದರ್ಶಿ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರಾಘವೇಂದ್ರ ಶೆಟ್ಟಿ, 'ನನ್ನ ವಿರುದ್ಧ ಅವ್ಯವಹಾರದ ಆರೋಪ ಮಾಡಿರುವ ರೂಪಾ ಅವರು ಒಂದು ದಾಖಲೆಯನ್ನಾದರೂ ಬಿಡುಗಡೆ ಮಾಡಲಿ. ₹24 ಕೋಟಿ ಹಗರಣ ನನ್ನ ಅವಧಿಯಲ್ಲಿ ನಡೆದಿಲ್ಲ. ನಾನು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲೇ ನಡೆದಿದೆ. ಆದರೆ, ಅವರ ವಿರುದ್ಧ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ ಎಂಬ ಭಯಕ್ಕೆ ಮಾಧ್ಯಮಗಳ ಮುಂದೆ ನನ್ನ ವಿರುದ್ಧ ಇಲ್ಲ ಸಲ್ಲದ ಆಪಾದನೆಗಳನ್ನು ಮಾಡುತ್ತಿದ್ದಾರೆ. ನಿಗಮದ ಮಳಿಗೆಯಿಂದ ನಾನು ಯಾವುದೇ ಶ್ರೀಗಂಧದ ವಸ್ತುಗಳನ್ನು ತೆಗೆದುಕೊಂಡಿಲ್ಲ. ಐದಾರು ವಸ್ತುಗಳನ್ನು ಹಣಕೊಟ್ಟು ಖರೀದಿಸಿದ್ದೇನೆ. ಅದಕ್ಕೆ ಸಂಬಂಧಿಸಿದ ಬಿಲ್ ಕೂಡಾ ಇದೆ' ಎಂದು ಅವರು ಹೇಳಿದರು.

ಆತ್ಮಹತ್ಯೆ ಮಾಡಿಕೊಂಡರೆ ರೂಪಾ ಕಾರಣ: ಮೇ ತಿಂಗಳಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಇಬ್ಬರೂ ಪರಸ್ಪರ ಆರೋಪ ಪ್ರತ್ಯಾರೋಪ ಮಾಡಿಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. 'ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ನಾನು ಆತ್ಮಹತ್ಯೆ ಮಾಡಿಕೊಂಡರೆ ರೂಪಾ ಅವರೇ ಕಾರಣರಾಗುತ್ತಾರೆ' ಎಂದು ರಾಘವೇಂದ್ರ ಹೇಳುವಾಗ ರೂಪಾ ಅವರು ಸಭೆಯಿಂದ ಎದ್ದು ಹೊರ ನಡೆಯುತ್ತಿರುವ ದೃಶ್ಯ ವಿಡಿಯೊದಲ್ಲಿದೆ.

ಏಕದಿನ ಕ್ರಿಕೆಟ್ ಮೇಲೂ ಬೆಟ್ಟಿಂಗ್: ₹ 10.45 ಲಕ್ಷ ಜಪ್ತಿ

ಬೆಂಗಳೂರು: ಏಕದಿನ ಕ್ರಿಕೆಟ್ ಪಂದ್ಯಾವಳಿ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ ₹ 10.45 ಲಕ್ಷ ಜಪ್ತಿ ಮಾಡಿದ್ದಾರೆ.

'ದೇವರಜೀವನಹಳ್ಳಿ (ಡಿ.ಜೆ. ಹಳ್ಳಿ) ಬಳಿಯ ಕಾವಲ್‌ಬೈರಸಂದ್ರದ ಮುನಿನಾಗಪ್ಪ ಬಡಾವಣೆಯಲ್ಲಿ ಜೂನ್ 1ರಂದು ಆರೋಪಿಗಳು ಸುತ್ತಾಡುತ್ತಿದ್ದರು ದಾಳಿ ಮಾಡಿ ಅವರಿಬ್ಬರನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ನೆದರ್‌ಲ್ಯಾಂಡ್ ಹಾಗೂ ವೆಸ್ಟ್ ಇಂಡೀಸ್ ತಂಡಗಳ ನಡುವಿನ ಏಕದಿನ ಪಂದ್ಯಾವಳಿ ಮೇಲೆ ಆರೋಪಿಗಳು ಬೆಟ್ಟಿಂಗ್ ನಡೆಸುತ್ತಿದ್ದರು. ಇದಕ್ಕಾಗಿ ಕೆಲ ಆ್ಯಪ್‌ಗಳನ್ನು ಬಳಸುತ್ತಿದ್ದರು. ಪಂದ್ಯಗಳ ಸೋಲು–ಗೆಲುವು ಆಧಾರದಲ್ಲಿ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಗೆದ್ದವರಿಗೆ ಖುದ್ದು ಹೋಗಿ ಹಣ ನೀಡುತ್ತಿದ್ದರು' ಎಂದರು.

ಸೈರನ್ ಸದ್ದಿಗೆ ಸ್ಥಳದಿಂದ ಓಡಿಹೋದ ಆರೋಪಿಗಳು

ಕಳ್ಳತನಕ್ಕೆ ಯತ್ನ: ಸ್ನೇಹಿತರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾಜಗೋಪಾಲನಗರ ಮುಖ್ಯರಸ್ತೆಯಲ್ಲಿರುವ ಮಣಪ್ಪುರಂ ಫೈನಾನ್ಸ್ ಕಂಪನಿ ಕಚೇರಿಯಲ್ಲಿ ಕಳ್ಳತನಕ್ಕೆ ಯತ್ನಿಸಿದ್ದ ಆರೋಪದಡಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಾಬು ರಾಜಸಿಂಗ್ (25), ಕುಮಾರ್ (30) ಹಾಗೂ ನಾಗರಾಜ್ (28) ಬಂಧಿತರು. ಇವರಿಂದ 10.2 ಕೆ.ಜಿ ಆಮ್ಲಜನಕ ಸಿಲಿಂಡರ್, ಕತ್ತರಿಸಲಾದ 2 ಬೀಗಗಳು, ಕಬ್ಬಿಣದ ರಾಡ್, ನೈಟಿ, ವೇಲ್, ಕೈಗವಸು, ದ್ವಿಚಕ್ರ ವಾಹನ ಹಾಗೂ ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವ್ಯವಸ್ಥಿತ ಸಂಚು ರೂಪಿಸಿದ್ದ ಆರೋಪಿಗಳು, ಮೇ 25ರಂದು ರಾತ್ರಿ ಗ್ಯಾಸ್ ಕಟರ್‌ನಿಂದ ಕಚೇರಿಯ ಶಟರ್ ಬೀಗ ಮುರಿದು ಒಳನುಗ್ಗಿದ್ದರು. ಹಣ ಹಾಗೂ ಚಿನ್ನಾಭರಣ ಇರಿಸಲಾಗಿದ್ದ ಭದ್ರತಾ ಕೊಠಡಿ ಬೀಗ ಮುರಿಯಲು ಯತ್ನಿಸಿದ್ದರು. ಇದೇ ವೇಳೆಯೇ ಸೈರನ್ ಸದ್ದು ಮಾಡಲಾರಂಭಿಸಿತ್ತು. ಆರೋಪಿಗಳು ಸ್ಥಳದಿಂದ ಓಡಿಹೋಗಿದ್ದರು. ಗುರುತು ಸಿಗಬಾರದೆಂದು ಆರೋಪಿಯೊಬ್ಬ ನೈಟಿ ಹಾಕಿಕೊಂಡಿದ್ದ' ಎಂದೂ ತಿಳಿಸಿದರು.

'ಸೈರನ್ ಉಪಕರಣದಿಂದ ಕಚೇರಿ ಅಧಿಕಾರಿಗಳಿಗೆ ತುರ್ತು ಸಂದೇಶ ಬಂದಿತ್ತು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಕಚೇರಿಗೆ ಹೋಗಿ ಮಾಹಿತಿ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದರು' ಎಂದೂ ಹೇಳಿದರು.

ಸಾಲ ತೀರಿಸಲು ಕೃತ್ಯ: 'ಆರೋಪಿ ಬಾಬು ರಾಜಸಿಂಗ್ ನೇಪಾಳದವ. ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದು ಪೀಣ್ಯದಲ್ಲಿರುವ ಕೋಳಿ ಮಾಂಸ ಮಾರಾಟ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದ. ಇನ್ನೊಬ್ಬ ಆರೋಪಿ ನಾಗರಾಜ್, ರಾಮನಗರದಿಂದ ನಗರಕ್ಕೆ ಬಂದು ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮತ್ತೊಬ್ಬ ಆರೋಪಿ ಕುಮಾರ್, ಬಸ್ ಚಾಲಕ' ಎಂದು ಪೊಲೀಸರು ತಿಳಿಸಿದರು.

'ನಾಗರಾಜ್ ಹಾಗೂ ಕುಮಾರ್, ಆಗಾಗ ಕೋಳಿ ಮಾಂಸದ ಅಂಗಡಿಗೆ ಹೋಗುತ್ತಿದ್ದರು. ಅವರಿಬ್ಬರಿಗೆ ಬಾಬು ರಾಜಸಿಂಗ್ ಪರಿಚಯವಾಗಿತ್ತು. ಮೂವರೂ ಸ್ನೇಹಿತರಾಗಿದ್ದರು. ಹಲವೆಡೆ ಸುತ್ತಾಡುತ್ತಿದ್ದ ಅವರು, ಕಷ್ಟಗಳನ್ನು ಹಂಚಿಕೊಳ್ಳುತ್ತಿದ್ದರು. ಹಲವೆಡೆ ಸಾಲ ಮಾಡಿದ್ದ ಆರೋಪಿಗಳು, ಅದನ್ನು ತೀರಿಸಲಾಗದೇ ತೊಂದರೆ ಅನುಭವಿಸುತ್ತಿದ್ದರು. ಹೀಗಾಗಿ, ಕಳ್ಳತನಕ್ಕೆ ಸಂಚು ರೂಪಿಸಿದ್ದರು' ಎಂದೂ ಹೇಳಿದರು.

ಎಟಿಎಂ ಘಟಕದಲ್ಲೂ ಕಳ್ಳತನಕ್ಕೆ ಯತ್ನ: 'ಒಂದೇ ಬಾರಿ ದೊಡ್ಡ ಮೊತ್ತವನ್ನೇ ಕಳ್ಳತನ ಮಾಡಬೇಕೆಂದುಕೊಂಡಿದ್ದ ಆರೋಪಿಗಳು, ಕೆನರಾ ಬ್ಯಾಂಕ್ ಎಟಿಎಂ ಘಟಕದ ಯಂತ್ರವನ್ನೇ ಕದಿಯಲು ಯತ್ನಿಸಿದ್ದರು. ಈ ಬಗ್ಗೆ ಪ್ರಕರಣ ದಾಖಲಾದರೂ ಯಾವುದೇ ಸುಳಿವು ಸಿಕ್ಕಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

'ಎರಡನೇ ಬಾರಿ ಮಣಪ್ಪುರಂ ಫೈನಾನ್ಸ್ ಕಚೇರಿಯಲ್ಲಿ ಕಳ್ಳತನಕ್ಕೆ ಯತ್ನಿಸಿ ಸಿಕ್ಕಿಬಿದ್ದಿದ್ದಾರೆ. ಮತ್ತಷ್ಟು ಕಡೆ ಕಳ್ಳತನ ಎಸಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ' ಎಂದರು.

ಶಾಸಕ ಬೆನಕೆ ಬಂಧನಕ್ಕೆ ವಾರೆಂಟ್

ಬೆಳಗಾವಿ: ಕಳೆದ ವಿಧಾನಸಭೆ ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ, ಶಾಸಕ ಅನಿಲ ಬೆನಕೆ ವಿರುದ್ಧ, ಗುರುವಾರ ಜಾಮೀನು ರಹಿತ ಬಂಧನ ವಾರೆಂಟ್ ಜಾರಿ ಮಾಡಲಾಗಿದೆ.

2018ರ ವಿಧಾನಸಭೆ ಚುನಾವಣೆ ವೇಳೆ ಶಾಸಕರ ವಿರುದ್ಧ ಬೆಳಗಾವಿಯ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯ ಬಂಧನ ವಾರೆಂಟ್ ಹೊರಡಿಸಿದೆ. ಜೂನ್ 27ರಂದು ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಆದೇಶಿಸಿದೆ. ಈ ಹಿಂದೆ ಐದು ಬಾರಿ ವಾರೆಂಟ್ ಜಾರಿ ಮಾಡಿದರೂ ಶಾಸಕ ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಮಾರ್ಕೆಟ್ ಠಾಣೆ ಪೊಲೀಸರಿಗೆ ವಾರೆಂಟ್ ವೈಫಲ್ಯದ ಕಾರಣ ನೀಡಲೂ ತಿಳಿಸಲಾಗಿದೆ.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕರಣ

'ಒಎಂಆರ್' ಪ್ರತಿ ಸಲ್ಲಿಕೆ ಕಾಲಾವಕಾಶ ಕೋರಿದ ಕೆಇಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಗಳ ಸೋರಿಕೆ ಪ್ರಕರಣ ಸಂಬಂಧ ಸಿಸಿಬಿ ಪೊಲೀಸರು ತನಿಖೆ ಮುಂದುವರಿಸಿದ್ದು, ಸಂಶಯಾಸ್ಪದ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಅಧಿಕಾರಿಗಳು ಕಾಲಾವಕಾಶ ಕೋರಿದ್ದಾರೆ.

ಮಲ್ಲೇಶ್ವರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಸಿಸಿಬಿ ಪೊಲೀಸರು, ಆರೋಪಿಗಳಾದ ಅತಿಥಿ ಉಪನ್ಯಾಸಕಿ ಆರ್. ಸೌಮ್ಯಾ ಹಾಗೂ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಅವರ ವಿಚಾರಣೆ ನಡೆಸಿ ಮಾಹಿತಿ ಕಲೆಹಾಕಿದ್ದಾರೆ.

'ಮಾರ್ಚ್ 14ರಂದು ನಡೆದಿದ್ದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಪತ್ರಿಕೆಯ 18 ಪ್ರಶ್ನೆಗಳು, ಪರೀಕ್ಷೆಗೂ ಮುನ್ನ ಸೋರಿಕೆಯಾದ ಬಗ್ಗೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರೇ ದೂರು ನೀಡಿದ್ದರು. ಪ್ರಶ್ನೆಗಳ ಸೋರಿಕೆ ಮಾತ್ರವಲ್ಲದೇ, ಒಎಂಆರ್ ಪ್ರತಿ ತಿದ್ದುಪಡಿ ಬಗ್ಗೆಯೂ ಇದೀಗ ಅನುಮಾನ ಬಂದಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

'ಕೆಲ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ನೀಡುವಂತೆ ಕೆಇಎ ಅಧಿಕಾರಿಗಳಿಗೆ ಪತ್ರ ಬರೆಯಲಾಗಿತ್ತು. ಅದಕ್ಕೆ ಉತ್ತರಿಸಿರುವ ಅಧಿಕಾರಿಗಳು, 'ಒಎಂಆರ್ ಪ್ರತಿಗಳು ಭದ್ರತೆಯಲ್ಲಿದ್ದು, ಅವುಗಳನ್ನು ಹೊರಗೆ ತೆಗೆಯಲು ಯಾರಿಂದಲೂ ಸಾಧ್ಯವಿಲ್ಲ. ಮೌಲ್ಯಮಾಪನ ಪ್ರಕ್ರಿಯೆ ಆರಂಭವಾಗಿದ್ದು, ಇದು ಮುಗಿದ ಬಳಿಕವೇ ಒಎಂಆರ್ ಪ್ರತಿಗಳನ್ನು ನೀಡಲಾಗುವುದು. ಅಲ್ಲಿಯವರೆಗೂ ಕಾಲಾವಕಾಶ ನೀಡಿ ಎಂದಿದ್ದಾರೆ. ಹೀಗಾಗಿ, ಕಾಲಾವಕಾಶ ನೀಡಲಾಗಿದೆ' ಎಂದೂ ತಿಳಿಸಿವೆ.

ವಿದ್ಯಾರ್ಥಿಗಳಿಂದ ಜಾಗೃತಿ

'ನಮ್ಮ ಬೆಂಗಳೂರು ಫೌಂಡೇಶನ್' ಸಹಯೋಗದಲ್ಲಿ ಕಾಲೇಜು ವಿದ್ಯಾರ್ಥಿಗಳು ರಸ್ತೆ ಸುರಕ್ಷತೆ ಹಾಗೂ ರಸ್ತೆ ಸೂಚನಾ ಫಲಕಗಳ ಕುರಿತು ಬ್ರಿಗೇಡ್ ರಸ್ತೆ ಸೇರಿ ನಗರದ ವಿವಿಧೆಡೆ ವಾಹನ ಚಾಲಕರಿಗೆ ಅರಿವು ಮೂಡಿಸಿದರು

–ಪ್ರಜಾವಾಣಿ ಚಿತ್ರ

₹ 4 ಕೋಟಿ ಮೌಲ್ಯದ ರಕ್ತಚಂದನ ದಿಮ್ಮಿ ವಶ

ಮೂಡುಬಿದಿರೆ (ದಕ್ಷಿಣ ಕನ್ನಡ): ಮಂಗಳೂರು ಅರಣ್ಯ ಸಂಚಾರಿ ದಳ ಅಧಿಕಾರಿಗಳು ಬುಧವಾರ ಸಂಜೆ ನಡೆಸಿದ ಕಾರ್ಯಾಚರಣೆಯಲ್ಲಿ ತಮಿಳುನಾಡಿನಿಂದ ಮಂಗಳೂರು ಬಂದರಿಗೆ ಮಿನಿ ಲಾರಿಯಲ್ಲಿ ಸಾಗಣೆ ಮಾಡುತ್ತಿದ್ದ ಸುಮಾರು ₹ 4.15 ಕೋಟಿ ಮೌಲ್ಯದ ರಕ್ತ ಚಂದನ ಮರದ ದಿಮ್ಮಿಗಳ ಸಹಿತ 2 ವಾಹನಗಳನ್ನು ವಶಪಡಿಸಿಕೊಂಡಿದ್ದು,ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ನೆಲ್ಲೂರಿನ ರಾಜೇಶ್ ರೆಡ್ಡಿ, ಕೇರಳ ಆನೆಕ್ಕಲ್‌ನ ಸುಭಾಸ್, ಶಾಮೀರ್ ಮತ್ತು ಮಹಮ್ಮದ್ ಕುಂಞ, ತಮಿಳುನಾಡು ತಿರುವೆಳ್ಳೂರಿನ ಪಾಲರಾಜ್, ದಿನೇಶ್ ಕುಮಾರ್ ಹಾಗೂ ಕೊಯಮತ್ತೂರಿನ ಅನಿಲ್ ಕುಮಾರನ್ನು ಬಂಧಿತರು. ಮಂಗಳೂರು-ಉಡುಪಿ ಸಂಚಾರಿದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ. ಶ್ರೀಧರ್ ನೇತೃತ್ವದ ತಂಡ ಮೂಲ್ಕಿ ಸಮೀಪದ ಕೆಂಚನಕೆರೆ ಎಂಬಲ್ಲಿ ಕಾರ್ಯಾಚರಣೆ ನಡೆಸಿತು.

ಜಿಲ್ಲಾ ಪಂಚಾಯತ್ ಕೋಲಾರ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ-563101. ದೂರವಾಣಿ ಸಂಖ್ಯೆ: 08152-222570, ಇ-ಮೇಲ್ ವಿಳಾಸ: eepredkolar1@gmail.com

ಅಲ್ಪಾವಧಿ ಏಕ-ಲಕೋಟೆ ಟೆಂಡರ್ ಇ-ಪ್ರೊಕ್ಯೂರ್‌ಮೆಂಟ್
ಪ್ರಕಟಣೆ ಸಂಖ್ಯೆ: 02/2022-23 ದಿನಾಂಕ: 30.05.2022

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-1 & 2 ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ಏಕ-ಲಕೋಟೆ ಪದ್ಧತಿಯಲ್ಲಿ (Single Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 08 ಸಂಖ್ಯೆ ರಸ್ತೆ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದು, ಟೆಂಡರಗಿಟ್ಟ ಮೊತ್ತ ಸರಾಸರಿ ರೂ.13.25 ರಿಂದ 37.00 ಲಕ್ಷಗಳು ಆಗಿರುತ್ತದೆ. ಸದರಿ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್: https://eproc.karnataka.gov.in ಮುಖಾಂತರ ಇ-ಟೆಂಡರ್‌ಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಫಾರಂಗಳನ್ನು ಆರೋಹಿಸಲು ಸಲ್ಲಿಸುವ ಕೊನೆಯ ದಿನಾಂಕ: 01.06.2022 ರಿಂದ 15.06.2022 ರ ಸಂಜೆ 4.00 ರವರೆಗೆ 2) ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ: 16.06.2022 ರಂದು ಸಂಜೆ 4.30 ಗಂಟೆಗೆಂದು ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ-ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 91 8046010000 & +91 8022631200, 080-22230960 & 22234115. ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ113/ಎಂ.ಸಿ.ಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ಪ್ರತಿ ಮಸೀದಿಯಲ್ಲೂ ಶಿವಲಿಂಗ ಹುಡುಕುವ ಅಗತ್ಯವಿಲ್ಲ'

ನಾಗಪುರ (ಪಿಟಿಐ): ಜ್ಞಾನವಾಪಿ ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ನಿರ್ಧಾರವನ್ನು ಎಲ್ಲರೂ ಒಪ್ಪಬೇಕು ಎಂದಿರುವ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಪ್ರತಿ ಮಸೀದಿಯಲ್ಲೂ ಶಿವಲಿಂಗ ಹುಡುಕುವ ಮತ್ತು ಹೊಸ ವಿವಾದ ಸೃಷ್ಟಿಸುವ ಅಗತ್ಯವಿಲ್ಲ ಎಂದು ಗುರುವಾರ ಹೇಳಿದರು.


ಮೋಹನ್ ಭಾಗವತ್

ಆರ್‌ಎಸ್‌ಎಸ್‌ನ ತರಬೇತಿ ಶಿಬಿರದ ಸಮಾರೋಪದಲ್ಲಿ ಮಾತಮಾಡಿದ ಅವರು, ಅಯೋಧ್ಯೆ ಆಂದೋಲನದಲ್ಲಿ ಭಾಗವಹಿಸಿತ್ತು. ಆದರೆ ಭವಿಷ್ಯದಲ್ಲಿ ಇಂತಹ ಆಂದೋಲನಗಳನ್ನು ಕೈಗೊಳ್ಳುವುದಿಲ್ಲ ಎಂದು ಆರ್‌ಎಸ್‌ಎಸ್ ಈಗಾಗಲೇ ಸ್ಪಷ್ಟಪಡಿಸಿದೆ. ಈಗ ವಾರಾಣಸಿಯಲ್ಲಿರುವ ಜ್ಞಾನವಾಪಿ ಮಸೀದಿ ಕುರಿತು ಚರ್ಚೆ ನಡೆಯುತ್ತಿದೆ ಎಂದರು.

₹ 2.09 ಲಕ್ಷ ಬಿಲ್ ಪಾವತಿ ವಿಷಯದಲ್ಲಿ ಜಗಳ

ಆಸ್ಪತ್ರೆ ಸಿಬ್ಬಂದಿ ಮೇಲೆ ಹಲ್ಲೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯ 'ರಫೀ ಲೈಫ್ ಕೇರ್' ಆಸ್ಪತ್ರೆಯಲ್ಲಿ ಗಲಾಟೆ ಮಾಡಿ, ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸಲ್ಮಾನ್ ಶರೀಫ್, ಸೈಯದ್ ಹುಸೇನ್, ನವಾಜ್, ಸೈಯದ್ ಹಾಗೂ ಮುಜಾಯಿದ್ದೀನ್ ಬಂಧಿತರು. ಆಸ್ಪತ್ರೆ ವೈದ್ಯ ಡಾ. ಅಬ್ದುಲ್ ಅಜೀಜ್ ನೀಡಿದ್ದ ದೂರಿನನ್ವಯ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಸಲ್ಮಾನ್ ಶರೀಫ್, ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ತಂದೆ ಅಸ್ಗರ್ ಅವರನ್ನು ಚಿಕಿತ್ಸೆಗೆಂದು ಆಸ್ಪತ್ರೆಗೆ ಮೇ 18ರಂದು ದಾಖಲಿಸಿದ್ದರು. 12 ದಿನ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಿ ಗುಣಪಡಿಸಿದ್ದ ವೈದ್ಯರು, ₹ 2.09 ಲಕ್ಷ ಬಿಲ್ ಮಾಡಿದ್ದರು. ₹ 41 ಸಾವಿರ ಮಾತ್ರ ಪಾವತಿಸಿದ್ದ ಸಲ್ಮಾನ್, ಉಳಿದ ಹಣ ಪಾವತಿಸಲು ನಿರಾಕರಿಸಿದ್ದರು. ಪೂರ್ತಿ ಬಿಲ್ ಪಾವತಿಸಿದ ಬಳಿಕವೇ ರೋಗಿಯನ್ನು ಆಸ್ಪತ್ರೆಯಿಂದ ಹೊರಗೆ ಕಳುಹಿಸುವುದಾಗಿ ಸಿಬ್ಬಂದಿ ಹೇಳಿದ್ದರು. ಬಿಲ್ ವಿಚಾರವಾಗಿ ಜಗಳವೂ ನಡೆದಿತ್ತು.'

'ಮೇ 30ರಂದು ಆಸ್ಪತ್ರೆಗೆ ಅಕ್ರಮವಾಗಿ ನುಗ್ಗಿದ್ದ ಸಲ್ಮಾನ್ ಹಾಗೂ ಇತರರು, ಬಿಲ್ ಪಾವತಿಸದೇ ಅಸ್ಗರ್ ಅವರನ್ನು ಕರೆದೊಯ್ದಿದ್ದರು. ತಡೆಯಲು ಬಂದ ಸಿಬ್ಬಂದಿ ಮೇಲೂ ಹಲ್ಲೆ ಮಾಡಿದ್ದರೆಂದು ಗೊತ್ತಾಗಿದೆ' ಎಂದೂ ಪೊಲೀಸರು ತಿಳಿಸಿದರು.

'ವಿದ್ಯಾರ್ಥಿ ಮೇಲೆ ಹಲ್ಲೆ; ಶಿಕ್ಷಕ ಅಮಾನತು'

ಕೊಪ್ಪ: ತಾಲ್ಲೂಕಿನ ಭಂಡಿಗಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ 6ನೇ ತರಗತಿ ವಿದ್ಯಾರ್ಥಿಯೊಬ್ಬನಿಗೆ ಥಳಿಸಿದ ಆರೋಪದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ನಾಗರಾಜ್ ಅವರನ್ನು ಅಮಾನತು ಮಾಡಲಾಗಿದೆ.

ವಿದ್ಯಾರ್ಥಿ ಬೆನ್ನಿನ ಮೇಲೆ ಮೂಡಿದ ಗಾಯದ ಬರೆ.

'ಸರಿಯಾಗಿ ಬರೆಯಬೇಕು ಎಂದು ವಿದ್ಯಾರ್ಥಿ ತಲೆಗೆ ಹೊಡೆದಿದ್ದಾರೆ. ನಂತರ ಬೆನ್ನಿಗೆ, ಕಾಲಿನ ಭಾಗಕ್ಕೆ ಹೊಡೆದಿದ್ದಾರೆ. ವಿದ್ಯಾರ್ಥಿ ಬೆನ್ನಿನ ಭಾಗದಲ್ಲಿ ಬರೆ ಬಂದಿದೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

'ವಿದ್ಯಾರ್ಥಿಗೆ ಹೊಡೆದ ಶಿಕ್ಷಕ ನಾಗರಾಜ್ ಅವರನ್ನು ಅಮಾನತು ಮಾಡಲಾಗಿದೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಂತೋಣಿ ರಾಜ್ ಅವರು ತಿಳಿಸಿದ್ದಾರೆ.

ಇನ್‌ಸ್ಟಾಗ್ರಾಮ್‌ನಲ್ಲಿ 'ಸಾರಿ' ಪೋಸ್ಟ್: ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಮನೋಜ್ (19) ಎಂಬುವರು ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಗುರುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ.

'ಮಂಡ್ಯದ ಮನೋಜ್, ನಗರದ ಕಾಲೇಜೊಂದರಲ್ಲಿ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರು. ಇನ್‌ಸ್ಟಾಗ್ರಾಮ್‌ನಲ್ಲಿ 'ಸಾರಿ' ಪೋಸ್ಟ್ ಪ್ರಕಟಿಸಿದ್ದ ಅವರು, ಜ್ಞಾನಭಾರತಿ ಬಳಿಯ ಅಜ್ಜಿ ಮನೆಗೆ ಬಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೋಷಕರ ಜೊತೆ ನೆಲೆಸಿದ್ದ ಮನೋಜ್, ಸಮೀಪದಲ್ಲೇ ಇದ್ದ ಅಜ್ಜಿ ಮನೆಗೆ ಆಗಾಗ ಹೋಗಿ ಬರುತ್ತಿದ್ದರು. ಕುಟುಂಬ ಸಮೇತ ಚಿಕ್ಕಮಗಳೂರು ಪ್ರವಾಸಕ್ಕೆ ಹೋಗಲು ಯೋಚಿಸಿದ್ದ ಮನೋಜ್, ಬುಧವಾರ ರಾತ್ರಿ ಅಜ್ಜಿ ಮನೆಗೆ ಹೋಗಿ ತಂಗಿದ್ದರು.'

'ಗುರುವಾರ ಬೆಳಿಗ್ಗೆ ಮನೋಜ್ ಮೊಬೈಲ್‌ಗೆ ತಾಯಿ ಕರೆ ಮಾಡಿದ್ದರು. ಯಾವುದೇ ಸ್ಪಂದನ ಸಿಕ್ಕಿರಲಿಲ್ಲ. ಅನುಮಾನಗೊಂಡ ಅವರು ಮನೆ ಬಳಿ ಹೋಗಿ ಕೊಠಡಿಯಲ್ಲಿ ನೋಡಿದಾಗ ಮೃತದೇಹ ಕಂಡಿತ್ತು' ಎಂದೂ ಮೂಲಗಳು ತಿಳಿಸಿವೆ.

'ಮನೋಜ್ ಕೆಲ ದಿನಗಳಿಂದ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ನೋವಿನ ಬರಹಗಳನ್ನು ಪ್ರಕಟಿಸುತ್ತಿದ್ದರು. ಅವರ ಆತ್ಮಹತ್ಯೆಗೆ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಪೋಷಕರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿವೆ.

ಬೆಂಗಳೂರು ನಗರ ಜಿಲ್ಲಾ ಕಸಾಪ ನೇತೃತ್ವದ ಸಮಾಲೋಚನಾ ಸಭೆಯಲ್ಲಿ ನಿರ್ಣಯ

ಪಠ್ಯಪುಸ್ತಕ: ಚಕ್ರತೀರ್ಥ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಸಮಾಲೋಚನಾ ಸಭೆಯಲ್ಲಿ ವರದಾ ಶ್ರೀನಿವಾಸ್ ಮಾತನಾಡಿದರು. ದಿನೇಶ್ ಕುಮಾರ್, ಲಲಿತಾ ಶೇಖರ್, ಪ್ರೊ. ಅಶ್ವತ್ಥ ನಾರಾಯಣ, ಎಂ. ಪ್ರಕಾಶಮೂರ್ತಿ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳ ಪ್ರಮುಖರು ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: 'ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಗೊಂಡ ಶಾಲಾ ಪಠ್ಯಪುಸ್ತಕವನ್ನು ಹಿಂಪಡೆದು, ಅರ್ಹ ಶಿಕ್ಷಣ ತಜ್ಞರಿಂದ ಪಠ್ಯಪುಸ್ತಕ ಪರಿಷ್ಕರಣೆ ಆಗುವವರೆಗೂ ಹಳೆಯ ಪಠ್ಯಪುಸ್ತಕಗಳನ್ನೆ ಮುಂದುವರೆಸಬೇಕು. ರೋಹಿತ್ ಚಕ್ರತೀರ್ಥ ಅವರನ್ನು ಎಲ್ಲ ಜವಾಬ್ದಾರಿಯುತ ಸ್ಥಾನಗಳಿಂದ ವಜಾ ಮಾಡಬೇಕು'.

ಇವು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನೇತೃತ್ವದಲ್ಲಿ ಗುರುವಾರ ನಡೆದ ಸಮಾಲೋಚನಾ ಸಭೆಯಲ್ಲಿ ಕೈಗೊಂಡ ನಿರ್ಣಯಗಳು. ಪ್ರಸಕ್ತ ವಿದ್ಯಮಾನಗಳ ಬಗ್ಗೆ ನಡೆದ ಸಭೆಯಲ್ಲಿ ಕನ್ನಡ ಪರ ಸಂಘಟನೆಗಳ ಪ್ರಮುಖರು, ಹೋರಾಟಗಾರರು ಹಾಗೂ ಚಿಂತಕರು ಅಭಿಮತ ವ್ಯಕ್ತಪಡಿಸಿ, ಪಠ್ಯಪುಸ್ತಕ ಪರಿಷ್ಕರಣೆಗೆ ವಿರೋಧ ವ್ಯಕ್ತಪಡಿಸಿದರು.

'ನಾಡಗೀತೆ, ನಾಡಧ್ವಜ, ಮಹಿಳೆಯರು ಹಾಗೂ ರಾಷ್ಟ್ರಕವಿ ಕುವೆಂಪು ಒಳಗೊಂಡಂತೆ ಪ್ರಮುಖ ಸಾಹಿತಿಗಳ ಬಗೆಗೆ ಸಾಮಾಜಿಕ ಜಾಲತಾಣದಲ್ಲಿ ರೋಹಿತ್ ಚಕ್ರತೀರ್ಥ ಅವರು ಅವಹೇಳನಕಾರಿಯಾಗಿ ಬಿಂಬಿಸಿದ್ದಾರೆ. ವಿಕೃತ ಮನಸ್ಸಿನ ಅವರು ಸಮಾಜದ ಸ್ವಾಸ್ಥ್ಯ ಹಾಳುಗೆಡವುತ್ತಿದ್ದಾರೆ. ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿರುವುದು ಖಂಡನೀಯ. ಪಠ್ಯಪುಸ್ತಕ ಸರಿಪಡಿಸುವ ವಿಚಾರದಲ್ಲಿ ಸರ್ಕಾರ ಉದಾಸೀನ ಮುಂದುವರೆಸಿದಲ್ಲಿ ಗೋಕಾಕ್ ಚಳವಳಿ ಮಾದರಿ ಹೋರಾಟ ನಡೆಸಬೇಕು' ಎಂಬ ತೀರ್ಮಾನ ಕೈಗೊಳ್ಳಲಾಯಿತು.

ಕಸಾಪ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಎಂ. ಪ್ರಕಾಶ್ ಮೂರ್ತಿ, 'ನಾಡ ಧ್ವಜ, ನಾಡಗೀತೆ ಹಾಗೂ ಮಾತೃಭಾಷೆಗೆ ಅವಮಾನ ಖಂಡನೀಯ. ಸಾಹಿತಿಗಳಿಗೆ ಅವಮಾನಿಸುವ ವಾತಾವರಣ ಆಹ್ವಾನಿಸಿರುವುದು ನಮ್ಮ ದುರ್ದೈವ. ಕನ್ನಡದ ಅಸ್ಮಿತೆ ಎತ್ತಿ ಹಿಡಿದವರ ಪಾಠ ಕೈಬಿಡುವುದು ಸರಿಯಲ್ಲ' ಎಂದರು.

ಲೇಖಕಿ ವರದಾ ಶ್ರೀನಿವಾಸ್, 'ಕನ್ನಡ ಧ್ವಜ, ಭಾಷೆ ಹಾಗೂ ಕುವೆಂಪು ಅವರಿಗೆ ಅವಮಾನ ಮಾಡಿದವರನ್ನು ಶಿಕ್ಷಿಸಬೇಕು. ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು. ಶಿಕ್ಷಣ ತಜ್ಞರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು' ಎಂದು ಆಗ್ರಹಿಸಿದರು.

ವಿಧಾನಸಭೆ ಅನುಸಾರ ಹೋರಾಟ: ಮೈಕೊ ಕನ್ನಡ ಬಳಗದ ಮಂಜುನಾಥ್, 'ಪಠ್ಯಪುಸ್ತಕ ಪರಿಷ್ಕರಣೆ ಬಳಿಕ ಬಸವಣ್ಣನವರ ಪಠ್ಯಕ್ಕೆ ವಿರೋಧ ವ್ಯಕ್ತವಾದ ನಂತರ ಸರಿಪಡಿಸಲಾಗಿದೆ. ಆದರೆ, ಕುವೆಂಪು ಅವರನ್ನು ಅವಮಾನಿಸಿರುವ ಪಠ್ಯವನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಈ ಮೂಲಕ ನಮ್ಮ ನಡುವೆ ವೈರತ್ವ ಹುಟ್ಟುಹಾಕಲಾಗುತ್ತಿದೆ. ಕುವೆಂಪು ಹಾಗೂ ನಾಡಗೀತೆಯನ್ನು ಅವಮಾನಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ವಿಧಾನಸಭೆ ಅನುಸಾರ ಹೋರಾಟ ಮಾಡಬೇಕು' ಎಂದು ತಿಳಿಸಿದರು.

ಕನ್ನಡಪರ ಹೋರಾಟಗಾರ ತಲಕಾಡು ಚಿಕ್ಕ ರಂಗೇಗೌಡ, 'ಈ ಹಿಂದಿನ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಅವರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಅವರು ಪರಿಷ್ಕರಿಸಿದ ಪಠ್ಯವನ್ನು ಮರು ಪರಿಷ್ಕರಿಸಲು ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನೇ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕಿತ್ತು. ಆದರೆ, ನಾಲ್ಕು ಮಕ್ಕಳಿಗೆ ಪಾಠ ಮಾಡಿದವರು ಅಧ್ಯಕ್ಷರಾಗಿದ್ದಾರೆ. ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಯೂ ಇಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ,'ಈ ಸರ್ಕಾರಕ್ಕೆ ಸ್ಪರ್ಶಜ್ಞಾನವಿಲ್ಲ. ಪಠ್ಯಪುಸ್ತಕದ ವಿವಾದಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಹೇಳಿಕೆಗೆ ಸೀಮಿತ ಆಗಬಾರದು' ಎಂದು ತಿಳಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ನಲ್ನುಡಿಯ ದಿನೇಶ್ ಕುಮಾರ್, ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆಯ ಸಮೀವುಲ್ಲಾ ಖಾನ್, ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ, ಮಾವಳ್ಳಿ ಕನ್ನಡ ಸಂಘದ ಕೊ.ನ. ನಾಗರಾಜ್, ಶ್ರೀಸಾಮಾನ್ಯರ ಕೂಟದ ಪಾರ್ಶ್ವನಾಥ್, ಡಿ.ವಿ.ಜಿ ಕನ್ನಡ ಬಳಗದ ಜಗದೀಶ್ ಮುಳಬಾಗಿಲು, ಜಯ ಕರ್ನಾಟಕದ ರಾಧಾಕೃಷ್ಣ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಇದ್ದರು.

'ಪ್ರತಿಗಾಮಿ ಪರಿಷ್ಕರಣೆ ಹಿಂಪಡೆಯಿರಿ'

ಬೆಂಗಳೂರು: 'ಪಠ್ಯಪುಸ್ತಕಗಳಲ್ಲಿ ಮಾಡಲಾಗಿರುವ ಇತ್ತೀಚಿನ ಪ್ರತಿಗಾಮಿ ಪರಿಷ್ಕರಣೆ ಹಿಂತೆಗೆದುಕೊಳ್ಳಬೇಕು' ಎಂದು ಶಿಕ್ಷಣ ತಜ್ಞರು ಮತ್ತು 'ರಾಷ್ಟ್ರೀಯ ಶಿಕ್ಷಣ ತುರ್ತುಸ್ಥಿತಿಯ ಒಕ್ಕೂಟ' ಒತ್ತಾಯಿಸಿದೆ.

ಅಭಿವೃದ್ಧಿ ಶಿಕ್ಷಣ ತಜ್ಞ ನಿರಂಜನಾರಾಧ್ಯ ಅವರು, 'ಪಠ್ಯಪುಸ್ತಕ ಪರಿಷ್ಕರಣೆ ಪ್ರಕ್ರಿಯೆ ಅಪ್ರಜಾಸತ್ತಾತ್ಮಕ, ಅಪಾರದರ್ಶಕ ಮತ್ತು ಸ್ವಾಭಾವಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ' ಎಂದು ಜರಿದಿದ್ದರೆ, ಕರ್ನಾಟಕ ಡಿ.ಇಎಲ್.ಎಡ್ ಪಠ್ಯಕ್ರಮ ಪರಿಷ್ಕರಣೆ ಸಮಿತಿ ಸದಸ್ಯೆ ಮೈಥಿಲಿ ರಾಮಚಂದ್ ಅವರು, ರಾಜ್ಯವು ಅನಗತ್ಯ ವಿವಾದಗಳಲ್ಲಿ ಸಿಲುಕಿಕೊಂಡಿರುವುದು ದುರದೃಷ್ಟಕರ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣೆ ಆಯೋಗದ ಮಾಜಿ ಅಧ್ಯಕ್ಷೆ ಶಾಂತಾ ಸಿನ್ಹಾ, ಸಾಂವಿಧಾನಿಕ ತತ್ವಗಳನ್ನು ಬಲಪಡಿಸುವ ಮತ್ತು ಅವುಗಳನ್ನು ಪ್ರತಿಪಾದಿಸುವ ಕೆಲವು ಅಧ್ಯಾಯಗಳನ್ನು ತೆಗೆದುಹಾಕಿರುವುದು ಅವಮಾನಕರ ಸಂಗತಿ ಎಂದು ಟೀಕಿಸಿದ್ದಾರೆ.

ಈ ಹಿಂದಿನ ಪರಿಷ್ಕರಣೆಯ ನಂತರ ಹಲವು ವರ್ಷಗಳಿಂದಲೂ ಬಳಕೆಯಲ್ಲಿರುವ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಬೇಕು ಎಂದು ರಾಷ್ಟ್ರೀಯ ಶಿಕ್ಷಣ ತುರ್ತುಸ್ಥಿತಿಯ ಒಕ್ಕೂಟ ಆಗ್ರಹಿಸಿದೆ.

ರಾಜ್ಯದಲ್ಲಿ ಕೋವಿಡ್‌ನಿಂದ ಉಂಟಾಗಿರುವ ಗಂಭೀರ ಶಿಕ್ಷಣ ಬಿಕ್ಕಟ್ಟನ್ನು ಪರಿಹರಿಸಲು ಶಕ್ತಿ ಸಾಮರ್ಥ್ಯಗಳನ್ನು ಕೇಂದ್ರೀಕರಿಸಿ, ಕ್ರಿಯಾಯೋಜನೆ ಸಿದ್ಧಪಡಿಸಿ, ಹಿಂದುಳಿದ ಸಮಾಜದ ಅಂಚಿನಲ್ಲಿರುವ ಮತ್ತು ಬಡ ಸಮುದಾಯಗಳ ಮಕ್ಕಳಿಗೆ ಕಲಿಕಾ ನಷ್ಟವನ್ನು ನಿವಾರಿಸಲು ಅನುವು ಮಾಡಿಕೊಡುವ ಕಾರ್ಯಕ್ರಮ ಜಾರಿಗೊಳಿಸುವಂತೆ ಒತ್ತಾಯಿಸಿದೆ.

'ಪಠ್ಯ ಪುಸ್ತಕ ಗೊಂದಲ; ಚುನಾವಣೆಗೂ ಸಂಬಂಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಠ್ಯಪುಸ್ತಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಉದ್ಭವಿಸಿರುವ ಗೊಂದಲಕ್ಕೆ ಚುನಾವಣೆ ಹತ್ತಿರ ಬರುತ್ತಿರುವುದೂ ಕಾರಣ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ವ್ಯಾಖ್ಯಾನಿಸಿದ್ದಾರೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ 'ಚುನಾವಣೆ ಹತ್ತಿರ ಬಂದಾಗ ಕೆಲವೊಮ್ಮೆ ಗುಡುಗು, ಮಿಂಚು, ಸಿಡಿಲು ಸಹಜ. ಚುನಾವಣೆ ಬಳಿಕ ಎಲ್ಲವೂ ತಂಪಾಗುತ್ತದೆ' ಎಂದು ಹೇಳಿದರು.

'ಸರ್ಕಾರಗಳು ಕಾಲ–ಕಾಲಕ್ಕೆ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡಿವೆ. ನಮ್ಮ ಸರ್ಕಾರ ಬಂದ ಮೇಲೂ ಆಗಿದೆ. ಪಠ್ಯದಲ್ಲಿ ನಾರಾಯಣ ಗುರು, ಭಗತ್ ಸಿಂಗ್ ವಿಚಾರವನ್ನು ಕೈಬಿಟ್ಟಿಲ್ಲ. ಹಲವು ಸಾಹಿತಿಗಳು ತಮ್ಮ ಪಠ್ಯವನ್ನು ಹಿಂದಕ್ಕೆ ಪಡೆಯುತ್ತೇವೆ ಎಂದಿದ್ದಾರೆ. ಆದರೆ ಅವರಲ್ಲಿ ಹಲವು ಸಾಹಿತಿಗಳ ಸಾಹಿತ್ಯ ಪುಸ್ತಕದಲ್ಲಿ ಇಲ್ಲವೇ ಇಲ್ಲ. ಮುಖ್ಯಮಂತ್ರಿಯವರು ಸಾಹಿತಿಗಳ ಭಾವನೆಯನ್ನು ಅರ್ಥ ಮಾಡಿಕೊಂಡು ಒಂದು ನಿರ್ಧಾರ ತೆಗೆದುಕೊಳ್ಳುತ್ತಾರೆ. ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷರ ನೇಮಕದಲ್ಲಿ ಯಾವುದೇ ಗೊಂದಲವಿಲ್ಲ. ಗೊಂದಲ ಮಾಡಿಕೊಂಡವರನ್ನು ಸಮಾಧಾನ ಮಾಡುತ್ತೇವೆ' ಎಂದು ಹೇಳಿದರು.

ಬಸವೇಶ್ವರರ ಬಗ್ಗೆ ತಪ್ಪು ಮಾಹಿತಿ: ಖಂಡನೆ

ಮೈಸೂರು: 'ಬಸವಣ್ಣನವರ ಖ್ಯಾತಿ ಸಾಗರದಿಂದಾಚೆಗೂ ವ್ಯಾಪಿಸುತ್ತಿರುವುದನ್ನು ಸಹಿಸದೆ ಅವರ ಚರಿತ್ರೆಗೆ ಚ್ಯುತಿ ತರಲಾಗುತ್ತಿದೆ. ಅದರ ಭಾಗವಾಗಿಯೇ ಪರಿಷ್ಕೃತ ಪಠ್ಯದಲ್ಲಿ ಅವರ ಬಗ್ಗೆ ತಪ್ಪು ಮಾಹಿತಿ ಅಳವಡಿಸಲಾಗಿದೆ. ಇದು ಖಂಡನೀಯ' ಎಂದು ಹೊಸಮಠದ ಚಿದಾನಂದ ಸ್ವಾಮೀಜಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಬಸವಣ್ಣನವರ ತತ್ವ-ಆದರ್ಶ, ಚಿಂತನೆಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ. ಈ ಬೆಳವಣಿಗೆ ತಡೆಯುವ ಹುನ್ನಾರ ನಡೆಸಿ ಪಠ್ಯಕ್ರಮದಲ್ಲಿ ತಪ್ಪು ಮಾಹಿತಿ ನೀಡಲಾಗುತ್ತಿದೆ' ಎಂದು ಆರೋಪಿಸಿದರು.

'ಬ್ರಾಹ್ಮಣೀಕರಣವು ಮುನ್ನಲೆಗೆ ಬರುತ್ತಿದೆ. ಇದು ವ್ಯಾಪಕವಾಗಲು ರಾಜಕೀಯ ಪಕ್ಷಗಳ ಕೊಡುಗೆಯೂ ಇದೆ. ಇದನ್ನು ವಿರೋಧಿಸಿದಾಗ ಗಲಾಟೆಗಳೂ ನಡೆದಿವೆ' ಹೇಳಿದರು.

'ಪಠ್ಯದಲ್ಲಿ ಬಸವಣ್ಣನವರ ಮೂಲ ವಿಷಯವನ್ನು ಹಾಗೆಯೇ ಉಳಿಸಬೇಕು. ಈಗಿರುವ ಪಠ್ಯ ಕೈಬಿಡಬೇಕು. ಸರ್ಕಾರ ಈ ಕೆಲಸವನ್ನು ತ್ವರಿತವಾಗಿ ಮಾಡಬೇಕು' ಎಂದು ಆಗ್ರಹಿಸಿದರು.

ನಾಡಗೀತೆಗೆ ಅವಮಾನ: ಕ್ರಮಕ್ಕೆ ಆಗ್ರಹ

ಬೆಂಗಳೂರು: ನಾಡಗೀತೆ ತಿರುಚುವುದು ಸೇರಿದಂತೆ ಕುವೆಂಪು ಅವರ ಸಾಹಿತ್ಯ ಹಾಗೂ ಅವರ ವೈಯಕ್ತಿಕವಾಗಿ ಅವಹೇಳನಕಾರಿಯಾಗಿ ಪ್ರಚಾರ ಮಾಡುತ್ತಿರುವವರ ವಿರುದ್ಧ ಯಾವುದೇ ಕ್ರಮಕೈಗೊಳ್ಳದೆ ಸರ್ಕಾರ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ. ಮುಖ್ಯಮಂತ್ರಿ ಅವರು ಸಮಾಜದ ಹಿತಕ್ಕೆ ಧಕ್ಕೆ ತರುವ ಹಾಗೂ ಕವಿಗಳ ಬಗ್ಗೆ ಅವಹೇಳನ ಮಾಡುವ ವ್ಯಕ್ತಿಗಳನ್ನು ನಿರ್ಲಕ್ಷಿಸದೇ ಕ್ರಮ ಕೈಗೊಳ್ಳಬೇಕು ಎಂದು ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಕೆಶಿ – ಸಿದ್ದರಾಮಯ್ಯ ಚರ್ಚೆ: 'ಕೈ' ಹಿಡಿದು ಹೆಜ್ಜೆ?

ರಾಜ್ಯಸಭೆ ಚುನಾವಣೆ: ಜೆಡಿಎಸ್ ಅಭ್ಯರ್ಥಿ ಬೆಂಬಲಿಸುವ ವಿಚಾರದಲ್ಲಿ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಸ್ಪರ ಗುದ್ದಾಟ ನಡೆಸಿ, ಮೂರನೇಯವರಿಗೆ (ಬಿಜೆಪಿ, ಜೆಡಿಎಸ್) ಲಾಭ ಮಾಡಿಕೊಡುವ ಬದಲು, ಜೊತೆಯಲ್ಲಿ ಹೆಜ್ಜೆ ಹಾಕಿ ಪಕ್ಷವನ್ನು ಸಂಘಟಿಸಲು ಮತ್ತು ಮುಂದಿನ ಚುನಾವಣೆಗೆ ಸಜ್ಜುಗೊಳಿಸುವ ವಿಚಾರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ 'ಸಹಮತ'ಕ್ಕೆ ಬಂದಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿಗೆ ಪಕ್ಷ ಬೆಂಬಲ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಹೈಕಮಾಂಡ್ ನಾಯಕರ ಜೊತೆ ಚರ್ಚಿಸಲು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ದೆಹಲಿಗೆ ದೌಡಾಯಿಸಿದ ಬೆನ್ನಲ್ಲೆ ಈ ಇಬ್ಬರು ನಾಯಕರು ಚರ್ಚೆ ನಡೆಸಿರುವುದು ಕುತೂಹಲ ಮೂಡಿಸಿದೆ.

ನಗರದ ಹೊರವಲಯದ ಹೋಟೆಲ್‌ನಲ್ಲಿ ಗುರುವಾರ ನಡೆದ 'ನವ ಸಂಕಲ್ಪ ಚಿಂತನಾ ಶಿಬಿರ'ದ ಸಂದರ್ಭದಲ್ಲಿ ಜೆಡಿಎಸ್ ಅಭ್ಯರ್ಥಿಗೆ ಬೆಂಬಲ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಪಕ್ಷದ ನಾಯಕರಿಂದ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಈ ವೇಳೆ ಬಹುತೇಕರು ಬೆಂಬಲ ಸೂಚಿಸಲು ಅಪಸ್ವರ ಎತ್ತಿದ್ದಾರೆ. 'ಈ ಹಿಂದೆ ಜೆಡಿಎಸ್‌ಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟಿದ್ದು, ದೇವೇಗೌಡ ಅವರನ್ನು ರಾಜ್ಯಸಭೆ ಸದಸ್ಯರಾಗಿ ಮಾಡಲು ಬೆಂಬಲ ನೀಡಲಾಗಿದೆ. ಮತ್ತೆ ಮತ್ತೆ ನಾವ್ಯಾಕೆ ಶರಣಾಗಬೇಕು. ಅವರು (ಜೆಡಿಎಸ್) ನಮ್ಮ ಅಭ್ಯರ್ಥಿಗೆ (ಮನ್ಸೂರ್ ಖಾನ್) ಬೆಂಬಲ ನೀಡಲಿ' ಎಂದು ಬಹುತೇಕ ನಾಯಕರು ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಈ ಮಧ್ಯೆಯೇ ಹೋಟೆಲ್‌ನಲ್ಲಿ ಮಾತುಕತೆ ನಡೆಸಿರುವ ಶಿವಕುಮಾರ್ ಮತ್ತು ಸಿದ್ದರಾಮಯ್ಯ, ರಾಜ್ಯದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡುವಂತೆ ಮತ್ತು ಹೈಕಮಾಂಡ್ ಸೂಚನೆಯಂತೆ ಒಗ್ಗಟ್ಟಿನಿಂದ ಕೆಲಸ ಮಾಡುವ ಬಗ್ಗೆ ಚರ್ಚೆ ನಡೆಸಿದ್ದಾರೆ. ಮುಖಂಡರಾದ ಚೆಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ನಜೀರ್ ಅಹ್ಮದ್ ಅವರು ಈ ಇಬ್ಬರ ಮಧ್ಯೆ ಮಾತುಕತೆಗೆ ಕಾರಣರಾಗಿದ್ದರು ಎಂದೂ ಗೊತ್ತಾಗಿದೆ.

ಖರ್ಗೆ ದೆಹಲಿಗೆ: ತಮ್ಮ ಅಭ್ಯರ್ಥಿಯನ್ನೇ ಗೆಲ್ಲಿಸಬೇಕೆಂಬ ತವಕದಲ್ಲಿರುವ ಜೆಡಿಎಸ್ ವರಿಷ್ಠ ಎಚ್. ಡಿ. ದೇವೇಗೌಡರು, ಕಾಂಗ್ರೆಸ್ ಬೆಂಬಲ ನೀಡುವಂತೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದ್ದರು. ಈ ವಿಷಯದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಸಹಮತ ತೋರಿಲ್ಲ. ಹೀಗಾಗಿ, ತಮ್ಮ ಪಕ್ಷದ ವರಿಷ್ಠರ ಮನವೊಲಿಸಲು ಖರ್ಗೆಯವರು ದಿಢೀರ್ ದೆಹಲಿಗೆ ತೆರಳಿದ್ದಾರೆ ಎಂದೂ ಹೇಳಲಾಗುತ್ತಿದೆ.

ನಾಡಗೀತೆಗೆ ಅಗೌರವ: ಕ್ರಮಕ್ಕೆ ಒತ್ತಾಯ

ಬೆಂಗಳೂರು: ಕುವೆಂಪು ಅವರ ನಾಡಗೀತೆಯನ್ನು ತಿರುಚಿದವರ ಕಠಿಣ ಕ್ರಮಕೈಗೊಳ್ಳುವ ಮೂಲಕ ಮಹಾಕವಿಯ ಘನತೆ, ಗೌರವ ಎತ್ತಿಹಿಡಿಯಬೇಕು ಎಂದು ಸಹ್ಯಾದ್ರಿ ಸಂಘ ಒತ್ತಾಯಿಸಿದೆ.

ಬರಹಗಾರರು ನಾಡಿನ ಸಾಕ್ಷಿಪ್ರಜ್ಞೆಯಂತೆ ಇರಬೇಕು. ಅಂತಹ ವಾತಾವರಣವನ್ನು ಸರ್ಕಾರ ಸೃಷಿಸಬೇಕು ಎಂದು ಸಂಘದ ಅಧ್ಯಕ್ಷ ಡಿ.ಸಿ. ಶ್ರೀಧರ್ ಆಗ್ರಹಿಸಿದ್ದಾರೆ.

'ಬಿಜೆಪಿ ಜಾಹೀರಾತು ರಾಜ್ಯಕ್ಕೆ ಅವಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡುಗೆ ನೀಡಿದೆ ಎಂದು ಬಿಜೆಪಿಯವರು ನೀಡುತ್ತಿರುವ ಜಾಹೀರಾತು ಜನರಿಗೆ ಮಾಡುತ್ತಿರುವ ಅವಮಾನ. ಬಿಜೆಪಿಯವರು ಜನರನ್ನೇನು ದಡ್ಡರು ಎಂದುಕೊಂಡಿದ್ದಾರಾ. ಈ ಬಿಜೆಪಿಯವರ ತಲೆ ಸರಿ ಇದೆಯಾ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'2014ರಿಂದ ಈವರೆಗೆ ಎಂಟು ವರ್ಷಗಳಲ್ಲಿ ನರೇಂದ್ರ ಮೋದಿ ರಾಜ್ಯಕ್ಕೆ ₹ 1.29 ಲಕ್ಷ ಕೋಟಿ ಕೊಡುಗೆ ನೀಡಿದ್ದಾರೆ ಎಂದು ನಿತ್ಯ ಜಾಹೀರಾತು ನೀಡಲಾಗುತ್ತಿದೆ. ಕೊಡುಗೆ ಎಂಬ ಪದ ಬಳಸಲು ಮೋದಿ ಅಥವಾ ಬಿಜೆಪಿಯವರು ಅವರ ಮನೆಯಿಂದ ತೆಗೆದು ಖುಷಿಗೆ ಗಿಫ್ಟ್ ಕೊಡುವಂತೆ ಏನಾದರೂ ರಾಜ್ಯಕ್ಕೆ ಕೊಟ್ಟಿದ್ದಾರಾ' ಎಂದೂ ಪ್ರಶ್ನಿಸಿದ್ದಾರೆ.

'ಎಂಟು ವರ್ಷಗಳಲ್ಲಿ ಮೋದಿಯವರ ರಾಜ್ಯ ವಿರೋಧಿ ಧೋರಣೆಯಿಂದ ನಾವು ಬಹಳಷ್ಟನ್ನು ಕಳೆದುಕೊಂಡಿದ್ದೇವೆ. ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಈ ಎಂಟು ವರ್ಷಗಳಲ್ಲಿ ನಮ್ಮ ರಾಜ್ಯದಿಂದ ಕನಿಷ್ಠವೆಂದರೂ ₹ 19 ಲಕ್ಷ ಕೋಟಿ ಸಂಗ್ರಹಿಸಿದೆ. ಇಷ್ಟು ದೊಡ್ಡ ಮೊತ್ತವನ್ನು ಸಂಗ್ರಹಿಸಿ ಟಿಪ್ಸ್ ಕೊಟ್ಟಂತೆ ಕೆಲವು ಯೋಜನೆಗಳಿಗೆ ಕೊಟ್ಟಿರುವ ₹ 1.29 ಲಕ್ಷ ಕೋಟಿ ಅನುದಾನವನ್ನು ಕೊಡುಗೆ ಎಂದು ಹೇಳಿ ರಾಜ್ಯದ ಸ್ವಾಭಿಮಾನವನ್ನು ದೆಹಲಿಯ ಕಾಲ ಕೆಳಗೆ ಹಾಕಿರುವ ರಾಜ್ಯ ಬಿಜೆಪಿಗರಿಗೆ ಸ್ವಾಭಿಮಾನ ಎಂಬುವುದು ಇದೆಯೇ' ಎಂದಿದ್ದಾರೆ.

'ಕೊಡುಗೆ ಎಂದು ಹೇಳಿರುವ ಅನುದಾನದಲ್ಲಿ ನರೇಗಾ ಯೋಜನೆಯಲ್ಲಿ ಜನರು ಕೂಲಿ ಹಣ ₹ 27,418 ಕೋಟಿಗಳಷ್ಟಿದೆ. ಅಲ್ಲದೆ, ವಿಮೆ ಹಣ ಮುಂತಾದವುಗಳೆಲ್ಲ ಸೇರಿವೆ. ನರೇಗಾ ಮುಂತಾದ ಯೋಜನೆಗಳಲ್ಲಿ ಜನರ ಬೆವರಿಗೆ ಕೊಡುವ ಪ್ರತಿಫಲವನ್ನು ಬಿಜೆಪಿಯವರು ಕೊಡುಗೆ ಎನ್ನುತ್ತಾರಲ್ಲ, ಇವರು ಮನುಷ್ಯರಾ ಎಂಬುದು ನನ್ನ ಅನುಮಾನ' ಎಂದರು.

ಎಸ್‌.ಸಿ, ಎಸ್‌.ಟಿ ಆಯೋಗಕ್ಕೆ ನುರಿತ ವಕೀಲರನ್ನು ನೇಮಿಸಲು ಒಕ್ಕೂಟದ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್.ಸಿ, ಎಸ್.ಟಿ ಆಯೋಗದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು, ತಕ್ಷಣ ಆಯೋಗದ ಅಧ್ಯಕ್ಷರನ್ನು ವಜಾಗೊಳಿಸಿ ತನಿಖೆಗೊಳಪಡಿಸಬೇಕು ಎಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಪಂಗಡಗಳ ವಕೀಲರ ಒಕ್ಕೂಟ ಆಗ್ರಹಿಸಿದೆ.

'ಸಂವಿಧಾನದ 338 ಅನುಚ್ಛೇದದ ಪ್ರಕಾರ ಎಸ್.ಸಿ, ಎಸ್.ಟಿ ಸಮುದಾಯಗಳ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಸಾಮಾಜಿಕ ಬಹಿಷ್ಕಾರ, ಜಾತಿ ನಿಂದನೆ, ಆಸ್ತಿ ನಾಶದಂತಹ ಅನ್ಯಾಯವನ್ನು ತಡೆದು ರಕ್ಷಣೆ ನೀಡಲು ಎಸ್.ಸಿ ಎಸ್.ಟಿ ಆಯೋಗ ಸ್ಥಾಪನೆ ಮಾಡಲಾಗಿದೆ. ಅದು ಸಿವಿಲ್ ನ್ಯಾಯಾಲಯದ ಸ್ವರೂಪ ಹೊಂದಿರುತ್ತದೆ. ಆದರೆ ಈ ಆಯೋಗದ ಅಧ್ಯಕ್ಷರನ್ನಾಗಿ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡಿರುವುದರಿಂದ ಆಯೋಗದ ಪರಮಾಧಿಕಾರ ಬಳಸಿಕೊಂಡು ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ಸಂಘದ ಅಧ್ಯಕ್ಷ ಎಸ್.ಬಿ.ಸುರೇಶ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಎಸ್.ಸಿ, ಎಸ್.ಟಿ ಆಯೋಗವೂ ಸಿವಿಲ್ ನ್ಯಾಯಾಲಯದ ಸ್ವರೂಪ ಹೊಂದಿದೆ. ಅಧ್ಯಕ್ಷರು ಹಾಗೂ ಸದಸ್ಯರಿಗೆ ಕೋರ್ಟ್ ನಡೆಸುವ ಸಾಮರ್ಥ್ಯವಿಲ್ಲ. ಅಧಿಕಾರಿಗಳನ್ನು ವಿಚಾರಿಸದೇ ಪ್ರಕರಣಗಳನ್ನು ಮುಚ್ಚಿಹಾಕಲಾಗಿದೆ. ಆಯೋಗದಲ್ಲಿ 10 ಸಾವಿರಕ್ಕೂ ಹೆಚ್ಚು ಪ್ರಕರಣಗಳಿದ್ದು, ವಿಚಾರಣೆ ಮಾಡದೇ ವಿಲೇವಾರಿ ಮಾಡಲಾಗಿದೆ' ಎಂದು ಸರೇಶ ಅವರು ತಿಳಿಸಿದರು.

'338ನೇ ಅನುಚ್ಛೇದದ ಪ್ರಕಾರ ಆಯೋಗದಲ್ಲಿ ರಾಜಿ ಸಂಧಾನಗಳನ್ನು ಮಾಡುವಂತಿಲ್ಲ. ಹಣಗಳಿಸುವ ಉದ್ದೇಶದಿಂದ ಬಹುತೇಕ ಎಲ್ಲಾ ಪ್ರಕರಣಗಳನ್ನು ರಾಜಿ ಸಂಧಾನ ಮಾಡಿ ಮುಕ್ತಾಯಗೊಳಿಸಲಾಗಿದೆ. ಸರ್ಕಾರ ತನಿಖೆ ನಡೆಸಬೇಕು. ಎಸ್.ಸಿ ಎಸ್.ಟಿ ಆಯೋಗಕ್ಕೆ ನುರಿತ ವಕೀಲರನ್ನು ನೇಮಕ ಮಾಡಬೇಕು' ಎಂದು ಆಗ್ರಹಿಸಿದರು.

'ಆಯೋಗದಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ದುರಾಡಳಿತ ಮತ್ತು ಅನ್ಯಾಯದ ತೀರ್ಪುಗಳು ಅನುಮಾನಕ್ಕೆ ಈಡಾಗಿದ್ದು, ಇದೇ 3ರಂದು ಎಸ್.ಸಿ ಎಸ್.ಟಿ ಆಯೋಗದ ಮುಂದೆ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ದಲಿತ ಮುಖಂಡರು, ಪ್ರಗತಿಪರ ಚಿಂತಕರು ಭಾಗವಹಿಸುತ್ತಾರೆ' ಎಂದು ಮಾಹಿತಿ ನೀಡಿದರು.

ಪತ್ರಕರ್ತಗೆ ಆರು ತಿಂಗಳ ಶಿಕ್ಷೆ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಬಿ.ಎ. ಹರೀಶ್ ಗೌಡ ದಾಖಲಿಸಿದ್ದ ಮಾನಹಾನಿ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿರುವ, 'ಪಾರಿವಾಳ' ವಾರಪತ್ರಿಕೆಯ ಸಂಪಾದಕ ಆರ್. ಕೆ.ರವಿಕುಮಾರ್ ಅವರಿಗೆ ಹೈಕೋರ್ಟ್, ಆರು ತಿಂಗಳ ಜೈಲು ಶಿಕ್ಷೆಯನ್ನು ಕಾಯಂಗೊಳಿಸಿದೆ.

ರವಿಕುಮಾರ್ ಅವರಿಗೆ 5ನೇ ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ವಿಧಿಸಿದ್ದ ಆರು ತಿಂಗಳ ಜೈಲು ಶಿಕ್ಷೆಯನ್ನು ಒಂಬತ್ತು ತಿಂಗಳಿಗೆ ಏರಿಸಿದ್ದ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶವನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ರದ್ದುಗೊಳಿಸಿ, ಮ್ಯಾಜಿಸ್ಟ್ರೇಟ್ ಕೋರ್ಟ್ ವಿಧಿಸಿದ್ದ ಶಿಕ್ಷೆಯನ್ನು ಕಾಯಂಗೊಳಿಸಿದೆ.

ಯುವಕನ ಕಳ್ಳತನಕ್ಕೆ ಸ್ನೇಹಿತೆ ಸಹಕಾರ: ಆರೋಪಿಗಳ ಬಂಧನ

ಬೆಂಗಳೂರು: ಹಣಕಾಸು ಸಂಸ್ಥೆಯೊಂದರ 'ಆ್ಯಪ್' ಮೂಲಕ ಪಡೆದಿದ್ದ ₹ 15 ಸಾವಿರ ಸಾಲ ತೀರಿಸುವುದಕ್ಕಾಗಿ ಚಿನ್ನದ ಸರ ಕದಿಯಲು ಯತ್ನಿಸಿದ್ದ ಆರೋಪದಡಿ ಇಬ್ಬರು ವಿದ್ಯಾರ್ಥಿಗಳನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರದ ಕಾಲೇಜೊಂದರಲ್ಲಿ ಬಿ.ಕಾಂ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ಯುವಕ ಹಾಗೂ ಯುವತಿ, ಮೇ 28ರಂದು ಕೃತ್ಯ ಎಸಗಿದ್ದರು. ಈ ಬಗ್ಗೆ ದಾಖಲಾದ ಪ್ರಕರಣದಡಿ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಇಬ್ಬರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

ಷೇರು ವ್ಯವಹಾರದಲ್ಲಿ ನಷ್ಟ: 'ಕಾಲೇಜಿನಲ್ಲಿ ಸ್ನೇಹಿತರಾಗಿದ್ದ ಯುವಕ ಹಾಗೂ ಯುವತಿ, ಹೆಚ್ಚು ಒಡನಾಟ ಹೊಂದಿದ್ದರು. ಹೆಚ್ಚು ಹಣ ಗಳಿಸುವ ಆಸೆಗೆ ಬಿದ್ದಿದ್ದ ಯುವಕ, ಸ್ನೇಹಿತರೊಬ್ಬರ ಬಳಿ ಸಾಲ ಪಡೆದು ಷೇರು ವ್ಯವಹಾರ ಆ್ಯಪ್‌ವೊಂದರಲ್ಲಿ ಹೂಡಿಕೆ ಮಾಡಿದ್ದ. ಅದರಲ್ಲಿ ನಷ್ಟವಾಗಿ, ಹಣ ಕಳೆದುಕೊಂಡಿದ್ದ' ಎಂದು ತಿಳಿಸಿದರು.

'ಸ್ನೇಹಿತನಿಗೆ ಹಣ ವಾಪಸು ನೀಡಲು, ಹಣಕಾಸು ಸಂಸ್ಥೆಯೊಂದರ 'ಆ್ಯಪ್'ನಲ್ಲಿ ₹ 15 ಸಾವಿರ ಸಾಲ ಮಾಡಿದ್ದ. ನಿಗದಿತ ಸಮಯಕ್ಕೆ ಸಾಲ ತೀರಿಸದಿದ್ದರಿಂದ ಸಂಸ್ಥೆಯವರು ಎಚ್ಚರಿಕೆ ನೀಡಿದ್ದರು. ಹೀಗಾಗಿ, ಹಣ ಹೊಂದಿಸುವುದಕ್ಕಾಗಿ ಕಳ್ಳತನ ಮಾಡಲು ಯುವಕ ಸಂಚು ರೂಪಿಸಿದ್ದ. ಸ್ನೇಹಿತೆಯೂ ಸಹಕಾರ ನೀಡಿದ್ದಳು. ಯುವಕ–ಯುವತಿ ದ್ವಿಚಕ್ರ ವಾಹನದಲ್ಲಿ ಮೇ 28ರಂದು ನಂದಿನಿ ಲೇಔಟ್ ಉದ್ಯಾನ ಬಳಿ, ವಾಯು ವಿಹಾರ ಮಾಡುತ್ತಿದ್ದ ಸ್ಥಳೀಯ ನಿವಾಸಿ ಗಾಯತ್ರಿ ಎಂಬುವರ ಚಿನ್ನದ ಸರ ಕಿತ್ತುಕೊಳ್ಳಲು ಯತ್ನಿಸಿದಾಗ, ಗಾಯತ್ರಿ, ದ್ವಿಚಕ್ರ ವಾಹನದ ಹಿಂಬದಿ ಕುಳಿತಿದ್ದ ಯುವಕನನ್ನು ಎಳೆದು ಬೀಳಿಸಿದ್ದರು. ಯುವತಿ ಪರಾರಿಯಾಗಿದ್ದಳು. ಸ್ಥಳೀಯರೇ ಯುವಕನನ್ನು ಠಾಣೆಗೆ ಒಪ್ಪಿಸಿದ್ದರು. ನಂತರ ಪ್ರಕರಣ ದಾಖಲಿಸಿ, ಯುವತಿಯನ್ನೂ ಬಂಧಿಸಲಾಯಿತು' ಎಂದೂ ತಿಳಿಸಿದರು.

ಸರ್ಕಾರದ ವಿರುದ್ಧ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ವಾಗ್ದಾಳಿ

'ದಾಳಿಗೆ ಎದೆಗುಂದುವುದಿಲ್ಲ; ಹೋರಾಟ ತೀವ್ರ'

ಪ್ರಜಾವಾಣಿ ವಾರ್ತೆ

ಮೈಸೂರು: 'ರೈತ ಚಳವಳಿಯನ್ನು ಹತ್ತಿಕ್ಕುವುದಕ್ಕಾಗಿ ಬಿಜೆಪಿ ಸರ್ಕಾರ ಹಾಗೂ ಸಂಘ ಪರಿವಾರವು ನಿರಂತರವಾಗಿ ದಾಳಿ ಮಾಡುತ್ತಿದ್ದು, ರಾಕೇಶ್ ಟಿಕಾಯತ್ ಅವರಿಗೆ ಮಸಿ ಬಳಿದಿರುವ ಪ್ರಕರಣವು ಇದೇ ಕುತಂತ್ರದ ಭಾಗ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ವಾಗ್ದಾಳಿ ನಡೆಸಿದರು.

'ರೈತ ಆಂದೋಲನಗಳಿಗೆ ಸಿಕ್ಕ ಜಯದಿಂದ ಹತಾಶರಾಗಿರುವ ಬಿಜೆಪಿಯು ರೈತ ಮುಖಂಡರನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ. ನೈತಿಕ ಬಲ, ತಾತ್ವಿಕ ಸ್ಪಷ್ಟತೆಯು ಸಂಘಟನೆಗಿದ್ದು, ಹೋರಾಟವನ್ನು ತೀವ್ರಗೊಳಿಸಲಾಗುವುದು' ಎಂದು ಗುರುವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಭಾರತೀಯ ಕಿಸಾನ್ ಯೂನಿಯನ್ ವಿರುದ್ಧ ಉತ್ತರ ಪ್ರದೇಶದ ಸರ್ಕಾರ ಸುಳ್ಳಿನ ಆರೋಪ ಮಾಡುತ್ತಾ ಬಂದಿದೆ. ಇಲ್ಲಿನ ಬಿಜೆಪಿ ಸರ್ಕಾರವು ಉತ್ತರ ಪ್ರದೇಶವನ್ನೇ ಅನುಸರಿಸುತ್ತಿದೆ. ಭದ್ರತೆ ನೀಡದೆ, ದಾಳಿ ನಡೆಸಲು ಅನುವು ಮಾಡಿಕೊಡುವ ಮೂಲಕ ಕರ್ನಾಟಕದ ಸ್ಥಾನಮಾನ, ಮರ್ಯಾದೆಯನ್ನು ಹಾಳುಗೆಡವಿದೆ' ಎಂದು ದೂರಿದರು.

> ಸಾಹಿತಿಗಳು ಕಾಂಗ್ರೆಸ್ ಅನ್ನೂ ಕಟುವಾಗಿ ಟೀಕಿಸಿದವರು. ಬದ್ಧತೆಯುಳ್ಳ ಅವರ ಬಗ್ಗೆ ಸಂಸದ ಪ್ರತಾಪಸಿಂಹ ಹಗುರವಾಗಿ ಮಾತನಾಡಬಾರದು
>
> **ಬಡಗಲಪುರ ನಾಗೇಂದ್ರ,** ಅಧ್ಯಕ್ಷ, ರೈತ ಸಂಘ

'ಟಿಕಾಯತ್‌ರ ಮೇಲಿನ ಹಲ್ಲೆ ಪ್ರಕರಣ ಪೂರ್ವ ಯೋಜಿತ ಸಂಚಾಗಿದ್ದು, ಶೀಘ್ರ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ನಿರ್ಲಕ್ಷ್ಯವಹಿಸಿದರೆ ಹೋರಾಟ ನಡೆಸಲಿದ್ದೇವೆ' ಎಂದು ನಾಗೇಂದ್ರ ಅವರು ಸರ್ಕಾರಕ್ಕೆ ಎಚ್ಚರಿಸಿದರು.

'ಪಠ್ಯ ಪರಿಷ್ಕರಣ ಸಮಿತಿ ವಿಸರ್ಜಿಸಿ'

'ಶಾಲಾ ಮಕ್ಕಳ ಬಗ್ಗೆ ಕಾಳಜಿಯಿಲ್ಲದೆ ಗೊಂದಲದ ವಾತಾವರಣ ಸೃಷ್ಟಿಸಿರುವ ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣ ಸಮಿತಿಯನ್ನು ವಿಸರ್ಜಿಸಬೇಕು. ಸಿದ್ಧಾಂತ ಹೇರಿಕೆಯನ್ನು ಮಕ್ಕಳ ಮನಸ್ಸುಗಳ ಮೇಲೆ ಮಾಡುವುದು ಸಲ್ಲ' ಎಂದು ಬಡಗಲಪುರ ನಾಗೇಂದ್ರ ಹೇಳಿದರು.

'ಪರಿಷ್ಕರಣೆ ಕುರಿತು ವ್ಯಾಪಕ ವಿರೋಧ ವ್ಯಕ್ತವಾಗಿದ್ದರೂ ಸರ್ಕಾರವು ಕ್ರಮ ಕೈಗೊಳ್ಳುತ್ತಿಲ್ಲ. ಉದ್ದೇಶಿತ ಯೋಜನೆಯನ್ನು ಕಾರ್ಯಗೊಳಿಸುವ ಹಠಕ್ಕೆ ಬಿದ್ದಿದೆ' ಎಂದು ಕಿಡಿಕಾರಿದರು.

ಸಮಿತಿ ರಚನೆ: 'ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧದ ಆರೋಪ ವಿಚಾರಣೆಗೆ ತ್ರಿಸದಸ್ಯ ಸಮಿತಿಯನ್ನು ಸಂಘವು ರಚಿಸಿದೆ. ಹಸಿರು ಟವೆಲ್ ಹಾಕಿಕೊಂಡು ರೈತ ಚಳವಳಿಯ ದಿಕ್ಕನ್ನೇ ತಪ್ಪಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈ ಕುರಿತು ಸಂಯುಕ್ತ ಕಿಸಾನ್ ಮೋರ್ಚಾ ಸೇರಿದಂತೆ ಎಲ್ಲ ಸಂಘಟನೆಗಳೊಂದಿಗೂ ಚರ್ಚಿಸಲಾಗುವುದು' ಎಂದು ಬಡಗಲಪುರ ನಾಗೇಂದ್ರ ಹೇಳಿದರು.

'ವಿಧಾನ ಪರಿಷತ್ ಚುನಾವಣೆ ನಂತರ ಸಂಘದ ಸಿದ್ಧಾಂತ ಹಾಗೂ ರಾಜಕೀಯ ನಿಲುವಿನಲ್ಲಿ ಸ್ಪಷ್ಟತೆಯಿರುವ ನೈತಿಕ ಬಲವುಳ್ಳ ಯುವಕ ಪಡೆಯನ್ನು ಕಟ್ಟಲು ಚರ್ಚೆ ನಡೆಯುತ್ತಿದೆ. ಚಳವಳಿ ದುರುಪಯೋಗ ಮಾಡಿಕೊಳ್ಳುವುದನ್ನು ತಡೆಯುವುದೇ ಇದರ ಉದ್ದೇಶ' ಎಂದರು.

ಸಂಘದ ಹೊಸಕೋಟೆ ಬಸವರಾಜು, ಎಂ.ಎಸ್.ಅಶ್ವತ್ಥನಾರಾಯಣರಾಜೇ ಅರಸ್, ಶಿರಮಹಳ್ಳಿ ಸಿದ್ದಪ್ಪ, ಆನಂದ್ ಪ್ರಭಾಕರ್, ಸ್ವರಾಜ್ ಇಂಡಿಯಾದ ಪುನೀತ್ ಇದ್ದರು.

ಅಫ್ಘಾನ್‌ಗೆ ನೆರವು ನೀಡಿದ ಭಾರತ

ಭಾರತ–ಪಾಕಿಸ್ತಾನದ ಗಡಿ ಅಟಾರಿ– ವಾಘಾ ಗಡಿ ಮೂಲಕ ನೆರವು ಸಾಮಗ್ರಿ ಹೊತ್ತು ಅಫ್ಘಾನಿಸ್ತಾನಕ್ಕೆ ತೆರಳುವ ಟ್ರಾಕ್‌ಗಳಿಗೆ ಅಮೃತಸರ ಬಳಿ ಕಸ್ಟಮ್ ಕಮಿಷನರ್ ರಾಹುಲ್ ನಂಗರೆ ಹಸಿರು ನಿಶಾನೆ ತೋರಿದರು.

ನವದೆಹಲಿ(ಪಿಟಿಐ): ತಾಲಿಬಾನ್ ಅಫ್ಘಾನಿಸ್ತಾನದಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಭಾರತದ ಉನ್ನತ ಮಟ್ಟದ ಅಧಿಕಾರಿಗಳು ಅಲ್ಲಿಗೆ ಭೇಟಿ ನೀಡಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ(ಎಂಇಎ) ಜಂಟಿ ಕಾರ್ಯದರ್ಶಿ ಜೆ.ಪಿ. ಸಿಂಗ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಮಾನವೀಯ ದೃಷ್ಟಿಯಿಂದ 20,000 ಟನ್ ಗೋದಿ, 13 ಟನ್ ಔಷಧಿ, ಐದು ಲಕ್ಷ ಡೋಸ್ ಕೋವಿಡ್ ಲಸಿಕೆ ಮತ್ತು ಬಟ್ಟೆಗಳನ್ನು ಅಫ್ಘಾನಿಸ್ತಾನಕ್ಕೆ ನೀಡಿದೆ ಎಂದು ಹೇಳಿದ್ದಾರೆ.

ಕಾಬೂಲ್‌ನಲ್ಲಿರುವ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಭಾರತದ ನೆರವನ್ನು ನೀಡಲಾಯಿತು. ಇದಲ್ಲದೆ ವೈದ್ಯಕೀಯ ನೆರವು, ಔಷಧಿ ಮತ್ತು ಆಹಾರ ಧಾನ್ಯಗಳನ್ನು ಕಳುಹಿಸುವ ಸಾಧ್ಯತೆ ಇದೆ.

ಅಫ್ಘಾನ್ ಸಹೋದರರೊಂದಿಗೆ ಅಭಿವೃದ್ಧಿಯ ಸಹಭಾಗಿತ್ವವನ್ನು ಮುಂದುವರಿಸುತ್ತಿದ್ದೇವೆ. ಇರಾನ್‌ನಲ್ಲಿರುವ ಅಫ್ಘಾನ್ ನಿರಾಶ್ರಿತರಿಗೆ ಲಸಿಕೆ ಹಾಕಲು ಲಕ್ಷಾಂತರ ಡೋಸ್ ಲಸಿಕೆಯನ್ನು ಉಡುಗೊರೆಯಾಗಿ ನೀಡಿದ್ದು, ಯುನಿಸೆಫ್‌ಗೆ 6 ಕೋಟಿ ಡೋಸ್ ಪೋಲಿಯೊ ಲಸಿಕೆ ಮತ್ತು ಎರಡು ಟನ್ ಔಷಧಿಗಳನ್ನು ಒದಗಿಸಲಾಗಿದೆ ಎಂದು ಎಂಇಎ ತಿಳಿಸಿದೆ.

ಕಸಾಪ: ರಾಜ್ಯದಾದ್ಯಂತ ಸಂಗೀತ, ನೃತ್ಯ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವಾಡುವ ನುಡಿಯೇ ಕನ್ನಡ ನುಡಿ' ಎಂಬ ಶೀರ್ಷಿಕೆಯಡಿ ರಾಜ್ಯದಾದ್ಯಂತ ಸಂಗೀತ, ನೃತ್ಯ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತಿಳಿಸಿದೆ.

'ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜಾನಪದದ ರಕ್ಷಣೆ ಹಾಗೂ ಪ್ರಸಾರದ ಧ್ಯೇಯೋದ್ದೇಶಗಳೊಂದಿಗೆ ಕನ್ನಡ- ಕನ್ನಡಿಗ- ಕರ್ನಾಟಕದ ಹಿತರಕ್ಷಣೆ ಕಾಪಾಡಲು ಪರಿಷತ್ತು ವಿಶಿಷ್ಟ ಕಾರ್ಯಕ್ರಮ ಆಯೋಜಿಸುತ್ತಿದೆ. 'ನಾವಾಡುವ ನುಡಿಯೇ ಕನ್ನಡ ನುಡಿ' ಕಾರ್ಯಕ್ರಮ ರಾಜ್ಯದಾದ್ಯಂತ ನಡೆಯಲಿದೆ. ಭಾವಗೀತೆ, ಚಲನಚಿತ್ರ ಸೇರಿ ವಿವಿಧ ಗೀತೆಗಳನ್ನು ವಾದ್ಯಗೋಷ್ಠಿ ಸಹಕಾರದೊಂದಿಗೆ ಪ್ರಸ್ತುತಪಡಿಸಲಾಗುವುದು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ದೂರದರ್ಶನದಲ್ಲಿ 'ಮಧುರ ಮಧುರವೀ ಮಂಜುಳಗಾನ' ಕಾರ್ಯಕ್ರಮ ಆಯೋಜಿಸಿ, ಜನಸಾಮಾನ್ಯರಿಂದ ದೂರವಾಗಿದ್ದ ದೂರದರ್ಶನವನ್ನು ಸಮೀಪ ದರ್ಶನ ಮಾಡಿಸಲಾಗಿತ್ತು. ಅದೇ ಮಾದರಿಯಲ್ಲಿ ಮುಂಬರುವ ದಿನಗಳಲ್ಲಿ ಪರಿಷತ್ತಿನಿಂದ ತೆರೆ ಮರೆಯಲ್ಲಿರುವ ನಾಡಿನ ಕಲಾವಿದರನ್ನು ಗುರುತಿಸಿ, ಸೂಕ್ತ ವೇದಿಕೆ ಕಲ್ಪಿಸುವ ಮೂಲಕ ಪ್ರೋತ್ಸಾಹಿಸಲಾಗುತ್ತದೆ' ಎಂದು ಹೇಳಿದ್ದಾರೆ.

ಮಹೇಶ ಜೋಶಿ

'ಹಾವೇರಿಯಲ್ಲಿ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೂ 'ನಾವಾಡುವ ನುಡಿಯೇ ಕನ್ನಡ ನುಡಿ' ಕಾರ್ಯಕ್ರಮ ಆಯೋಜಿಸಲಾಗುವುದು. ಸಮ್ಮೇಳನಾಧ್ಯಕ್ಷ ದೊಡ್ಡರಂಗೇಗೌಡ ಅವರು ರಚಿಸಿದ ಚಿತ್ರಗೀತೆಗಳನ್ನು ಪ್ರಸ್ತುತಪಡಿಸಲಾಗುತ್ತದೆ. ಸ್ಥಳೀಯ ಕಲಾವಿದರಿಗೆ ಅವಕಾಶ ನೀಡುವ ಉದ್ದೇಶವನ್ನು ಪರಿಷತ್ತು ಹೊಂದಿದೆ. ಸಂಗೀತ– ನೃತ್ಯದಲ್ಲಿ ತೊಡಗಿಸಿಕೊಂಡ ಕಲಾವಿದರು, ಚಲನ ಚಿತ್ರ ನೃತ್ಯ ಸಂಯೋಜಕರಿಗೆ ಅಥವಾ ತಂಡಗಳಿಗೆ ಅವಕಾಶ ಇರುತ್ತದೆ. ಆಸಕ್ತರು ಸ್ವವಿವರವನ್ನು ಇದೇ 30ರೊಳಗೆ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ಈ ವಿಳಾಸಕ್ಕೆ ಕಳುಹಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 26612991 ಅಥವಾ 26623584

ಚಿತ್ರಾವಳಿ

ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್‌ಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಗುರುವಾರ ಚಾಲನೆ ನೀಡಿದರು. ಬಿಜಿಎಸ್ ಮತ್ತು ಎಸ್‌ಜೆಪಿ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಬಿಜು ನಾಯರ್ ಹಾಗೂ ವೈದ್ಯ ಡಾ. ನರಸಿಂಹಾಚಾರ್ ಇದ್ದಾರೆ

ಕೆ.ಆರ್‌.ಪುರ ಸಮೀಪದ ಜಯಂತಿನಗರದಲ್ಲಿ ನೂತನವಾಗಿ ನಿರ್ಮಿಸಿರುವ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಉದ್ಘಾಟಿಸಿದರು. ಮುಖಂಡರಾದ ಮುನೇಗೌಡ, ಬಚ್ಚೇಗೌಡ, ವಿಡಿಎಸ್ ಪ್ರದೀಪ್, ವೆಂಕಿ ಹಾಜರಿದ್ದರು

ಬೆಂಗಳೂರಿನ ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಸಂಸ್ಥೆಯ ಎನ್‌ಸಿಸಿ, ಎನ್‌ಎಸ್‌ಎಸ್ ಘಟಕದಿಂದ ವಿಶ್ವ ತಂಬಾಕು ರಹಿತ ದಿನ ಆಚರಣೆ ಅಂಗವಾಗಿ ಜಾಗೃತಿ ಮೂಡಿಸಲಾಯಿತು

ವಿಶ್ವ ತಂಬಾಕು ರಹಿತ ದಿನ: ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಸಂಸ್ಥೆಯ ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಘಟಕದ ವತಿಯಿಂದ ಇತ್ತೀಚೆಗೆ ವಿಶ್ವ ತಂಬಾಕು ರಹಿತ ದಿನ ಆಚರಣೆ ನಡೆಯಿತು.

'ತಂಬಾಕು ಸೇವನೆ ಆರೋಗ್ಯ ಮತ್ತು ಪರಿಸರದ ಮೇಲೆ ಹೇಗೆ ಪರಿಣಾಮ ಬೀರುತ್ತದೆ' ಎಂಬುದರ ಕುರಿತು ಜಾಗೃತಿ ಮೂಡಿಸಲಾಯಿತು. ಎನ್‌ಸಿಸಿ ವಿದ್ಯಾರ್ಥಿಗಳು, ತಂಬಾಕು ಸೇವನೆಯಿಂದ ಆರೋಗ್ಯ ಹಾಗೂ ಪರಿಸರದ ಮೇಲಾಗುವ ದುಷ್ಪರಿಣಾಮ ಕುರಿತು ಕಿರುನಾಟಕ ಪ್ರದರ್ಶಿಸಿದರು. ತಂಬಾಕು ಸೇವಿಸದಂತೆ ಪ್ರಮಾಣ ವಚನ ಸ್ವೀಕರಿಸಿದರು. ಸೇಂಟ್ ಫ್ರಾನ್ಸಿಸ್ ಕಾಲೇಜಿನ ನಿರ್ದೇಶಕ ಬ್ರದರ್ ಆಂಥೋಣಿ ಹಾಜರಿದ್ದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಅನಿಲ್ ದೇಶಮುಖ್ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಅವರು ಮಾಡಿರುವ ₹100 ಕೋಟಿ ಲಂಚದ ಆರೋಪದ ತನಿಖೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಮತ್ತು ಇತರರ ವಿರುದ್ಧ ಸಿಬಿಐ ಗುರುವಾರ ಚಾರ್ಜ್‌ಶೀಟ್ ಸಲ್ಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಜಾಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರು ಮಾಫಿ-ಸಾಕ್ಷಿಯಾಗಲು ಮತ್ತು ಪ್ರಕರಣದಲ್ಲಿ ಕ್ಷಮೆ ಕೋರಲು ಸಲ್ಲಿಸಿದ ಮನವಿಯನ್ನು ಮುಂಬೈನ ವಿಶೇಷ ನ್ಯಾಯಾಲಯವು ಅನುಮತಿಸಿದ ಒಂದು ದಿನದ ನಂತರ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ, ವಾಜೆ ಅವರು ತಮ್ಮ ಬಂಧನದ ಮೊದಲು ಮತ್ತು ನಂತರ ಸಿಬಿಐಗೆ ಸಹಕರಿಸಿದ್ದಾರೆ ಎನ್ನಲಾಗಿದೆ. ಅವರ ತಪ್ಪೊಪ್ಪಿಗೆ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲಾಗಿದೆ.

ಭ್ರಷ್ಟಾಚಾರ ತಡೆ ಕಾಯ್ದೆಯ ನಿಬಂಧನೆಗಳ ಅಡಿ ದೇಶಮುಖ್, ಅವರ ವೈಯಕ್ತಿಕ ಸಿಬ್ಬಂದಿ ಸಂಜೀವ್ ಪಲಾಂಡೆ, ಕುಂದನ್ ಶಿಂಧೆ ವಿರುದ್ಧ ಸಿಬಿಐ ಮುಂಬೈನ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ.

ಹೈದರಾಬಾದ್‌ನಲ್ಲಿ ಗುರುವಾರ ನಡೆದ ತೆಲಂಗಾಣ ರಾಜ್ಯ ಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಯೋಜನೆಯ ಫಲಾನುಭವಿಗೆ ಸರ್ಕಾರದ ಆರ್ಥಿಕ ನೆರವಿನ ಚೆಕ್ ವಿತರಿಸಿದರು.

ತೆಲಂಗಾಣ ಸಿ.ಎಂ ಕೆ.ಚಂದ್ರಶೇಖರ ರಾವ್ ವಾಗ್ದಾಳಿ

‘ರಾಜ್ಯಗಳ ಹಕ್ಕು ಕಸಿದ ಕೇಂದ್ರ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಹುನ್ನಾರ ನಡೆಸುತ್ತಿದೆ. ಅಲ್ಲದೆ ತೆಲಂಗಾಣ ರಾಜ್ಯಕ್ಕೆ ತಾರತಮ್ಯ ಮಾಡುತ್ತಿದೆ’ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಆರೋಪಿಸಿದರು.

ಇಲ್ಲಿ ಗುರುವಾರ ಆಯೋಜಿಸಿದ್ದ ತೆಲಂಗಾಣ ರಾಜ್ಯ ಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ‘ಕೇಂದ್ರದ ದ್ವೇಷ ರಾಜಕಾರಣದಿಂದಾಗಿಯೇ ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗಿದೆ’ ಎಂದು ನೇರ ವಾಗ್ದಾಳಿ ನಡೆಸಿದರು.

‘ಕೇಂದ್ರದ ಈ ಹಿಂದಿನ ಸರ್ಕಾರಗಳು ಸಂವಿಧಾನದ ಆಶಯ ಮತ್ತು ರಾಜ್ಯಗಳ ಸ್ವಾಯತ್ತತೆ ಎತ್ತಿಹಿಡಿದಿದ್ದವು. ಈಗಿನ ಸರ್ಕಾರವು ‘ಸದೃಢ ಕೇಂದ್ರ –ದುರ್ಬಲ ರಾಜ್ಯಗಳು’ ಎಂಬ ಸರ್ವಾಧಿಕಾರದ ಚಿಂತನೆ ಹೊಂದಿದೆ. ಇದೇ ಕಾರಣಕ್ಕೆ ರಾಜ್ಯಗಳ ಹಕ್ಕುಗಳ ಉಲ್ಲಂಘನೆಯು ಈ ಸರ್ಕಾರದ ಆಡಳಿತದಲ್ಲಿ ಉತ್ತುಂಗಕ್ಕೇರಿದೆ’ ಎಂದೂ ತರಾಟೆಗೆ ತೆಗೆದುಕೊಂಡರು.

‘ತೆರಿಗೆಯಲ್ಲಿ ಸಂವಿಧಾನದತ್ತವಾಗಿ ರಾಜ್ಯಗಳಿಗೆ ನೀಡಬೇಕಿರುವ ಪಾಲನ್ನು ಸೆಸ್ ರೂಪದಲ್ಲಿ ಬಳಸುತ್ತಿದೆ. ರಾಜ್ಯಗಳ ಆರ್ಥಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರಲು ಹಲವು ನಿರ್ಬಂಧಗಳನ್ನು ಹೇರುತ್ತಿದೆ’ ಎಂದು ಟೀಕಿಸಿದರು.

ರಾಜ್ಯ ಸರ್ಕಾರಗಳು ‘ಆರ್ಥಿಕ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣಾ ಕಾಯ್ದೆ 2003’ಕ್ಕೆ ಬದ್ಧರಾಗಬೇಕೆಂದು ಕೇಂದ್ರ ಬಯಸುತ್ತದೆ. ಆದರೆ, ಕೇಂದ್ರ ಸರ್ಕಾರವೇ ಅದಕ್ಕೆ ಬದ್ಧವಾಗಿಲ್ಲ. ಕೇಂದ್ರದ ಈ ನಿಲುವು ತೆಲಂಗಾಣದಂತಹ ರಾಜ್ಯಗಳ ಪ್ರಗತಿಗೆ ಅಡ್ಡಿಯಾಗಿದೆ. ರಾಜ್ಯಗಳ ಹಕ್ಕುಗಳನ್ನು ಕಸಿಯುವುದನ್ನು ಕೇಂದ್ರದ ಎನ್‌ಡಿಎ ಸರ್ಕಾರ ಇನ್ನಾದರೂ ನಿಲ್ಲಿಸಬೇಕು ಎಂದು ಅವರು ಒತ್ತಾಯಿಸಿದರು.

‘ಕೇಂದ್ರದ ‘ರೈತ ವಿರೋಧಿ’ ವಿದ್ಯುತ್ ಸುಧಾರಣೆ ಕ್ರಮಗಳನ್ನು ಜಾರಿಗೊಳಿಸಲು ವಿರೋಧಿಸಿದ ಕಾರಣಕ್ಕೆ ತೆಲಂಗಾಣ ವಾರ್ಷಿಕ ₹5 ಸಾವಿರ ಕೋಟಿ ಕಳೆದುಕೊಳ್ಳುತ್ತಿದೆ. ಐದು ವರ್ಷಗಳಲ್ಲಿ ₹25 ಸಾವಿರ ಕೋಟಿ ನಷ್ಟವಾಗಿದೆ’ ಎಂದು ಹೇಳಿದರು.

‘ತೆಲಂಗಾಣ ರಾಜ್ಯ ದೇಶಕ್ಕೆ ಮಾದರಿ’

‘ಎಂಟು ವರ್ಷಗಳ ಅಲ್ಪಾವಧಿಯಲ್ಲಿ ರಾಜ್ಯವು ತ್ವರಿತ ಪ್ರಗತಿ ಸಾಧಿಸಿದೆ. ತಲಾ ಆದಾಯ ಹೆಚ್ಚಳದಿಂದ ಎಲ್ಲ ಕ್ಷೇತ್ರಗಳಲ್ಲೂ ತೆಲಂಗಾಣ ರಾಜ್ಯ ದೇಶಕ್ಕೆ ಮಾದರಿಯಾಗಿದೆ’ ಎಂದು ಕೆ.ಚಂದ್ರಶೇಖರ ರಾವ್ ಅಭಿಮಾನದಿಂದ ಹೇಳಿಕೊಂಡರು.

‘2013-2014ರ ಹಣಕಾಸು ವರ್ಷದಲ್ಲಿ ತೆಲಂಗಾಣ ರಚನೆಯಾದಾಗ, ರಾಜ್ಯದ ಜಿಎಸ್‌ಡಿಪಿ ₹5,05,849 ಕೋಟಿ ಇತ್ತು. 2021-2022ರ ಹಣಕಾಸು ವರ್ಷದಲ್ಲಿ ಇದು ₹11,54,860 ಕೋಟಿಗೆ ಬೆಳೆದಿದೆ. 2014-2015ರಲ್ಲಿ ರಾಜ್ಯದ ತಲಾ ಆದಾಯ ₹1,24, 104 ಇದ್ದದ್ದು, 2021-2022ರಲ್ಲಿ ₹2,78, 833ಕ್ಕೆ ಏರಿದೆ. 2014ರಿಂದ 2019ರವರೆಗೆ ಶೇ 17.24 ರಷ್ಟು ಸರಾಸರಿ ವಾರ್ಷಿಕ ಆರ್ಥಿಕ ಬೆಳವಣಿಗೆಯೊಂದಿಗೆ ತೆಲಂಗಾಣ ರಾಜ್ಯವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ’ ಎಂದು ಹೇಳಿದರು.

ರಾಜ್ಯದಲ್ಲಿ ವಿಶೇಷ ಮಹಿಳಾ ವಿಶ್ವವಿದ್ಯಾಲಯ ಮತ್ತು ವಿಶೇಷ ಅರಣ್ಯ ವಿಶ್ವವಿದ್ಯಾಲಯ, ಹೈದರಾಬಾದ್ ನಗರದ ನಾಲ್ಕು ದಿಕ್ಕುಗಳಲ್ಲಿ ಅಲ್ವಾಲ್, ಎಲ್‌ಬಿ ನಗರ, ಸನತ್ ನಗರ ಮತ್ತು ಗಚಿಬೌಲಿಯಲ್ಲಿ ತಲಾ ಒಂದು ಸಾವಿರ ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು ಎಂದು ರಾವ್ ಘೋಷಿಸಿದರು.

ಸಮಾಜ ಸುಧಾರಣಾ ಆಂದೋಲನವಾಗಿ ದಲಿತ ಬಂಧು ಯೋಜನೆ, ಶುದ್ಧ ಕುಡಿಯುವ ನೀರು ಪೂರೈಸಲು ಭಗೀರಥ ಯೋಜನೆ, ರೈತರ ಸಾಲ ಮನ್ನಾ, ಕೆರೆಗಳ ಪುನಶ್ಚೇತನಕ್ಕೆ ಮಿಷನ್ ಕಾಕತೀಯ ಯೋಜನೆ ಆರಂಭಿಸಿದ್ದೇವೆ. ಬಡವರಿಗೆ 2 ಬೆಡ್ ರೂಮ್‌ಗಳ ಮನೆಗಳನ್ನು ಉಚಿತವಾಗಿ ನೀಡುತ್ತಿದ್ದೇವೆ ಎಂದರು.

ಸಿನಿಮಾ ಪುರವಣಿ ಓದಿ

‘ಜ್ಞಾನವಾಪಿ ಶಿವಲಿಂಗಕ್ಕೆ ನಾಳೆ ಪ್ರಾರ್ಥನೆ’

ವಾರಾಣಸಿ (ಪಿಟಿಐ): ಜ್ಞಾನವಾಪಿ ಸಂಕೀರ್ಣದ ಆವರಣದಲ್ಲಿ ನ್ಯಾಯಾಲಯದ ಮೇಲ್ವಿಚಾರಣೆಯ ಸಮೀಕ್ಷೆ ವೇಳೆ ಕಂಡುಬಂದ ಶಿವಲಿಂಗಕ್ಕೆ ತಮ್ಮ ಅನುಯಾಯಿಗಳೊಂದಿಗೆ ಜೂನ್ 4 ರಂದು ಪ್ರಾರ್ಥನೆ ಸಲ್ಲಿಸುವುದಾಗಿ ಶಂಕರಾಚಾರ್ಯ ಸ್ವಾಮಿ ಸ್ವರೂಪಾನಂದ ಸರಸ್ವತಿ ಅವರ ಶಿಷ್ಯರೊಬ್ಬರು ಘೋಷಿಸಿದ್ದಾರೆ.

ಇಲ್ಲಿ ಮಾತನಾಡಿದ ಸ್ವಾಮಿ ಅವಿಮುಕ್ತೇಶ್ವರಾನಂದ್ ಅವರು ‘ಜ್ಞಾನವಾಪಿ ಶಿವಲಿಂಗಕ್ಕೆ ಹಿಂದೂಗಳ ಪರ ನಾವು ಪ್ರಾರ್ಥನೆ ಸಲ್ಲಿಸಲು, ಅಗತ್ಯ ಪೂಜಾ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುತ್ತಿದ್ದೇವೆ. ನಾವು ರಾಜಕೀಯ ಹಿಂದೂಗಳಲ್ಲ, ನಿಜವಾದ ಹಿಂದೂಗಳು. ಹೀಗಾಗಿ ನಮ್ಮ ಪ್ರಾರ್ಥನೆ ನಡೆಯಲಿದೆ’ ಎಂದು ಹೇಳಿದರು.

‘ಜ್ಞಾನವಾಪಿ ಆವರಣದಲ್ಲಿ ನಮ್ಮ ಪ್ರಾರ್ಥನೆ ತಡೆದರೆ, ಅದನ್ನು ಗುಜರಾತ್‌ನ ದ್ವಾರಕಾ ಶಾರದಾ ಪೀಠ ಮತ್ತು ಬದರೀನಾಥದ ಜ್ಯೋತಿರ್ ಮಠದ ಪೀಠಾಧಿಪತಿ ಸ್ವಾಮಿ ಸ್ವರೂಪಾನಂದ ಸರಸ್ವತಿ ಶಂಕರಾಚಾರ್ಯರ ಗಮನಕ್ಕೆ ತಂದು, ಅವರ ಸೂಚನೆಗಳನ್ನು ಪಾಲಿಸುತ್ತೇವೆ’ ಎಂದರು.

‘ಧರ್ಮದ ವಿಷಯದಲ್ಲಿ ಧರ್ಮಾಚಾರ್ಯರ ತೀರ್ಮಾನವೇ ಅಂತಿಮ. ಸುಪ್ರೀಂ ಕೋರ್ಟ್ ಕಾನೂನನ್ನು ವ್ಯಾಖ್ಯಾನಿಸಿದಂತೆ, ಧರ್ಮವನ್ನು ಧರ್ಮಾಚಾರ್ಯರು ವ್ಯಾಖ್ಯಾನಿಸುತ್ತಾರೆ. ಸನಾತನ ಧರ್ಮದಲ್ಲಿ, ಶಂಕರಾಚಾರ್ಯರು ದೊಡ್ಡ ಆಚಾರ್ಯರು ಮತ್ತು ಸ್ವರೂಪಾನಂದರು ಹಿರಿಯರು’ ಎಂದು ಪ್ರತಿಪಾದಿಸಿದರು.

‘ಮನೀಷ್ ಬಂಧನಕ್ಕೂ ಯತ್ನ’

ನವದೆಹಲಿ (ಪಿಟಿಐ): ‘ಆರೋಗ್ಯ ಸಚಿವರನ್ನು ಬಂಧಿಸಿರುವ ಸುಳ್ಳು ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನೂ ಶೀಘ್ರವೇ ಬಂಧಿಸಲು ಕೇಂದ್ರ ಸರ್ಕಾರ ತಯಾರಿ ನಡೆಸುತ್ತಿದೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸಂತೂರ್ ಮಾಂತ್ರಿಕ ಭಜನ್ ಸೋಪೋರಿ ನಿಧನ

ನವದೆಹಲಿ: ಸಂತೂರ್ ಮಾಂತ್ರಿಕ ಭಜನ್ ಸೋಪೋರಿ (73) ಅವರು ಗುರುವಾರ ಗುರುಗ್ರಾಮದ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಪುತ್ರರಾದ ಸೋರಭ್, ಅಭಯ್ ಇದ್ದಾರೆ. ಇವರಿಬ್ಬರೂ ಸಂತೂರ್ ವಾದಕರಾಗಿದ್ದಾರೆ.

ಭಜನ್ ಸೋಪೋರಿ ಅವರು ದೊಡ್ಡ ಕರುಳಿನ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. 3 ವಾರಗಳ ಹಿಂದೆ ಅವರನ್ನು ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನವದೆಹಲಿಯ ಲೋಧಿ ರಸ್ತೆಯ ಚಿತಾಗಾರದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅಭಯ್ ಹೇಳಿದ್ದಾರೆ.

ಸೋಪೋರಿ ಅವರು ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1992), ಪದ್ಮಶ್ರೀ (2004) ಹಾಗೂ ಜಮ್ಮು-ಕಾಶ್ಮೀರ ರಾಜ್ಯ ಸರ್ಕಾರ ನೀಡುವ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾಗಿದ್ದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560064

ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಸೂಚನೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಡಬ್ಲ್ಯೂ/22–23/03 ದಿನಾಂಕ: 31.05.2022.

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಅವರು ಈ ಕೆಳಗಿನ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಭಾರತೀಯ ರೈಲ್ವೇ ಇ–ಪೋರ್ಟಲ್ www.ireps.gov.in (ಕೆಲಸ) ಮೂಲಕ ಆಹ್ವಾನಿಸಿದ್ದಾರೆ

ಕ್ರ.ಸಂ.	ಟೆಂಡರ್ ನಂಬರ್	ವಿವರ	ಅಂದಾಜು ಮೌಲ್ಯ ರೂ.
1	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/991	ವಲಯವಾರು ಕಾಮಗಾರಿಗಳು: ಒಂದು	1,03,51,348.46

ವರ್ಷದ ಅವಧಿಗೆ ಆರ್‌ಡಬ್ಲ್ಯೂಎಫ್ ಪೂರ್ವ ಮತ್ತು ಪಶ್ಚಿಮ ಕಾಲೋನಿಗಳು ಮತ್ತು ಆಡಳಿತ ಕಚೇರಿಗಳಲ್ಲಿ – ಅಸ್ತಿತ್ವದಲ್ಲಿರುವ ರಚನೆಗಳಿಗೆ ಸೇರ್ಪಡೆಗಳು, ಬದಲಾವಣೆ ಮತ್ತು ಸುಧಾರಣೆಗಳು, ವಿಶೇಷ ದುರಸ್ತಿ ಕಾರ್ಯಗಳು, ಕಟ್ಟಡ ಸಾಮಗ್ರಿಗಳ ಸರಬರಾಜು, ಸಾಗಣೆ ಮತ್ತು ತೋಟಗಾರಿಕೆ ಸಂಬಂಧಿತ ಕಾಮಗಾರಿಗಳು ಇತ್ಯಾದಿ.

ಅಂತಿಮ ದಿ: & ಸಮಯ 28.06.2022 11:00 ಗಂಟೆ

ಇ – ಟೆಂಡರ್ ಷರತ್ತುಗಳು 1. ಟೆಂಡರ್‌ದಾರರು ವೆಬ್‌ಸೈಟ್‌ನಲ್ಲಿ ಲಭ್ಯವಿರುವ ವೇಳಾಪಟ್ಟಿ ಪುಟದ ಮೂಲಕ ಉಲ್ಲೇಖಿಸಬೇಕು – www.ireps.gov.in. 2. ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ನೋಡಬಹುದು.

ಉಪ ಮುಖ್ಯ ಇಂಜಿನಿಯರ್

ಕರ್ನಾಟಕ ಸರ್ಕಾರ

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

♦ ಸರ್ ಎಂ. ವಿಶ್ವೇಶ್ವರಯ್ಯ ♦ ಡಾ. ರಾಜಾ ರಾಮಣ್ಣ ♦ ಸರ್ ಸಿ.ವಿ. ರಾಮನ್ ♦ ಪ್ರೊ. ಸತೀಶ್ ಧವನ್ ಮತ್ತು ♦ ಡಾ. ಕಲ್ಪನಾ ಚಾವ್ಲಾ

ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿ 2020 ಮತ್ತು 2021

ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು : 21.06.2022ರವರೆಗೆ ಮುಂದೂಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ www.kscst.org.in ಅಥವಾ www.kscst.iisc.ernet.in ನಲ್ಲಿ ಪಡೆಯಬಹುದು.

ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ

ಭಾರತೀಯ ವಿಜ್ಞಾನ ಸಂಸ್ಥೆ ಆವರಣ, ಬೆಂಗಳೂರು–560012

KSCST

DIPR/CP/719/Yakshi /2022-23 ದೂರವಾಣಿ: 080-2334 1652, 2334 8848 / 49 | ಇಮೇಲ್: office.kscst@iisc.ac.in

ಆಯುಕ್ತರು, ಖಜಾನೆ ಇಲಾಖೆ,
5ನೇ & 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–560001. ದೂ: 080–22028210 ಫ್ಯಾಕ್ಸ್: 080–22028209

ಸಂ.: ಖ.ಆ/ಸಂಗ್ರಹಣೆ/52/2021–22 ದಿನಾಂಕ : 02.06.2022

ಎ4 ಜೆರಾಕ್ ಹಾಳೆಗಳನ್ನು ಒದಗಿಸುವ ಏಜೆನ್ಸಿಯ ಆಯ್ಕೆಗಾಗಿ ಆರ್.ಎಫ್.ಪಿ.

ಖಜಾನೆ ಇಲಾಖೆಯು ‘‘ಎ4 ಜೆರಾಕ್ಸ್ ಹಾಳೆಗಳನ್ನು ಒದಗಿಸುವ ಏಜೆನ್ಸಿಯ ಆಯ್ಕೆಗಾಗಿ’’ ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ಇಲ್ಲಿ ಸಲ್ಲಿಸಬಹುದು.

ವಾಸಾಸಂಇ/ಉನಿ–ಸಿ.ಪಿ/728/ಎಂಸಿಎ/2022–23

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು
(ಕರ್ನಾಟಕ ಸರಕಾರದ ಒಂದು ಉದ್ಯಮ)

ಅಂಚೆ ಪೆಟ್ಟಿಗೆ ಸಂಖ್ಯೆ 930, ಕುಲಶೇಖರ – 575 005.

ದೂರವಾಣಿ: 2230346 ಫ್ಯಾಕ್ಸ್: 2231032 ಇ–ಮೇಲ್: edkfdcl@gmail.com

ನಂ.ಕಅಅನಿನಿ/ಕಾನಿನಿ/ಎ3/ಟಿ–3/2022–23 ದಿನಾಂಕ: 02.06.2022

ಅಲ್ಪಾವಧಿ ಸಂಕ್ಷಿಪ್ತ ಮರು ಇ–ಟೆಂಡರು ಅಧಿಸೂಚನೆ

ಈ ನಿಗಮಕ್ಕೆ ಅವಶ್ಯವಿರುವ ಕಾನ್ಸಂಟ್ರೇಟೆಡ್ ಸಲ್ಫ್ಯೂರಿಕ್ ಆಮ್ಲ (ಕಮರ್ಷಿಯಲ್ ಗ್ರೇಡ್–ಕನಿಷ್ಠ ಸಾಂದ್ರತೆ ಶೇ.98)–110 ಮೆ.ಟನ್ ಸರಬರಾಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಇ–ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ದಿನಾಂಕ 10.06.2022 ರ 15.30 ಗಂಟೆಯವರೆಗೆ ಅವಕಾಶವಿರುತ್ತದೆ. ದಿನಾಂಕ 13.06.2022 ರ 10.15 ಗಂಟೆಗೆ ಟೆಂಡರ್ ತೆರೆಯಲಾಗುವುದು.

ಟೆಂಡರು ವಿವರಗಳಿಗಾಗಿ http://www.eproc.karnataka.gov.in ವೆಬ್‌ಸೈಟನ್ನು ಸಂದರ್ಶಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಪರವಾಗಿ,

DIPR/ADM/MCA/225/22-23 dt 02.06.2022 ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಮಂಗಳೂರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667

ಇ–ಮೇಲ್: kerc-ka@nic.in ವೆಬ್‌ಸೈಟ್: www.karunadu.karnataka.gov.in/kerc

ಸಂಖ್ಯೆ:ಕವಿನಿಆ/01/ಡಿಡಿಡಿ/22–23/248, ಬೆಂಗಳೂರು ದಿನಾಂಕ: 31–05–2022

ಸೂಚನೆ

ವಿಷಯ: ಕರಡು – ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (ಸಿಒಎಸ್) (ಹತ್ತನೇ ತಿದ್ದುಪಡಿ) 2022.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಷರತ್ತುಗಳ ಕರಡು ತಿದ್ದುಪಡಿಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 13–05–2022 ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: www.karunadu.karnataka.gov.in/kerc ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು ದಿನಾಂಕ: 15–06–2022 ರಂದು ಬೆಳಿಗ್ಗೆ 11.00 ಗಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ

ವಾಸಾಸಂಇ/ವಾ.ಪ್ರ/732/2022–23 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್
Paints with Royal Legacy

(ಕರ್ನಾಟಕ ಸರ್ಕಾರದ ಅಧೀನ ಉದ್ಯಮ)

ಹೊಸ ಬನ್ನಿಮಂಟಪ ಬಡಾವಣೆ, ಮೈಸೂರು – 570 015

ದಿನಾಂಕ: 31.05.2022

ಅಲ್ಪಾವಧಿ ಮರು – ಟೆಂಡರ್ ಪ್ರಕಟಣೆ

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿ., ಸಂಸ್ಥೆಗೆ ಈ ಕೆಳಕಂಡ ಸಾಮಗ್ರಿಗಳ ಸರಬರಾಜು ಮತ್ತು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಜಾಲತಾಣ (https://eproc.karnataka.gov.in) ದ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಪರಿಗಣಿಸಲ್ಪಟ್ಟ ತಯಾರಕರಿಂದ /ಅಧಿಕೃತ ಸರಬರಾಜುದಾರರಿಂದ ಆಹ್ವಾನಿಸಲಾಗಿದೆ.

ಕ್ರ.ಸಂ.: 01. ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ ಸಂಖ್ಯೆ: (a) MPVL/2021-22/IND459/CALL-3. (b) MPVL/2022-23/IND460/CALL-2 (c) MPVL/2022-23/IND461/CALL-2. (d) MPVL/2022-23/IND462/CALL-2. ಟೆಂಡರ್/ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 08.06.2022 ತಾಂತ್ರಿಕ ಬಿಡ್ ತೆರವಿನ ದಿನಾಂಕ: 10.06.2022 ಹೆಚ್ಚಿನ ವಿವರಗಳಿಗೆ ದಯವಿಟ್ಟು ಆಸಕ್ತಿಯುಳ್ಳ ಸರಬರಾಜುದಾರರು ಸಂಸ್ಥೆಯ ಜಾಲತಾಣ: www.eproc.karnataka.gov.in ಗೆ ಭೇಟಿ ನೀಡಬಹುದಾಗಿದೆ..

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್ ಪರವಾಗಿ

ಸಹಿ/– TIA / ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ–2/ಟೆಂಡರ್/2022–23 ದಿ: 31.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:04/2022–23 (ಇ–ಪ್ರೊಕ್ಯೂರ್‌ಮೆಂಟ್) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಉಪ–ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.eproc.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.100.00ಲಕ್ಷಗಳವರೆಗೆ, ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 20.06.2022 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21.06.2022 ರ ಸಂಜೆ 4.00 ಗಂಟೆ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24.06.2022 ರ ಸಂಜೆ 4.00 ಗಂಟೆ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 18.06.2022 ಸಂಜೆ 4.00 ಗಂಟೆಗೆವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/179/MCA/2022-23

“ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101”
ಸಂಖ್ಯೆ:ಜಿನಕೊಬ/ಮುಅನ/ಹಂತ–4/01/2021–22 ದಿನಾಂಕ :02–06–2022

ಟೆಂಡರ್ ಪ್ರಕಟಣೆ

ಬಳ್ಳಾರಿ ಜಿಲ್ಲೆಯ ಕುಡುತಿನಿ ಮತ್ತು ತೆಕ್ಕಲಕೋಟೆ ಪಟ್ಟಣ ಪಂಚಾಯಿತಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳ ಅಮೃತ್ ನಗರೋತ್ಥಾನ (ಮುನ್ಸಿಪಾಲಿಟಿ) ಹಂತ 04 ರ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆವಾರು ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ Public Procurement Portal ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಪ್ಯಾಕೇಜ್ ಕಾಮಗಾರಿ ವಿವರ: 01. Improvements and construction of RCC Drain, Slab and Road works in various locations at Kudathini town limits in Ballari District under amruth Nagarothana (mun) Phase-4 Grant. DMA/2022-23/OW/WORK_INDENT132274. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 177.03. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 157.32. EMD (Rs): 2,65,545.00 02. Improvements and Construction of RCC Drain, Slab and Roads at various locations of Tekkalakote Town limit in Ballari District under Amruth Nagarhothana (mun) phase 4 grant DMA/2022-23/OW/WORK_INDENT132278. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 172.36. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 153.10. EMD (Rs): 2,58,540.00

1.Last date & time for tender queries / clarifications: 02.07.2022 at 17.30 Hrs. 2. Pre Bid Meeting: 14-06-2022 at 11.00 hrs. 3. Last date and time for receipt of tender technical bids: 04-07-2022 at 16.30 hrs. 4. Date & time for opening of (technical bids): 06-07-2022 at 11:00 Hrs. 5.Auto extension of tender schedule: 03 days

ಸದರಿ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ:04.07.2022 ರಂದು 16.30 ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರನ್ನು ದಿನಾಂಕ: 06.07.2022 ರಂದು 11:00 ಗಂಟೆಗೆ ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಇ–ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ: https://eproc.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ವಿವರಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, (ದೂ ಸಂ : 9448545795) ಇವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/94/ಎಂಸಿಎ/2022–23

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ–1:ಟೆಂಡರ್–11:2022–23/710 ದಿನಾಂಕ: 31.05.2022

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:– ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ : 5054–04–337–0–01–133 ಜಿಲ್ಲಾ ಮತ್ತು ಇತರೆ ರಸ್ತೆಗಳ ವಿಶೇಷ ಅಭಿವೃದ್ಧಿ ಯೋಜನೆ (ಸಾಮಾನ್ಯ):– (1) ಚಳ್ಳಕೆರೆ ತಾಲ್ಲೂಕಿನ ಚಿಕ್ಕಮಧುರೆ ಗ್ರಾಮದಿಂದ ಬಾಲೇನಹಳ್ಳಿ ಗ್ರಾಮದವರೆಗೆ ಕಿ.ಮೀ.0.00 ರಿಂದ 2.00ವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 149481) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–100.00 (2) ಚಳ್ಳಕೆರೆ ತಾಲ್ಲೂಕಿನ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಎಸ್.ಜೆ ರಸ್ತೆಯಿಂದ ಗೌರಸಮುದ್ರ, ಆಂದ್ರಗಡಿ ಮಾರ್ಗ ಮನ್ನೇಕೋಟೆ, ಬಂಜಿಗೆರೆ, ಘಟಪರ್ತಿ, ಮಲ್ಲಸಮುದ್ರ ರಸ್ತೆ ಕಿ.ಮೀ.8.50 ರಿಂದ 11.00 ವರೆಗೆ ಆಯ್ದಭಾಗಗಳಲ್ಲಿ ರಸ್ತೆ ಅಭಿವೃದ್ಧಿ (ವ.ಇಂ. 151055) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–53.49 ಲೆಕ್ಕ ಶೀರ್ಷಿಕೆ: 5054–04–337–0–01–135 (ಯೋಜನೆ) ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ. ಎಸ್.ಸಿ.ಪಿ):– (3) ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ–ಜಾಜೂರು ರಸ್ತೆಯಿಂದ ಪುಟ್ಲಾರಹಳ್ಳಿ ಗ್ರಾಮದವರೆಗೆ ಕಿ.ಮೀ.0.00 ರಿಂದ 3.00 ವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 149480) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–55.00 ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ಏಕ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ 5054–04–337–0–01–133 ಜಿಲ್ಲಾ ಮತ್ತು ಇತರೆ ರಸ್ತೆಗಳ ವಿಶೇಷ ಅಭಿವೃದ್ಧಿ ಯೋಜನೆ (ಸಾಮಾನ್ಯ):– (4) ಚಳ್ಳಕೆರೆ ತಾಲ್ಲೂಕಿನ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮಲ್ಲಸಮುದ್ರ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ (ವ.ಇಂ. 151064) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–10.00 ಲೆಕ್ಕ ಶೀರ್ಷಿಕೆ: 5054–04–337–0–01–135 (ಯೋಜನೆ) ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ. ಎಸ್.ಸಿ.ಪಿ) (5) ಚಳ್ಳಕೆರೆ ತಾಲ್ಲೂಕಿನ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮೈಲನಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ (ವ.ಇಂ. 151044) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–10.00 (6) ಚಳ್ಳಕೆರೆ ತಾಲ್ಲೂಕಿನ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಮಲ್ಲಸಮುದ್ರ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ (ವ.ಇಂ. 151065) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–19.825

ಕ್ರಸಂ. 1 ಮತ್ತು 3 ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 16–06–2022 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 17–06–2022 ಸಮಯ 16–00 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 18–06–2022 ಸಮಯ 16–01 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 20–06–2022 ಸಮಯ 11–00 ಕ್ರಸಂ. 4 ರಿಂದ 6 ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 16–06–2022 ಸಮಯ 17–30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 17–06–2022 ಸಮಯ 16–00 (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 18–06–2022 ಸಮಯ 16–01 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂ. ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/MCA/194/2022-23 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ದಿ ಹಟ್ಟಿಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ –584 115, ರಾಯಚೂರು ಜಿಲ್ಲೆ, ಕರ್ನಾಟಕ ರಾಜ್ಯ, ದೂರವಾಣಿ: (08537)275041, ಫ್ಯಾಕ್ಸ್: (08537) 275054

CIN No. U85110KA1947SGC001321

ಸಂಖ್ಯೆ:ಹಚಿಗ/ಮಾಸ/ಇಎಸ್‌ಟಿ/ನೇನೇಪ್ರ/10(ಅ)2022–23 ದಿನಾಂಕ:02.06.2022

ಉದ್ಯೋಗ ಪ್ರಕಟಣೆ

ಭಾರತದಲ್ಲಿ ಚಿನ್ನ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿರುವ ಹಟ್ಟಿ ಚಿನ್ನದ ಗಣಿ ಕಂಪನಿಯು ರೂ.650 ಕೋಟಿಗಳ ವಹಿವಾಟು ಹೊಂದಿದ್ದು, ತನ್ನ ಗಣಿ ಕಾರ್ಯಚಟುವಟಿಕೆಯನ್ನು ವಿಸ್ತರಣೆ ಮಾಡುವ ಮಹತ್ವಕಾಂಕ್ಷೆ ಯೋಜನೆ ಹೊಂದಿರುತ್ತದೆ. ಹಟ್ಟಿ ಚಿನ್ನದ ಗಣಿ ಕಂಪನಿ ವಿವಿಧ ವಿಭಾಗಗಳಲ್ಲಿ ಸ್ಥಳೀಯೇತರ ವೃಂದದಲ್ಲಿ (Non-Local Cadre) ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸ್ಥಳೀಯೇತರ ವೃಂದದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(I) ಇ–3 ದರ್ಜೆಯ ಮ್ಯಾನೇಜ್‌ಮೆಂಟ್ ಟ್ರೇನಿ (Management Trainee) ಹುದ್ದೆಗಳು, ವೇತನ (ಪ್ರತಿ ತಿಂಗಳಿಗೆ):

1. ಪರೀಕ್ಷಾರ್ಥ ಅವಧಿಗೆ : – ರೂ.45,000/–

2. ಪರೀಕ್ಷಾರ್ಥ ಅವಧಿ ಮುಗಿದ ನಂತರ: ಇ–3 ದರ್ಜೆಯ ವೇತನ ಶ್ರೇಣಿ–ರೂ.47800–81200 ಹಾಗೂ ಅನ್ವಯಿಸುವ ಇತರೆ ಭತ್ಯೆ.

ಕ್ರ.ಸಂ	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ	ಕ್ರ.ಸಂ.	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ
1	ಮ್ಯಾನೇಜ್‌ಮೆಂಟ್ ಟ್ರೇನಿ (ಗಣಿ)	01	5	ಮ್ಯಾನೇಜ್‌ಮೆಂಟ್ ಟ್ರೇನಿ (ಎಲೆಕ್ಟ್ರಿಕಲ್)	01
2	ಮ್ಯಾನೇಜ್‌ಮೆಂಟ್ ಟ್ರೇನಿ (ಅನ್ವೇಷಣೆ)	01	6	ಮ್ಯಾನೇಜ್‌ಮೆಂಟ್ ಟ್ರೇನಿ (ಸಿವಿಲ್)	01
3	ಮ್ಯಾನೇಜ್‌ಮೆಂಟ್ ಟ್ರೇನಿ (ಲೋಹ)	01	7	ಮ್ಯಾನೇಜ್‌ಮೆಂಟ್ ಟ್ರೇನಿ (ಲೆಕ್ಕ)	01
4	ಮ್ಯಾನೇಜ್‌ಮೆಂಟ್ ಟ್ರೇನಿ (ಮೆಕಾನಿಕಲ್)	02	8	ಮ್ಯಾನೇಜ್‌ಮೆಂಟ್ ಟ್ರೇನಿ (ಸರಕು)	01

(II) ಜಿ–5 ದರ್ಜೆಯ ಹುದ್ದೆಗಳು, ವೇತನ ಶ್ರೇಣಿ: – ರೂ.25000–48020+ಅನ್ವಯಿಸುವ ಕೈಗಾರಿಕೆ ತುಟ್ಟಿ ಭತ್ಯೆ (ವೇತನ ಪರಿಷ್ಕರಣೆ 01.04.2021ರಿಂದ ಬಾಕಿಯಿರುತ್ತದೆ.)

ಕ್ರ.ಸಂ	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ	ಕ್ರ.ಸಂ.	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ
1	ಸಹಾಯಕ ಫೋರ್ಮನ್ (ಗಣಿ)	01	5	ಸಹಾಯಕ ಫೋರ್ಮನ್ (ಭೂ ವಿಜ್ಞಾನ)	01
2	ಸಹಾಯಕ ಫೋರ್ಮನ್ (ಲೋಹ ಶಾಸ್ತ್ರ)	02	6	ಸಹಾಯಕ ಫೋರ್ಮನ್ (ಭೂಕೆಳಮೈ ವಜ್ರ ಭೈರಿಗೆ)	01
3	ಲ್ಯಾಬ್ ಅಸಿಸ್ಟಂಟ್	01	7	ಭದ್ರತಾ ನಿರೀಕ್ಷಕರು	02
4	ಸಹಾಯಕ ಫೋರ್ಮನ್ (ಮೆಕ್ಯಾನಿಕಲ್)	03	–	–	–

(III) ಜಿ–8 ದರ್ಜೆಯ ಹುದ್ದೆಗಳು, ವೇತನ ಶ್ರೇಣಿ:–ರೂ.20920–42660+ಅನ್ವಯಿಸುವ ಕೈಗಾರಿಕೆ ತುಟ್ಟಿ ಭತ್ಯೆ (ವೇತನ ಪರಿಷ್ಕರಣೆ 01.04.2021ರಿಂದ ಬಾಕಿಯಿರುತ್ತದೆ.).

ಕ್ರ.ಸಂ	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ	ಕ್ರ.ಸಂ.	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ
1	ಐ.ಟಿ.ಐ. ಫಿಟ್ಟರ್ ದರ್ಜೆ–II	33	3	ಸೆಕ್ಯುರಿಟಿ ಗಾರ್ಡ್	03
2	ಐ.ಟಿ.ಐ. ಎಲೆಕ್ಟ್ರಿಕಲ್ ದರ್ಜೆ–II	03	4	ನರ್ಸಿಂಗ್ ಏಡ್	01

ಸೂಚನೆ:

ಈ ಮೇಲೆ ತಿಳಿಸಿದ ಹುದ್ದೆಗಳಿಗೆ ನಿಗದಿಪಡಿಸಿದ ಮೀಸಲಾತಿ ವಿವರ, ವಿದ್ಯಾರ್ಹತೆ, ಆಯ್ಕೆಯ ಪ್ರಕ್ರೀಯೆ ವಿಧಾನ, ವಯೋಮಿತಿ, ಶುಲ್ಕ, ಷರತ್ತು ನಿಬಂಧನೆಗಳು ಹಾಗೂ ಇನ್ನಿತರ ಹೆಚ್ಚಿನ ವಿವರಗಳನ್ನು ಕಂಪನಿಯ ವೆಬ್‌ಸೈಟ್ https://huttigold.karnataka.gov.in ನಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಮೇಲಿನ ಹುದ್ದೆಗಳಿಗೆ ನೇಮಕಾತಿ ಬಯಸುವ ಅರ್ಹ ಅಭ್ಯರ್ಥಿಯು ತಮ್ಮ ವ್ಯಕ್ತಿಗತ ವಿವರ ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ಪ್ರಮಾಣ ಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, (ನಿಗದಿಪಡಿಸಿದ ನಮೂನೆಯಲ್ಲಿ), ಅಂಗವಿಕಲ ಅಭ್ಯರ್ಥಿ ಪ್ರಮಾಣ ಪತ್ರ, (ಸಕ್ಷಮ ಪ್ರಾಧಿಕಾರದಿಂದ), ಡಿಸ್‌ಚಾರ್ಜ್ ಪ್ರಮಾಣ ಪತ್ರ (ಮಾಜಿ ಸೈನಿಕನಾಗಿದ್ದಲ್ಲಿ), ನಿರಾಕ್ಷೇಪಣ ಪ್ರಮಾಣ ಪತ್ರ (ಸರ್ಕಾರಿ ನೌಕರರಾಗಿದ್ದಲ್ಲಿ) ಮತ್ತು ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ, ಇತ್ಯಾದಿ ಪ್ರತಿಗಳೊಂದಿಗೆ ಆನ್‌ಲೈನ್ ಅರ್ಜಿಯನ್ನು ದಿನಾಂಕ:10.06.2022 ಸಂಜೆ 4.00 ಗಂಟೆಯಿಂದ ದಿನಾಂಕ 09.07.2022 ರ ಸಂಜೆ 5.00 ಗಂಟೆಯೊಳಗಾಗಿ ಕಂಪನಿಯ ವೆಬ್‌ಸೈಟ್: https://huttigold.karnataka.gov.in ಮೂಲಕ ಸಲ್ಲಿಸಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

PUBLIC NOTICE
This is to inform public in general that Kotak Mahindra Bank Ltd has organized an auction in below mention respect of vehicles.

1. Piaggio Greaves - P_APE_MINI_GOODS, YOM – 2020 Reg No – KA51AG0598
2. CB_AL_DOST_LS_BS_III ASHOK_LEY, YOM – 2019 Reg No – KA53D7529
3. VOLVO EICHER - EICHER 10.75 BUS, YOM – 2017 Reg No – KA51AA8587
4. VOLVO EICHER - TATA_ACE ZIP_GOODS, YOM – 2018 Reg No – KA51AC6626
5. CB_MAHINDRA EXCELO BS4 31-SEATER BUS, YOM – 2017 Reg No – KA45A0995
6. CB_VE 10.75 Cab Chassis Passenger, YOM – 2018 Reg No – KA51AC6844
7. TATA - CB_TATA Magic YOM - 2018, Reg No – KA17D3468 Min Reserve Price – 2,08,000/-
8. CB_PC300_Exc, YOM – 2017 SL No – N300369 Min Reserve Price – 22,86,000/-
9. CB_MAHINDRA BLAZO25 FBT TIPPER, YOM– 2019 Reg No – KA22D2540 Min Reserve Price – 13,39,000/-
10. CB_JS205, YOM – 2019 SI No – NONREGPUNJD20BVJ2752290 Min Reserve Price – 21,17,000/-

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 03.06.2022

(Please note that closing Auction date would not be a Weekly Off / Holiday)

BRANCH ADDRESS: KOTAK MAHINDRA BANK LTD., 22, MG ROAD, BANGALORE KARNATAKA – 560001

OR

Contact: Pradeep. S
Kotak Mahindra Bank Ltd.
Contact / 080 - 61564249

ನಗರಸಭೆ ಕಾರ್ಯಾಲಯ, ಬೀದರ
ಸಂಖ್ಯೆ:ಬಿಎಂಸಿ/ಎನ್‌ಜಿ/ಸಿಆರ್–230/818/835/2021–22/06/29,30/2022–23 ದಿನಾಂಕ:01–06–2022.

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ / ಸರಕು / ಸೇವೆಯ ವಿವರ : DMA/2021-22/OW/WORK_INDENT129679/Call-2, DMA/2021-22/OW/WORK_INDENT129681/Call-2, DMA/2021-22/OW/WORK_INDENT129682/Call-2(FOR ST), DMA/2022-23/OW/WORK_INDENT132277 (FOR SC), DMA/2022-23/WS/WORK_INDENT132083, DMA/2021-22/WS/WORK_INDENT128416, DMA/2021-22/WS/WORK_INDENT128417, DMA/2021-22/WS/WORK_INDENT128419, DMA/2021-22/OW/WORK_INDENT128051/Call-2(FOR SC), DMA/2021-22/OW/WORK_INDENT128057/Call-2 DMA/2022-23/OW/WORK_INDENT132146, DMA/2022-23/OW/WORK_INDENT132147, BMC/ENG/CR-29/2022-23, BMC/ENG/CR-30/2022-23, DMA/2022-23/WS/WORK_INDENT 132268, 2) ಕಾಮಗಾರಿಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು 17-06-2022 upto 04.00 PM, 6) ಟೆಂಡರ ತೆರೆಯುವ ದಿನಾಂಕ : 18-06-2022 at 04.30 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಪೌರಾಯುಕ್ತರು, ನಗರಸಭೆ ಬೀದರ. ಇ–ಮೇಲ್: itstaff_ulb_bidar@yahoo.com 08482-240432, 8) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಪೌರಾಯುಕ್ತರು, ನಗರಸಭೆ ಬೀದರ

ವಾ.ಸಾ.ಸಂ.ಇ/ಬೀದರ/82/ಎಂಸಿ&ಎ/2022–23

‘ರೆಸ್ಟೋರೆಂಟ್‌ಗಳಲ್ಲಿ ಸೇವಾ ಶುಲ್ಕ ತಡೆಗೆ ಶೀಘ್ರದಲ್ಲೇ ನಿಯಮ ಜಾರಿ’

ನವದೆಹಲಿ (ಪಿಟಿಐ): ‘ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರಿಗೆ ಸೇವಾ ಶುಲ್ಕ ವಿಧಿಸುವುದನ್ನು ತಡೆಯಲು ಸರ್ಕಾರ ಶೀಘ್ರದಲ್ಲೇ ಕಟ್ಟುನಿಟ್ಟಾದ ನಿಯಮಗಳನ್ನು ರೂಪಿಸಲಿದೆ. ಈ ರೀತಿಯಲ್ಲಿ ಸೇವಾ ಶುಲ್ಕ ಪಡೆಯುವುದು ಗ್ರಾಹಕರಿಗೆ ಅನ್ಯಾಯ ಮಾಡಿದಂತಾಗುತ್ತದೆ’ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಗುರುವಾರ ಹೇಳಿದ್ದಾರೆ.

ರೆಸ್ಟೋರೆಂಟ್‌ಗಳ ಸಂಘಗಳ ಪ್ರತಿನಿಧಿಗಳು ಹಾಗೂ ಗ್ರಾಹಕರೊಂದಿಗೆ ಸಭೆ ನಡೆಸಿದ ನಂತರ ಸಿಂಗ್ ಅವರು, ‘ಈ ಪದ್ಧತಿ ಕಾನೂನುಬದ್ಧವಾಗಿದೆ ಎಂದು ಸಂಘಗಳು ಹೇಳಿಕೊಂಡರೂ ಗ್ರಾಹಕರ ಹಕ್ಕುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಗ್ರಾಹಕರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಶೀಘ್ರದಲ್ಲೇ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುತ್ತೇವೆ. 2017ರ ಮಾರ್ಗಸೂಚಿಗಳನ್ನು ರೆಸ್ಟೋರೆಂಟ್‌ಗಳು ಜಾರಿಗೊಳಿಸಿಲ್ಲ’ ಎಂದು ಹೇಳಿದರು.

ಭಾರತೀಯ ರಾಷ್ಟ್ರೀಯ ರೆಸ್ಟೋರೆಂಟ್ ಅಸೋಸಿಯೇಷನ್ (ಎನ್‌ಆರ್‌ಎಐ), ಫೆಡರೇಶನ್ ಆಫ್ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ಸ್ ಆಫ್ ಇಂಡಿಯಾ (ಎಫ್‌ಎಚ್‌ಆರ್‌ಎಐ) ಮತ್ತು ಮುಂಬೈ ಗ್ರಾಹಕ್ ಪಂಚಾಯತ್ ಹಾಗೂ ಪುಷ್ಪಾ ಗಿರಿಮಾಜಿ ಸೇರಿದಂತೆ ಗ್ರಾಹಕ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಉಗ್ರರ ಗುಂಡಿಗೆ ಮತ್ತೊಬ್ಬ ಹಿಂದೂ ಬಲಿ

ಒಂದನೇ ಪುಟದಿಂದ...

ಪರಾರಿಯಾಗುವವರಿಗೆ ತಡೆ: ಭದ್ರತೆ ಮತ್ತು ಸುರಕ್ಷಿತ ಸ್ಥಳಗಳಲ್ಲಿ ನಿಯೋಜನೆಯ ಭರವಸೆಯ ನಡುವೆಯೂ ಪಂಡಿತ ಸಮುದಾಯಕ್ಕೆ ಸೇರಿದ ಸರ್ಕಾರಿ ಉದ್ಯೋಗಿಗಳು ಕಾಶ್ಮೀರದಿಂದ ಪರಾರಿ ಆಗುತ್ತಿದ್ದಾರೆ. ಅವರೆಲ್ಲರೂ ಕುಟುಂಬದ ಜತೆಗೆ ಜಮ್ಮು ಕಡೆಗೆ ಸಾಗುತ್ತಿದ್ದಾರೆ.

ಆದರೆ, ಹೀಗೆ ಪರಾರಿಯಾಗುತ್ತಿರುವ ಪಂಡಿತರನ್ನು ಪೊಲೀಸರು ತಡೆದು ನಿಲ್ಲಿಸಿದ್ದಾರೆ ಎಂಬ ವರದಿಗಳಿವೆ. ‘ಶಿಬಿರಗಳಿಂದ ಕುಟುಂಬದ ಜತೆಗೆ ಹೊರಗೆ ಬರಲು ಕೂಡ ಅಧಿಕಾರಿಗಳು ಅವಕಾಶ ಕೊಡುತ್ತಿಲ್ಲ. ನಾವು ಕಾಶ್ಮೀರ ತೊರೆಯುತ್ತಿದ್ದೇವೆ ಎಂದು ಅಧಿಕಾರಿಗಳು ಭಾವಿಸಿದ್ದಾರೆ’ ಎಂದು ಸರ್ಕಾರದ ಇಲಾಖೆಯೊಂದರಲ್ಲಿ ಎಂಜಿನಿಯರ್ ಆಗಿರುವ ಅಶ್ವನಿ ಸಂಧು ಹೇಳಿದ್ದಾರೆ.

ಶಾ ಸಮಾಲೋಚನೆ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ರಾ ಮುಖ್ಯಸ್ಥ ಸಮಂತ್ ಗೋಯಲ್ ಅವರು ಗುರುವಾರ ಭೇಟಿಯಾಗಿ ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿದ್ದಾರೆ. ಈ ಬಗ್ಗೆ ಯಾವುದೇ ವಿವರಗಳನ್ನು ಬಹಿರಂಗ ಮಾಡಲಾಗಿಲ್ಲ. ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಗುಜರಾತ್‌ನಲ್ಲಿ ಶಿಕ್ಷಣ ಸಚಿವರ ಸಮಾವೇಶ

‘ಪಿಎಂ ಶ್ರೀ ಸ್ಕೂಲ್’ ಸ್ಥಾಪನೆಗೆ ಚಿಂತನೆ: ಸಚಿವ ಪ್ರಧಾನ್

ನವದೆಹಲಿ (ಪಿಟಿಐ): ‘ಭವಿಷ್ಯಕ್ಕಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ‘ಪಿಎಂ ಶ್ರೀ ಸ್ಕೂಲ್’ಗಳನ್ನು ಸ್ಥಾಪಿಸುವ ಚಿಂತನೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಇವು, ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಪ್ರಯೋಗಶಾಲೆಗಳು ಆಗಿರಲಿವೆ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.

ಗುಜರಾತ್‌ನಲ್ಲಿ ಶಿಕ್ಷಣ ಸಚಿವರ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಭಾರತವು ಜ್ಞಾನ ಆಧರಿತ ಆರ್ಥಿಕತೆಯನ್ನು ಹೊಂದಲು ಶಾಲಾ ಶಿಕ್ಷಣವೇ ಅಡಿಪಾಯ. ಹೀಗಾಗಿ, ಆಧುನಿಕ ಸೌಲಭ್ಯಗಳುಳ್ಳ ‘ಪಿಎಂ ಶ್ರೀ ಸ್ಕೂಲ್’ ಸ್ಥಾಪಿಸಲು ಚಿಂತನೆ ನಡೆದಿದೆ’ ಎಂದರು.

‘21ನೇ ಶತಮಾನದ ಜ್ಞಾನ, ಕೌಶಲಗಳನ್ನು ಹೊಸ ಪೀಳಿಗೆಗೆ ನಿರಾಕರಿಸಲಾಗದು. ‘ಪಿಎಂ ಶ್ರೀ ಸ್ಕೂಲ್’ ಸ್ವರೂಪದಲ್ಲಿ ಇಡೀ ಶಿಕ್ಷಣ ವ್ಯವಸ್ಥೆ ಭವಿಷ್ಯದ ಸೂಚ್ಯಂಕವಾಗಿ ಇರಬೇಕು. ಇದಕ್ಕಾಗಿ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ ಸಲಹೆ ಪಡೆಯಲು ಬಯಸುತ್ತೇನೆ’ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಕೇಂದ್ರ ಉದ್ದೇಶದೊಂದಿಗೆ ಗುಜರಾತ್‌ನಲ್ಲಿ ಎರಡು ದಿನಗಳ ಶಿಕ್ಷಣ ಸಚಿವರ ಸಮ್ಮೇಳನ ನಡೆಯಿತು.

ಪ್ರಾಥಮಿಕ ಹಂತದಿಂದ ಪ್ರೌಢ ಶಿಕ್ಷಣದರೆಗಿನ 5+3+3+4 ಹಂತದ ಎನ್‌ಇಪಿಯು ಶಿಕ್ಷಣ ಕ್ರಮವು ಬಾಲ್ಯ, ಶೈಕ್ಷಣಿಕ ಕಾರ್ಯಕ್ರಮ, ಶಿಕ್ಷಕರ ತರಬೇತಿ, ಪ್ರೌಢಶಿಕ್ಷಣ, ಸಮಗ್ರ ಕೌಶಲ ಅಭಿವೃದ್ಧಿಗೆ ಒತ್ತು ನೀಡಲಿದೆ. ಮಾತೃಭಾಷೆಯಲ್ಲಿಯೇ ಕಲಿಕೆಗೆ ಒತ್ತು ನೀಡಲಿದೆ ಎಂದು ಹೇಳಿದರು.

‘ಟಿಕೆಟ್ ಆಕಾಂಕ್ಷೆ ಇಲ್ಲ, ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ದುಡಿಯುವೆ’

ಹಾರ್ದಿಕ್ ಬಿಜೆಪಿಗೆ ಸೇರ್ಪಡೆ

ಗಾಂಧಿನಗರ (ಪಿಟಿಐ): ಎರಡು ವಾರಗಳ ಹಿಂದಷ್ಟೇ ಕಾಂಗ್ರೆಸ್ ತೊರೆದಿದ್ದ ಪಾಟೀದಾರ್ ಸಮುದಾಯದ ನಾಯಕ ಹಾರ್ದಿಕ್ ಪಟೇಲ್ ಅವರು ಗುರುವಾರ ಬಿಜೆಪಿಗೆ ಸೇರ್ಪಡೆ ಆದರು. ಗುಜರಾತ್ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಂತೆ ಈ ಬೆಳವಣಿಗೆ ನಡೆದಿದೆ.

ಗಾಂಧಿನಗರದಲ್ಲಿರುವ ಗುಜರಾತ್‌ನ ಬಿಜೆಪಿ ಘಟಕದ ಮುಖ್ಯ ಕಚೇರಿ ‘ಕಮಲಮ್’ನಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿ ಗುಜರಾತ್ ಘಟಕದ ಅಧ್ಯಕ್ಷ ಸಿ. ಆರ್. ಪಾಟೀಲ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ನಿತಿನ್ ಪಟೇಲ್ ಅವರು ಹಾರ್ದಿಕ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಹಾರ್ದಿಕ್ ಜೊತೆ ಕಾಂಗ್ರೆಸ್‌ನ ಮತ್ತೊಬ್ಬ ನಾಯಕಿ ಶ್ವೇತಾ ಬ್ರಹ್ಮಭಟ್ (35) ಅವರು ಕೂಡಾ ಬಿಜೆಪಿ ಸೇರಿದರು. ಶ್ವೇತಾ ಅವರು 2017ರ ವಿಧಾನಸಭೆ ಚುನಾವಣೆಯಲ್ಲಿ ಮಣಿನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು.

ಪಾಟೀದಾರ್ ನಾಯಕ ಹಾರ್ದಿಕ್ ಪಟೇಲ್ ಅವರು ಬಿಜೆಪಿಗೆ ಗುರುವಾರ ಸೇರ್ಪಡೆ ಆದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್, ಮಾಜಿ ಉಪಮುಖ್ಯಮಂತ್ರಿ ನಿತಿನ್ ಪಟೇಲ್ ಅವರು ಹಾರ್ದಿಕ್ ಅವರನ್ನು ಬರಮಾಡಿಕೊಂಡರು —ಪಿಟಿಐ ಚಿತ್ರ

ಆಡಳಿತಾರೂಢ ಬಿಜೆಪಿ ಸೇರಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಾರ್ದಿಕ್, ‘ಬಿಜೆಪಿಯು ರಾಷ್ಟ್ರದ ಹಿತಕ್ಕಾಗಿ ಕೆಲಸ ಮಾಡುತ್ತದೆ. ನಾನು ಟಿಕೆಟ್ ಆಕಾಂಕ್ಷಿ ಅಲ್ಲ. ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಮತ್ತು ಸೈನಿಕನಾಗಿ ಕೆಲಸ ಮಾಡುತ್ತೇನೆ. ಜನರ ಭಾವನೆಗಳನ್ನು ಕಾಂಗ್ರೆಸ್ ಗೌರವಿಸುವುದಿಲ್ಲ. ಬಿಜೆಪಿ ಸೇರಿ ದೇಶಕ್ಕೆ ಕೊಡುಗೆ ನೀಡುವಂತೆ ಇತರ ಪಕ್ಷಗಳ ಮುಖಂಡರಿಗೂ ನಾನು ಮನವಿ ಮಾಡಿದ್ದೇನೆ’ ಎಂದರು.

‘ನಿಮ್ಮ ಮೇಲಿರುವ ದೇಶದ್ರೋಹದ ಆರೋಪದಿಂದ ಬಿಡುಗಡೆ ಪಡೆಯಲು ಮತ್ತು ನೀವು ದೇಶಭಕ್ತ ಎಂದು ಸಾಬೀತುಪಡಿಸುವ ಸಲುವಾಗಿ ಬಿಜೆಪಿ ಸೇರಿದ್ದೀರಾ’ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾನು ಯಾವಾಗಲೂ ದೇಶಭಕ್ತನೇ ಮತ್ತು ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇನೆ. ಕಾಶ್ಮೀರದ ವಿಶೇಷ ಸ್ಥಾನ ರದ್ದುಪಡಿಸಿದ್ದಕ್ಕಾಗಿ ಮತ್ತು ರಾಮ ಮಂದಿರ ವಿಚಾರದಲ್ಲಿ ತೆಗೆದುಕೊಂಡ ನಿರ್ಣಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನಾನು ಕಾಂಗ್ರೆಸ್‌ನಲ್ಲಿ ಇದ್ದಾಗಲೂ ಹೊಗಳಿದ್ದೆ’ ಎಂದರು.

ಪಾಟೀದಾರ್ ಮೀಸಲಾತಿ ಹೋರಾಟದ ವೇಳೆ ಉಂಟಾದ ಸಾರ್ವಜನಿಕ ಆಸ್ತಿ ಹಾನಿ ಕುರಿತು ಕ್ಷಮೆ ಯಾಚಿಸುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಜನರಿಗಾಗಿ ಆ ಹೋರಾಟ ನಡೆಸಿದ್ದು. ಹಾಗಾಗಿ ಕ್ಷಮೆ ಯಾಚಿಸುವ ಪ್ರಶ್ನೆಯೇ ಇಲ್ಲ. ಈ ಹೋರಾಟದ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ 10ರಷ್ಟು ಮೀಸಲಾತಿ ನೀಡಿದ್ದಾರೆ’ ಎಂದರು.

> **ಕೋಟ್ಯಂತರ ಹಿಂದೂಗಳಿಗೆ ಸಂಬಂಧಿಸಿದ ಧಾರ್ಮಿಕ ವಿಚಾರಗಳಿಂದ ಕಾಂಗ್ರೆಸ್ ದೂರ ನಿಲ್ಲುತ್ತದೆ. ನಾನು ಕಾಂಗ್ರೆಸ್ ತೊರೆಯಲು ಇದೇ ಕಾರಣ**
> **ಹಾರ್ದಿಕ್ ಪಟೇಲ್,** ಬಿಜೆಪಿ ಮುಖಂಡ

ಪಾಟೀದಾರ್ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ 2015ರಲ್ಲಿ ನಡೆದಿದ್ದ ಹೋರಾಟವನ್ನು ಹಾರ್ದಿಕ್ ಅವರು ಮುನ್ನಡೆಸಿದ್ದರು. ಹೋರಾಟದ ವೇಳೆ ಸಾರ್ವಜನಿಕ ಆಸ್ತಿ ಪಾಸ್ತಿ ಹಾನಿ ಮತ್ತು ಜೀವಹಾನಿ ಆಗಿತ್ತು ಎಂಬ ಕಾರಣಕ್ಕೆ ಅವರ ವಿರುದ್ಧ ದೇಶದ್ರೋಹದ ಪ್ರಕರಣ ಸೇರಿ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿತ್ತು. 2019ರಲ್ಲಿ ಅವರು ಕಾಂಗ್ರೆಸ್ ಸೇರ್ಪಡೆ ಆಗಿದ್ದರು. ಕಳೆದ ಮೇ 18ರಂದು ಅವರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಗಾಯಕ ಕೆಕೆ ಅವರ ಪಾರ್ಥಿವ ಶರೀರವನ್ನು ಗುರುವಾರ ವರ್ಸೋವಾದ ರುದ್ರಭೂಮಿಗೆ ಮೆರವಣಿಗೆಯ ಮೂಲಕ ತರಲಾಯಿತು —ಪಿಟಿಐ ಚಿತ್ರ

ಗಾಯಕ ಕೆಕೆ ಅಂತ್ಯಕ್ರಿಯೆ

ಮುಂಬೈ(ಪಿಟಿಐ): ಬಾಲಿವುಡ್‌ನ ಖ್ಯಾತ ಗಾಯಕ ಕೃಷ್ಣಕುಮಾರ್ ಕುನ್ನತ್ (ಕೆಕೆ) ಅವರ ಅಂತ್ಯಕ್ರಿಯೆಯು ಮುಂಬೈನ ವರ್ಸೋವಾದ ಹಿಂದೂ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು.

ಕೆಕೆ ಅವರ ಪುತ್ರ ನಕುಲ್ ಅವರು ಅಂತಿಮ ವಿಧಿಯನ್ನು ಪೂರೈಸಿದರು. ಕುಟುಂಬದವರು ಹಾಗೂ ಚಿತ್ರರಂಗದಲ್ಲಿನ ಕೆಕೆ ಅವರ ಆಪ್ತರು ಈ ವೇಳೆ ಉಪಸ್ಥಿತರಿದ್ದರು.

ಗಾಯಕಿಯರಾದ ಶ್ರೇಯಾ ಘೋಶಾಲ್, ಅಲ್ಕಾ ಯಾಗ್ನಿಕ್ ಹಾಗೂ ಗಾಯಕರಾದ ರಾಹುಲ್ ವೈದ್ಯ, ಜಾವೇದ್ ಅಲಿ ಮತ್ತಿತರರು ಅಂತ್ಯಕ್ರಿಯೆಗೂ ಮುನ್ನ ಕೆಕೆ ಅವರ ನಿವಾಸಕ್ಕೆ ತೆರಳಿ ಅಂತಿಮ ನಮನ ಸಲ್ಲಿಸಿದರು.

‘ಸಮಯಕ್ಕೆ ಸರಿಯಾಗಿ ಸಿಪಿಆರ್ ನೀಡಿದ್ದರೆ ಉಳಿಸಬಹುದಿತ್ತು’ (ಕೋಲ್ಕತ್ತ ವರದಿ): ಕೆಕೆ ಅವರ ಹೃದಯದ ಎಡ ಮುಖ್ಯ ಪರಿಧಮನಿಯಲ್ಲಿ ಶೇ80ರಷ್ಟು ಹಾಗೂ ಇತರ ಅಪಧಮನಿಗಳಲ್ಲೂ ರಕ್ತದ ಹರಿವಿಗೆ ತಡೆಯುಂಟಾಗಿತ್ತು, ಸರಿಯಾದ ಸಮಯಕ್ಕೆ ಸಿಪಿಆರ್ (ಶ್ವಾಸಕೋಶದ ಭಾಗದಲ್ಲಿ ಲಯಬದ್ಧವಾಗಿ ಒತ್ತಡ ಹಾಕುವುದರಿಂದ) ನೀಡಿದ್ದರೆ ಅವರನ್ನು ಉಳಿಸಬಹುದಿತ್ತು ಎಂದು ಶವಪರೀಕ್ಷೆ ನಡೆಸಿದ ವೈದ್ಯರು ತಿಳಿಸಿದ್ದಾರೆ.

ಕೋಲ್ಕತ್ತದಲ್ಲಿ ಮಂಗಳವಾರ ರಾತ್ರಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹೋಟೆಲ್‌ಗೆ ತೆರಳಿದ ಬಳಿಕ ಕೆಕೆ ಅವರ ಆರೋಗ್ಯದಲ್ಲಿ ಏರುಪೇರಾಗಿತ್ತು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತಾದರೂ, ಆಸ್ಪತ್ರೆಗೆ ತಲುಪುವ ಮುನ್ನವೇ ಅವರು ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಮೊದಲ ರ‍್ಯಾಂಕ್ ಪಡೆದ ಶ್ರುತಿಗೆ ಶೇ 54.56ರಷ್ಟು ಅಂಕ

ನವದೆಹಲಿ: ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಪಡೆದಿರುವ ಶ್ರುತಿ ಶರ್ಮಾ ಅವರು ಶೇ 54.56ರಷ್ಟು ಹಾಗೂ ದ್ವಿತೀಯ ರ‍್ಯಾಂಕ್ ಪಡೆದಿರುವ ಅಂಕಿತಾ ಅಗರವಾಲ್ ಅವರು ಶೇ 51.85ರಷ್ಟು ಅಂಕ ಗಳಿಸಿದ್ದಾರೆ ಎಂದು ಯುಪಿಎಸ್‌ಸಿ ಹೇಳಿದೆ.

ಶ್ರುತಿ ಅವರು ಒಟ್ಟು 1,105 ಅಂಕ (ಲಿಖಿತ ಪರೀಕ್ಷೆಯಲ್ಲಿ 932 ಹಾಗೂ ಸಂದರ್ಶನದಲ್ಲಿ 173 ಅಂಕ) ಹಾಗೂ ಅಂಕಿತಾ ಅವರು ಒಟ್ಟು 1,050 ಅಂಕ (ಲಿಖಿತ ಪರೀಕ್ಷೆಯಲ್ಲಿ 871 ಮತ್ತು ಸಂದರ್ಶನದಲ್ಲಿ 179 ಅಂಕ) ಗಳಿಸಿದ್ದಾರೆ ಎಂದು ಯುಪಿಎಸ್‌ಸಿ ತಿಳಿಸಿದೆ.

ಮೂರನೇ ರ‍್ಯಾಂಕ್ ಪಡೆದಿರುವ ಗಾಮಿನಿ ಸಿಂಗ್ಲಾ ಒಟ್ಟು 1,045 ಅಂಕ (ಮುಖ್ಯ ಪರೀಕ್ಷೆಯಲ್ಲಿ 858 ಹಾಗೂ ಸಂದರ್ಶನದಲ್ಲಿ 187 ಅಂಕ) ಗಳಿಸಿದ್ದಾರೆ ಎಂದು ಯುಪಿಎಸ್‌ಸಿ ತಿಳಿಸಿದೆ.

ಕರಾವಳಿ: ಮುಂದಿನ ಐದು ದಿನ ಮಳೆ?

ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ಮಾರುತಗಳು ಚುರುಕುಗೊಂಡಿದ್ದು, ಕರ್ನಾಟಕದ ಕರಾವಳಿ, ಉತ್ತರ ಒಳನಾಡು ಹಾಗೂ ಕೇರಳ, ಮಾಹೆ, ಮತ್ತು ಲಕ್ಷದ್ವೀಪದಲ್ಲಿ ಮುಂದಿನ ಐದು ದಿನ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ಐದು ದಿನ ಕಾಲ ಕರ್ನಾಟಕದ ಉತ್ತರ ಒಳನಾಡು ಭಾಗ ಸೇರಿದಂತೆ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಪುದುಚೇರಿ, ಕರೈಕಲ್ ಭಾಗದಲ್ಲಿ ಮಳೆಯಾಗಲಿದೆ.

ಇಲಾಖೆಯು ಮುಂಗಾರು ಅಂದಾಜಿನ ಪ್ರಕಾರ, ಈಶಾನ್ಯ ರಾಜ್ಯಗಳ ಕೆಲ ಭಾಗ ಹೊರತುಪಡಿಸಿ ದೇಶದಾದ್ಯಂತ ಈ ಬಾರಿ ಬಹುತೇಕ ಉತ್ತಮವಾಗಿ ಮುಂಗಾರು ಮಳೆ ಇರಲಿದೆ. ಈ ಬಾರಿ ಕೇರಳವನ್ನು ಮುಂಗಾರು ಮೇ 29ರಂದೇ ಪ್ರವೇಶಿಸಲಿದೆ ಎಂದೇ ಅಂದಾಜು ಮಾಡಿತ್ತು. ಆದರೆ, ಸಾಮಾನ್ಯ ಮುಂಗಾರು ಜೂನ್ 1ರಂದು ಕೇರಳವನ್ನು ಪ್ರವೇಶಿಸಿತ್ತು.

ರಾಜ್ಯಸಭಾ ಚುನಾವಣೆ: ರಾಜಸ್ಥಾನ, ಹರಿಯಾಣ ಕಾಂಗ್ರೆಸ್ ಶಾಸಕರ ಸ್ಥಳಾಂತರ

ಮುನ್ನೆಲೆಗೆ ಬಂದ ‘ರೆಸಾರ್ಟ್ ತಂತ್ರಗಾರಿಕೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆಯೇ ಮತ್ತೆ ‘ರೆಸಾರ್ಟ್’ಗಳಿಗೆ ಶಾಸಕರನ್ನು ಕರೆದೊಯ್ಯುವ ‘ತಂತ್ರಗಾರಿಕೆ’ ಮುನ್ನೆಲೆಗೆ ಬಂದಿದೆ.

ಚುನಾವಣೆಗೂ ಮುನ್ನ ತಮ್ಮ ಶಾಸಕರನ್ನು ‘ಖರೀದಿಸುವ’ ಯತ್ನಗಳ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಕಾಂಗ್ರೆಸ್, ರಾಜಸ್ಥಾನ ಹಾಗೂ ಹರಿಯಾಣದ ತನ್ನ ಶಾಸಕರನ್ನು ‘ಸುರಕ್ಷಿತ ಜಾಗ’ಗಳಿಗೆ ಕರೆದೊಯ್ದಿದೆ.

ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು ಆಮಿಷವೊಡ್ಡುವ ಮೂಲಕ ಪಕ್ಷದ ಶಾಸಕರ ಬೆಂಬಲ ಪಡೆಯಲಿದ್ದಾರೆ ಎಂಬ ಸಂಶಯವೂ ಕಾಂಗ್ರೆಸ್ ವರಿಷ್ಠರ ಈ ನಡೆಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಮೂವರು ಶಾಸಕರು ಹಾಗೂ ಶಾಸಕಾಂಗ ಪಕ್ಷದ ನಾಯಕ ಭೂಪೀಂದರ್ ಹೂಡಾ ಅವರನ್ನು ಹೊರತುಪಡಿಸಿ, ಹರಿಯಾಣದ 27 ಶಾಸಕರನ್ನು ಛತ್ತೀಸಗಡದ ರಾಯಪುರಕ್ಕೆ ಸ್ಥಳಾಂತರಿಸಲಾಗಿದೆ. ಪಕ್ಷದ ರಾಜಸ್ಥಾನ ಘಟಕವು ಪಕ್ಷೇತರರು ಸೇರಿದಂತೆ ಇತರ 40 ಶಾಸಕರನ್ನು ಜೈಪುರದಿಂದ ಉದಯಪುರಕ್ಕೆ ಕರೆದೊಯ್ದಿದೆ.

ರಾಯಪುರಕ್ಕೆ ಕರೆದೊಯ್ಯುವ ಮುನ್ನ ಹೂಡಾ ಅವರು ನವದೆಹಲಿಯಲ್ಲಿ ಹರಿಯಾಣದ ಎಲ್ಲ ಶಾಸಕರ ಸಭೆ ನಡೆಸಿದ್ದರು. ಆದರೆ, ಪಕ್ಷದ ನಾಯಕರೊಂದಿಗೆ ಮುನಿಸಿಕೊಂಡಿರುವ ಕುಲದೀಪ್ ಬಿಷ್ಣೋಯ್ ಹಾಗೂ ಕಿರಣ್ ಚೌಧರಿ ಅವರು ಸಭೆಯಿಂದ ದೂರ ಉಳಿದಿದ್ದರು.

ಮತ್ತೊಬ್ಬ ಶಾಸಕ ಚಿರಂಜೀವಿ ರಾವ್ ಅವರು ತಮ್ಮ ಜನ್ಮದಿನ ಆಚರಿಸಿಕೊಳ್ಳುವ ಸಲುವಾಗಿ ಕುಟುಂಬದೊಂದಿಗೆ ಶಿಮ್ಲಾಕ್ಕೆ ತೆರಳಿದ್ದರು. ಆದರೆ, ಅಲ್ಲಿಂದ ಮರಳಿದ ನಂತರ, ರಾಯಪುರದಲ್ಲಿ ಉಳಿದ ಶಾಸಕರನ್ನು ಸೇರುವುದಾಗಿ ವರಿಷ್ಠರಿಗೆ ತಿಳಿಸಿದ್ದರು ಎಂದು ಮೂಲಗಳು ಹೇಳಿವೆ.

ಸಭೆಯ ನಂತರ, ಹೂಡಾ ಅವರ ಪುತ್ರ ಹಾಗೂ ರಾಜ್ಯಸಭಾ ಸದಸ್ಯ ದೀಪೇಂದರ್ ಹೂಡಾ ಅವರು ಎಲ್ಲ ಶಾಸಕರನ್ನು ಬಾಡಿಗೆ ವಿಮಾನದ ಮೂಲಕ ರಾಯಪುರಕ್ಕೆ ಕರೆದುಕೊಂಡು ಹೋದರು.

ಹರಿಯಾಣದಿಂದ ಹಿರಿಯ ಮುಖಂಡ ಅಜಯ ಮಾಕೆನ್ ಕಣಕ್ಕಿಳಿದಿದ್ದಾರೆ. ಇಲ್ಲಿ ಕಾಂಗ್ರೆಸ್ 31 ಶಾಸಕರನ್ನು ಹೊಂದಿದ್ದು, ಮಾಕೆನ್ ಗೆಲುವಿಗೆ 30 ಮತಗಳು ಬೇಕು. ಹೀಗಾಗಿ ಮಾಕೆನ್ ಗೆಲುವು ಸುಲಭ ಎಂದಿಕೊಂಡಿದ್ದ ಕಾಂಗ್ರೆಸ್‌ಗೆ, ಬಿಜೆಪಿಯಿಂದ ಕಣಕ್ಕಿಳಿದಿರುವ ಮಾಧ್ಯಮ ಕ್ಷೇತ್ರದ ಉದ್ಯಮಿ ಕಾರ್ತಿಕೇಯ ಶರ್ಮಾ ಆತಂಕ ಮೂಡಿಸಿದ್ದಾರೆ.

ಶರ್ಮಾ ಅವರ ಗೆಲುವಿಗೆ ಮೂರರಿಂದ ನಾಲ್ಕು ಮತಗಳು ಬೇಕು. ಈ ಮತಗಳನ್ನು ಕಾಂಗ್ರೆಸ್ ಪಾಳೆಯದಿಂದ ಪಡೆಯುವಲ್ಲಿ ಶರ್ಮಾ ಸಫಲರಾದರೆ ಆಗ ಮಾಕೆನ್‌ಗೆ ತೀವ್ರ ಹಿನ್ನಡೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅರಾವಲಿ ರೆಸಾರ್ಟ್‌ಗೆ ಶಾಸಕರು

ಕಳೆದ ಬಾರಿ ಪಕ್ಷದ ಚಿಂತನ ಶಿಬಿರ ನಡೆದಿದ್ದ ಅರಾವಲಿ ರೆಸಾರ್ಟ್‌ಗೆ ರಾಜಸ್ಥಾನದ ಶಾಸಕರನ್ನು ಸ್ಥಳಾಂತರಿಸಲಾಗಿದೆ.

ಇಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲುವ ವಿಶ್ವಾಸದಲ್ಲಿ ಕಾಂಗ್ರೆಸ್ ಇದೆ. ಆದರೆ, ಹಾಲಿ ರಾಜ್ಯಸಭಾ ಸದಸ್ಯ ಸುಭಾಷ್ ಚಂದ್ರ ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು, ಅವರನ್ನು ಬಿಜೆಪಿ ಬೆಂಬಲಿಸಿದೆ.

ಚಂದ್ರ ಅವರು ಪಕ್ಷೇತರರಲ್ಲದೇ, ಇತರ ಶಾಸಕರ ಬೆಂಬಲ ಪಡೆಯುವ ಕಸರತ್ತು ನಡೆಸಿದ್ದಾರೆ. ಹೀಗಾಗಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮೂರನೇ ಅಭ್ಯರ್ಥಿಯ ಗೆಲುವಿಗೆ ಇವರು ಅಡ್ಡಿಯಾದರೂ ಅಚ್ಚರಿಯಿಲ್ಲ ಎನ್ನಲಾಗುತ್ತಿದೆ.

ನಾಲ್ಕರ ಪೈಕಿ ಮೂರು ಸ್ಥಾನಗಳನ್ನು ಪಕ್ಷ ಗೆಲ್ಲಲಿದೆ ಎಂದು ಮುಖ್ಯಮಂತ್ರಿ ಅಶೋಕ ಗೆಹಲೋತ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆ; ಪ್ರಶಸ್ತಿ ವಾಪಸಾತಿ ಪ್ರತಿಭಟನೆಯ ಇನ್ನೊಂದು ರೂಪ: ಎಸ್.ಎಲ್. ಭೈರಪ್ಪ

‘ಮಕ್ಕಳಿಗೆ ಸತ್ಯ ಕಲಿಸಿ, ಐಡಿಯಾಲಜಿ ಅಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸತ್ಯವನ್ನು ಹುಡುಕಿ ಪಠ್ಯಕ್ರಮದಲ್ಲಿ ಅಳವಡಿಸಿ ಮಕ್ಕಳಿಗೆ ಕಲಿಸಬೇಕೇ ಹೊರತು, ಐಡಿಯಾಲಜಿಗಳನ್ನು ಕಲಿಸಬಾರದು’ ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಗುರುವಾರ ಪ್ರತಿಪಾದಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಪಠ್ಯಕ್ರಮ ಪರಿಷ್ಕರಣೆ ಕುರಿತು ಕೆಲವರ ಗಲಾಟೆ, ತಗಾದೆಗಳಿಂದ ಸರ್ಕಾರದ ಮೇಲೆ ಸಹಜವಾಗಿಯೇ ಒತ್ತಡ ಹೆಚ್ಚಿದೆ’ ಎಂದು ಹೇಳಿದರು.

‘ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಮನೆಗೆ ಕೆಲವರು ಬೆಂಕಿ ಹಚ್ಚುವುದನ್ನು ಪೊಲೀಸರು ತಪ್ಪಿಸಿದ್ದಾರೆ. ಬೆಂಬಲವಿದ್ದವರೇ ಬೆಂಕಿ ಹಚ್ಚುವ ಕೆಲಸ ಮಾಡಿದ್ದಾರೆ. ಹೀಗಾದರೆ, ದೇಶದಲ್ಲಿ ಏಕತೆ ಬರುವುದು ಯಾವಾಗ? ನಮ್ಮ ಸ್ವಾತಂತ್ರ್ಯ ಉಳಿಸಿಕೊಳ್ಳುವುದು ಯಾವಾಗ’ ಎಂದರು.



ಪ್ರಜಾಪ್ರಭುತ್ವದಲ್ಲಿ ಚುನಾವಣೆ ಸಮೀಪಿಸಿದಾಗ ಏನನ್ನು ಬೇಕಾದರೂ ಮಾಡುತ್ತೇವೆ. ಹೆತ್ತ ತಾಯಿಯನ್ನೂ ಕೂಡ ಜುಟ್ಟು ಹಿಡಿದು ಕೊಟ್ಟು ಬಿಡುತ್ತೇವೆ

ಎಸ್.ಎಲ್. ಭೈರಪ್ಪ ಕಾದಂಬರಿಕಾರ

‘ಮೋದಿ ಪ್ರಧಾನಿಯಾದ ನಂತರ ನಡೆದಿದ್ದ ಪ್ರಶಸ್ತಿ ವಾಪಸ್ ಚಳವಳಿ ಚಳವಳಿ ಏನಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಪಠ್ಯ ವಾಪಸ್ ಅದರ ಇನ್ನೊಂದು ರೂಪವಷ್ಟೆ. ಪ್ರಶಸ್ತಿ ವಾಪಸು ನೀಡುವವರು ಪ್ರಶಸ್ತಿ ಹಣವನ್ನೂ ವಾಪಸು ಕೊಡಬೇಕೆಂದು ಆಗ ಪ್ರತಿಪಾದಿಸಿದ್ದೆ’ ಎಂದರು.

‘ಯಾವುದು ಪರಿಪೂರ್ಣ?’

‘ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಗೆಸಂಬಂಧಿಸಿದ ಸಂಸ್ಥೆಯಲ್ಲೇ ಕೆಲಸ ಮಾಡಿದವ ನಾನು. ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು, ಪಠ್ಯಕ್ರಮ ಪರಿಷ್ಕರಣೆ, ರಾಷ್ಟ್ರೀಯ ಏಕತೆಗೆ ಮುಂದಾಗಿ ಗಾಂಧಿ ಕುಟುಂಬಕ್ಕೆ ಆಪ್ತರಾಗಿದ್ದ ಪಾರ್ಥಸಾರಥಿ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ನನ್ನನ್ನೂ ಸೇರಿಸಿ ಐವರು ಸದಸ್ಯರ ಸಮಿತಿ ರಚಿಸಿದ್ದರು’.

‘ನಮ್ಮ ಪಠ್ಯಕ್ರಮ ಕಲುಷಿತವಾಗಿದ್ದು, ಸ್ವಚ್ಛಗೊಳಿಸಬೇಕಾಗಿದೆ’ ಎಂದು ಪಾರ್ಥಸಾರಥಿ ಹೇಳಿದ್ದರು. ಹಾಗೆಂದರೇನು ಎಂದು ಕೇಳಿದ್ದೆ. ಔರಂಗಜೇಬ್ ದೇಗುಲ ಕೆಡವಿದ, ಕಾಶಿಯಲ್ಲಿ ಮಸೀದಿ ಕಟ್ಟಿದ ಎಂದೆಲ್ಲಾ ಪಠ್ಯದಲ್ಲಿದೆ; ಅವನ್ನೆಲ್ಲ ತೆಗೆಯಬೇಕು. ಮಕ್ಕಳ ಮನಸ್ಸಿನಲ್ಲಿ ಅವೆಲ್ಲವನ್ನು ಬಿತ್ತುವುದು ಬೇಕಾ ಎಂದು ಕೇಳಿದ್ದರು. ಮಸೀದಿ ಎದುರಿನ ಬಸವಣ್ಣ ಮೂರ್ತಿ ಮಸೀದಿ ನೋಡುತ್ತಾ ಕುಳಿತಿದ್ದರೆ ಅಲ್ಲಿ ದೇವಸ್ಥಾನವಿತ್ತು ಎಂದೇ ಅರ್ಥ ಎಂದು ತಿಳಿಸಿದ್ದೆ. ನನ್ನ ಪ್ರಶ್ನೆಗೆ ಉತ್ತರಿಸಲು ಅವರಿಗೆ ಆಗಿರಲಿಲ್ಲ. ಅದಾಗಿ 15 ದಿನದಲ್ಲಿ ಸಮಿತಿಯಿಂದ ನನ್ನನ್ನು ತೆಗೆದು ಕಟ್ಟಾ ಕಮ್ಯುನಿಸ್ಟ್ ಒಬ್ಬರನ್ನು ಹಾಕಿದ್ದರು. ಬಳಿಕ ಪಠ್ಯಕ್ರಮ ಪರಿಷ್ಕರಿಸಲಾಯಿತು. ಹೀಗಾದಾಗ, ಯಾವ ಪಠ್ಯಕ್ರಮ ಪರಿಪೂರ್ಣ (ಐಡಿಯಲ್) ಅಥವಾ ಪ್ರಾಮಾಣಿಕ ಎನ್ನುವ ಪ್ರಶ್ನೆ ಬರುತ್ತದೆ’ ಎಂದರು.

‘ಪಠ್ಯ ಪರಿಷ್ಕರಣೆ ಅಥವಾ ಈಗ ಸೇರಿಸಿರುವ ಪಠ್ಯವನ್ನು ವಾಪಸ್ ಪಡೆಯಬೇಕೋ, ಬೇಡವೋಎಂಬ ವಿಷಯದಲ್ಲಿ ಯಾವ ಸಲಹೆಯನ್ನೂ ಕೊಡುವುದಿಲ್ಲ’ ಎಂದಷ್ಟೆ ಪ್ರತಿಕ್ರಿಯಿಸಿದರು.

‘ಅವಮಾನಿಸಿದ್ದರೆ ಕ್ರಮ ಜರುಗಿಸಿ’

ಬೆಂಗಳೂರು: ‘ಬಸವಣ್ಣ ಹಾಗೂ ಕುವೆಂಪು ಅವರು ಕರ್ನಾಟಕದ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮೇರುಪ್ರಜ್ಞೆಗಳು. ಅವರಿಗೆ ಅವಮಾನಮಾಡುವುದೆಂದರೆ ಆಕಾಶಕ್ಕೆ ಮಸಿ ಬಳಿಯಲು ಪ್ರಯತ್ನಿಸಿದಂತೆ. ಒಂದು ವೇಳೆ ಅವಮಾನ ಆಗಿದ್ದರೆ ಅವಮಾನ ಮಾಡಿದವರ ಮೇಲೆ ಸರ್ಕಾರ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಬೇಕು’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತ ಕುಮಾರ್ ತಿಳಿಸಿದ್ದಾರೆ.

‘ಸಚಿವ ಬಿ.ಸಿ. ನಾಗೇಶ್ ಮನೆಯ ಮೇಲಿನ ದಾಳಿ ನಡೆಸಿರುವುದು ಖಂಡನೀಯ’ ಎಂದು ತಿಳಿಸಿರುವ ಅವರು, ‘ತಿಪಟೂರಿನ ಘಟನೆ ಗಮನಿಸಿದರೆ ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ವಿರೋಧದ

ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಗುಜರಾತ್‌ಗೆ ಹೋಗಿದ್ದು, ಅವರ ಬಂದ ಮೇಲೆ ಪಠ್ಯಪುಸ್ತಕ ಗೊಂದಲದ ಬಗ್ಗೆ ವರದಿ ಪಡೆದು ತೀರ್ಮಾನ ತೆಗೆದುಕೊಳ್ಳುತ್ತೇನೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಹಿಂದೆ ಶೈಕ್ಷಣಿಕ ಆಸಕ್ತಿಯಿಲ್ಲ. ಆರೆಸ್ಸೆಸ್ ಮತ್ತು ಬ್ರಾಹ್ಮಣರನ್ನು ವಿರೋಧಿಸುವ, ಲಿಂಗಾಯತ ಹಾಗೂ ಒಕ್ಕಲಿಗರನ್ನು ಎತ್ತಿಕಟ್ಟುವ ರಾಜಕೀಯ ಆಸಕ್ತಿಯಿದೆ. ಹಿಂದಿನ ವೀರಶೈವ-ಲಿಂಗಾಯತ ಹೋರಾಟ ಹಾಗೂ ಆರ್ಯ- ದ್ರಾವಿಡ ಹೋರಾಟವನ್ನು ಮುನ್ನೆಲೆಗೆ ತರುವ ಸಾಂಸ್ಕೃತಿಕ ವೇಷದ ರಾಜಕೀಯ ವಾಸನೆಯನ್ನು ಜನಸಾಮಾನ್ಯರು ಗ್ರಹಿಸುತ್ತಿದ್ದಾರೆ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

‘ಆರೆಸ್ಸೆಸ್ ಬಗ್ಗೆ ಎಲ್ಲರಿಗೂ ಭಯ’

ಬೆಂಗಳೂರು: ‘‘ಆರೆಸ್ಸೆಸ್ ಕಂಡರೆ ನನಗೆ ಭಯ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಹೇಳಿರುವುದು ನೂರಕ್ಕೆ ನೂರರಷ್ಟು ಸತ್ಯ. ನನಗೆ ಮಾತ್ರವಲ್ಲ ಜಾತ್ಯತೀತತೆ, ಸೌಹಾರ್ದ, ಅಹಿಂಸೆಯ ಮೇಲೆ ನಂಬಿಕೆ ಇಟ್ಟಿರುವ ಎಲ್ಲರಿಗೂ ಆರ್‌ಎಸ್‌ಎಸ್ ಕಂಡರೆ ಭಯ ಇದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ಕುಟುಕಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಆರೆಸ್ಸೆಸ್ ಕಂಡರೆ ಸಿದ್ದರಾಮಯ್ಯಗೆ ಭಯ’ ಸುದ್ದಿ ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಅವರು, ‘ಭಯ ಹುಟ್ಟಿಸುವವರನ್ನು ಸಾಮಾನ್ಯ

ಭಾಷೆಯಲ್ಲಿ ಭಯೋತ್ಪಾದಕರು ಎನ್ನಲಾಗುತ್ತಿದೆ. ಡಿ.ವಿ. ಸದಾನಂದ ಗೌಡರು ಯಾಕೆ ತಮ್ಮ ಮಾತೃಸಂಸ್ಥೆ ಮೇಲೆ ಈ ರೀತಿಯ ಆರೋಪ ಮಾಡುತ್ತಿದ್ದಾರೆ ಎನ್ನುವುದನ್ನು ಅವರೇ ಹೇಳಬೇಕು’ ಎಂದಿದ್ದಾರೆ.

‘ಆರೆಸ್ಸೆಸ್ ಬಗೆಗಿನ ಭಯದ ಕಾರಣದಿಂದಾಗಿಯೇ ಮಹಾತ್ಮ ಗಾಂಧೀಜಿಯವರ ಹತ್ಯೆಯ ನಂತರ ಆರೆಸ್ಸೆಸ್ ಮೇಲೆ ದೇಶದ ಮೊದಲ ಗೃಹ ಸಚಿವ ವಲ್ಲಭಭಾಯಿ ಪಟೇಲ್ ನಿಷೇಧ ಹೇರಿದ್ದು ಎನ್ನುವುದು ನೆನಪಿರಲಿ’ ಎಂದಿದ್ದಾರೆ.

‘ಯಾವುದೇ ವ್ಯಕ್ತಿ, ಸಿದ್ಧಾಂತ, ಸಂಸ್ಥೆ ಇತರರಲ್ಲಿ ಗೌರವ ಹುಟ್ಟಿಸಬೇಕೇ ಹೊರತು ಭಯ ಹುಟ್ಟಿಸುವುದಲ್ಲ. ಈ ಬಗ್ಗೆ ಆತ್ಮಾವಲೋಕನ ಮಾಡಬೇಕಾದವರು ಭಯವನ್ನು ಉತ್ಪಾದಿಸುವವರೇ ಹೊರತು ಭಯ ಪಡುವವರಲ್ಲ. ಆರೆಸ್ಸೆಸ್ ಉನ್ನತ ಪದಾಧಿಕಾರ ಯಾಕೆ ಒಂದು ಜಾತಿಗೆ ಸೀಮಿತವಾಗಿದೆ ಎನ್ನುವ ನನ್ನ ಪ್ರಶ್ನೆಗೆ ಯಾಕೆ, ಯಾರೂ ಉತ್ತರಿಸುತ್ತಿಲ್ಲ’ ಎಂದೂ ಪ್ರಶ್ನಿಸಿದ್ದಾರೆ.

‘ಪಠ್ಯಪುಸ್ತಕ ಸಮಿತಿ ವಿಸರ್ಜಿಸಿ’

ಬೆಂಗಳೂರು: ಕರ್ನಾಟಕ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದಷ್ಟೇ ತರಾತುರಿಯಲ್ಲಿ ಶಾಲಾ ಪಠ್ಯಪುಸ್ತಕಗಳ ಮರುಪರಿಷ್ಕರಣೆಯನ್ನೂ ಮಾಡಿರುವುದನ್ನು ಕರ್ನಾಟಕ ರಾಜ್ಯ ಪಿಎಚ್.ಡಿ ಸಂಶೋಧನಾರ್ಥಿಗಳ ಬಳಗ ಟೀಕಿಸಿದ್ದು, ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯನ್ನು ತಕ್ಷಣವೇ ವಿಸರ್ಜಿಸಬೇಕು ಎಂದು ಆಗ್ರಹಿಸಿದೆ.

ಯಾವುದೇ ಪಠ್ಯಪುಸ್ತಕದಲ್ಲಿ ಸಾಮಾಜಿಕ ನ್ಯಾಯ ಮತ್ತು ಲಿಂಗ ಸಮಾನತೆಯ ಆಶಯಗಳು ಮೌಲ್ಯವಾಗಿ ಹುದುಗಿರಬೇಕು. ಭಾರತೀಯ ಸಂವಿಧಾನವೇ ಪ್ರತಿಪಾದಿಸಿರುವ ಈ ಮೌಲ್ಯಗಳನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯು ‘ತುರುಕುವುದು’ ಎಂದು ಹೇಳುತ್ತಿದೆ. ಈ ಪದಪ್ರಯೋಗವೇ ಸಮಿತಿಯ ಸದಸ್ಯರು ಸಂವಿಧಾನದ ಮೂಲಭೂತ ಆಶಯಗಳನ್ನೇ ವ್ಯಂಗ್ಯವಾಡಿದ್ದಾರೆ ಎಂಬುದನ್ನು ಹೇಳುವಂತಿದೆ ಎಂದು ಪ್ರತಿಕ್ರಿಯಿಸಿದೆ.

ಹತ್ತನೆ ತರಗತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದ ತಮ್ಮ ದಿಕ್ಸೂಚಿ ಬರೆಹದಲ್ಲಿ ‘ಭಾಷಾಪಠ್ಯವಿರುವುದು ಸಾಮಾಜಿಕ ನ್ಯಾಯ, ಲಿಂಗ ಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ’ ಎಂದು ಹೇಳಲಾಗಿರುವುದನ್ನು ಉದಾಹರಿಸಿ, ಅದನ್ನೇ ಈಗ ವ್ಯಂಗ್ಯರೂಪದಲ್ಲಿ ಜಾರಿಗೆ ತರಲಾಗಿದೆ ಎಂದು ಬಳಗ ದೂರಿದೆ. ಪಠ್ಯಪುಸ್ತಕ ಪ್ರಕರಣದಿಂದ ವ್ಯಾಪಕ ಜನಾಕ್ರೋಶಕ್ಕೆ ಗುರಿಯಾಗಿರುವ ಕರ್ನಾಟಕ ಸರ್ಕಾರವು ಪಠ್ಯ ಪುನರ್ ಪರಿಷ್ಕರಣಾ ಸಮಿತಿಯನ್ನು ತಕ್ಷಣವೇ ವಿಸರ್ಜಿಸಬೇಕು’ ಎಂದು ಆಗ್ರಹಪಡಿಸಿದ್ದಾರೆ.



ನಾಡಿಗೆ ಕೇಡಿನ ಲಕ್ಷಣ: ದೇವನೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಷ್ಕೃತ ಪಠ್ಯಪುಸ್ತಕದ ಬಗೆಗಿನ ಭಿನ್ನಾಭಿಪ್ರಾಯಗಳನ್ನು ಟೂಲ್‌ಕಿಟ್ ಎಂದು ರಾಜಕೀಯಗೊಳಿಸಿ ಪರಾರಿಯಾಗಲು ನೋಡುವುದು ಹಾಗೂ ನಾಡಿನ ಗಣ್ಯರು, ಮಠಾಧಿಪತಿಗಳು, ಲೇಖಕರು ತಮ್ಮ ನೋವನ್ನು ವ್ಯಕ್ತಪಡಿಸಿ ಹಿಂದಿನ ಪಠ್ಯವನ್ನೇ ಮುಂದುವರಿಸಿ ಎಂದು ಕೇಳಿಕೊಂಡರೂ ಅದನ್ನು ಕಾಲುಕಸ ಮಾಡಿ ಲೆಕ್ಕಿಸದೇ ಇರುವುದನ್ನು ನೋಡಿದರೆ ಇದು ನಾಡಿಗೆ ಕೇಡಿನ ಲಕ್ಷಣಗಳು ಎಂದೆನಿಸುತ್ತವೆ’ ಎಂದು ಸಾಹಿತಿ ದೇವನೂರ ಮಹಾದೇವ ಹೇಳಿದ್ದಾರೆ.

ತಮ್ಮ ಪಠ್ಯವನ್ನು ಕೈಬಿಡುವಂತೆ ಒತ್ತಾಯಿಸಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಗುರುವಾರ ಪತ್ರ ಬರೆದಿರುವ ಅವರು, ‘ನನ್ನ ಪಠ್ಯವನ್ನು ಕೈಬಿಡಬೇಕೆಂದು ವಿನಂತಿಸಿ ಪತ್ರ ಬರೆದ ಬಳಿಕವೂ ಅದನ್ನು ಪರಿಗಣಿಸದೇ ಪರಿಷ್ಕೃತ ಮುದ್ರಣವೇ

ಸಚಿವ ನಾಗೇಶ್ ಅವರ ಮನೆಯ ಮೇಲಿನ ಗುಂಪು ದಾಳಿ ತಪ್ಪು ನಡೆ. ತಾತ್ವಿಕ ಚರ್ಚೆ ವೈಯಕ್ತಿಕ ಆರೋಪಕ್ಕೆ ಹೊರಳದಂತೆ ಎಚ್ಚರಿಕೆ ಇದ್ದರೆ ಹೋರಾಟಕ್ಕೆ ಶಕ್ತಿ, ಗೌರವ ಬರುತ್ತದೆ

ಹಂ.ಪ. ನಾಗರಾಜಯ್ಯ, ಸಾಹಿತಿ

ಜಾರಿಗೆ ಬರುತ್ತದೆ ಎಂದು ನೀವು ಹೇಳಿರುವುದು ದಬ್ಬಾಳಿಕೆ ಎನಿಸುತ್ತದೆ’ ಎಂದಿದ್ದಾರೆ.

‘ಕುವೆಂಪು ಮತ್ತು ಅಂಬೇಡ್ಕರ್ ಅವರನ್ನು ಗೇಲಿ ಮಾಡುವ ಮನಸ್ಥಿತಿಯ ವ್ಯಕ್ತಿಯನ್ನೇ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷನನ್ನಾಗಿಸಿದ್ದು ಸರಿಯಲ್ಲ. ಚಾತುರ್ವಣ್ಯ ವಿರೋಧಿಯಾಗಿದ್ದ ಬಸವಣ್ಣನವರ ಪಾಠವನ್ನು ಪರಿಷ್ಕರಣಾ ಸಮಿತಿಯು ಕತ್ತು ಹಿಚುಕಿರುವುದು ಹಾಗೂ ಒಕ್ಕೂಟ ವ್ಯವಸ್ಥೆಯ ಅಂಗವಾಗಿರುವ ಕರ್ನಾಟಕ ರಾಜ್ಯವು ತನಗೂ ಒಂದು ಧ್ವಜ ಬೇಕು ಎಂದು ಧ್ವನಿ ಎತ್ತಿದ ಸಂದರ್ಭದಲ್ಲಿ ಆ ಪರಿಕಲ್ಪನೆಯನ್ನೇ ತನ್ನ ಲಂಗೋಟಿಗೆ ಹೋಲಿಕೆ ಮಾಡಿದ ಹೀನ ಅಭಿರುಚಿಯ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮಾಡಿದ್ದಲ್ಲದೇ, ಈಗ ಸಮರ್ಥಿಸುತ್ತಿರುವುದು ಸರಿಯಾದ ನಡೆಯಲ್ಲ’ ಎಂದೂ ಅವರು ಆಕ್ಷೇಪಿಸಿದ್ದಾರೆ.

‘ಪರಿಷ್ಕರಣೆ ಅನಿವಾರ್ಯ’

‘ಕಾಲಕಾಲಕ್ಕೆ ಪಠ್ಯಪುಸ್ತಕಗಳ ಪರಿಷ್ಕರಣೆ ಅನಿವಾರ್ಯ. ಪಠ್ಯದ ಬಗ್ಗೆ ಅನಗತ್ಯವಾಗಿ ಗೊಂದಲ ಮೂಡಿಸುವ ಪ್ರತಿಕ್ರಿಯೆಗಳಿಗೆ ಇತಿಶ್ರೀ ಹಾಡಬೇಕು. ಕೇವಲ ಒಂದು ವರ್ಗದವರು ಪಠ್ಯಪುಸ್ತಕವನ್ನು ವಿರೋಧಿಸುತ್ತಾರೆ ಎಂಬ ಕಾರಣಕ್ಕೆ ಇಡೀ ಪಠ್ಯ ಕ್ರಮವೆ ಸರಿಯಿಲ್ಲ ಎಂದು ಕೂಗೆಬ್ಬಿಸಿ, ಸಮಾಜದ ಶಾಂತಿ ಕದಡುವುದು ಸರಿಯಲ್ಲ’ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ತಿಳಿಸಿದ್ದಾರೆ.

ರಾಜ್ಯ ‘ಚಿಂತನಾ ಶಿಬಿರ’ದಲ್ಲಿ ಕಾಂಗ್ರೆಸ್ ನಾಯಕರ ಒಗ್ಗಟ್ಟಿನ ಕಾರ್ಯತಂತ್ರ

ಅಧಿಕಾರಕ್ಕೆ ‘ಸೂತ್ರ’: ‘ಕೈ’ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷವನ್ನು ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾತ್ಮಕವಾಗಿ ಬಲಪಡಿಸಿ, 2023ರ ರಾಜ್ಯ ವಿಧಾನಸಭೆ ಚುನಾವಣೆ ಎದುರಿಸಲು ಸಜ್ಜಾಗುತ್ತಿರುವ ಕಾಂಗ್ರೆಸ್ ನಾಯಕರು ‘ನವ ಸಂಕಲ್ಪ ಚಿಂತನಾ ಶಿಬಿರ’ದ ಹೆಸರಿನಲ್ಲಿ ಒಟ್ಟಾಗಿದ್ದಾರೆ.

ನಗರದ ಹೊರವಲಯದ ಕ್ಲಾರ್ಕ್ ಎಕ್ಸಾಟಿಕದಲ್ಲಿ ಗುರುವಾರದಿಂದ ಆರಂಭವಾದ ಎರಡು ದಿನಗಳ ಈ ಶಿಬಿರದಲ್ಲಿ, ಮುಂದಿನ ದಿನಗಳಲ್ಲಿ ರೂಪಿಸಬೇಕಾದ ಕಾರ್ಯತಂತ್ರಗಳ ಕುರಿತು ‘ಕೈ’ ನಾಯಕರು ನಿರ್ಣಯ ಕೈಗೊಂಡು ಪಕ್ಷವನ್ನು ಪುನರ್ ಸಂಘಟಿಸುವ ಪಣ ತೊಟ್ಟಿದ್ದಾರೆ.

ಕಾಂಗ್ರೆಸ್ ‘ನವ ಸಂಕಲ್ಪ ಚಿಂತನಾ ಶಿಬಿರ’ದಲ್ಲಿ ಆರ್.ವಿ. ದೇಶಪಾಂಡೆ, ಜೈರಾಮ್ ರಮೇಶ್, ಬಿ.ಕೆ. ಹರಿಪ್ರಸಾದ್, ಸಿದ್ದರಾಮಯ್ಯ, ರಣದೀಪ್ ಸಿಂಗ್ ಸುರ್ಜೇವಾಲ, ಡಿ.ಕೆ. ಶಿವಕುಮಾರ್ ಇದ್ದರು

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ‘ಪಕ್ಷದ ಹಿರಿಯರ ಮಾರ್ಗದರ್ಶನ ಪಡೆಯಲು ಅವರಿಗೆ ಸೂಕ್ತ ಸ್ಥಾನಮಾನ ನೀಡಿ ಹೊಸ ಮುಖಗಳಿಗೆ ಅವಕಾಶ ನೀಡಲು ಪಕ್ಷ ತೀರ್ಮಾನಿಸಿದೆ. ಉದಯಪುರಸಭೆಯ ತೀರ್ಮಾನವನ್ನು ಸೂತ್ರ ರೂಪದಲ್ಲಿ ಎಲ್ಲ ಸಮಿತಿಗಳಲ್ಲಿಯೂ ಅನುಸರಿಸಬೇಕು. ಬಡವರು, ಶೋಷಿತರು, ದಲಿತರು, ಹಿಂದುಳಿದವರು, ಮಹಿಳೆಯರು, ಅಲ್ಪಸಂಖ್ಯಾತರು, ಯುವಕರು ಹಾಗೂ ಪರಿಶಿಷ್ಟರ ಧ್ವನಿಯಾಗದೇ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ಎಲ್ಲ ಸಮಿತಿಗಳಲ್ಲಿ ಹಾಗೂ ಟಿಕೆಟ್ ಹಂಚಿಕೆಯಲ್ಲಿ ಎಲ್ಲ ವರ್ಗದವರಿಗೂ ಅವಕಾಶ ನೀಡಬೇಕು’ ಎಂದು ಸಲಹೆ ನೀಡಿದರು.

‘ನಾಯಕರು, ಲಕ್ಷಾಂತರ ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡಲು ಇಲ್ಲಿ ಸೇರಿರುವವರು ಕಾರ್ಯ ಸೂಚಿ, ಗುರಿ ಹಾಗೂ ನಿರ್ಣಯಗಳನ್ನು ಕೈಗೊಳ್ಳಬೇಕು. 15 ದಿನಗಳಲ್ಲಿ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿ ಪೂರ್ಣಗೊಳಿಸಲಾಗುವುದು’ ಎಂದರು.

ಶಿಬಿರ ಉದ್ಘಾಟಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಎಐಸಿಸಿ ಸೂಚನೆಯನ್ವಯ ಪಕ್ಷದ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳಿಗೆ ನಿರ್ದಿಷ್ಟ ಜವಾಬ್ದಾರಿ ನೀಡಲಾಗಿದ್ದು, ತಿಂಗಳಲ್ಲಿ 15-20 ದಿನ ಪಕ್ಷಕ್ಕೆ ಸಮಯ ನೀಡಬೇಕು. ಪಕ್ಷದ ಸಿದ್ಧಾಂತದ ಪರವಾಗಿರುವ ಸ್ಥಳೀಯ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಕಾರ್ಯಕ್ರಮ ರೂಪಿಸಬೇಕು’ ಎಂದರು.

‘ಈ ಸಭೆಯಲ್ಲಿ ಚರ್ಚೆಯಾಗುವ ವಿಷಯಗಳ ಬಗ್ಗೆ ಯಾರೂ ಕೂಡ ಮಾಧ್ಯಮಗಳ ಮುಂದೆ ಮಾತನಾಡಬಾರದು. ಮಾಧ್ಯಮಗಳ ಮುಂದೆ ಮಾತನಾಡಿದ್ದು ಗೊತ್ತಾದರೆ ನಾವು ಸಮಯ ಬಂದಾಗ ಅವರನ್ನು ಯಾವ ಕಣ್ಣಿಂದ ನೋಡಬೇಕೋ ಆ ಮೂಲಕ ನೋಡುತ್ತೇವೆ. ಇದು ರಾಷ್ಟ್ರ ನಾಯಕರು ನೀಡಿರುವ ಎಚ್ಚರಿಕೆ. ಶಿಬಿರದ ನಂತರ ಅಂತಿಮ ನಿರ್ಣಯಗಳನ್ನು ಪ್ರಕಟಿಸಲಾಗುವುದು’ ಎಂದರು.

ಸಿದ್ದರಾಮಯ್ಯ ಮಾತನಾಡಿ, ‘ಬೂತ್ ಮಟ್ಟದಿಂದ ಕೆಪಿಸಿಸಿ ಮಟ್ಟದವರೆಗೆ ಪಕ್ಷ ಸಂಘಟಿತಗೊಂಡರೆ ಚುನಾವಣೆಯಲ್ಲಿ ಗೆಲುವು ಕಷ್ಟದ ಕೆಲಸವಲ್ಲ. ರಾಜ್ಯ ಮತ್ತು ಇಲ್ಲಿನ ಜನ ಉಳಿಯಬೇಕು ಎಂಬ ಕಾರಣಕ್ಕೆ ಅಧಿಕಾರಕ್ಕೆ ಬರಬೇಕಿದೆ. ಆದ್ದರಿಂದ ಈ ಸವಾಲು ಸ್ವೀಕರಿಸಬೇಕು’ ಎಂದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಮುಖಂಡರಾದ ವೀರಪ್ಪ ಮೊಯಿಲಿ, ಜಿ. ಪರಮೇಶ್ವರ, ಆರ್.ವಿ. ದೇಶಪಾಂಡೆ, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಈಶ್ವರ್ ಖಂಡ್ರೆ, ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ಧ್ರುವನಾರಾಯಣ್ ಮತ್ತಿತರಿದ್ದರು.

ಅಸಮಾಧಾನಿತರಿಗೆ ಎಚ್ಚರಿಕೆ

‘ಪಕ್ಷಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಮಾಧ್ಯಮಗಳ ಮುಂದೆ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು’ ಎಂದು ಅಸಮಾಧಾನಿತರಿಗೆ ಸುರ್ಜೇವಾಲ ಎಚ್ಚರಿಕೆ ನೀಡಿದ್ದಾರೆ.

‘ನಿಮ್ಮ ಪ್ರಚಾರಕ್ಕಾಗಿ ಪಕ್ಷದ ವರ್ಚಸ್ಸಿಗೆ ಧಕ್ಕೆ ತರುವ ಮೂಲಕ ಪಕ್ಷಕ್ಕೆ ಹಾಗೂ ನಿಮಗೆ ತೊಂದರೆ ಆಗುವಂತೆ ಮಾಡಬೇಡಿ. ನಿಮ್ಮ ಭಿನ್ನಾಭಿಪ್ರಾಯಗಳನ್ನು ಪಕ್ಷದ ಆಂತರಿಕ ವೇದಿಕೆಯಲ್ಲಿ ಚರ್ಚಿಸಿ’ ಎಂದೂ ಸಲಹೆ ನೀಡಿದ್ದಾರೆ.

‘ರಾಜೀನಾಮೆ ಅಂಗೀಕರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯ ಪುಸ್ತಕ ಪರಿಷ್ಕರಣೆ ವಿರೋಧಿಸಿ ಪದವಿ ತ್ಯಾಗ ಮಾಡುತ್ತಿರುವ ಸಾಹಿತಿಗಳ ರಾಜೀನಾಮೆ ಅಂಗೀಕರಿಸುವಂತೆ ಸಚಿವರು ಮತ್ತು ಬಿಜೆಪಿ ಶಾಸಕರು ಟ್ವೀಟ್‌ಗಳನ್ನು ಮಾಡಿದ್ದಾರೆ.

ಸಚಿವರಾದ ಆರ್.ಅಶೋಕ್, ಬಿ.ಶ್ರೀರಾಮುಲು, ಮುರುಗೇಶ್ ನಿರಾಣಿ, ಶಾಸಕ ಎಸ್.ಎ.ರಾಮದಾಸ್ ಅವರು ‘ಅಕ್ಸೆಪ್ಟ್ ಟೂಲ್‌ಕಿಟ್ ರೆಸಿಗ್ನೇಷನ್’ ಎಂಬ ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಟ್ವೀಟ್ ಮಾಡಿದ್ದಾರೆ.

‘ಪಠ್ಯವಿರೋಧಿ ತಂತ್ರದ ಎಲ್ಲ ಸಾಧನಗಳೂ ಮುಗಿದು ದಿಕ್ಕೆಟ್ಟಿರುವ ಕಾಂಗ್ರೆಸ್ ಕೊನೆಯ ದಾಳವಾಗಿ ತಾನು ಪೋಷಿಸಿಕೊಂಡು ಬಂದಿರುವ ಸಾಹಿತಿಗಳನ್ನು ಈಗ ಛೂ ಬಿಟ್ಟಿದೆ. ಒಬ್ಬರ ಹಿಂದೆ ಒಬ್ಬರಂತೆ ಸಾಹಿತಿಗಳು ಕಾಂಗ್ರೆಸ್ ನೀಡಿದ್ದ ಪದವಿ ಭಿಕ್ಷೆಗಳಿಗೆ ರಾಜೀನಾಮೆ ನೀಡುತ್ತಿದ್ದಾರೆ. ಸರ್ಕಾರ ಇದನ್ನು ಅಂಗೀಕರಿಸಬೇಕು’ ಎಂದಿದ್ದಾರೆ.

ಉತ್ತರ ಕರ್ನಾಟಕದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ-ಹುಬ್ಬಳ್ಳಿ, ಬೆಳಗಾವಿ, ಗದಗ, ವಿಜಯಪುರ, ಹಳಿಯಾಳ, ದಾಂಡೇಲಿ ಸೇರಿದಂತೆ ಗುರುವಾರ ವಿವಿಧೆಡೆ ಉತ್ತಮ ಮಳೆಯಾಗಿದೆ.

ಹುಬ್ಬಳ್ಳಿಯಲ್ಲಿ ಗುಡುಗು, ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ. ಎರಡು ವಾರಗಳಿಂದ ನಗರದಲ್ಲಿ ಬಿಸಿಲಿನ ಬೇಗೆ ಹೆಚ್ಚಾಗಿತ್ತು. ಕೆಲವೆಡೆ ಗಾಳಿಯ ರಭಸಕ್ಕೆ ಮರಗಳು ಉರುಳಿಬಿದ್ದಿವೆ ಎಂದು ವರದಿಯಾಗಿದೆ.

ಧಾರವಾಡ ಜಿಲ್ಲೆಯಾದ್ಯಂತ ಸುಮಾರು ಮೂರು ತಾಸಿಗೂ ಹೆಚ್ಚು ಸಮಯ ಧಾರಾಕಾರ ಮಳೆಯಾಗಿದೆ. ಕುಂದಗೋಳ ತಾಲ್ಲೂಕಿನಲ್ಲಿ ಗುಡುಗು ಸಹಿತ, ಕಲಘಟಗಿ, ಅಳ್ನಾವರದಲ್ಲಿ ರಭಸದ ಮಳೆ ಸುರಿದಿದೆ.

ಬೆಳಗಾವಿ ನಗರದಲ್ಲಿ ಒಂದು ತಾಸಿಗೂ ಹೆಚ್ಚು ಆಲಿಕಲ್ಲು ಮಳೆ ಸುರಿಯಿತು. ವಿವಿಧೆಡೆ ಗುಡುಗು ಸಹಿತ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಹಾಗೂ ದಾಂಡೇಲಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಗದಗ ಜಿಲ್ಲೆಯಲ್ಲಿ ಕೆಲ ಸಮಯ ಮಳೆಯಾಗಿದೆ.

ವಿಜಯಪುರ ಜಿಲ್ಲೆಯ ಆಲಮಟ್ಟಿ ಡ್ಯಾಂ ಸೈಟ್ ವ್ಯಾಪ್ತಿಯಲ್ಲಿ ಆಲಿಕಲ್ಲು ಸಹಿತ ಮಳೆಗೆ 25ಕ್ಕೂ ಹೆಚ್ಚು ಮರ, ವಿದ್ಯುತ್ ಕಂಬ ಉರುಳಿವೆ.

ಕೊಡಗಿನಲ್ಲಿ ಬಿರುಸಿನ ಮಳೆ ಮಡಿಕೇರಿ ವರದಿ: ಕೊಡಗು ಜಿಲ್ಲೆಯ ಗೋಣಿಕೊಪ್ಪಲು, ಸೋಮವಾರಪೇಟೆ ಭಾಗಗಳಲ್ಲಿ ಬಿರುಸಿನ, ಮಡಿಕೇರಿ ನಗರದದಲ್ಲಿ ಸಾಧಾರಣ ಮಳೆಯಾಗಿದೆ. ಹಾಸನ ಜಿಲ್ಲೆ ಕೊಣನೂರಿನಲ್ಲೂ ಮಳೆಯಾಯಿತು.

ಧಾರಾಕಾರ ಮಳೆಗೆ ಹುಬ್ಬಳ್ಳಿ ಉಣಕಲ್‌ನ ಹುಬ್ಬಳ್ಳಿ–ಧಾರವಾಡ ರಸ್ತೆಯಲ್ಲಿ ನಿಂತ ನೀರಿನಲ್ಲಿಯೇ ವಾಹನಗಳು ಸಾಗಿದವು

– ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಅಲ್ಲಲ್ಲಿ ಸಾಧಾರಣ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡಿನ ಕೆಲವು ಕಡೆಗಳಲ್ಲಿ ಶುಕ್ರವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ರಾಜ್ಯದ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ತುಮಕೂರು, ಚಿತ್ರದುರ್ಗ ಮತ್ತು ರಾಮನಗರ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಚದುರಿದಂತೆ ಜೋರು ಮಳೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ನೆರವು ಕೋರಿಕೆ: ಪ್ರಕರಣ ದಾಖಲು

ಬೆಂಗಳೂರು: ಸಾಹಿತಿ ಚಂದ್ರಶೇಖರ ಕಂಬಾರ ಹೆಸರಿನಲ್ಲಿ ಸಂದೇಶ ಕಳುಹಿಸಿ ಹಣ ಕೇಳುತ್ತಿರುವ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕಂಬಾರ ಅವರು ಬುಧವಾರ (ಜೂನ್ 1) ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಂಬಾರ ಅವರ ವಿಳಾಸ, ಫೋಟೊ ಬಳಸಿ ಕೆಲವರ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದು, ‘ನಾನು ಕಷ್ಟದಲ್ಲಿದ್ದೇನೆ. ಧನಸಹಾಯ ಮಾಡಿ’ ಎಂದು ಕೋರಲಾಗಿದೆ. ‘ಇಂತಹ ಸಂದೇಶಗಳನ್ನು ಸಾರ್ವಜನಿಕರು ನಂಬಬಾರದು’ ಎಂದು ಚಂದ್ರಶೇಖರ ಕಂಬಾರ ತಿಳಿಸಿದ್ದಾರೆ.

ನ್ಯಾಯಾಂಗ ಬಂಧನಕ್ಕೆ ಎನ್‌ಎಸ್‌ಯುಐ ಸದಸ್ಯರು

ತಿಪಟೂರು (ತುಮಕೂರು): ಶಿಕ್ಷಣ ಸಚಿವರ ಮನೆಗೆ ಮುತ್ತಿಗೆ ಹಾಕಿದ ಆರೋಪದಡಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) 15 ವಿದ್ಯಾರ್ಥಿಗಳನ್ನು ಗುರುವಾರ ಸ್ಥಳೀಯ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ಕೋರ್ಟ್ ಎಲ್ಲರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಇವರ ವಿರುದ್ಧ ಅಕ್ರಮ ಪ್ರವೇಶ ಹಾಗೂ ಬೆಂಕಿ ಹಚ್ಚಲು ಯತ್ನ ಆರೋಪದಡಿ ದೂರು ದಾಖಲಾಗಿದೆ.

‘ಮೋದಿ ಎರಡನೇ ವಿವೇಕಾನಂದ’

ಮೈಸೂರು: ‘ಪ್ರಧಾನಿ ನರೇಂದ್ರ ಮೋದಿ ಅವರು ಎರಡನೇ ಸ್ವಾಮಿ ವಿವೇಕಾನಂದರಾಗಿದ್ದಾರೆ’ ಎಂದು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸ್ವಾಮಿ ಶಿವಕಾಂತಾನಂದ ಮಹಾರಾಜ್ ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸನ್ಯಾಸಿಯಾಗಲು ನರೇಂದ್ರ ಮೋದಿ ಅವರು ಆಶ್ರಮಕ್ಕೆ ಭೇಟಿ ನೀಡಿದ್ದಾಗ, ನೀನು ಮಠಕ್ಕಿಂತ ಬೇರೆಡೆ ಕೆಲಸ ಮಾಡುವುದು ಸಾಕಷ್ಟಿದೆ ಎಂದು ಸ್ವಾಮೀಜಿ ಹೇಳಿದ್ದರು. ಅವರೀಗ ಯುವ ಜನಾಂಗದ ಪ್ರೇರಕ ಶಕ್ತಿಯಾಗಿದ್ದಾರೆ’ ಎಂದು ತಿಳಿಸಿದರು.

ಹಿಜಾಬ್: ಪತ್ರಕರ್ತರಿಗೆ ದಿಗ್ಬಂಧನ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಹಿಜಾಬ್ ವಿವಾದದ ಕುರಿತು ಪ್ರಾಚಾರ್ಯರಿಂದ ಮಾಹಿತಿ ಪಡೆಯಲು ಗುರುವಾರ ಕಾಲೇಜಿಗೆ ತೆರಳಿದ್ದ ಪತ್ರಕರ್ತರಿಗೆ ಸುಮಾರು 25 ವಿದ್ಯಾರ್ಥಿಗಳ ಗುಂಪು ದಿಗ್ಬಂಧನ ಹಾಕಿತು.

‘ವಿದ್ಯಾರ್ಥಿಗಳ ಗುಂಪು ತಮ್ಮ ಮೊಬೈಲ್ ಫೋನ್‌ಗಳನ್ನು ಕಸಿದುಕೊಂಡು ಅದರಲ್ಲಿದ್ದ ವಿಡಿಯೊ, ಚಿತ್ರಗಳನ್ನು ಅಳಿಸಿಹಾಕಿ ತಮಗೆ ಜೀವ ಬೆದರಿಕೆ ಹಾಕಲಾಯಿತು‘ ಎಂದು ಪತ್ರಕರ್ತರು ದೂರು ನೀಡಿದ್ದು, ಉಪ್ಪಿನಂಗಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಹಿಜಾಬ್ ಧರಿಸಿದ್ದ ಆರು ವಿದ್ಯಾರ್ಥಿನಿಯರಿಗೆ ತರಗತಿ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿತ್ತು. ಕೆಲವರು ಕೇಸರಿ ಶಾಲು ಧರಿಸಿ ಬಂದಿದ್ದರು. ಈ ಬಗ್ಗೆ ಸ್ಪಷ್ಟನೆ ಕೇಳಲು ಪತ್ರಕರ್ತರಾದ ಅಜಿತ್ ಕುಮಾರ್ ಕೆ., ಪ್ರವೀಣ್ ಕುಮಾರ್ ಪ್ರಾಚಾರ್ಯರ ಕೊಠಡಿಗೆ ತೆರಳಿದ್ದರು.

‘ನಿಯಮ ಮೀರಿ ಬಂದಿದ್ದ ಆರು ವಿದ್ಯಾರ್ಥಿನಿಯರಿಗೆ ಪ್ರವೇಶಕ್ಕೆ ನಿರ್ಬಂಧ ಆದರೂ ಕೆಲವರು ಡಬಲ್ ಶಾಲು ಧರಿಸಿ ಬಂದಿದ್ದರು. ಅದರ ವಿರುದ್ಧ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿದ್ದರು. ವಸ್ತ್ರಸಂಹಿತೆ ಪಾಲನೆ ಮಾಡದಿದ್ದಕ್ಕೆ ಅಮಾನತು ಮಾಡಲಾಗಿದೆ’ ಎಂದು ಪ್ರಾಚಾರ್ಯ ಶೇಖರ ಎಂ.ಬಿ. ತಿಳಿಸಿದ್ದಾರೆ.

ಮುಂದುವರಿದ ನಿರ್ಬಂಧ: ಮಂಗಳೂರಿನ ಹಂಪನಕಟ್ಟೆಯ ಮಂಗಳೂರು ವಿಶ್ವವಿದ್ಯಾಲಯ ಘಟಕ ಕಾಲೇಜಿನಲ್ಲಿ ಗುರುವಾರವೂ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರ್ಬಂಧಿಸಲಾಯಿತು.

ಹಿಜಾಬ್‌ಗೆ ಅವಕಾಶ ನೀಡದಿದ್ದಕ್ಕೆ ಕಾವೂರಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಾಲ್ವರು ವಿದ್ಯಾರ್ಥಿನಿಯರು ಕಾಲೇಜು ತ್ಯಜಿಸಲು ನಿರ್ಧರಿಸಿ, ಟಿ.ಸಿ. ಪಡೆದುಕೊಂಡಿದ್ದಾರೆ.

ನಗರಸಭೆ ಸದಸ್ಯ ಪ್ರಶಾಂತ್ ಕೊಲೆ ಪ್ರಕರಣ: ಪಟ್ಟು ಸಡಿಲಿಸಿದ ರೇವಣ್ಣ

ಡಿವೈಎಸ್ಪಿಗೆ ನೋಟಿಸ್: ಸಿಪಿಐಗೆ ಕಡ್ಡಾಯ ರಜೆ

• ಪ್ರಜಾವಾಣಿ ವಾರ್ತೆ

ಹಾಸನ: ನಗರಸಭೆ ಸದಸ್ಯ ಪ್ರಶಾಂತ್ ನಾಗರಾಜ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಡಿವೈಎಸ್ಪಿ ಉದಯಭಾಸ್ಕರ್ ಅವರಿಗೆ ನೋಟಿಸ್ ನೀಡಲಾಗಿದ್ದು, ಸಿಪಿಐ ರೇಣುಕಾಪ್ರಸಾದ್ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ.

ನಗರದಲ್ಲಿ ಬಿಗುವಿನ ವಾತಾವರಣವಿದ್ದು, ಎಲ್ಲೆಡೆ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಇಬ್ಬರನ್ನು ಬಂಧಿಸಲಾಗಿದೆ ಎನ್ನಲಾಗಿದೆ. ಆದರೆ, ಪೊಲೀಸ್ ಅಧಿಕಾರಿಗಳು ಖಚಿತಪಡಿಸಿಲ್ಲ.

ಎಫ್‌ಐಆರ್ ತಿದ್ದುಪಡಿ: ಪ್ರಶಾಂತ್ ಅವರ ಪತ್ನಿ ಸೌಮ್ಯಾ ಅವರು ಬುಧವಾರ ರಾತ್ರಿ ನೀಡಿದ ದೂರಿನಂತೆ, ಪೂರ್ಣಚಂದ್ರ ಹಾಗೂ ಇತರರ ವಿರುದ್ಧ ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಗುರುವಾರ ಮಧ್ಯಾಹ್ನ ಎಫ್‌ಐಆರ್ ತಿದ್ದುಪಡಿ ಮಾಡಲಾಗಿದ್ದು, ‘ಅಪರಿಚಿತ ದುಷ್ಕರ್ಮಿಗಳು ಕೊಲೆ ಮಾಡಿರುವುದಾಗಿ’ ಪ್ರಕರಣ ದಾಖಲಿಸಲಾಗಿದೆ.

ಪ್ರತಿಭಟನೆಯ ವೇಳೆ ಶಾಸಕ ಎಚ್.ಡಿ. ರೇವಣ್ಣ ಆಕ್ರೋಶ ವ್ಯಕ್ತಪಡಿಸಿದ ಪರಿ

ಎಚ್.ಡಿ. ರೇವಣ್ಣ ಧರಣಿ: ಶಾಸಕ ಎಚ್.ಡಿ.ರೇವಣ್ಣ, ಪೊಲೀಸ್ ಅಧಿಕಾರಿಗಳನ್ನು ವಜಾ ಮಾಡುವವರೆಗೆ ಅಂತ್ಯಕ್ರಿಯೆ ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ಗುರುವಾರ ಅವರೊಂದಿಗೆ

ಕೊಲೆ ಪ್ರಕರಣ ಭೇದಿಸಲು ಪೊಲೀಸ್ ತಂಡಗಳನ್ನು ರಚಿಸಲಾಗಿದೆ. ತನಿಖೆಯ ನಂತರ ಪೂರ್ಣ ವಿವರ ತಿಳಿಯಲಿದೆ

ಆರ್. ಶ್ರೀನಿವಾಸಗೌಡ, ಪೊಲೀಸ್ ವರಿಷ್ಠಾಧಿಕಾರಿ

ಪ್ರಶಾಂತ್ ಕುಟುಂಬದವರೂ ಸಮ್ಮತಿ ಸೂಚಿಸಿದ್ದರಿಂದ ಸಂಜೆ ಅಂತ್ಯಕ್ರಿಯೆ ನಡೆಯಿತು.

ಸರಣಿ ಕೊಲೆ: 2005 ರಲ್ಲಿ ಪ್ರಶಾಂತ್ ಅವರ ತಂದೆ, ಆಗಿನ ನಗರಸಭೆ ಸದಸ್ಯರಾಗಿದ್ದ ಹಾ.ರಾ.ನಾಗರಾಜ್ ಅವರನ್ನು ಹೀಗೇ ಕೊಲೆ ಮಾಡಲಾಗಿತ್ತು. ಪ್ರತೀಕಾರವಾಗಿ ಗ್ಯಾರಳ್ಳಿ ತಮ್ಮಯ್ಯ ಅವರನ್ನು ವರ್ಷದ ಬಳಿಕ ಕೊಲೆ ಮಾಡಲಾಗಿತ್ತು. ಇದೀಗ ಪ್ರಶಾಂತ್ ಕೊಲೆಯಾಗಿದೆ.

ಡಿವೈಎಸ್ಪಿ ಕಸ್ಟಡಿಗೆ ಪಡೆಯಲು ಸಿದ್ಧತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರರನ್ನು ಮತ್ತೊಮ್ಮೆ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲು ಸಿಐಡಿ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದ ಆರೋಪದಡಿ 22 ಅಭ್ಯರ್ಥಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ‘ಮತ್ತಷ್ಟು ಮಾಹಿತಿ ಕಲೆಹಾಕಲಾಗಿದೆ. ಶಾಂತಕುಮಾರ ಹಾಗೂ ಇತರರ ವಿಚಾರಣೆ ಅಗತ್ಯವಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಹೈಗ್ರೌಂಡ್ಸ್ ಠಾಣೆ ಪ್ರಕರಣದಲ್ಲಿ ಕಸ್ಟಡಿಗೆ ಪಡೆಯುವ ಅವಕಾಶಗಳು ಮುಗಿದಿವೆ. ಕಲಬುರಗಿ ಚೌಕ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆಯಲಾಗುವುದು’ ಎನ್ನಲಾಗಿದೆ.

ಅಮ್ರಿತ್ ಪೌಲ್‌ಗೆ ಶೀಘ್ರ ನೋಟಿಸ್: ಅಕ್ರಮ ಪ್ರಕರಣದಲ್ಲಿ ಎರಡು ಬಾರಿ ವಿಚಾರಣೆ ಎದುರಿಸಿದ್ದ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್ ಅವರಿಗೆ ಸದ್ಯದಲ್ಲೇ ಮತ್ತೊಂದು ನೋಟಿಸ್ ನೀಡುವ ಸಾಧ್ಯತೆ ಇದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಜಾಮೀನು ಅರ್ಜಿ ತಿರಸ್ಕೃತ (ಕಲಬುರಗಿ ವರದಿ): ಇದೇ ಪ್ರಕರಣದಲ್ಲಿ ಬಂಧನದಲ್ಲಿರುವ ಕೆಎಸ್‌ಆರ್‌ಪಿ ಸಹಾಯಕ ಕಮಾಂಡೆಂಟ್ ಆಗಿದ್ದ ವೈಜನಾಥ ಕಲ್ಯಾಣಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಮೂರನೇ ಜೆಎಂಎಫ್‌ಸಿ ನ್ಯಾಯಾಲಯ ಗುರುವಾರ ತಿರಸ್ಕರಿಸಿದೆ.

ಬುಧವಾರ ಬಂಧಿತರಾದ ಅಫಜಲಪುರದ ಅಸ್ಲಂ ಸೈಫುನ್ ಮುಲ್ಕ್ ಮುಜಾವರ ಮತ್ತು ಮುನಾಫ್ ಜಮಾದಾರಗೆ 7 ದಿನ ಮತ್ತು ಆರ್.ಡಿ. ಪಾಟೀಲ ಸೋದರಳಿಯ ಪ್ರಕಾಶ ಉಡಗಿಗೆ 9 ದಿನ ಸಿಐಡಿ ಕಸ್ಟಡಿಗೆ ನೀಡಿ ಕೋರ್ಟ್ ಆದೇಶಿಸಿದೆ.

ಸಿನಿಮಾತು ನೋಡಲು ಇಲ್ಲಿ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯ

'ಚಾರ್ಲಿ'ಯ 'ಲಕ್ಕಿ'ಗರ್ಲ್ ಸಂಗೀತಾ

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆಇಟ್ಟು 'ಚಾರ್ಲಿ' ಜೊತೆ ದೇಶಸುತ್ತಿದ 'ಲಕ್ಕಿ'ಗರ್ಲ್ ಸಂಗೀತಾ ಶೃಂಗೇರಿ ಸ್ಯಾಂಡಲ್‌ವುಡ್‌ನ ಭರವಸೆಯ ನಾಯಕಿ. ಆದರೆ ಸಂಗೀತಾ ಹೊಸ ಪ್ರೊಜೆಕ್ಟ್ಸ್ ಏಕೆ ಒಪ್ಪಿಕೊಳ್ಳುತ್ತಿಲ್ಲ ಎನ್ನುವುದಕ್ಕೆ ಕಾರಣ ಇದು....



ಸಂಗೀತಾ ಶೃಂಗೇರಿ

ಅಭಿಲಾಷ್ ಪಿ.ಎಸ್.

• '777 ಚಾರ್ಲಿ' ಜೊತೆಗಿನ ಪಯಣ ಆರಂಭವಾಗಿದ್ದು ಹೇಗೆ?

'ಹರಹರ ಮಹಾದೇವ' ಧಾರಾವಾಹಿ ಪೂರ್ಣಗೊಳಿಸಿ ಒಂದು ವರ್ಷದ ಬ್ರೇಕ್ ತೆಗೆದುಕೊಂಡು ಹೈದರಾಬಾದ್‌ನಲ್ಲಿ ಇದ್ದ ಸಂದರ್ಭದಲ್ಲಿ ನಾನು '777 ಚಾರ್ಲಿ'ಯ ಆಡಿಷನ್ ಪೋಸ್ಟರ್ ಗಮನಿಸಿದ್ದೆ. ನೇರವಾಗಿ ಬೆಂಗಳೂರಿಗೆ ಬಂದಿಳಿದು ಪರಂವಃ ಸ್ಟುಡಿಯೊಗೆ ಭೇಟಿ ನೀಡಿ ಆಡಿಷನ್‌ನಲ್ಲಿ ಭಾಗವಹಿಸಿದ್ದೆ. ಆಡಿಷನ್ ಆದ ಬಳಿಕ, ಕಥೆ ಹೇಳುವ ಸಂದರ್ಭದಲ್ಲಿ ನಿರ್ದೇಶಕ ಕಿರಣ್‌ರಾಜ್ ಅವರು ಚಿತ್ರದಲ್ಲಿನ ನನ್ನ ಪಾತ್ರದ ಬಗ್ಗೆ ಸ್ವತಃ ನಟನೆ ಮಾಡಿ ವಿವರಿಸಿದರು. ಒಬ್ಬ ನಿರ್ದೇಶಕ ಒಂದೊಂದು ಪಾತ್ರಕ್ಕೂ ಇಷ್ಟು ಪ್ರಾಮುಖ್ಯತೆ ನೀಡುತ್ತಾನೆ ಎಂದರೆ ಸಿನಿಮಾವನ್ನು ಇನ್ನೆಷ್ಟು ಅದ್ಭುತವಾಗಿ ತೆರೆ ಮೇಲೆ ತರಬಹುದು ಎಂದು ಅಂದುಕೊಂಡಿದ್ದೆ. ಇದು 'ಧರ್ಮ'(ರಕ್ಷಿತ್ ಶೆಟ್ಟಿ) ಹಾಗೂ 'ಚಾರ್ಲಿ'ಯ ಪಯಣವಲ್ಲ. ಇದು ಭಾವನಾತ್ಮಕ ಪಯಣ. ಈ ಪಯಣದಲ್ಲಿ ನನ್ನ, ರಾಜ್ ಬಿ.ಶೆಟ್ಟಿ, ಬಾಬಿ ಸಿಂಹ, ಡ್ಯಾನಿಷ್ ಸೇಟ್ ಹೀಗೆ ಹಲವರ ಪಾತ್ರಗಳು ಕೈಜೋಡಿಸುತ್ತವೆ.

• ಚಿತ್ರದಲ್ಲಿನ ನಿಮ್ಮ ಪಾತ್ರ 'ದೇವಿಕಾ' ಬಗ್ಗೆ..

ನನ್ನ ನಿಜಜೀವನಕ್ಕೆ 'ದೇವಿಕಾ' ಪಾತ್ರ ಬಹಳ ಹತ್ತಿರವಾಗಿದೆ. ಈ ಪಾತ್ರಕ್ಕೆ ಸುಲಭವಾಗಿ ಕನೆಕ್ಟ್ ಆದೆ. ಆದರೆ ಅಭಿನಯದ ವಿಚಾರದಲ್ಲಿ ಬಹಳ ಕಷ್ಟ ಅನುಭವಿಸಿದೆ. ಕಿರಣ್‌ರಾಜ್ ಅವರು ನಿರ್ದೇಶನದ ವಿಚಾರದಲ್ಲಿ ಬಹಳ ಕಠಿಣ. ದೃಶ್ಯವೊಂದು ಈ ರೀತಿ ಬರಬೇಕು ಎಂದರೆ ಅದೇ ರೀತಿ ಬರಬೇಕು. ನಾವೇನಾದರೂ ನಮ್ಮ ಅಭಿನಯದಲ್ಲಿ ಒಂದಿಷ್ಟು ಸುಧಾರಣೆ ತರಲು ಪ್ರಯತ್ನಿಸಿದರೆ, ಅವರಿಗೆ ಹಿಡಿಸದು. ಅವರ ಮನಸ್ಸಿನಲ್ಲಿ ಆ ಪಾತ್ರ ಹೇಗೆ ಅಭಿನಯಿಸಬೇಕು ಎಂದಿರುತ್ತದೆಯೋ ಅದೇ ರೀತಿ ನಾವು ಅಭಿನಯಿಸಬೇಕು. ನಮಗಿದ್ದ ಇನ್ನೊಂದು ಚಾಲೆಂಜ್ 'ಚಾರ್ಲಿ'. ಎಲ್ಲಿ ಯಾವ ದೃಶ್ಯ ಸರಿಯಾಗಿ ಸೆರೆಯಾಗುತ್ತದೆಯೋ ತಿಳಿದಿಲ್ಲ. ಹೀಗಾಗಿ ನಾವು ಯಾವ ರಿಸ್ಕ್ ಕೂಡಾ ತೆಗೆದುಕೊಂಡಿಲ್ಲ.

ಕಲಾವಿದನೊಬ್ಬನಿಗೆ ನಮ್ಮತನವನ್ನು ಬಿಟ್ಟು, ನಿರ್ದೇಶಕ ಹೇಳಿದ ಹಾಗೆಯೇ ನಟನೆ ಮಾಡುವುದು ಬಹಳ ಕಷ್ಟ. ಆದರೆ ತೆರೆ ಮೇಲೆ ಸಿನಿಮಾವನ್ನು ನೋಡಿದ ಬಳಿಕ, ನನಗೆ ನನ್ನ ಬಗ್ಗೆಯೇ ಹೆಮ್ಮೆಯಾಯಿತು. ಕಲಾವಿದನಿಗೆ ಒಂದು ಪಾತ್ರದ ಬಗ್ಗೆ ತೃಪ್ತಿಯಾಗಲು ಸಾಧ್ಯವೇ ಇಲ್ಲ. 'ಇನ್ನೂ ಚೆನ್ನಾಗಿ ಮಾಡಬಹುದಿತ್ತಲ್ಲವೇ' ಎನ್ನುವ ಕೊರಗು ಇದ್ದೇ ಇರುತ್ತದೆ. ಆದರೆ 'ದೇವಿಕಾ' ಪಾತ್ರ ತೃಪ್ತಿ ನೀಡಿದೆ. ಈ ರೀತಿಯ ಅಭಿನಯವನ್ನು ನನ್ನೊಳಗಿಂದ ಬೇರೊಬ್ಬ ನಿರ್ದೇಶಕನಿಂದ ತೆಗೆಸಲು ಸಾಧ್ಯವಿಲ್ಲ ಎಂದುಕೊಳ್ಳುತ್ತೇನೆ. ನನ್ನ ಅಭಿನಯದ ಬಗ್ಗೆ ಬಹಳ ಭರವಸೆ ಇದೆ. 'ದೇವಿಕಾ' ಎನ್ನುವ ಪಾತ್ರ ಸಣ್ಣ ಪಾತ್ರವಾಗಿದ್ದರೂ, ಕಥೆಯಲ್ಲಿ ತನ್ನ ಪಾತ್ರಕ್ಕೆ ನ್ಯಾಯ ಒದಗಿಸುತ್ತಾಳೆ. ಗ್ಲ್ಯಾಮರ್‌ಗೋಸ್ಕರ ನಿರ್ದೇಶಕರು ಈ ಪಾತ್ರವನ್ನು ಸಿನಿಮಾದೊಳಗೆ ತುರುಕಿಲ್ಲ. ಈ ಪಾತ್ರಕ್ಕೊಂದು ಅರ್ಥವಿದೆ. 'ಧರ್ಮ'ನ ಜೀವನದ ಮೇಲೂ ಈಕೆ ಪ್ರಭಾವ ಬೀರುತ್ತಾಳೆ.

• ತೆರೆಯಲ್ಲಿ 'ದೇವಿಕಾ' ಬಹಳ ನೈಜವಾಗಿ ಕಾಣುತ್ತಾಳೆ..ನಿಜ ಜೀವನದಲ್ಲಿ?

ನಟನೆಯ ಆಳ ಬಹಳಷ್ಟಿದೆ ಎನ್ನುವುದನ್ನು ನಾನು ಅರ್ಥೈಸಿಕೊಂಡಿದ್ದೇನೆ. ಕ್ಯಾಮೆರಾ ಮುಂದೆ ಬಂದು ಡೈಲಾಗ್ ಹೇಳುವುದಷ್ಟೇ ನಟನೆ ಅಲ್ಲ. ಪಾತ್ರದೊಳಗೆ ಇಳಿಯಲು ನಾನು ಸಮಯ ತೆಗೆದುಕೊಳ್ಳುತ್ತೇನೆ. ನನ್ನ ದೇಹ ಸೌಂದರ್ಯವನ್ನು ನೋಡಿ ಯಾರೂ ನನ್ನ ನಟನೆಯನ್ನು ಅಳೆಯಬಾರದು. ನನ್ನ ಅಭಿನಯ, ಪ್ರತಿಭೆಯನ್ನು ನೋಡಿ ಇಷ್ಟಪಡಬೇಕು, ಗುರುತಿಸಬೇಕು. ಪಾತ್ರಕ್ಕೊಂದು ಅರ್ಥವಿದ್ದರಷ್ಟೇ ಅಂಥ ಪಾತ್ರವನ್ನು ಮಾಡುತ್ತೇನೆ. ಕಲಾವಿದೆಯಾಗಿ ಗ್ಲ್ಯಾಮರ್ ಪಾತ್ರಗಳನ್ನೂ ಮಾಡಲೇಬೇಕಾಗುತ್ತದೆ. ಅಂಥ ಪಾತ್ರ 'ಮಾರಿಗೋಲ್ಡ್' ಸಿನಿಮಾದಲ್ಲಿದೆ.

• '777 ಚಾರ್ಲಿ'ಗಾಗಿ ಎಷ್ಟು ಆಫರ್‌ಗಳನ್ನು ತಿರಸ್ಕರಿಸಿದ್ರಿ?

ಈ ಚಿತ್ರ ಒಪ್ಪಿಕೊಂಡಾಗ ಎರಡು ವರ್ಷದ ಕಾಂಟ್ರ್ಯಾಕ್ಟ್‌ನಲ್ಲಿದ್ದೆ. ಬೇರೆ ಯಾವ ಸಿನಿಮಾವನ್ನೂ ನಾನು ಒಪ್ಪಿಕೊಳ್ಳುವಂತಿರಲಿಲ್ಲ. ಕಿರಣ್‌ರಾಜ್ ಅವರಿಗೆ ಕಲಾವಿದರ ಬದ್ಧತೆ ಅಗತ್ಯವಾಗಿತ್ತು. 'ಚಾರ್ಲಿ' ಜೊತೆಗೆ ನಾವು ತರಬೇತಿ ಪಡೆಯಬೇಕಿತ್ತು. ಇಂಥ ಸಂದರ್ಭದಲ್ಲಿ ಪ್ರೊಜೆಕ್ಟ್‌ನಿಂದ ಹೊರನಡೆದರೆ ಅದು ಇಡೀ ತಂಡದ ಮೇಲೆಯೇ ಪರಿಣಾಮ ಬೀರುತ್ತಿತ್ತು. ನಾಲ್ಕು ವರ್ಷದ ಹಿಂದೆ ಈ ಷರತ್ತು ಒಪ್ಪಿಕೊಳ್ಳುವ ಮೊದಲು ಹಲವು ಬಾರಿ ಯೋಚಿಸಿದ್ದೆ. ಏಕೆಂದರೆ, ನಾನು 'ಹರಹರ ಮಹಾದೇವ' ಪೂರ್ಣಗೊಳಿಸಿದ್ದೆ. ಅದು ನಾನು ಚಿತ್ರರಂಗದಲ್ಲಿ ಮತ್ತಷ್ಟು ಸಾಧಿಸುವ ಅವಧಿಯಾಗಿತ್ತು. ಹಲವು ಸಿನಿಮಾ ಆಫರ್‌ಗಳು ಬರುತ್ತಿದ್ದವು. ನನ್ನ ಮೊದಲ ಚಿತ್ರ ಅಷ್ಟು ಯಶಸ್ಸು ಕಂಡಿರಲಿಲ್ಲ. ಹೀಗಾಗಿ ಒಂದೊಳ್ಳೆ ಸಿನಿಮಾದಲ್ಲಿ ನಟನೆ ಮಾಡುವ ಹಂಬಲವಿತ್ತು. ನನ್ನ ನಟನೆಯನ್ನು ನೋಡಿ ಮತ್ತಷ್ಟು ಆಫರ್‌ಗಳು ಬರಲಿ ಎನ್ನುವ ಆಶಯವಿತ್ತು. ಹೀಗಾಗಿ '777 ಚಾರ್ಲಿ'ಗೆ ಈ ಸಮಯ ನೀಡುವುದು ಯೋಗ್ಯವೆಂದೆನಿಸಿತು. ಹಲವು ಆಫರ್‌ಗಳನ್ನು ತಿರಸ್ಕರಿಸುವಾಗ ನನಗೆ ಯಾವುದೇ ವಿಷಾದವಾಗಿಲ್ಲ. ಏಕೆಂದರೆ ನನಗೆ ಈ ಸಿನಿಮಾದ ಕಥೆಯ ಮೇಲೆ ನಂಬಿಕೆಯಿತ್ತು.

• ರಕ್ಷಿತ್ ಅವರ ಜೊತೆಗಿನ ನಟನೆಯ ಅನುಭವ...

ರಕ್ಷಿತ್ ಶೆಟ್ಟಿ ಅವರು ಬಹಳ ಸರಳ ವ್ಯಕ್ತಿ. ಹೀಗಾಗಿ ಅವರ ವ್ಯಕ್ತಿತ್ವ ಇಷ್ಟವಾಗುತ್ತದೆ. ನಿರ್ದೇಶಕರ ಕಲಾವಿದ ಅವರು. 'ಚಾರ್ಲಿ' ಜೊತೆ ನಟನೆ ಮಾಡಲು ಬಹಳ ತಾಳ್ಮೆ ಅಗತ್ಯ. ಕೆಲವೊಮ್ಮೆ ನಲವತ್ತು ಟೇಕ್‌ಗಳನ್ನೂ ತೆಗೆದುಕೊಂಡಿದ್ದೂ ಇದೆ. ಈ ಸಂದರ್ಭದಲ್ಲಿ ಅವರು ನಟಿಸುತ್ತಿರಲಿಲ್ಲ, ಒಂದು ರೀತಿ ಪರಕಾಯ ಪ್ರವೇಶ ಮಾಡಿದಂತೆ ನೈಜವಾಗಿದ್ದರು.

• ಸಂಗೀತಾ ಶೃಂಗೇರಿ ಏಕೆ ಹೊಸ ಪ್ರೊಜೆಕ್ಟ್ ಒಪ್ಪಿಕೊಳ್ಳುತ್ತಿಲ್ಲ?

'777 ಚಾರ್ಲಿ' ಸಿನಿಮಾದ ಕಾಂಟ್ರ್ಯಾಕ್ಟ್‌ನಲ್ಲಿ ಇರುವಾಗಲೇ ಕೋವಿಡ್ ಸಾಂಕ್ರಾಮಿಕ ಕಾಣಿಸಿಕೊಂಡಿತು. ಆ ವೇಳೆಗಾಗಲೇ ಚಿತ್ರದ ಒಂದು ಹಂತದ ಚಿತ್ರೀಕರಣವನ್ನು ಪೂರ್ಣಗೊಳಿಸಿದ್ದೆವು. ಈ ಸಂದರ್ಭದಲ್ಲಿ ಕೇವಲ ಒಂದು ಸಿನಿಮಾವನ್ನಷ್ಟೇ ನಂಬಿಕೊಂಡು ಬದುಕುವ ಸ್ಥಿತಿಯೂ ಇರಲಿಲ್ಲ. ಇದನ್ನು ಕಿರಣ್‌ರಾಜ್ ಅವರೂ ಅರ್ಥಮಾಡಿಕೊಂಡು ಬೇರೆ ಆಫರ್‌ಗಳನ್ನು ಒಪ್ಪಿಕೊಳ್ಳಲು ತಿಳಿಸಿದರು. ಇದಾದ ಬಳಿಕ ದಿಗಂತ್ ಅವರ ಜೊತೆಗಿನ 'ಮಾರಿಗೋಲ್ಡ್', ಡಾರ್ಲಿಂಗ್ ಕೃಷ್ಣ ಅವರ ಜೊತೆಗೆ 'ಲಕ್ಕಿಮ್ಯಾನ್' ಒಪ್ಪಿಕೊಂಡೆ. '777 ಚಾರ್ಲಿ' ಸಿನಿಮಾದಲ್ಲಿನ ನನ್ನ ನಟನೆ, ಕೆಲಸ ನೋಡಿ ಆಫರ್‌ಗಳು ಬರಲಿ ಎಂದು ಕಾಯುತ್ತಿದ್ದೇನೆ. ಹೀಗಾಗಿ 'ಲಕ್ಕಿಮ್ಯಾನ್' ಬಳಿಕ ಒಳ್ಳೊಳ್ಳೆಯ ಬ್ಯಾನರ್‌ನ ಸಿನಿಮಾಗಳಿಂದ ಆಫರ್‌ಗಳು ಬಂದರೂ ಯಾವ ಸಿನಿಮಾಗಳನ್ನೂ ನಾನು ಒಪ್ಪಿಕೊಂಡಿಲ್ಲ.

• ನೀವು 'ಲಕ್ಕಿ'ಗರ್ಲ್ ಅಲ್ಲವೇ?

'ಲಕ್ಕಿಮ್ಯಾನ್' ಸಿನಿಮಾದಲ್ಲಿ ನಟನೆ ಮಾಡಿರುವಂಥ ಕಲಾವಿದರು, ತಂತ್ರಜ್ಞರೆಲ್ಲರೂ ಲಕ್ಕಿಯೇ. ಪುನೀತ್ ರಾಜ್‌ಕುಮಾರ್ ಅವರ ಜೊತೆ ಇದ್ದಿದ್ದೇ ಪುಣ್ಯ. ಅವರು ನಮ್ಮ ಜೊತೆಗಿಲ್ಲದೇ ಇದ್ದರೂ ಅವರ ಆಶೀರ್ವಾದ ಸದಾ ನಮ್ಮ ಮೇಲಿದೆ. ಚಿತ್ರದಲ್ಲಿ ದೇವರ ಪಾತ್ರದಲ್ಲಿ ಪುನೀತ್ ಅವರು ನಟಿಸಿದ್ದು, ಅದಕ್ಕಿಂತ ದೊಡ್ಡ ಆಶೀರ್ವಾದ ಬೇಕೇ? ಅವರು ನಮ್ಮ ಜೊತೆ ಸದಾ ಇರುತ್ತಾರೆ.

ಸುಭಾಷಿತ

ವಿವೇಚನೆಯ ಪಕ್ವ ಫಲಕ್ಕೆ ಬುದ್ಧಿಯೇ ಬೇರು.
-ಕೆ.ಎಸ್.ನಿಸಾರ್ ಅಹಮದ್

ಲೈಂಗಿಕ ಕಾರ್ಯಕರ್ತೆಯರಿಗೆ ಘನತೆ ತಂದ ಕೋರ್ಟ್ ತೀರ್ಪು

'ವೇಶ್ಯಾವಾಟಿಕೆಯೂ ಒಂದು ವೃತ್ತಿ ಮತ್ತು ಲೈಂಗಿಕ ಕಾರ್ಯಕರ್ತೆಯರು ಕೂಡ ಕಾನೂನಿನ ಅಡಿಯಲ್ಲಿ ಘನತೆಯಿಂದ ಬದುಕಲು ಹಾಗೂ ಸಮಾನ ರಕ್ಷಣೆಯನ್ನು ಪಡೆಯಲು ಅರ್ಹರು' ಎನ್ನುವ ಸುಪ್ರೀಂ ಕೋರ್ಟ್‌ನ ತೀರ್ಪು, ನಿಸ್ಸಂದೇಹವಾಗಿ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣವಾಗುವಂಥದ್ದು. ಆದ್ದರಿಂದಲೇ ಈ ತೀರ್ಪನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕಿದೆ. ಲೈಂಗಿಕ ಕಾರ್ಯಕರ್ತೆಯರ ಕುರಿತು ಸಮಾಜದಲ್ಲಿ ಬೇರೂರಿರುವ ತುಚ್ಛ ಭಾವನೆಯನ್ನು ಕೊನೆಗಾಣಿಸಿ, ಅವರಿಗೂ ಗೌರವ ಮತ್ತು ಘನತೆಯ ಬದುಕನ್ನು ರೂಪಿಸಿಕೊಡುವ ದಾರಿಯಲ್ಲಿ ಈ ತೀರ್ಪು ಒಂದು ಕೈದೀವಿಗೆಯಾಗಿ ಸಿಕ್ಕಂತಾಗಿದೆ. ಆ ದಿಸೆಯಲ್ಲಿ ಕಾಯ್ದೆ ರೂಪಿಸಬೇಕಾದ ಅಗತ್ಯವನ್ನು ಅದು ಗಟ್ಟಿಯಾಗಿ ಪ್ರತಿಪಾದಿಸುತ್ತಿದೆ. ಲೈಂಗಿಕ ಕಾರ್ಯಕರ್ತೆಯರನ್ನು ಪೊಲೀಸರು ತುಂಬಾ ತುಚ್ಛವಾಗಿ ನಡೆಸಿಕೊಳ್ಳುವುದಲ್ಲದೆ ಅವರ ಶೋಷಣೆಗೂ ಕಾರಣರಾಗುತ್ತಿದ್ದಾರೆ ಎನ್ನುವ ದೂರೇನೂ ಇಂದು ನಿನ್ನೆಯದಲ್ಲ. ಹಾಗೆಯೇ ವೇಶ್ಯಾವಾಟಿಕೆಯಲ್ಲಿ ತೊಡಗಿದವರಿಂದ ಪೊಲೀಸರು ಹಣ ವಸೂಲಿ ಮಾಡುವ ಕುರಿತ ಆರೋಪಗಳೂ ಕೋರ್ಟ್‌ನ ಗಮನಕ್ಕೆ ಬಂದಿವೆ. ಆದ್ದರಿಂದಲೇ, ಸಮ್ಮತಿಯಿಂದ ವ್ಯಕ್ತಪಡಿಸಿ ಲೈಂಗಿಕ ವೃತ್ತಿಯಲ್ಲಿ ತೊಡಗಿಕೊಂಡವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬಾರದು ಮತ್ತು ಅವರ ವೃತ್ತಿಯಲ್ಲಿ ಹಸ್ತಕ್ಷೇಪವನ್ನೂ ಮಾಡಬಾರದು ಎಂದು ತಾಕೀತು ಮಾಡಿದೆ. 'ಲೈಂಗಿಕ ಕಾರ್ಯಕರ್ತೆಯರ ವಿರುದ್ಧ ಪೊಲೀಸರ ವರ್ತನೆ ಕ್ರೂರ ಮತ್ತು ಹಿಂಸಾತ್ಮಕವಾಗಿರುವುದನ್ನು ನಾವು ಗಮನಿಸಿದ್ದೇವೆ. ಅವರ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಲಾಗದು' ಎಂದು ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠ ಹೇಳಿರುವುದು, ಈ ಶೋಷಿತ ಸಮುದಾಯದಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. ವೇಶ್ಯಾವಾಟಿಕೆ ಕಾರಣಕ್ಕಾಗಿ ದಾಳಿ, ಬಂಧನಗಳು ನಡೆದಾಗ ಲೈಂಗಿಕ ಕಾರ್ಯಕರ್ತೆಯರು ತೀವ್ರವಾದ ಅವಮಾನ, ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಮಾಧ್ಯಮಗಳೂ ಇಂತಹ ಸಂದರ್ಭಗಳಲ್ಲಿ ಕೆಲವೊಮ್ಮೆ ಅಸೂಕ್ಷ್ಮವಾಗಿ ನಡೆದುಕೊಂಡು ಮಹಿಳೆಯರ ಗುರುತು ಬಹಿರಂಗಪಡಿಸುವುದುಂಟು. ಪುರುಷರು ಭಾಗಿಯಾಗದೆ ವೇಶ್ಯಾವಾಟಿಕೆ ನಡೆಯುವುದಿಲ್ಲ. ಆದರೆ, ಅವಮಾನಕ್ಕೆ ಒಳಗಾಗುವುದು ಮಾತ್ರ ಮಹಿಳೆಯರೇ ಆಗಿರುತ್ತಾರೆ. ಇಂತಹ ಸೂಕ್ಷ್ಮ ಪ್ರಕರಣಗಳ ವರದಿ ಮಾಡುವಾಗ ಮಾಧ್ಯಮದ ಹೊಣೆ ಏನೆಂಬುದನ್ನೂ ಕೋರ್ಟ್ ನೆನಪಿಸಿದೆ. ತಾಯಿ ವೇಶ್ಯಾವೃತ್ತಿಯಲ್ಲಿ ತೊಡಗಿದ್ದಾಳೆ ಎನ್ನುವ ಕಾರಣಕ್ಕೆ ಅವಳಿಂದ ಮಗುವನ್ನು ಬೇರ್ಪಡಿಸಬಾರದು ಎನ್ನುವುದು ಕೂಡ ತೀರ್ಪಿನಲ್ಲಿರುವ ಅತ್ಯಂತ ಮಹತ್ವದ ಅಂಶವಾಗಿದೆ. ತಾಯಿಯ ಆರೈಕೆಯಿಂದ ದೂರವಾಗುವ ಮಕ್ಕಳನ್ನು ಬಾಲಕಾರ್ಮಿಕರಾಗಿಸುವ ಪ್ರಯತ್ನಗಳು ಇದರಿಂದ ತಪ್ಪುತ್ತವೆ.

ಕೇಂದ್ರ ಸರ್ಕಾರ ಶೀಘ್ರ ಕಾಯ್ದೆ ರೂಪಿಸಬೇಕಾಗಿದೆ. ಜೊತೆಗೆ, ಲೈಂಗಿಕ ಕಾರ್ಯಕರ್ತೆಯರ ಬಗ್ಗೆ ಸಮಾಜದ ದೃಷ್ಟಿಕೋನವೂ ಬದಲಾಗಬೇಕಾದ ಅಗತ್ಯವಿದೆ

ಲೈಂಗಿಕ ಕಾರ್ಯಕರ್ತೆಯರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ದೇಶದಲ್ಲೀಗ ಯಾವ ಕಾಯ್ದೆಯೂ ಇಲ್ಲ. ಖಾಸಗಿಯಾಗಿ ನಡೆಸುವ ವೇಶ್ಯಾವಾಟಿಕೆಯು ಅಪರಾಧವಲ್ಲವಾದರೂ 'ಅನೈತಿಕ ಕಳ್ಳಸಾಗಣೆ (ತಡೆ) ಕಾಯ್ದೆ-1956', ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಬಾಲ ನ್ಯಾಯ ಕಾಯ್ದೆಯ ಕೆಲವು ನಿಯಮಗಳಲ್ಲಿ ವೇಶ್ಯಾವಾಟಿಕೆಯ ಪ್ರಸ್ತಾಪ ಬರುತ್ತದೆ. ಸಾರ್ವಜನಿಕವಾಗಿ ವೇಶ್ಯಾವಾಟಿಕೆಗೆ ಒತ್ತಾಯಿಸುವುದು, ವೇಶ್ಯಾಗೃಹವನ್ನು ನಡೆಸುವುದು ಮತ್ತು ಗ್ರಾಹಕರನ್ನು ಹುಡುಕಿಕೊಡುವುದನ್ನು ಐಪಿಸಿ ಕಲಂಗಳು ಅಪರಾಧ ಎಂದು ವ್ಯಾಖ್ಯಾನಿಸುತ್ತವೆ. ಲೈಂಗಿಕ ಕಾರ್ಯಕರ್ತೆಯರ ಶೋಷಣೆಯಲ್ಲಿ ಪೊಲೀಸರಿಗೆ ಈ ಕಲಂಗಳೇ ಅಸ್ತ್ರವಾಗಿ ಸಿಕ್ಕಿವೆ. ಈ ವಿಷಯ, 2011ರಲ್ಲೇ ಸುಪ್ರೀಂ ಕೋರ್ಟ್‌ನ ಗಮನಕ್ಕೆ ಬಂದಿದೆ. ಮಾನವ ಕಳ್ಳಸಾಗಣೆ ತಡೆಗಟ್ಟುವುದು, ಲೈಂಗಿಕ ಕಾರ್ಯಕರ್ತೆಯರಿಗೆ ಪುನರ್‌ವಸತಿ ಕಲ್ಪಿಸುವುದು ಮತ್ತು ಅವರು ಘನತೆಯಿಂದ ಬದುಕುವಂತೆ ಮಾಡುವುದು ಕೋರ್ಟ್‌ನ ಆದ್ಯತೆಯಾಗಿ ಕಂಡಿದೆ. ಈ ಮೂರೂ ಉದ್ದೇಶಗಳನ್ನು ಈಡೇರಿಸಲು ಏನು ಮಾಡಬೇಕು ಎಂಬುದನ್ನು ಶಿಫಾರಸು ಮಾಡಲು ಸಮಿತಿಯೊಂದನ್ನು ಅದು ರಚಿಸಿತ್ತು. ಆ ಸಮಿತಿಯ ಶಿಫಾರಸಿನ ಅನ್ವಯ ಕಾಯ್ದೆ ರೂಪಿಸುವುದಾಗಿ ಕೇಂದ್ರ ಸರ್ಕಾರ 2016ರಲ್ಲೇ ವಾಗ್ದಾನ ಮಾಡಿತ್ತು. ಆದರೆ, ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕಾಯ್ದೆಯನ್ನು ರೂಪಿಸುವವರೆಗೆ ತನ್ನ ನಿರ್ದೇಶನಗಳನ್ನು ಪರಿಪಾಲನೆ ಮಾಡಬೇಕು ಎಂದು ಕೋರ್ಟ್, ಸರ್ಕಾರಕ್ಕೆ ಸೂಚನೆ ನೀಡಿದೆ. ಲೈಂಗಿಕ ಕಾರ್ಯಕರ್ತೆಯರ ವಿಷಯದಲ್ಲಿ ಅದು ಮೊದಲಿನಿಂದಲೂ ಕಳಕಳಿ ವ್ಯಕ್ತಪಡಿಸುತ್ತಲೇ ಬಂದಿದೆ. ಯಾವುದೇ ಗುರುತಿನ ಚೀಟಿ ಒತ್ತಾಯಿಸದೆ ಅವರಿಗೆ ಪಡಿತರವನ್ನು ವಿತರಿಸುವಂತೆ ಎಲ್ಲ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 2020ರಲ್ಲೇ ಸೂಚನೆಯನ್ನು ನೀಡಿತ್ತು. ಇದೇ ವರ್ಷದ ಆರಂಭದಲ್ಲಿ, ಎಲ್ಲ ಲೈಂಗಿಕ ಕಾರ್ಯಕರ್ತೆಯರಿಗೆ ಪಡಿತರ ಚೀಟಿ ಮತ್ತು ಮತದಾರರ ಚೀಟಿ ವಿತರಿಸುವ ಕಾರ್ಯವನ್ನು ಬೇಗ ಮುಗಿಸುವಂತೆಯೂ ತಾಕೀತು ಮಾಡಿತ್ತು. ಕಳೆದ ವಾರ ನೀಡಿದ ತೀರ್ಪು ಅದರ ಮುಂದುವರಿದ ಹೆಜ್ಜೆಯಾಗಿದೆ. ವಿಷಯದ ಗಾಂಭೀರ್ಯ ಅರಿತು, ಕೇಂದ್ರ ಸರ್ಕಾರವೂ ಬೇಗ ಕಾಯ್ದೆ ರೂಪಿಸುವತ್ತ ಗಮನಹರಿಸಬೇಕಿದೆ. ಕಾಯ್ದೆಯನ್ನು ರೂಪಿಸಿದ ಮಾತ್ರಕ್ಕೆ ಲೈಂಗಿಕ ಕಾರ್ಯಕರ್ತೆಯರಿಗೆ ಘನತೆ ದಕ್ಕಿಬಿಡುವುದಿಲ್ಲ. ಅದಕ್ಕೆ ಸಮಾಜದ ದೃಷ್ಟಿಕೋನವೂ ಬದಲಾಗುವ ಅಗತ್ಯವಿದೆ. ಆದರೆ, ಕಾಯ್ದೆಯನ್ನು ರೂಪಿಸುವುದು ಆ ದಾರಿಯಲ್ಲಿ ಮೊದಲ ಹೆಜ್ಜೆಯಾಗಿದೆ ಎನ್ನುವುದನ್ನು ಮರೆಯುವಂತಿಲ್ಲ.

ದಿನದ ಟ್ವೀಟ್

ತಾಯ್ನೆಲಕ್ಕೆ ಅಮೂಲ್ಯ ಕಲಾಕೃತಿ

ಕದ್ದು ಸಾಗಾಟ ಮಾಡಿದ ಅತ್ಯಮೂಲ್ಯ ಕಲಾಕೃತಿಗಳು ಮರಳಿ ಭಾರತದ ಮಣ್ಣಿಗೆ ಸೇರುತ್ತಿವೆ. ಕಳೆದ ಎಂಟು ವರ್ಷಗಳಲ್ಲಿ 228 ಪ್ರಾಚೀನ ವಿಗ್ರಹಗಳನ್ನು ಸುರಕ್ಷಿತವಾಗಿ ಭಾರತಕ್ಕೆ ತಂದಿದೆ ನರೇಂದ್ರ ಮೋದಿ ನೇತೃತ್ವದ ಸರ್ಕಾರ. #8YearsOfPreservingCulture

ಲಕ್ಷ್ಮಣ ಸವದಿ, ಬಿಜೆಪಿ ಮುಖಂಡ

ಕಿಡಿನುಡಿ

ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ, ಯಾರೇ ವಿರೋಧ ವ್ಯಕ್ತಪಡಿಸಿದರೂ ಸಾಕು ಅದನ್ನು ಬಿಜೆಪಿ ನಾಯಕರು ಕಾಂಗ್ರೆಸ್ ಕುತಂತ್ರ ಎನ್ನುತ್ತಿದ್ದಾರೆ. ರಾಜ್ಯದ ಜನ ಕಾಂಗ್ರೆಸ್ಸಿನ ಅಡಿಯಾಳಾಗಿದ್ದಾರೆಯೇ? ಜನರು ಸ್ವತಂತ್ರರಲ್ಲವೇ?

ಸಣ್ಣಮಾರಪ್ಪ, ನಾಗರಿಕ

25 ವರ್ಷಗಳ ಹಿಂದೆ

ಮಂಗಳವಾರ, 3-6-1997

● **ಸೇತುವೆಯಿಂದ ಬಸ್ ಬಿದ್ದು 13 ಸಾವು**

ತುಮಕೂರು, ಜೂನ್ 2– ಶಿರಾ ಪಟ್ಟಣದಿಂದ ಸುಮಾರು ಎರಡು ಕಿ.ಮೀ. ದೂರದ ಕಲ್‌ಕೋಟೆ ಬಳಿ ಖಾಸಗಿ ಬಸ್ಸೊಂದು ಸೇತುವೆಯಿಂದ ಕೆಳಗುರುಳಿ ಬಿದ್ದು 13 ಮಂದಿ ಮೃತರಾಗಿದ್ದಾರೆ. ಸುಮಾರು 45 ಮಂದಿ ಗಾಯಗೊಂಡಿದ್ದು ಅವರಲ್ಲಿ 6–7 ಮಂದಿಯ ಸ್ಥಿತಿ ಗಂಭೀರವಾಗಿದೆ.

ಧರ್ಮಪುರದಿಂದ ರಾಮನಗರಕ್ಕೆ ಹೋಗುತ್ತಿದ್ದ ಬಸ್ ಸೇತುವೆ ಬಳಿ ಬರುತ್ತಿದ್ದಂತೆಯೇ ನಿಯಂತ್ರಣ ತಪ್ಪಿ ಸುಮಾರು 30 ಅಡಿ ಕೆಳಗೆ ಬಿತ್ತು.

● **ಸಂವಿಧಾನ ಮೌಲ್ಯ ರಕ್ಷಣೆ ರಾಷ್ಟ್ರಪತಿ ಪ್ರತಿಪಾದನೆ**

ನವದೆಹಲಿ, ಜೂನ್ 2 (ಪಿಟಿಐ) ಶಾಸನಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ಯಾವುದೇ ಪಕ್ಷ ಅಥವಾ ಮೈತ್ರಿಕೂಟಕ್ಕೆ ಬಹುಮತ ದೊರೆಯದೆ ತ್ರಿಶಂಕು ಸ್ಥಿತಿ ಉದ್ಭವಿಸಿದಾಗ, ಸಂದಿಗ್ಧ ಮತ್ತು ಜಟಿಲ ಪರಿಸ್ಥಿತಿಗಳಲ್ಲಿ ಸಂವಿಧಾನಾತ್ಮಕ ಮುಖ್ಯಸ್ಥರು ಸಂವಿಧಾನದ ರಕ್ಷಕರಾಗಿ ಕಾರ್ಯ ನಿರ್ವಹಿಸಬೇಕು ಎಂದು ರಾಷ್ಟ್ರಪತಿ ಡಾ.ಶಂಕರ್ ದಯಾಳ್ ಶರ್ಮಾ ಇಂದು ಇಲ್ಲಿ ಅಭಿಪ್ರಾಯಪಟ್ಟರು.

'ಶಾಸನಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ದೊರೆಯದ ಪರಿಸ್ಥಿತಿಯಲ್ಲಿ ಸಂವಿಧಾನಾತ್ಮಕ ಮುಖ್ಯಸ್ಥರ ಪಾತ್ರ' ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತ್ರಿಶಂಕು ಸಂಸತ್ ಪರಿಸ್ಥಿತಿ ಎದುರಾದಾಗ ರಾಷ್ಟ್ರಪತಿಗಳು ಯಾವ ನಿರ್ಧಾರ ಕೈಗೊಳ್ಳಬೇಕು ಎಂದು ಚರ್ಚಿಸುವ ಸಲುವಾಗಿ ಎಲ್ಲ ರಾಜ್ಯಗಳ ರಾಜ್ಯಪಾಲರು ಮತ್ತು ರಾಜಕೀಯ ಪಕ್ಷಗಳ ಮುಖಂಡರ ಸಮಾವೇಶವನ್ನು ರಾಷ್ಟ್ರಪತಿಗಳು ವ್ಯವಸ್ಥೆಗೊಳಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 3-6-1972

● **ಬಾಹ್ಯಾಂತರಿಕ್ಷ ವಿಜ್ಞಾನದ ಅಭಿವೃದ್ಧಿಗಾಗಿ ಆಯೋಗ: ಪ್ರೊ.ಧಾವನ್ ಅಧ್ಯಕ್ಷರು**

ನವದೆಹಲಿ, ಜೂ.2– ದೇಶದಲ್ಲಿ ಅಂತರಿಕ್ಷ ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನದ ತ್ವರಿತ ಅಭಿವೃದ್ಧಿಗಾಗಿ ಕಾರ್ಯಕ್ರಮ ರೂಪಿಸಲು ಅಂತರಿಕ್ಷ ಆಯೋಗವೊಂದನ್ನು ಈ ಕೂಡಲೇ ನೇಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಬೆಂಗಳೂರಿನಲ್ಲಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಡೈರೆಕ್ಟರ್ ಪ್ರೊ. ಎಸ್.ಧಾವನ್ ಅವರು ಈ ಆಯೋಗದ ಅಧ್ಯಕ್ಷರಾಗಿದ್ದು, ಆಯೋಗದ ಕೇಂದ್ರ ಕಚೇರಿ ಬೆಂಗಳೂರಿನಲ್ಲಿರುತ್ತದೆ.

● **ಶರಾವತಿ ವಿದ್ಯುತ್ ಉತ್ಪಾದನಾ ಯಂತ್ರದ ಚಕ್ರಗಳಿಗೆ ತೀವ್ರ ಜಖಂ**

ಬೆಂಗಳೂರು, ಜೂ.2– ತಲಕಳಲೆ ಜಲಾಶಯದಿಂದ ಶರಾವತಿ ವಿದ್ಯುದಾಗಾರಕ್ಕೆ ನೀರು ಒದಗಿಸುವ ಆರು ಫರ್ಲಾಂಗ್ ಉದ್ದದ ಒಂದು ಸುರಂಗ ಮಾರ್ಗದಲ್ಲಿ ಕೊರಕಲು ಬಿದ್ದು, ಕಲ್ಲು ಹಾಗೂ ಕಾಂಕ್ರೀಟ್ ಚೂರುಗಳೆದ್ದು, ವಿದ್ಯುತ್ ಉತ್ಪತ್ತಿ ಯಂತ್ರಗಳ ಕೆಲ ಭಾರಿ ಚಕ್ರಗಳಿಗೆ ತೀವ್ರ ಜಖಂ ಆಗಿರುವುದು ಈಗ ಬೆಳಕಿಗೆ ಬಂದಿದೆ.

ಮಕ್ಕಳನ್ನು ತಲುಪುವಂಥ ಪಠ್ಯವನ್ನು ರೂಪಿಸುವುದು ಒಂದು ಅರ್ಥಪೂರ್ಣ ಕಲೆ

ಇತಿಹಾಸ ಪಠ್ಯ ಮತ್ತು ಶೈಕ್ಷಣಿಕ ಆಶಯ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಿಕ್ಷಣದ ಉದ್ದೇಶ ಒಂದಷ್ಟು ಮಾಹಿತಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದಲ್ಲ. ಶಿಕ್ಷಣದ ಮೂಲಕ ಮಗುವಿನ ವರ್ತನೆಯಲ್ಲಿ ಸಕಾರಾತ್ಮಕ ಪರಿವರ್ತನೆ ಉಂಟಾಗಬೇಕು. ಎಲ್ಲ ಪಾಠ ಬೋಧನೆಯೂ ಅವುಗಳ ನೆಲೆಯಲ್ಲಿ ಮಗುವಿನ ವರ್ತನೆಯಲ್ಲಿ ಸಕಾರಾತ್ಮಕ ಪರಿವರ್ತನೆಯನ್ನು ಸಾಧಿಸಬೇಕು. ಅದಕ್ಕಾಗಿ ಶಿಕ್ಷಣ ಶಾಸ್ತ್ರವು 'ಮೆಥಡಾಲಜಿ' ಯನ್ನು ರೂಪಿಸಿದೆ.

ಇತಿಹಾಸ ಪಾಠ ಬೋಧನೆಗೆ ಅದರದ್ದೇ ಉದ್ದೇಶಗಳಿವೆ. ಮಗುವಿನಲ್ಲಿ ಅದು ವಿಶಾಲ ಜೀವನದೃಷ್ಟಿಯನ್ನು, ಮಾನವಸ್ವಭಾವಗಳ ಅರಿವನ್ನು, ವಿವಿಧ ಸನ್ನಿವೇಶಗಳಿಗೆ ಮುಖಾಮುಖಿಯಾದಾಗ ಮನುಷ್ಯರ ವರ್ತನೆಗಳ ಅರಿವನ್ನು, ವರ್ತಮಾನದ ಸಮಸ್ಯೆಗಳ ಪರಿಹಾರಕ್ಕೆ ಬೇಕಾದ ಜ್ಞಾನವನ್ನು ಕೊಡಬೇಕು. ಮೌಲ್ಯಪ್ರಜ್ಞೆ, ಸೌಂದರ್ಯಪ್ರಜ್ಞೆಗಳನ್ನು ಬೆಳೆಸಬೇಕು. ಒಟ್ಟಾಗಿ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಸಾಮರ್ಥ್ಯವನ್ನು ಹೆಚ್ಚಿಸಬೇಕು.

ಇತಿಹಾಸವೆಂದರೆ ಹಲವು ಲಭ್ಯ ದಾಖಲೆಗಳಲ್ಲಿರುವ ಘಟನಾವಳಿಗಳ ಸರಮಾಲೆ. ಅಲ್ಲಿ ಲಭ್ಯ ದಾಖಲೆಗಳು ಹೇಳುವ ಘಟನೆಗಳು ಮಾತ್ರ ಸತ್ಯವಾಗಿ ಇರುತ್ತವೆಯೇ ವಿನಾ ಆ ಘಟನೆಗಳನ್ನು ಅರ್ಥೈಸಿದ ವಿಧಾನವಲ್ಲ. ಅರ್ಥೈಸುವಿಕೆ ಇತಿಹಾಸಕಾರನಿಗೆ ಬಿಟ್ಟದ್ದು. ಇತಿಹಾಸ ತೀರಾ ಹಿಂದೆ ಹಿಂದಕ್ಕೆ ಹೋದಾಗ ಅರ್ಥೈಸುವಿಕೆಯಲ್ಲಿ ದೋಷಗಳು ಜಾಸ್ತಿ ಬರುತ್ತಲೂ ಇರುತ್ತವೆ. ಉದಾಹರಣೆಗೆ, ಯಾವನೋ ರಾಜ ಒಂದು ನಗರದಿಂದ ಜನರನ್ನು ಒಕ್ಕಲೆಬ್ಬಿಸಿದ ದಾಖಲೆ ಸಿಕ್ಕಿದಾಗ ಒಕ್ಕಲೆಬ್ಬಿಸಿದ್ದ ಎನ್ನುವುದಷ್ಟೇ ಸತ್ಯ. ಮೇಲ್ನೋಟಕ್ಕೆ ಅವನು ಜನವಿರೋಧಿ ಇರಬಹುದು ಎನಿಸುತ್ತದೆ. ಆದರೆ ನಿರ್ದಿಷ್ಟ ಪ್ರದೇಶಕ್ಕೆ ನೆರೆಹಾವಳಿ ಉಂಟಾಗುವ ಅಪಾಯದ ಮುನ್ಸೂಚನೆಯಿಂದ ಜನರನ್ನು ರಕ್ಷಿಸಲು ಒಕ್ಕಲೆಬ್ಬಿಸಿರಲೂಬಹುದು. ಆದರೆ ಇದನ್ನು ಹೇಳಲು ಬೇಕಾದ ದಾಖಲೆ ಸಿಕ್ಕಿರುವುದಿಲ್ಲ. ದಾಖಲೆ ಸಿಗದೆ ಹೇಳಲು ಆಗುವುದಿಲ್ಲ. ಆದ್ದರಿಂದ ಎಲ್ಲವೂ ಸತ್ಯವೇ ಆಗಿರುವ ಇತಿಹಾಸ ಯಾವುದು ಎಂದು ಕೇಳಿದರೆ, ಯಾವುದೂ ಇಲ್ಲ.

ಆದರೆ ಲಭ್ಯ ದಾಖಲೆಗಳ ಆಧಾರದಲ್ಲೇ ಇತಿಹಾಸ ಬೋಧನೆಯ ಉದ್ದೇಶವನ್ನು ತಲುಪಲು ಬರುತ್ತದೆ. ಮೊದಲು ಮನುಷ್ಯನಿಗೆ ಬಟ್ಟೆ ಇರಲಿಲ್ಲ. ನಂತರ ಬಟ್ಟೆ ಕಂಡುಹಿಡಿದ. ಹಸಿ ಮಾಂಸ ತಿನ್ನುತ್ತಿದ್ದ. ಗೆಡ್ಡೆ ಗೆಣಸು ತಿಂದು ಬಾಳುತ್ತಿದ್ದ. ಗುಂಪುಗಳಾಗಿ ಹೊಡೆದಾಡುತ್ತಿದ್ದರು ಮುಂತಾದ ಮಾನವನ 'ಯಾನ'ದ ಕುರಿತ ತಿಳಿವಳಿಕೆಗಳು ಸರಿ ಹೊತ್ತಿನಲ್ಲಿ ಯಾವುದು ಅಹಿತಕಾರಿ ಪ್ರವೃತ್ತಿ ಎನಿಸುತ್ತದೆಯೋ ಅದನ್ನು ಕೂಡ ಮಾನವಸಹಜ ಸ್ವಭಾವ ಎಂಬ ವಿಶಾಲ ದೃಷ್ಟಿಯಿಂದ ಸ್ವೀಕರಿಸಲು ಪ್ರೇರಕವಾಗುತ್ತವೆ. ಈ ಬಗೆಯ ಚಿಂತನಾಕ್ರಮವು ಮಗುವಿನ ಆಲೋಚನಾ ಕ್ರಮವನ್ನು ಉತ್ತಮಪಡಿಸಿ ಬದುಕನ್ನು ಆಪ್ತಗೊಳಿಸುತ್ತದೆ, ಯಶಸ್ವಿಯಾಗಿ ಎದುರಿಸುವಂತೆ ಮಾಡುತ್ತದೆ.

ಇತಿಹಾಸ ಪಠ್ಯದ ವಿಷಯದಲ್ಲಿ, 'ಆ ರಾಜರು ಮಹತ್ವದವರು. ಈ ರಾಜರು ಮಹತ್ವದವರು. ಆದರೆ ಅವರ ಬಗ್ಗೆ ಪಠ್ಯದಲ್ಲಿ ವಿವರಗಳಿಲ್ಲ' ಎಂಬ ಜಗಳಗಳಿವೆ. ಆದರೆ 10 ತಿಂಗಳುಗಳಲ್ಲಿ ಲಭ್ಯ ವೇಳಾಪಟ್ಟಿಯಲ್ಲಿ ಮಕ್ಕಳಿಗೆ ಹೊರೆಯಾಗದಂತೆ ಬೋಧಿಸಿ ಮುಗಿಸಬೇಕಾದ ಪಾಠ ಪುಸ್ತಕದಲ್ಲಿ ಭಾರತದ ಎಲ್ಲ ರಾಜರುಗಳನ್ನೂ ತುಂಬಿಸಲು ಆಗುವುದಿಲ್ಲ. ಆಗ ಪ್ರಾತಿನಿಧಿಕವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಪ್ರಾತಿನಿಧಿಕ ಎಂದಾಗ ಯಾವುದಕ್ಕೆ ಪ್ರಾತಿನಿಧಿಕ? ಎಲ್ಲ ರಾಜರುಗಳೂ ರಾಜಪ್ರಭುತ್ವದಲ್ಲಿ ಆಡಳಿತವನ್ನೇ ಮಾಡಿರುತ್ತಾರೆ. ಒಬ್ಬ ರಾಜನ ಬಗ್ಗೆ ಕೊಟ್ಟರೆ ಸಾಕು, ರಾಜಪ್ರಭುತ್ವದ ಪರಿಚಯ ಆಗುತ್ತದೆ. ಆದರೆ ಕಾಲ ಮತ್ತು ಸಂಸ್ಕೃತಿಗಳ ಬದಲಾವಣೆಗೆ ಅನುಗುಣವಾಗಿ ಪ್ರಭುತ್ವದ ನಿರ್ವಹಣಾ ಕ್ರಮದಲ್ಲಿ ಬದಲಾವಣೆ ಆಗಿರುತ್ತದೆ. ಆದ್ದರಿಂದ ಕಾಲ ಮತ್ತು ಸಂಸ್ಕೃತಿಯ ಆಧಾರದಲ್ಲಿ ಪ್ರತಿನಿಧಿತ್ವವನ್ನು ಆರಿಸಿಕೊಳ್ಳಬೇಕು. ಹಾಗೆ ಪ್ರತಿನಿಧಿತ್ವವನ್ನು ತೆಗೆದುಕೊಂಡಾಗ ಸಾಮಾಜಿಕ ಜೀವನಕ್ಕೆ ಮಹತ್ವ ಕೊಡಬೇಕು. ಏಕೆಂದರೆ, ಯಾವುದೇ ಪ್ರಭುತ್ವವು ನಾಗರಿಕತೆಯ ತಾತ್ಕಾಲಿಕ ಸಂಸ್ಥೆಯಾಗಿರುತ್ತದೆ. ಪ್ರಭುತ್ವಗಳು ಆಗಿಂದಾಗ್ಗೆ ಬದಲಾಗುತ್ತವೆ. ಆದರೆ ಸಾಮಾಜಿಕ ವ್ಯವಸ್ಥೆಯು ನಾಗರಿಕತೆಯ ಶಾಶ್ವತ ವ್ಯವಸ್ಥೆಯಾಗಿರುತ್ತದೆ.

ಸಾಮಾಜಿಕ ಜೀವನಕ್ಕೆ ಮಹತ್ವ ಕೊಟ್ಟಾಗಲೂ ಇತಿಹಾಸ ನಿರೂಪಣೆಯು ರಾಜಕೀಯ ಸಿದ್ಧಾಂತಗಳ ಕಣ್ಣಿನಲ್ಲಿ ನೋಡಿದ ಸಾಮಾಜಿಕ ಇತಿಹಾಸ ಆಗಿರಬಾರದು. ಸಮಾಜವನ್ನು ಸ್ವತಂತ್ರವೂ ಅನನ್ಯವೂ ಆಗಿ ಗ್ರಹಿಸಿದ ಇತಿಹಾಸವಾಗಬೇಕು. ಆಗ ಇತಿಹಾಸವು ಮಗುವಿನ ಮಾನವಸಹಜ ಭಾವನೆಗಳೊಂದಿಗೆ ಸಂವಾದಿಸಲು ತೊಡಗುತ್ತದೆ. ಇತಿಹಾಸದ ನಿರೂಪಣೆಯಲ್ಲಿ ವರ್ತಮಾನ ಮತ್ತು ಭವಿಷ್ಯದ ದೃಷ್ಟಿಯಿಂದ ಮಹತ್ವದ್ದು ಯಾವುದು ಎನ್ನುವುದಕ್ಕೆ ಆದ್ಯತೆ ನೀಡಬೇಕು. ಉದಾಹರಣೆಗೆ, ಪುರಾತನ ಇತಿಹಾಸದಲ್ಲಿ ಮಾಡುತ್ತಿದ್ದ ಯಜ್ಞ-ಯಾಗಗಳು ವರ್ತಮಾನದಲ್ಲಿ ಬಹಳ ಮಹತ್ವವನ್ನು ಹೊಂದಿಲ್ಲ. ಆದರೆ 'ಸಭಾ' ಮತ್ತು 'ಸಮಿತಿ' ಎಂಬ ರಾಜಕೀಯ ಸಂಸ್ಥೆಗಳು ಮಹತ್ವವನ್ನು ಪಡೆದಿವೆ. 'ಸಭಾ'ವು ಈಗಿನ ರಾಜ್ಯಸಭೆಯನ್ನು ಹೋಲುವ ವಿದ್ವಾಂಸರು ಮತ್ತು ಕುಲೀನರ ಸಭೆ. ಅದಕ್ಕೆ ಸಲಹಾತ್ಮಕ ಪಾತ್ರ ಜಾಸ್ತಿ ಇತ್ತು. 'ಸಮಿತಿ'ಯು ವಿವಿಧ ಕುಲಗಳ ಪ್ರತಿನಿಧಿಗಳನ್ನು ಹೊಂದಿದ್ದ, ಈಗಿನ ಲೋಕಸಭೆಯ ಮಾದರಿಯದು. 'ಸಮಿತಿ'ಯ ನಿರ್ದೇಶನಗಳಿಗೆ ಪುರೋಹಿತ, ರಾಜ ಜಾಸ್ತಿ ಮಾನ್ಯತೆಯನ್ನು ಕೊಡಬೇಕಾಗಿತ್ತು. ಇದನ್ನು ಅರ್ಥ ಮಾಡಿಕೊಂಡರೆ ಜಗತ್ತಿನ ಎಲ್ಲ ದ್ವಿಸದನ ಪ್ರಜಾಪ್ರಭುತ್ವಗಳ ಕಾರ್ಯಾಂಗೀಯ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಸೂಕ್ತ ತಳಹದಿ ಸಿಗುತ್ತದೆ.

ಪಠ್ಯ ರಚನೆಕಾರರು ರಾಜಕೀಯ ಸಿದ್ಧಾಂತದ ದೃಷ್ಟಿಯಲ್ಲಿ ಪಠ್ಯವನ್ನು ರೂಪಿಸಬಾರದು. ಶೈಕ್ಷಣಿಕ ದೃಷ್ಟಿಯಲ್ಲೇ ಪಠ್ಯ ನಿರೂಪಿಸಬೇಕು. ಉದಾಹರಣೆಗೆ, ಟಿಪ್ಪು ಸುಲ್ತಾನ್ ಬಗ್ಗೆ ಹೇಳದೆ ಬ್ರಿಟಿಷ್ ಇತಿಹಾಸವನ್ನು ಹೇಳುವುದಕ್ಕೇ ಆಗುವುದಿಲ್ಲ. ಟಿಪ್ಪು ಸುಲ್ತಾನ್‌ನನ್ನು ಒಳಗೊಳಿಸಲೇಬೇಕು. ಆದರೆ ಹೇಗೆ? ಟಿಪ್ಪು ತಾನು, ಮರಾಠರು, ನಿಜಾಮರು ಸೇರಿ ಬ್ರಿಟಿಷರನ್ನು ಓಡಿಸಿದ ಹಾಗೆ ಕನಸು ಕಂಡಿದ್ದ ಎಂದು ಭಾವಾವೇಶದಿಂದ ವಿವರಿಸಬಾರದು. ಏಕೆಂದರೆ ಅವನು ಕನಸು ಕಂಡದ್ದು ಹೌದೊ ಅಲ್ಲವೊ ನಮಗೆ ಗೊತ್ತಿಲ್ಲ. ಆದರೆ ತನಗೆ ಈ ಕನಸು ಬಿದ್ದಿದೆ ಎಂದು ಅವನು ಮಂತ್ರಿ ಪರಿಷತ್‌ನಲ್ಲಿ ಹೇಳಿರುವುದಕ್ಕೆ ದಾಖಲೆ ಇದೆ. ಆದ್ದರಿಂದ ತನಗೆ ಈ ರೀತಿ ಕನಸು ಬಿದ್ದಿತ್ತೆಂದು ಆತ ಮಂತ್ರಿ ಪರಿಷತ್‌ನಲ್ಲಿ ಹೇಳಿದ್ದನು ಎಂದು ಮಾತ್ರ ಹೇಳಿ ವೈಚಾರಿಕ ಅಂತರವನ್ನು ಕಾಪಾಡಿಕೊಳ್ಳಬೇಕು.

ಇತಿಹಾಸದ ಅಧ್ಯಯನವೆಂದರೆ ಮಾನವ ವರ್ತನೆಗಳ ಅಧ್ಯಯನವಾಗಿದೆ. ಹಲವು ಘಟನೆಗಳು ಒಳ್ಳೆಯವನೆಂದು ಸೂಚಿಸುವ ವ್ಯಕ್ತಿಯನ್ನೇ ಕೆಲವು ಘಟನೆಗಳು ಕೆಟ್ಟವನನ್ನಾಗಿಯೂ ಹಲವು ಘಟನೆಗಳು ಕೆಟ್ಟವನಾಗಿ ಸೂಚಿಸುವ ವ್ಯಕ್ತಿಯನ್ನೇ ಕೆಲವು ಘಟನೆಗಳು ಒಳ್ಳೆಯವನನ್ನಾಗಿಯೂ ಸೂಚಿಸುತ್ತವೆ. ಅದು ಒಬ್ಬನೇ ವ್ಯಕ್ತಿ ವಿವಿಧ ಸನ್ನಿವೇಶಗಳಿಗೆ ಪ್ರತಿಕ್ರಿಯಿಸಿದ ರೀತಿಯಾಗಿರುತ್ತದೆ. ಹಾಗಿದ್ದರೆ ಮನುಷ್ಯನ ಪ್ರತಿಕ್ರಿಯೆ ಒಳ್ಳೆಯದೇ ಇರಬೇಕಾದರೆ ಅವನೆದುರಿಗೆ ರೂಪಿಸಲ್ಪಡುವ ಸನ್ನಿವೇಶಗಳು ಯಾವುದಿರಬೇಕು ಎನ್ನುವುದನ್ನು ಅರ್ಥ ಮಾಡಿಕೊಳ್ಳುವ ಉಪಕರಣವಾಗಿ ಇತಿಹಾಸವು ಮಕ್ಕಳನ್ನು ತಲುಪಬೇಕು. ಅಂತಹ ಪಠ್ಯವನ್ನು ಹೇಗೆ ನಿರೂಪಿಸಬೇಕು ಎನ್ನುವುದು ವಿಜ್ಞಾನಕ್ಕಿಂತ ಹೆಚ್ಚಾಗಿ ಅರ್ಥಪೂರ್ಣ ಕಲೆಯಾಗಿದೆ.

ಪಠ್ಯ ರಚನೆಯನ್ನು ಮಾಡುವವರು ಶಿಕ್ಷಣಶಾಸ್ತ್ರವನ್ನು ಅಭ್ಯಾಸ ಮಾಡಿ, ಡಿ.ಇಡಿ., ಬಿ.ಇಡಿ., ಎಂ.ಇಡಿ. ಮಾಡಿ ಮಕ್ಕಳ ಶೈಕ್ಷಣಿಕ ಮನೋವಿಜ್ಞಾನದ ಅರಿವು ಇಲ್ಲದವರಾದಾಗ ಕೆಲವೊಮ್ಮೆ ಇತಿಹಾಸದ ಭಾವನಾತ್ಮಕ ಸಂಗತಿಗಳು ಸಂಯಮದ ಕಟ್ಟೆಯೊಡೆದು ಹೋಗುತ್ತವೆ. ಇಂತಹ ಸಂದರ್ಭದಲ್ಲಿಯೂ ಶಿಕ್ಷಣದ ಮೆಥಡಾಲಜಿಯ ಅರಿವು ಇರುವ ಶಿಕ್ಷಕರು ವಿವರ ಯಾವುದೇ ಇದ್ದರೂ ಅದರ ಬೋಧನೆಯ ಪರಿಣಾಮ ಮಾತ್ರ ಇತಿಹಾಸದ ಬೋಧನೋದ್ದೇಶವೇ ಆಗಿರುವಂತೆ ಜಾಸ್ತಿ ಎಚ್ಚರ ವಹಿಸಬೇಕಾಗುತ್ತದೆ. ಇದು ವರ್ತಮಾನದ ಇತಿಹಾಸ ಶಿಕ್ಷಕರಿಗಿರುವ ಬಹುದೊಡ್ಡ ಸವಾಲೂ ಹೌದು.



ಚುರುಮುರಿ

ಐಪಿಎಲ್ ಧಾರಾವಾಹಿ

● ಆನಂದ

(ಐಪಿಎಲ್ ಧಾರಾವಾಹಿ ಮುಗಿದ ಮೇಲೆ ಅಸಂಖ್ಯಾತ ಓದುಗ ಅಭಿಮಾನಿಗಳಿಂದ ಬಂದ ಪತ್ರಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ಸಾರಾಂಶವಾಗಿ ಕೊಡಲಾಗಿದೆ. ಯಾರೂ ತಮ್ಮ ಹೆಸರನ್ನು ಬಹಿರಂಗಪಡಿಸಲು ಇಚ್ಛಿಸಿಲ್ಲ).

ಅಯ್ಯೋ ಐಪಿಎಲ್ ಮುಗಿದೇ ಹೋಯ್ತೆ?

ಐಪಿಎಲ್ ಇನ್ನೂ ಒಂದಿಷ್ಟು ದಿನ ನಡೆಯಬೇಕಿತ್ತು.

ಐಪಿಎಲ್ ಮುಂದುವರಿಸಿದ್ದಿದ್ದರೆ ಇವರ ಗಂಟೇನು ಹೋಗುತ್ತಿತ್ತು?

ಸತತವಾಗಿ 74 ಪಂದ್ಯಗಳನ್ನು ನೋಡಿದೆ. ಈಗ ನಾನೇನು ನೋಡಲಿ?

ಇನ್ನು ಮುಂದೆ ಕೆಲವು ದಿನ 7.30ರ ನಂತರ ರಾತ್ರಿ ಮನೆಯಲ್ಲಿ ಶೂನ್ಯ ಆವರಿಸುತ್ತದೆ.

-ಕೆಲವು ಗಂಡಸರು ಬರೆದ ಪತ್ರಗಳು.

ಇಷ್ಟು ದಿನ ನನ್ನ ಗಂಡ ಸರಿಯಾಗಿ 7.30ಕ್ಕೆ ಮೊದಲೇ ಮನೆಗೆ ಬರುತ್ತಿದ್ದರು. ಇನ್ನು ಮುಂದೆ ಹೇಗೋ ಏನೋ. ಎಲ್ಲಿ ಹೋಗಿ ಬರ್ತಾರೋ ಏನೋ?

ಸದ್ಯ ಮುಗಿಯಿತಲ್ಲ. ಮನೆಯಲ್ಲಿ ಕೂಗಾಟ, ಚೀರಾಟ ಇನ್ನು ಕಡಿಮೆಯಾಗುತ್ತದೆ. ಕರೆಂಟ್ ಬಿಲ್ ಉಳಿಯುತ್ತದೆ. ಮ್ಯಾಚ್ ಇಲ್ಲದಿರುವುದರಿಂದ 10 ಗಂಟೆಗೇ ದೀಪ ಆರಿಸಬಹುದು.

ನಾಳೆಯಿಂದ ಮಕ್ಕಳು ಓದಿನ ಕಡೆ ಗಮನಹರಿಸುವರೇ?

-ಗೃಹಿಣಿಯರ ಅನಿಸಿಕೆ

ಕೊಹ್ಲಿ ತನ್ನ ಮಗುವಿನ ಕಡೆ ಹೆಚ್ಚು ಗಮನ ಕೊಡುವರೋ ಅಥವಾ ತಮ್ಮ ಫಾರ್ಮ್ ಉತ್ತಮ ಪಡಿಸಿಕೊಳ್ಳಲು ಅಭ್ಯಾಸದ ಕಡೆ ಹೆಚ್ಚು ಗಮನ ಕೊಡುವರೋ ಕಾದು ನೋಡಬೇಕಿದೆ.

-ಒಬ್ಬ ಅಧಿಕ ಪ್ರಸಂಗಿ

ಮುಂದಿನ ಐಪಿಎಲ್‌ನಲ್ಲಿ ಆಟಗಾರರಿಗೆ ಸಂಭಾವನೆಯನ್ನು ಬಿಟ್ ಕಾಯಿನ್ ರೂಪದಲ್ಲಿ ಕೊಡುವರೇ? ಏಕೆಂದರೆ ಈಗಾಗಲೇ ಅವರ ಬಳಿ ಸಾಕಷ್ಟು ರೂಪಾಯಿ ನೋಟುಗಳಿವೆ.

-ಹಣಕಾಸು ತಜ್ಞ

ಆರ್‌ಸಿಬಿ ವಿರುದ್ಧ ಕೆಲವು ಕನ್ನಡಿಗ ಆಟಗಾರರೇ ಮೈದಾನದಲ್ಲಿ ದಾಳಿ ಮಾಡಿದ್ದು ದುರದೃಷ್ಟಕರ ಅಲ್ಲವೇ?

-ಕನ್ನಡಾಭಿಮಾನಿ

ಚರ್ಚೆ

ಪಠ್ಯಪುಸ್ತಕ: ಏಕಿಷ್ಟು ರಾದ್ಧಾಂತ?

ಹಿಂದಿನ ಸಮಿತಿ ಒಂದು ಪಂಥಕ್ಕೆ ಮಣೆಹಾಕಿತ್ತು ಎನ್ನುವ ಈ ಸಮಿತಿ ಮಾಡಿದ್ದೇನು?

ಪಠ್ಯಪುಸ್ತಕ ಪರಿಷ್ಕರಣೆ ವಿಷಯದಲ್ಲಿ ಏಕೆ ಇಷ್ಟೊಂದು ರಾದ್ಧಾಂತ? ಏನಾದರೂ ಆಗಬಾರದ್ದು ಆಗಿಹೋಯಿತೇ? ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪಠ್ಯಪುಸ್ತಕ ಪರಿಷ್ಕರಿಸಿದಾಗ ಮಹಾತ್ಮ ಗಾಂಧಿ, ವಿವೇಕಾನಂದ, ಕುವೆಂಪು ಅವರ ಚಿಂತನಾ ಬರಹಗಳನ್ನು ಕೈ ಬಿಟ್ಟಿತ್ತು. ಆಗ ಯಾರೂ ಗೊಂದಲಕ್ಕೆ ಒಳಗಾಗಲಿಲ್ಲ. ಇಂದು ಆಕಾಶವೇ ಕಳಚಿಬಿದ್ದಂತೆ ಚಡಪಡಿಸುತ್ತಿರುವುದು ಈ ಕಾರಣಗಳಿಗೆ: ಹೆಡಗೇವಾರ್, ಚಕ್ರವರ್ತಿ ಸೂಲಿಬೆಲೆ ಅವರ ಚಿಂತನಾ ಬರಹಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸಿದ್ದಕ್ಕೆ. ಹೌದು, ಸೇರಿಸಿದರೆ ತಪ್ಪೇನು?

ಪಠ್ಯಪುಸ್ತಕಗಳಲ್ಲಿ ಎಡಪಂಥೀಯ ಚಿಂತನೆ ಇರಬಹುದಾದರೆ ಬಲಪಂಥೀಯ ಚಿಂತನೆ ಯಾಕೆ ಬೇಡ? ಚರಿತ್ರೆಯಲ್ಲಿ ನಮ್ಮ ಸೋಲಿನ ಕತೆಗಳನ್ನೇ ಕೇಳಿದ್ದೇವೆ. ನಮ್ಮ ಗೆಲುವಿನ ಕತೆಗಳು ಎಲ್ಲಿ? ಅಕ್ಬರ್ ಗ್ರೇಟ್, ಅಲೆಕ್ಸಾಂಡರ್ ಗ್ರೇಟ್ ಎಂದಿದ್ದೇವೆ. ಆದರೆ ಈ ನೆಲದಲ್ಲಿ ಅವರನ್ನು ಹಿಮ್ಮೆಟ್ಟಿಸಿದವರು ಎಷ್ಟು ಜನ ವೀರರಿಲ್ಲ. ನಮ್ಮೊಳಗಿನ ಕಿತ್ತಾಟ-ಹೊಟ್ಟೆ ಉರಿಯಿಂದ ಸೋಲುತ್ತಾ ಬಂದಿದ್ದೇವೆ ಅಷ್ಟೆ.

ಇದೀಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿದ್ದೇವೆ. ನಮಗೆ ಗೊತ್ತಿರುವ ನಾಲ್ಕಾರು ಹೆಸರುಗಳೇ ಸ್ವಾತಂತ್ರ್ಯ ತಂದುಕೊಟ್ಟಿದ್ದು ಎಂಬ ನಂಬಿಕೆ ಇದೆ. ಗಾಂಧೀಜಿ ಅವರೇ 'ಈ ಸ್ವಾತಂತ್ರ್ಯ ಅಸಂಖ್ಯ ದೇಶಭಕ್ತರ ತ್ಯಾಗ, ಬಲಿದಾನದಿಂದ ಬಂದಿದೆ' ಎಂದಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕಲ್ಲವೇ? ಜತಿನ್‌ದಾಸ್ ಎಂಬುವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸೆರೆಮನೆಯಲ್ಲಿ 64 ದಿನಗಳ ಕಾಲ ಉಪವಾಸವಿದ್ದು ಪ್ರಾಣಬಿಟ್ಟರು. ಅತ್ಯಂತ ದೀರ್ಘ ಕಾಲ ಉಪವಾಸ ಇದ್ದವರು ಎಂಬ ದಾಖಲೆ ಇದೆ. ಎಷ್ಟು ಜನ ಇವರ ಹೆಸರು ಕೇಳಿದ್ದಾರೆ? ಇಂತಹ ಅಸಂಖ್ಯ ವೀರರು ಚರಿತ್ರೆಯ ಪುಟಗಳಲ್ಲಿ ಕಣ್ಮರೆಯಾಗಿದ್ದಾರೆ. ಕೆಲವೇ ಕೆಲವರನ್ನು ಮೆರೆಸುವ ಪ್ರಕ್ರಿಯೆ ಆಗಿಹೋಯಿತು. ಇದಕ್ಕೆ ಕಾರಣ ಹುಡುಕಬೇಕಿಲ್ಲ. ಅಧಿಕಾರಿಶಾಹಿ! ಓಲೈಕೆ ರಾಜಕಾರಣ!

ಹೆಡಗೇವಾರ್ ಚಿಂತಕರು, ಸುಶಿಕ್ಷಿತರು, ಸಜ್ಜನರು. ಇವರ ಚಿಂತನೆ ಯಾಕೆ ಪಠ್ಯವಾಗಬಾರದು? ನಟಿ ಜಯಮಾಲಾ ಅವರ ಚಿಂತನೆ ಪಠ್ಯವಾಗಬಹುದಾದರೆ, ಚಕ್ರವರ್ತಿ ಸೂಲಿಬೆಲೆ ಅವರದು ಯಾಕಾಗಬಾರದು?

ದೇವನೂರ ಮಹಾದೇವ 'ಪಠ್ಯದಲ್ಲಿ ನನ್ನ ಬರಹ ಬೇಡ' ಎಂದಿರುವುದು ಅವರ ಇಷ್ಟಕ್ಕೆ ಬಿಟ್ಟದ್ದು. ಆದರೆ ಅವರಿಗೂ ಒಂದು ಪಕ್ಷವಿದೆ, ಅವರದೂ ಒಂದು ಸಿದ್ಧಾಂತವಿದೆ. ತನ್ನ ಸಿದ್ಧಾಂತವೇ ಸರಿ, ಉಳಿದವರೆಲ್ಲರದೂ ತಪ್ಪು ಎಂದು ಅವರೇ ನಿರ್ಣಯಿಸಿದರೆ ಹೇಗೆ?

ಅಡ್ಡಂಡ ಸಿ. ಕಾರ್ಯಪ್ಪ, ನಿರ್ದೇಶಕ, ರಂಗಾಯಣ, ಮೈಸೂರು

ವಿವೇಚನಾರಹಿತ ನಡೆ

ಪಠ್ಯಪುಸ್ತಕ ಪರಿಷ್ಕರಣೆ ಇಷ್ಟೊಂದು ವಿವಾದಕ್ಕೆ ಒಳಗಾಗಲು ಕಾಣದ ಕೈಗಳು ಕಾರಣವಾಗಿರಬಹುದು. ಯಾವ ಸಮಿತಿಯೇ ಆದರೂ ಸರ್ವಸಮ್ಮತ ರೀತಿಯಲ್ಲಿ ಪಠ್ಯಪುಸ್ತಕ ರೂಪಿಸುವುದು ತೀರಾ ಕಷ್ಟಸಾಧ್ಯ. ನಮ್ಮ ನಾಡಿನ ಬಹುದೊಡ್ಡ ಸಾಹಿತಿ ಮತ್ತು ವಿಚಾರವಂತ ಲೇಖಕ ಬರಗೂರರ ನೇತೃತ್ವದಲ್ಲಿ ಸಿದ್ಧಪಡಿಸಲಾದ ಪಠ್ಯಗಳು ಬಹುಮಟ್ಟಿಗೆ ಸರಿಯಿದ್ದವು ಎನಿಸುತ್ತದೆ. ಸರಿಯಿಲ್ಲವೆಂದು ತಗಾದೆ ತೆಗೆದವರಲ್ಲಿ ಈಗಿನ ಪರಿಷ್ಕರಣ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಪ್ರಮುಖರಾಗಿದ್ದರು, ಒಂದು ಪಂಥದ ದೃಷ್ಟಿಕೋನಕ್ಕೆ ಅನುಗುಣವಾಗಿಯೇ ಕೆಲವು ಪಠ್ಯ ಸಿದ್ಧಪಡಿಸಲಾಗಿದೆ ಎಂಬುದು ಅವರ ದೂರಾಗಿತ್ತೆಂಬುದು ನನ್ನ ನೆನಪು. ಸರ್ಕಾರ ಅದರ ಪರಿಷ್ಕರಣೆಗೆ ಸಮಿತಿ ನೇಮಿಸುವಾಗ ವಿವೇಚನೆ ತೋರಲಿಲ್ಲವೆಂದೇ ತೋರುತ್ತದೆ. ಕಾರಣ, ಪರಿಷ್ಕರಣ ಸಮಿತಿಯ ಅಧ್ಯಕ್ಷರಾಗಿ ನೇಮಕವಾದ ವ್ಯಕ್ತಿ ಕನ್ನಡ ಸಾಹಿತ್ಯ, ಇತಿಹಾಸ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅನಾಮಧೇಯರು.

ಬರಗೂರರ ಹಾಗೆಯೇ ಸಾಹಿತ್ಯ, ಇತಿಹಾಸಗಳ ಜ್ಞಾನ ಹೊಂದಿರುವ, ಶಿಕ್ಷಣ ಕ್ಷೇತ್ರದಲ್ಲಿ ಅನುಭವವಿರುವ ಸಾಹಿತಿಯನ್ನೇ ಅಥವಾ ಕನ್ನಡದಲ್ಲಿ ನುರಿತ ಶಿಕ್ಷಣವೇತ್ತರನ್ನೇ ನೇಮಿಸಿದ್ದರೆ ವಿವಾದಗಳಿಗೆ ಆಸ್ಪದವಾಗದಂತೆ ಪಠ್ಯಪುಸ್ತಕಗಳು ತಯಾರಾಗುತ್ತಿದ್ದುವೆಂದು ಊಹಿಸಲು ಅವಕಾಶವಿದೆ. ಸಮಿತಿಗೆ ಒಂದೇ ಜಾತಿಗೆ ಸೇರಿದವರನ್ನು ಸದಸ್ಯರನ್ನಾಗಿ ನೇಮಿಸಿದ್ದಂತೂ ಸಾಮಾಜಿಕ ನ್ಯಾಯ ಮುನ್ನೆಲೆಯಲ್ಲಿರುವ ಪ್ರಸ್ತುತ ಸಂದರ್ಭದಲ್ಲಿ ಊಹಿಸಲೂ ಆಗದಂಥದ್ದು.

ಹಿಂದಿನ ಸಮಿತಿಯು ಒಂದು ಪಂಥಕ್ಕೆ ಮಣೆಹಾಕಿದ್ದು ತಪ್ಪೆಂದು ಹೇಳುವ ಈ ಸಮಿತಿ ಮಾಡಿದ್ದಿನ್ನೇನು? ಇದೂ ತಾನು ಒಪ್ಪುವ ಪಂಥಕ್ಕೆ, ತತ್ವಕ್ಕೆ ಆಪ್ಯಾಯಮಾನವೆನ್ನಿಸುವ ಪಠ್ಯಗಳನ್ನು ಆಯ್ಕೆ ಮಾಡುವಲ್ಲಿ ಅತ್ಯುತ್ಸಾಹ ತೋರಿಸಿದ್ದು. ಇದರಿಂದ ಯಾವುದೇ ಸರ್ಕಾರವಾದರೂ ಕಲಿಯಬೇಕಾದ ಸಂಗತಿ, ರಾಜಕೀಯೇತರ ಶೈಕ್ಷಣಿಕ ವ್ಯಕ್ತಿಗಳನ್ನೇ ಇಂಥ ಸಮಿತಿಗಳಿಗೆ ನೇಮಕ ಮಾಡಬೇಕು ಎಂಬುದು. ಮಕ್ಕಳಿಗೆ ಆಸಕ್ತಿ ಹುಟ್ಟಿಸುವಂತೆ, ಐತಿಹಾಸಿಕ ಸಾಮಾಜಿಕ ಸಂಗತಿಗಳನ್ನು ತಿರುಚದೆ ವಿಪರೀತ ವ್ಯಾಖ್ಯಾನಗಳನ್ನು ಮಾಡದಂಥ ಪಠ್ಯಭಾಗಗಳನ್ನು ಸೇರಿಸಿದರೆ ವಿವಾದಕ್ಕೆಡೆ ಇರುವುದಿಲ್ಲ.

ಇದರ ಜೊತೆಗೇ ತಳುಕುಹಾಕಲಾದ ಸಂಗತಿ, ಕುವೆಂಪು ರಚಿತ ನಾಡಗೀತೆಯನ್ನು ಗೇಲಿ ಮಾಡುವ ಅಣಕವಾಡನ್ನು ಅಧ್ಯಕ್ಷರು ಹಿಂದೆ ತಮ್ಮ ಫೇಸ್‌ಬುಕ್ ವಾಲ್‌ನಲ್ಲಿ ಹಾಕಿಕೊಂಡಿದ್ದರು ಎಂಬುದು. ಕನ್ನಡಿಗರೆಲ್ಲರಿಗೆ ಕುವೆಂಪು ಅತ್ಯಂತ ಆರಾಧ್ಯರೂ ಗೌರವಾಸ್ಪದರೂ ಆದ ಹಿಮಾಚಲ ಸದೃಶ ವ್ಯಕ್ತಿತ್ವದವರು. ಆ ಅಣಕವಾಡು ತಮ್ಮದಲ್ಲ ಎಂದು ಹೇಳಿದರೂ ಅದನ್ನು ಫೇಸ್‌ಬುಕ್‌ನಲ್ಲಿ ಹಾಕಿಕೊಂಡದ್ದು ಕಡೆಗಣಿಸಬಹುದಾದ ಸಂಗತಿಯಲ್ಲವೇ ಅಲ್ಲ. ಹೀಗಾಗಿ ಅವರು ಸ್ವತಃ ರಾಜೀನಾಮೆ ಕೊಟ್ಟರೆ ಇಲ್ಲವೆ ಸರ್ಕಾರವೇ ಅವರನ್ನು ತೆಗೆದುಹಾಕಿದರೆ ತಮ್ಮ ರಚನೆಯನ್ನು ಪಠ್ಯದಿಂದ ಕೈಬಿಡಿ ಎಂದಿರುವ ಲೇಖಕರು ಬಹುಶಃ ಅದಕ್ಕೆ ಪಟ್ಟು ಹಿಡಿಯಲಾರರು. ಅದರಿಂದ ಈಗಾಗಲೇ ತಡವಾಗಿರುವ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕೈಸೇರಲು ಅನುಕೂಲವಾಗುತ್ತದೆ.

ಡಾ. ಆರ್.ಲಕ್ಷ್ಮೀನಾರಾಯಣ, ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ, ಬೆಂಗಳೂರು

ವಾಚಕರ ವಾಣಿ

ಪ್ರಾದೇಶಿಕ ಭಾಷೆಗಳಿಗೆ ಬೇಕು ಎಚ್ಚರ

ಬಿಜೆಪಿ ತಮಿಳು ವಿರೋಧಿ ಎಂದು ಹೇಳಿರುವ ಎಐಎಡಿಎಂಕೆ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಗಿಂತಲೂ ಈಗ ಹೆಚ್ಚು ಹಿಂದಿ ಹೇರಿಕೆಯಾಗುತ್ತಿದೆ ಎಂದು ಹೇಳಿದೆ (ಪ್ರ.ವಾ., ಜೂನ್ 2). ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಬರೀ ತಮಿಳು ವಿರೋಧಿಗಳಷ್ಟೇ ಅಲ್ಲ, ಅವು ಎಲ್ಲಾ ಪ್ರಾದೇಶಿಕ ಭಾಷಾ ವಿರೋಧಿಗಳೂ ಆಗಿವೆ. ಈ ಎರಡೂ ಪಕ್ಷಗಳು ಎಲ್ಲ ಪ್ರಾದೇಶಿಕ ಭಾಷೆಗಳ ಮೇಲೆ ಹಿಂದಿ ಹೇರಿಕೆ ಮಾಡಿವೆ. ಈ ಎಚ್ಚರ ನಮ್ಮ ದೇಶದ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಇರಬೇಕು. ಏಕೆಂದರೆ ನಮಗೆಲ್ಲರಿಗೆ ಶಿಕ್ಷಣ ಬಹಳ ಮುಖ್ಯ. ಆದರೆ ಅಲ್ಲಿಯೇ ಹಿಂದಿ ಭಾಷೆ ಹೇರಿಕೆಯಾದರೆ ನಮ್ಮ ಮಕ್ಕಳ ಶಿಕ್ಷಣ ಕುಂಠಿತಗೊಳ್ಳುತ್ತದೆ. ನಮ್ಮ ಸಂವಿಧಾನ ಎಲ್ಲಾ ಪ್ರಾದೇಶಿಕ ಭಾಷೆಗಳನ್ನು ರಾಷ್ಟ್ರಭಾಷೆಗಳೆಂದೇ ಹೇಳಿದೆ. ಆದರೆ ಹಿಂದಿ ಭಾಷಿಕರ ರಾಜಕೀಯದಿಂದಾಗಿ ಹಿಂದಿ ಹೇರಿಕೆ ಆಗಾಗ ಕಾಣಿಸಿಕೊಳ್ಳುತ್ತದೆ. ಅಂಥ ಸಂದರ್ಭದಲ್ಲಿ ನಮ್ಮ ಮಾತೃಭಾಷೆಯನ್ನು ಉಳಿಸಿ ಬೆಳೆಸುವ ಹೊಣೆ ನಮ್ಮೆಲ್ಲರದಾಗಿದೆ. ಈ ಹಿನ್ನೆಲೆಯಲ್ಲಿ ಎಐಎಡಿಎಂಕೆ ವಹಿಸಿರುವ ಎಚ್ಚರವನ್ನು ಕನ್ನಡಿಗರೂ ಅರ್ಥಮಾಡಿಕೊಳ್ಳಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸಮಯಕ್ಕೆ ತಕ್ಕಂಥ ನಡೆ

ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು 'ಅಧಿಕಾರಕ್ಕಾಗಿ ನಾವೇನು ನಿಮ್ಮ ಮನೆ ಬಾಗಿಲಿಗೆ ಬಂದಿರಲಿಲ್ಲ, ನೀವೇ ನಮ್ಮ ಮನೆ ಬಾಗಿಲಿಗೆ ಬಂದಿದ್ದು' ಎಂದು ಕಾಂಗ್ರೆಸ್ ಕುರಿತು ಎಷ್ಟು ಬಾರಿ ಹೇಳಿರಬಹುದು? ತಾವು ರಾಜ್ಯದ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಅಧಿಕಾರ ಸ್ವೀಕರಿಸಿದ ಮೇಲೂ, 'ಆ ಪುಣ್ಯಾತ್ಮನಿಂದಾಗಿ ನಾನು ಈ ಪದವಿಯಲ್ಲಿದ್ದೇನೇ ವಿನಾ ರಾಜ್ಯದ ನಾಯಕರುಗಳಿಂದಲ್ಲ' ಎಂದು ರಾಹುಲ್ ಗಾಂಧಿ ಅವರನ್ನು ಬಾಯಿ ತುಂಬಾ ಕೊಂಡಾಡಿದ್ದರು. ಸಮಯ ಬಂದಾಗಲೆಲ್ಲ ಹೇಳಿದ್ದಾರೆ (ಪುರಾವೆ ಬೇಕಿದ್ದರೆ ಯುಟ್ಯೂಬ್ ನೋಡಬಹುದು).

ಈಗ ರಾಜ್ಯಸಭೆ ಚುನಾವಣೆಗೆ ತಮ್ಮ ಅಭ್ಯರ್ಥಿಯನ್ನು ಬೆಂಬಲಿಸಲು ಸಿದ್ದರಾಮಯ್ಯ ಅವರ ಬಳಿ ನಿಯೋಗವನ್ನು ಕಳುಹಿಸಿದ್ದಾರೆ (ಪ್ರ.ವಾ., ಜೂನ್ 2). ಇದಕ್ಕೆ ಅವರು ನೀಡುತ್ತಿರುವ ಸಬೂಬು, 'ಚುನಾವಣೆಯಲ್ಲಿ ಜಾತ್ಯತೀತರು ಒಗ್ಗಟ್ಟಿನ ಹೋರಾಟ ನಡೆಸಬೇಕು. ಯಾವುದೇ ಕಾರಣಕ್ಕೂ ಬಿಜೆಪಿಗೆ ಗೆಲ್ಲಲು ಅವಕಾಶ ನೀಡಬಾರದು'. ಯಾಕೆ ಈಗ ಕಾಂಗ್ರೆಸ್ಸಿನಿಂದ ಸಹ ಮುಸಲ್ಮಾನ ಅಭ್ಯರ್ಥಿಯೇ ಇದ್ದಾರಲ್ಲ, ಅವರನ್ನು ನೀವು ಬೆಂಬಲಿಸಬಹುದಲ್ಲ? ಸ್ವಲ್ಪ ಹಿಂದೆ ಹೋಗಿ ಕಲಬುರಗಿ ಮೇಯರ್ ಚುನಾವಣೆ ಅಥವಾ ಮೈಸೂರಿನ ಮೇಯರ್ ಚುನಾವಣೆಯ ಸಂದರ್ಭಗಳನ್ನು ಸ್ವಲ್ಪ ನೆನಪಿಸಿಕೊಳ್ಳಿ. ಇಂತಹ ಮನೋಭಾವವನ್ನು ಅರಿತೇ ಇರಬೇಕು, ಜೋಸೆಫ್ ಛೇಂಬರ್‌ಲೈನ್ ಎಂಬ ಬ್ರಿಟಿಷ್ ಮುತ್ಸದ್ದಿ 1886ರಲ್ಲೇ ಹೇಳಿದ್ದು, 'ರಾಜಕೀಯದಲ್ಲಿ, ಯಾವುದನ್ನೂ 15 ದಿನಗಳಾಚೆಗೆ ನೋಡುವುದರಿಂದ ಏನೂ ಉಪಯೋಗವಿಲ್ಲ' ಎಂದು.

ಎ.ವಿ.ಮುರಳೀಧರ ಆಚಾರ್ಯ, ಬೆಂಗಳೂರು

ನಿರ್ವಿವಾದ

ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ವಿವಾದ,
ಗಲಾಟೆಯೇ ಬೇಡ,
ಜಾತಿ, ಧರ್ಮ, ಆ ಕವಿ ಈ ಕವಿ,
ಬಲ ಎಡ ಪಕ್ಷಗಳ ಸಿದ್ಧಾಂತ,
ಉತ್ತರ ದಕ್ಷಿಣಗಳ ತಾರತಮ್ಯದ ಆರೋಪ,
ಕೊಟ್ಟುಬಿಡಿ ಪಂಪ, ರನ್ನ, ಜನ್ನ,
ರಾಘವಾಂಕ, ಕುಮಾರವ್ಯಾಸ, ಸರ್ವಜ್ಞರ ಕಾವ್ಯಗಳ,
ಅನುಮತಿ ಕೊಡಲು ಅವರೂ ಇಲ್ಲ,
ಹಿಂಪಡೆಯುವವರೂ ಇಲ್ಲ.

ಟಿ.ಆರ್.ರಘುನಾಥ್, ಬೆಂಗಳೂರು

ತಪ್ಪು ಆ ಹೆಣ್ಣು ಮಗಳದ್ದಲ್ಲ...

ಬೆಳಗಾವಿಯ ಸುವರ್ಣ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಶ್ಯಾವಿಗೆ ಒಣಗಲು ಹಾಕಿದರೆಂಬ ಕಾರಣಕ್ಕೆ ಗುತ್ತಿಗೆ ಆಧಾರದ ಕಾರ್ಮಿಕ ಮಹಿಳೆಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರದ ಪ್ರತಿನಿಧಿಗಳು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಕೇವಲ 200 ರೂಪಾಯಿಗಾಗಿ ಇಡೀ ದಿನ ದುಡಿದು ಹೊಟ್ಟೆ ಹೊರೆಯುವ ಅವರ ಮೇಲೆ ಕ್ರಮ ಕೈಗೊಂಡವರು, ಅಧಿವೇಶನ ನಡೆಯುವ ಸಂದರ್ಭದಲ್ಲಿಯೇ ನೀಲಿಚಿತ್ರ ನೋಡುವ ಮೂಲಕ ಕರ್ನಾಟಕದ ಕೀರ್ತಿ ಪತಾಕೆಯನ್ನು ಅಮೆರಿಕದ ಕಾಂಗ್ರೆಸ್‌ವರೆಗೂ ವಿಸ್ತರಿಸಿದ ಮಹಾಶಯರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಹೇಳಲಿ.

ವಿಧಾನಸೌಧದಲ್ಲಿಯೇ ರೌಡಿಗಳಿಗಿಂತಲೂ ಕಡೆಯಾಗಿ ಪರಸ್ಪರ ಎಳೆದಾಡಿ ಅಂಗಿ ಹರಿದುಕೊಂಡು ಹೊಡೆದಾಡಿಕೊಂಡವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? ಪ್ರತಿರೋಧ ತೋರುವಷ್ಟೂ ಸಾಮರ್ಥ್ಯ ಇರದವರ ಮೇಲೆ ಕ್ರಮ ಕೈಗೊಳ್ಳಲು ಇರುವ ಈ ಆತುರ ಬಲಿಷ್ಠರ ವಿರುದ್ಧ ಯಾಕಿಲ್ಲ? ದುಡಿದು ಉಣ್ಣುವ ಹೆಣ್ಣುಮಗಳನ್ನು ಶಿಕ್ಷಿಸುವುದರಿಂದ ನಿಮ್ಮ ಆಡಳಿತಕ್ಕೆ ಆದ್ಯಾವ ಶಿಸ್ತು ದೊರೆಯುತ್ತದೆ? ಅಷ್ಟಕ್ಕೂ ಆ ಕಾರ್ಮಿಕ ಮಹಿಳೆಯ ತಪ್ಪೇನಿದೆ? ₹ 400 ಕೋಟಿ ಖರ್ಚು ಮಾಡಿ ಕಟ್ಟಿಸಿದ ಸೌಧವನ್ನು ಸರಿಯಾಗಿ ಬಳಸಿಕೊಳ್ಳದೆ ಭೂತಬಂಗಲೆಯಾಗಿಸಿದ ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಪ್ರಮುಖ ಇಲಾಖೆಗಳನ್ನು ಸುವರ್ಣ ವಿಧಾನಸೌಧಕ್ಕೆ ವರ್ಗಾಯಿಸುವಂತೆ ಈ ಭಾಗದ ಹೋರಾಟಗಾರರು ಬೊಬ್ಬೆ ಹಾಕಿದರೂ ಅದಕ್ಕೆ ಸೊಪ್ಪುಹಾಕದೆ ಕಿವುಡಾಗಿ ವರ್ತಿಸುವ ಸರ್ಕಾರದ ನಿರ್ಲಕ್ಷ್ಯವೇ ಇದಕ್ಕೆ ನೇರ ಹೊಣೆ. ನಿಮ್ಮ ಹುಳುಕನ್ನು ಮುಚ್ಚಿಕೊಳ್ಳುವ ಬದಲು ಅದನ್ನು ಸರಿಪಡಿಸಿಕೊಳ್ಳಿ. ಬದುಕಿನ ಬಂಡಿಯ ನೊಗಕ್ಕೆ ಹೆಗಲು ನೀಡಿ ಶ್ರಮಿಸುವ ಆ ಮಹಿಳೆಯು ತನಗರಿವಿಲ್ಲದೇ ಮಾಡಿದ ಈ ಕ್ರಾಂತಿಕಾರಿ ಕೆಲಸಕ್ಕೆ ನಾಡಿನ ಎಲ್ಲ ಪ್ರಗತಿಪರರು ಆ ಮಹಿಳೆಯನ್ನು ಸನ್ಮಾನಿಸಲಿ. ಕಾಮನ್‌ಮ್ಯಾನ್ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುವ ಬಸವರಾಜ ಬೊಮ್ಮಾಯಿ ಅವರು ತಕ್ಷಣವೇ ಆ ಹೆಣ್ಣುಮಗಳ ನೆರವಿಗೆ ಬಂದು ತಮ್ಮ ಹೇಳಿಕೆಯ ಪ್ರಕಾರ ನಡೆದುಕೊಳ್ಳುವುದನ್ನು ಸಾಬೀತುಪಡಿಸಲಿ.

ಸುರೇಶ ಎಮ್. ತಾಕತರಾವ, ಹಲ್ಯಾಳ, ಅಥಣಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಷ್ಯಾದಿಂದ ಅಗ್ಗದ ಕಚ್ಚಾತೈಲ ಭಾರತದ ಕಂಪನಿಗಳಿಗೆ ಸುಗ್ಗಿ

ಪ್ರಜಾವಾಣಿ ವಾರ್ತೆ

ಉಕ್ರೇನ್ ಮೇಲೆ ರಷ್ಯಾದ ಅತಿಕ್ರಮಣದ ನಂತರ, ಭಾರತವು ರಷ್ಯಾದಿಂದ ಮಾಡಿಕೊಳ್ಳುತ್ತಿರುವ ಕಚ್ಚಾತೈಲದ ಆಮದಿನಲ್ಲಿ ಭಾರಿ ಏರಿಕೆಯಾಗಿದೆ. ಒಪೆಕ್ (ಪೆಟ್ರೋಲಿಯಂ ರಫ್ತು ದೇಶಗಳ ಸಂಘ) ದೇಶಗಳಿಂದ ಖರೀದಿಸಲಾಗುತ್ತಿರುವ ಕಚ್ಚಾತೈಲಕ್ಕಿಂತ ಕಡಿಮೆ ಬೆಲೆಯಲ್ಲಿ, ರಷ್ಯಾ ಕಚ್ಚಾತೈಲ ಪೂರೈಕೆ ಮಾಡುತ್ತಿದೆ. ಇದರಿಂದ ಭಾರತೀಯ ಕಂಪನಿಗಳು ರಷ್ಯಾದ ಕಚ್ಚಾತೈಲಕ್ಕೆ ಮುಗಿಬಿದ್ದಿವೆ. ಕಡಿಮೆ ದರದಲ್ಲಿ ಕಚ್ಚಾತೈಲ ದೊರೆಯುತ್ತಿರುವುದರಿಂದಲೇ ರಷ್ಯಾದಿಂದ ಹೆಚ್ಚು ಖರೀದಿಸಲಾಗುತ್ತಿದೆ. ಆದರೆ, ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಸಾಮಾನ್ಯವಾಗಿ ಭಾರತವು ಈವರೆಗೆ ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾತೈಲ ಖರೀದಿಸುತ್ತಿರಲಿಲ್ಲ. 2022ರ ಫೆಬ್ರುವರಿವರೆಗೂ ಇದೇ ಸ್ಥಿತಿ ಇತ್ತು. ಉಕ್ರೇನ್ ಅತಿಕ್ರಮಣದ ನಂತರ, ಬಹುತೇಕ ದೇಶಗಳು ರಷ್ಯಾದ ಜತೆಗೆ ಆರ್ಥಿಕ ಸಂಬಂಧವನ್ನು ಕಡಿದುಕೊಂಡಿವೆ. ಇದರಿಂದಾಗಿ, ಜಾಗತಿಕ ಮಾರುಕಟ್ಟೆಗಿಂತ ಕಡಿಮೆ ಬೆಲೆಗೆ (ಪ್ರತಿ ಬ್ಯಾರಲ್‌ಗೆ ಅಂದಾಜು 40 ಡಾಲರ್‌ನಷ್ಟು ರಿಯಾಯಿತಿ ದರದಲ್ಲಿ) ಪೂರೈಕೆ ಮಾಡುವುದಾಗಿ ರಷ್ಯಾ ಹೇಳಿತ್ತು. ಇದನ್ನು ಭಾರತ ಸರ್ಕಾರ ಒಪ್ಪಿಕೊಂಡಿತ್ತು. ಹೀಗಾಗಿ ದೇಶದ ಎಲ್ಲಾ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣ ಕಂಪನಿಗಳು ಮತ್ತು ಖಾಸಗಿ ತೈಲ ಸಂಸ್ಕರಣ ಕಂಪನಿಗಳು ರಷ್ಯಾದಿಂದ ಕಚ್ಚಾತೈಲ ಆಮದನ್ನು ಹೆಚ್ಚಿಸಿಕೊಂಡಿವೆ.

2021–22ನೇ ಸಾಲಿನಲ್ಲಿ ಫೆಬ್ರುವರಿ 24ರವರೆಗೆ ರಷ್ಯಾದಿಂದ ಒಟ್ಟು 1.6 ಕೋಟಿ ಬ್ಯಾರಲ್ ಕಚ್ಚಾತೈಲವನ್ನಷ್ಟೇ ಖರೀದಿಸಲಾಗಿತ್ತು. ಆದರೆ, ಫೆಬ್ರುವರಿ 24ರಿಂದ ಮೇ 26ರವರೆಗೆ 3.4 ಕೋಟಿ ಬ್ಯಾರಲ್ ಕಚ್ಚಾತೈಲವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲಾಗಿದೆ. ಹಿಂದಿನ ಆರ್ಥಿಕ ವರ್ಷದ ಮೊದಲ 11 ತಿಂಗಳಲ್ಲಿ ಖರೀದಿಸಿದ್ದ ಕಚ್ಚಾತೈಲಕ್ಕಿಂತ, ಶೇ 112ರಷ್ಟು ಹೆಚ್ಚುವರಿ ಕಚ್ಚಾತೈಲವನ್ನು ನಂತರದ ಮೂರು ತಿಂಗಳಲ್ಲಿ ಖರೀದಿಸಲಾಗಿದೆ. ಜೂನ್ ತಿಂಗಳಿಗಾಗಿ ಎಲ್ಲಾ ಕಂಪನಿಗಳು ಮತ್ತೆ 2.8 ಕೋಟಿ ಬ್ಯಾರಲ್ ಕಚ್ಚಾತೈಲವನ್ನು ರಷ್ಯಾದಿಂದ ಖರೀದಿಸಿವೆ.



ಅದು ಇನ್ನಷ್ಟೇ ಪೂರೈಕೆಯಾಗಬೇಕಿದೆ. ಅಂದರೆ, ಫೆಬ್ರುವರಿ 24ರಿಂದ ಜೂನ್ ಅಂತ್ಯದವರೆಗೆ ಒಟ್ಟು 6.2 ಕೋಟಿ ಬ್ಯಾರಲ್ ಕಚ್ಚಾತೈಲವನ್ನು ಖರೀದಿಸಲಾಗಿದೆ. 2021–22ನೇ ಆರ್ಥಿಕ ವರ್ಷದ ಮೊದಲ 11 ತಿಂಗಳಲ್ಲಿ ರಷ್ಯಾದಿಂದ ಖರೀದಿಸಿದ್ದ ಕಚ್ಚಾತೈಲದ ಪ್ರಮಾಣಕ್ಕೆ ಹೋಲಿಸಿದರೆ, ನಂತರದ ನಾಲ್ಕು ತಿಂಗಳಲ್ಲಿ ಖರೀದಿಯಾಗಿರುವ ಕಚ್ಚಾತೈಲದ ಪ್ರಮಾಣದಲ್ಲಿ ಶೇ 287ರಷ್ಟು ಏರಿಕೆಯಾಗಿದೆ.

ಇದರ ಮಧ್ಯೆ, ಮುಂದಿನ ಆರು ತಿಂಗಳವರೆಗೆ ಕಡಿಮೆ ದರದಲ್ಲಿ ಕಚ್ಚಾತೈಲ ಖರೀದಿಸಲು ಭಾರತದ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣ ಕಂಪನಿಗಳು ರಷ್ಯಾದ ತೈಲ ಕಂಪನಿ ರೋಸ್‌ನೆಫ್ಟ್ ಜತೆಗೆ ಮಾತುಕತೆ ನಡೆಸಿವೆ. ಇಂಡಿಯನ್ ಆಯಿಲ್ ಕಂಪನಿಯು ಪ್ರತಿ ತಿಂಗಳು 60 ಲಕ್ಷ ಬ್ಯಾರಲ್, ಬಿಪಿಸಿಎಲ್ ಪ್ರತಿ ತಿಂಗಳು 40 ಲಕ್ಷ ಬ್ಯಾರಲ್ ಮತ್ತು ಎಚ್‌ಪಿಸಿಎಲ್ ಕಂಪನಿಯು ಪ್ರತಿ ತಿಂಗಳು 30 ಲಕ್ಷ ಬ್ಯಾರಲ್ ಕಚ್ಚಾತೈಲವನ್ನು ಖರೀದಿಸುವ ಪ್ರಸ್ತಾವವನ್ನು ರೋಸ್‌ನೆಫ್ಟ್ ಮುಂದೆ ಇರಿಸಿವೆ. ಸರ್ಕಾರಿ ಸ್ವಾಮ್ಯದ ಮತ್ತೊಂದು ಕಂಪನಿ ಎಂಆರ್‌ಪಿಎಲ್ ಎಷ್ಟು ಬ್ಯಾರಲ್ ಖರೀದಿಸುವ ಪ್ರಸ್ತಾವ ಇರಿಸಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ. ಈ ಮಾತುಕತೆಯು ಯಾವ ಹಂತದಲ್ಲಿದೆ ಎಂಬುದರ ವಿವರ ಲಭ್ಯವಾಗಿಲ್ಲ. ಆದರೆ ಜೂನ್ ಅಂತ್ಯದ ವೇಳೆಗೆ ಪೂರೈಕೆ ಆರಂಭವಾಗಬಹುದು ಎಂದು ನಿರೀಕ್ಷಿಸಲಾಗಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಕಚ್ಚಾ ತೈಲ ದರದಲ್ಲಿ ಇನ್ನಷ್ಟು ಕಡಿತ ಮಾಡಬೇಕು. ಪ್ರತಿ ಬ್ಯಾರಲ್‌ಗೆ 70 ಡಾಲರ್‌ಗೂ ಕಡಿಮೆಗೆ ತೈಲ ಪೂರೈಸಬೇಕು ಎಂಬ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ ಎಂದು ಭಾರತ ಸರ್ಕಾರದ ಸ್ವಾಮ್ಯದ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ನ (ಎಚ್‌ಪಿಸಿಎಲ್) ಅಧ್ಯಕ್ಷ ಪುಷ್ಪಕುಮಾರ್ ಜೋಶಿ ಹೇಳಿದ್ದಾರೆ.

ರಷ್ಯಾದ ಕಚ್ಚಾತೈಲ ಆಮದಿನಲ್ಲಿ ಶೇ 70ಕ್ಕೂ ಹೆಚ್ಚು ಪಾಲು ಹೊಂದಿರುವ ಭಾರತದ ಖಾಸಗಿ ತೈಲ ಸಂಸ್ಕರಣ ಕಂಪನಿಗಳು, ಮುಂದಿನ ತಿಂಗಳುಗಳಲ್ಲಿ ರಷ್ಯಾದಿಂದ ಎಷ್ಟು ಕಚ್ಚಾತೈಲ ಖರೀದಿಸಲಿವೆ ಎಂಬುದರ ಮಾಹಿತಿ ದೊರೆತಿಲ್ಲ. ಆದರೆ, ಜೂನ್‌ನಲ್ಲಿ ಪೂರೈಕೆಯಾಗಬೇಕಿರುವ ಕಚ್ಚಾತೈಲದ ಖರೀದಿಯಲ್ಲೇ ಏರಿಕೆಯಾಗಿದೆ. ಹೀಗಾಗಿ ನಂತರದ ತಿಂಗಳುಗಳಲ್ಲಿ, ರಿಯಾಯಿತಿ ದರದಲ್ಲೇ ರಷ್ಯಾದ ಕಚ್ಚಾತೈಲ ಖರೀದಿ ಮತ್ತಷ್ಟು ಏರಿಕೆಯಾಗುವ ನಿರೀಕ್ಷೆ ಇದೆ. ರಿಯಾಯಿತಿ ದರದ ಲಾಭ ಭಾರತದ ಚಿಲ್ಲರೆ ಗ್ರಾಹಕರಿಗೆ ದೊರೆಯುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಪೆಟ್ರೋಲಿಯಂ ಉತ್ಪನ್ನ ರಫ್ತು ಭಾರಿ ಹೆಚ್ಚಳ

ಭಾರತಕ್ಕೆ ರಿಯಾಯಿತಿ ದರದಲ್ಲಿ ಕಚ್ಚಾತೈಲ ಲಭ್ಯವಿರುವ ಕಾರಣ, ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾತೈಲದ ಪ್ರಮಾಣ ಏರಿಕೆಯಾಗಿದೆ. ಹೆಚ್ಚು ಪ್ರಮಾಣದಲ್ಲಿ ಖರೀದಿಸುತ್ತಿರುವ ಭಾರತ, ಅದನ್ನು ಸಂಸ್ಕರಿಸಿ ಇತರ ದೇಶಗಳಿಗೆ ರಫ್ತು ಮಾಡುವ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿರುವುದು ಕಳೆದ ಮೂರು ತಿಂಗಳ ದತ್ತಾಂಶಗಳಿಂದ ಸ್ಪಷ್ಟವಾಗುತ್ತಿದೆ.

ಅತಿಹೆಚ್ಚು ಪೆಟ್ರೋಲಿಯಂ ತೈಲ ಬಳಕೆದಾರ ದೇಶಗಳಲ್ಲಿ ಅಮೆರಿಕ, ಚೀನಾ ನಂತರದ ಸ್ಥಾನದಲ್ಲಿ ಭಾರತ ಇದೆ. ಭಾರತವು ತನ್ನ ಅಗತ್ಯದ ಶೇ 85ರಷ್ಟು ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಹಾಗೆಯೇ ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳನ್ನು, ಸಿಂಗಪುರ, ಥಾಯ್ಲೆಂಡ್ ಸೇರಿದಂತೆ ಸುಮಾರು 100 ದೇಶಗಳಿಗೆ ರಫ್ತು ಮಾಡುತ್ತಿದೆ.

ಫೆಬ್ರುವರಿಯಲ್ಲಿ ₹30,820 ಕೋಟಿ ಮೌಲ್ಯದ ತೈಲವನ್ನು ಭಾರತ ರಫ್ತು ಮಾಡಿದೆ. ರಫ್ತು ಮೌಲ್ಯವು ಮಾರ್ಚ್ ವೇಳೆಗೆ ₹55 ಸಾವಿರ ಕೋಟಿಗೆ ಹಾಗೂ ಏಪ್ರಿಲ್ ವೇಳೆಗೆ ₹62 ಸಾವಿರ ಕೋಟಿಗೆ ಏರಿಕೆಯಾಗಿದೆ.

ಭಾರತವು ರಫ್ತು ಮಾಡುವ ಸರಕುಗಳ ಪೈಕಿ ಪೆಟ್ರೋಲಿಯಂ ಉತ್ಪನ್ನಗಳ ಪಾಲು ಹೆಚ್ಚಳವಾಗಿದೆ. ಕಳೆದ ಮೂರು ತಿಂಗಳಲ್ಲಿ ರಷ್ಯಾದಿಂದ ತೈಲವನ್ನು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲಾಗುತ್ತಿದೆ. ಜತೆಗೆ ಸಂಸ್ಕರಿತ ಪೆಟ್ರೋಲಿಯಂ ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿದೆ. ಹೀಗಾಗಿ, ಒಟ್ಟು ರಫ್ತಿನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಪಾಲು ಗಣನೀಯವಾಗಿ ಹೆಚ್ಚಳವಾಗಿದೆ. ಫೆಬ್ರುವರಿಯಲ್ಲಿ ಶೇ 12ರಷ್ಟಿದ್ದ ಪಾಲು ಏಪ್ರಿಲ್ ವೇಳೆಗೆ ಶೇ 20ಕ್ಕೆ ಜಿಗಿದಿದೆ. ಈ ಮೂಲಕ ವಿದೇಶಿ ವಿನಿಮಯ ಗಳಿಕೆಯೂ ಹೆಚ್ಚಳವಾಗಿದೆ.





ನಿರ್ಬಂಧದ ಅಪಾಯ

ರಷ್ಯಾ ಮೇಲೆ ಪಾಶ್ಚಿಮಾತ್ಯ ದೇಶಗಳು ತಿರುಗಿಬಿದ್ದಿದ್ದು, ರಷ್ಯಾದ ಕಚ್ಚಾ ತೈಲ ಖರೀದಿಗೆ ನಿರ್ಬಂಧ ವಿಧಿಸಿವೆ. ಅಮೆರಿಕ ಸೇರಿದಂತೆ ಕೆಲವು ದೇಶಗಳು ರಷ್ಯಾ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿವೆ. ಆದರೆ ಭಾರತದ ತೈಲ ಸಂಸ್ಕರಣ ಕಂಪನಿಗಳು ಅಗ್ಗದ ದರದಲ್ಲಿ ಸಿಗುತ್ತಿರುವ ರಷ್ಯಾ ತೈಲವನ್ನು ತರಿಸಿಕೊಳ್ಳುತ್ತಿದ್ದು, ಭಾರಿ ಲಾಭ ಮಾಡಿಕೊಳ್ಳುತ್ತಿವೆ. ರಷ್ಯಾಕ್ಕೆ ಶಿಕ್ಷೆ ನೀಡುತ್ತಿರುವ ಪಾಶ್ಚಿಮಾತ್ಯ ದೇಶಗಳಿಂದ ಭಾರತದ ತೈಲ ಸಂಸ್ಕರಣಾ ಕಂಪನಿಗಳು ಅಪಾಯಕ್ಕೆ ಸಿಲುಕುವ ಸಾಧ್ಯತೆಯಿದೆ.

ಭಾರತದ ಕಂಪನಿಗಳು ಸಂಸ್ಕರಿಸಿದ ರಷ್ಯಾದ ತೈಲವನ್ನು ಬೇರೆ ರಾಷ್ಟ್ರಗಳು ಆಮದು ಮಾಡಿಕೊಳ್ಳುತ್ತಿವೆ. ರಷ್ಯಾದಿಂದ ನೇರವಾಗಿ ಖರೀದಿಸದೇ, ಮೂರನೇ ರಾಷ್ಟ್ರವಾದ ಭಾರತದಿಂದ ಆಮದು ಮಾಡಿಕೊಳ್ಳುತ್ತಿವೆ. ಆದರೆ, ಭಾರತ, ಚೀನಾ ಮೊದಲಾದ ಮೂರನೇ ದೇಶಗಳಿಂದ ಪೂರೈಕೆಯಾದ ತೈಲಕ್ಕೆ ದಿಗ್ಬಂಧನ ಅನ್ವಯವಾಗುತ್ತದೆಯೇ ಎಂಬುದು ಇನ್ನಷ್ಟೇ ಸ್ಪಷ್ಟಗೊಳ್ಳಬೇಕಿದೆ.

ರಿಲಯನ್ಸ್, ನಯಾರಾ ಎನರ್ಜಿ ಮೊದಲಾದ ಭಾರತದ ಖಾಸಗಿ ಕಂಪನಿಗಳು ರಷ್ಯಾದ ಕಚ್ಚಾ ತೈಲವನ್ನು ಸಂಸ್ಕರಿಸಿ, ಆಸ್ಟ್ರೇಲಿಯಾಕ್ಕೆ ರಫ್ತು ಮಾಡುತ್ತಿವೆ. ಒಂದು ವೇಳೆ ಮೂರನೇ ದೇಶದಿಂದ ಆಮದಾಗುವ ಸಂಸ್ಕರಿತ ತೈಲೋತ್ಪನ್ನಗಳ ಮೇಲೂ ಆಸ್ಟ್ರೇಲಿಯಾ ಸರ್ಕಾರ ತನ್ನ ನಿರ್ಬಂಧವನ್ನು ವಿಸ್ತರಿಸಿದರೆ, ಖಾಸಗಿ ಕಂಪನಿಗಳ ಆದಾಯ ಖೋತಾ ಆಗಲಿದೆ. ದೇಶದ ಪಶ್ಚಿಮ ಕರಾವಳಿಯಲ್ಲಿರುವ ಸಿಕ್ಕಾ ಬಂದರಿನಿಂದ ಯುರೋಪ್‌ಗೆ 25 ಕೋಟಿ ಬ್ಯಾರಲ್ ಡೀಸೆಲ್ ಅನ್ನು ಮೇ ತಿಂಗಳಲ್ಲಿ ರಫ್ತು ಮಾಡಲಾಗಿದೆ. ಐರೋಪ್ಯ ದೇಶಗಳು ಸಹ ಮೂರನೇ ದೇಶದಿಂದ ತೈಲೋತ್ಪನ್ನ ಖರೀದಿಸುವಂತಿಲ್ಲ ಎಂದು ತೀರ್ಮಾನಿಸಿದರೆ, ಅದು ಭಾರತದ ತೈಲ ಸಂಸ್ಕರಣ ಕಂಪನಿಗಳ ಕೈ ಕಟ್ಟಿಹಾಕಲಿದೆ.

ರಷ್ಯಾದ ಬಂದರುಗಳಿಂದ ತೈಲವನ್ನು ಹೊತ್ತ ಹಡಗುಗಳ ಸಂಚಾರಕ್ಕೆ ನಿರ್ಬಂಧ ವಿಧಿಸುವ ಸಾಧ್ಯತೆ ಬಗ್ಗೆ ಪಾಶ್ಚಿಮಾತ್ಯ ದೇಶಗಳು ಪರಿಶೀಲನೆ ನಡೆಸುತ್ತಿವೆ. ಒಂದು ವೇಳೆ ಈ ಸ್ವರೂಪದ ನಿರ್ಬಂಧ ಜಾರಿಯಾದರೆ, ರಷ್ಯಾದಿಂದ ತೈಲವನ್ನು ಹಡಗುಗಳಲ್ಲಿ ತರಿಸಿಕೊಳ್ಳುವುದು ಕಷ್ಟವಾಗಲಿದೆ. ಈ ಹಿಂದೆ, ಇರಾನ್‌ನಿಂದ ರಫ್ತಾಗುವ ತೈಲದ ಮೇಲೆ ನಿರ್ಬಂಧ ವಿಧಿಸಲಾಗಿತ್ತು. ಈ ನಿರ್ಧಾರದಿಂದ ಹಲವು ದೇಶಗಳಲ್ಲಿ ತೈಲ ಬಿಕ್ಕಟ್ಟು ಎದುರಾಗಿತ್ತು. ಇದಕ್ಕೆ ಕಳ್ಳ ಮಾರ್ಗ ಹುಡುಕಿಕೊಂಡಿದ್ದ ಕೆಲವು ಕಂಪನಿಗಳು, ಹಡಗುಗಳು ಯಾವ ದೇಶದಿಂದ ಬರುತ್ತಿವೆ ಎಂಬ ಅಂಶವನ್ನು ಮರೆಮಾಚುವ ಯತ್ನ ನಡೆಸಿದ್ದವು. ಈಗಲೂ ಇದು ಪುನರಾವರ್ತನೆ ಆಗಬಹುದು.

ಆಧಾರ: ರಾಯಿಟರ್ಸ್, ವಾಣಿಜ್ಯ ಸಚಿವಾಲಯದ ಮಾಸಿಕ ವರದಿಗಳು, ಪೆಟ್ರೋಲಿಯಂ ಪ್ರೈಸ್ ಅನಲಿಸಿಸ್ ಸೆಲ್

ಉತ್ಪಾದನೆ ಹೆಚ್ಚಿಸಲಿದೆ ಒಪೆಕ್

ಒಪೆಕ್ ಪ್ಲಸ್ ದೇಶಗಳು ಈಗಿರುವ ಪ್ರತಿದಿನದ ತೈಲ ಉತ್ಪಾದನೆಗೆ ಹೆಚ್ಚುವರಿಯಾಗಿ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ 6.4 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಿಸಲು ನಿರ್ಧರಿಸಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರುತ್ತಿರುವುದರಿಂದ ಹಲವು ದೇಶಗಳಲ್ಲಿ ಹಣದುಬ್ಬರ ಪ್ರಮಾಣ ಹೆಚ್ಚಿದ್ದು, ಇದಕ್ಕೆ ಪರಿಹಾರವಾಗಿ ತೈಲ ಉತ್ಪಾದನೆಯನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ.

ಕೋವಿಡ್ ಅವಧಿಯಲ್ಲಿ ತೈಲ ಉತ್ಪಾದನೆಯನ್ನು ಕಡಿತಗೊಳಿಸಿದ್ದ ಒಪೆಕ್ ಪ್ಲಸ್ ದೇಶಗಳು ಹಂತಹಂತವಾಗಿ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆ ಹಾಕಿಕೊಂಡಿವೆ. ಒಟ್ಟು ಉತ್ಪಾದನೆಗೆ ಪ್ರತಿ ತಿಂಗಳು 4.32 ಲಕ್ಷ ಬ್ಯಾರಲ್ ತೈಲವನ್ನು ಹೆಚ್ಚುವರಿಯಾಗಿ ಸೇರಿಸುತ್ತಿವೆ. ತೈಲ ಬೆಲೆ ಅಧಿಕವಾಗುತ್ತಿರುವ ಕಾರಣ, ಉದ್ದೇಶಿತ ಯೋಜನೆಗಿಂತ ಹೆಚ್ಚಿನ ತೈಲವನ್ನು ಉತ್ಪಾದಿಸಲು ಒಪೆಕ್ ಪ್ಲಸ್ ದೇಶಗಳು ಗುರುವಾರ ನಿರ್ಧರಿಸಿವೆ.

ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿದ ಬಳಿಕ ಅಮೆರಿಕದಲ್ಲಿ ತೈಲ ಬೆಲೆಯಲ್ಲಿ ಶೇ 54ರಷ್ಟು ಹೆಚ್ಚಳವಾಗಿದೆ. ಹೀಗಾಗಿ ತೈಲ ಉತ್ಪಾದನೆ ಹೆಚ್ಚಿಸುವಂತೆ ಒಪೆಕ್ ಪ್ಲಸ್ ದೇಶಗಳ ಮೇಲೆ ಅಮೆರಿಕ ಒತ್ತಡ ಹೇರಿತ್ತು ಎನ್ನಲಾಗಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 137

ಮಾರಗಣಗಳಿಗೂ ಮಣಿಯದ ಶಿವ

ಶಿವನನ್ನು ಮೋಹಗೊಳಿಸಲು ಸಾಧ್ಯವಿಲ್ಲ ಎಂದ ಮನ್ಮಥನ ಮಾತನ್ನು ಕೇಳಿ ಬ್ರಹ್ಮ ಚಿಂತಾಕ್ರಾಂತನಾದ. ಅವನ ನಿಟ್ಟುಸಿರಿನಿಂದ ಅನೇಕ ರೂಪವುಳ್ಳ, ತುಂಬಾ ಬಲಶಾಲಿಗಳೂ, ಚಂಚಲವಾದ ನಾಲಿಗೆಯುಳ್ಳವರೂ, ತುಂಬಾ ಭಯಂಕರರೂ ಆದಂತಹ ಅನೇಕ ಗಣಗಳು ಜನಿಸಿದರು. ಆ ಗಣಗಳೆಲ್ಲರೂ ಪಟಹ ಮೊದಲಾದ ಅನೇಕ ಬಗೆಯ ವಾದ್ಯಗಳನ್ನು ದೊಡ್ಡ ಸದ್ದಿನೊಡನೆ ಬಾರಿಸಿದರು. ನಂತರ ಆ ಮಹಾಗಣಗಳು ಬ್ರಹ್ಮನ ಎದುರಿಗೆ ನಿಂತು 'ಮಾರಯ ಎಂದರೆ ಕೊಲ್ಲು, ಛೇದಯ ಎಂದರೆ ಕತ್ತರಿಸು' ಎಂಬುದಾಗಿ ಆರ್ಭಟಿಸಿದರು. ಗಣಗಳು ಹೀಗೆ ಕೂಗುತ್ತಿದ್ದಾಗ ಮನ್ಮಥ ಅವುಗಳಿಗೆ ಸುಮ್ಮನಿರುವಂತೆ ಸೂಚಿಸಿ, 'ಈಗ ಜನಿಸಿರುವ ಈ ವೀರರೂ ಕ್ರೂರರೂ ಭಯಂಕರರೂ ಆದ ಗಣಗಳು ಯಾರು? ಇವರ ಕೆಲಸವೇನು? ಇವರು ಯಾವ ಸ್ಥಾನದಲ್ಲಿರಬೇಕಾದವರು? ಇವರ ಹೆಸರುಗಳೇನು?' ಎಂದು ಬ್ರಹ್ಮನನ್ನು ಕೇಳಿದ.

'ಎಲೈ ಮನ್ಮಥ! ಈ ಗಣಗಳು ಜನಿಸಿದೊಡನೆಯೇ ಮಾರಯ ಎಂದು ಪುನಃ ಪುನಃ ಹೇಳಿರುವುದರಿಂದ ಇವರಿಗೆ ಮಾರಗಣಗಳೆಂದು ಹೆಸರು. ಶಿವಾರ್ಚನೆಯನ್ನು ಮಾಡದೇ ಕೇವಲ ಕಾಮಸುಖದಲ್ಲಿಯೇ ಆಸಕ್ತರಾಗಿರುವಂತಹ ಜನಗಳಿಗೆ ಈ ಗಣಗಳು ಸದಾ ವಿಘ್ನವನ್ನುಂಟುಮಾಡುವುವು. ಈ ಗಣಗಳಿಗೆ ನಿನ್ನನ್ನು ಹಿಂಬಾಲಿಸುವುದೇ ಕರ್ತವ್ಯ. ನಿನ್ನೊಡನೆ ಬಂದು ನಿನಗೆ ಸಹಾಯಮಾಡುವರು. ಈ ಗಣಗಳು ಕಾಮಬಾಣಪೀಡಿತರಾದವರ ಮನಸ್ಸಿನಲ್ಲಿ ಭ್ರಾಂತಿಯನ್ನುಂಟುಮಾಡುವರು. ಜ್ಞಾನಿಗಳ ಜ್ಞಾನಮಾರ್ಗವನ್ನೂ ಹಾಳುಮಾಡುವರು' ಎಂದ ಬ್ರಹ್ಮ.

ಬ್ರಹ್ಮ ಹೇಳಿದ ಮಾತುಗಳನ್ನು ಕೇಳಿದ ಮನ್ಮಥ ಸ್ವಲ್ಪ ಪ್ರಸನ್ನವಾದ ಮುಖವುಳ್ಳವನಾದ. ಆ ಗಣಗಳೂ ಬ್ರಹ್ಮನ ಮಾತುಗಳನ್ನು ಕೇಳಿ ಸಂತೋಷಗೊಂಡು, ಮನ್ಮಥನನ್ನು ಸುತ್ತುವರಿದು ಕುಳಿತರು. ನಂತರ ಬ್ರಹ್ಮ 'ಎಲೈ ಮದನ, ಈ ಗಣಗಳ ಸಹಾಯದಿಂದ ನೀನು ಮತ್ತೆ ಶಂಕರನನ್ನು ಮೋಹಗೊಳಿಸಲು ಹೊರಡು. ಮನಸ್ಸಿಟ್ಟು ಈ ಮಾರಗಣಗಳೊಂದಿಗೆ ಪ್ರಯತ್ನ ಮಾಡು, ಶಂಕರನು ಪತ್ನಿಯನ್ನು ಪರಿಗ್ರಹಿಸುವಂತೆ ಮೋಹಗೊಳಿಸು' ಎಂದು ಆದೇಶಿಸಿದ.

'ತಂದೆಯಾದ ಓ ವಿಧಿ! ನಾನು ಈವರೆಗೆ ಶಿವನನ್ನು ಮೋಹಗೊಳಿಸಲು ಬಹಳ ಯತ್ನಗಳನ್ನು ಮಾಡಿರುವೆ. ಆದರೆ ಶಿವನು ಇದುವರೆವಿಗೂ ಸ್ವಲ್ಪವೂ ಮೋಹಗೊಳ್ಳಲಿಲ್ಲ. ಈಗಲೂ ಅವನನ್ನು ಮೋಹಗೊಳಿಸುವುದು ಅಸಾಧ್ಯ ಎಂಬುದನ್ನು ಬಲ್ಲೆ. ಆದರೆ ನಿನ್ನ ಮಾತಿನಲ್ಲಿ ಗೌರವವನ್ನಿಟ್ಟು, ಈ ಮಾರಗಣಗಳೊಂದಿಗೆ ಹೋಗುತ್ತಿದ್ದೇನೆ. ಆದರೆ, ಶಿವನನ್ನು ಮೋಹಗೊಳಿಸುವ ನನ್ನ ಪ್ರಯತ್ನದಲ್ಲಿ ಅವನ ಕೋಪಕ್ಕೆ ತುತ್ತಾಗಿ, ಎಲ್ಲಿ ನಾನು ಭಸ್ಮವಾಗುವೆನೋ – ಎಂಬ ಹೆದರಿಕೆಯೂ ಇದೆ' ಎಂದು ಹೇಳಿದ ಮನ್ಮಥ, ಪತ್ನಿ ರತಿ, ವಸಂತ ಮತ್ತು ಮಾರಗಣಗಳೊಡನೆ ಅಳುಕುತ್ತಲೇ ಶಿವನಿರುವಲ್ಲಿಗೆ ಹೋದ. ಅಲ್ಲಿ ಶಿವನನ್ನು ಮೋಹಗೊಳಿಸಲು ಅನೇಕ ಯತ್ನಗಳನ್ನು ಮಾಡಿದ.

ವಸಂತ ಸಹ ತನ್ನ ಬುದ್ಧಿಯನ್ನು ಪ್ರಯೋಗಿಸಿ ಅನೇಕ ಉಪಾಯಗಳನ್ನು ಮಾಡಿದ. ಮಾರಗಣಗಳೂ ಅನೇಕ ಉಪಾಯಗಳನ್ನು ಮಾಡಿದವು. ಆದರೂ ಪರಮಾತ್ಮನಾದ ಶಿವನು ಸ್ವಲ್ಪವೂ ಮೋಹಗೊಳ್ಳಲಿಲ್ಲ. ಮತ್ತೆ ಸೋತ ಮನ್ಮಥ ತನ್ನ ಪರಿವಾರದೊಂದಿಗೆ ಬ್ರಹ್ಮನ ಬಳಿಗೆ ಬಂದ. ಬ್ರಹ್ಮನಿಗೂ ಮತ್ತೆ ಮನ್ಮಥ ಸೋತು ಬಂದುದನ್ನು ನೋಡಿ ದುಃಖವಾಯಿತು. ಬ್ರಹ್ಮನ ಗರ್ವವೂ ನಾಶವಾಯಿತು.

ಸೋತ ಹತಾಶೆಯಲ್ಲಿದ್ದ ಮನ್ಮಥ ಬ್ರಹ್ಮನಿಗೆ ನಮಸ್ಕರಿಸಿ, 'ಶಿವನನ್ನು ಮೋಹಗೊಳಿಸಲು ಮೊದಲಿಗಿಂತಲೂ ಹೆಚ್ಚು ಪ್ರಯತ್ನ ಮಾಡಿದೆವು. ಆದರೆ ಸಮಾಧಿಸ್ಥಿತಿಯಲ್ಲಿ ಕುಳಿತ ಶಿವನಿಗೆ ಸ್ವಲ್ಪವೂ ಕಾಮವಿಕಾರವುಂಟಾಗಲಿಲ್ಲ. ಕರುಣಾಮೂರ್ತಿಯಾದ ಶಿವನು ನನ್ನನ್ನು ದಹಿಸಲೂ ಇಲ್ಲ. ಇದಕ್ಕೆ ನನ್ನ ಪೂರ್ವ ಪುಣ್ಯವೇ ಕಾರಣ. ಅಲ್ಲದೆ ಆ ಪ್ರಭುವಾದ ಶಿವನು ಕೋಪ ಮುಂತಾದ ವಿಕಾರಗಳಿಲ್ಲದವನು. ಶಿವನು ಪತ್ನಿಯನ್ನು ಸ್ವೀಕರಿಸಲೇ ಬೇಕೆಂದಿದ್ದರೆ ಈ ನಮ್ಮ ಗರ್ವವನ್ನೂ ಹಠವನ್ನೂ ಬಿಟ್ಟು ಬೇರೆ ಉಪಾಯವನ್ನು ಮಾಡುವುದು ಉತ್ತಮ' ಎಂದು ಹೇಳಿ, ಮನ್ಮಥ ತನ್ನ ಪರಿವಾರದೊಡನೆ ಅಲ್ಲಿಂದ ತೆರಳಿದ ಎಂಬಲ್ಲಿಗೆ ಸತೀಖಂಡದಲ್ಲಿ ಒಂಬತ್ತನೆಯ ಅಧ್ಯಾಯವು ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಗುಂಪೊಂದರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡುತ್ತಿರುವ 28 ಸೆಕೆಂಡುಗಳ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪೊಲೀಸರು ಜನರನ್ನು ಎಳೆದಾಡುವ ದೃಶ್ಯವೂ ವಿಡಿಯೊದಲ್ಲಿ ಇದೆ. ಉತ್ತರ ಪ್ರದೇಶದ ವಾರಾಣಸಿಯ ಜ್ಞಾನವಾಪಿ ಮಸೀದಿ ವಿವಾದಕ್ಕೆ ಸಂಬಂಧಿಸಿರುವ ವಿಡಿಯೊ ಇದು. ಈ ವಿಡಿಯೊಗೆ, 'ಜ್ಞಾನವಾಪಿ ಮಸೀದಿಯಲ್ಲಿ ಸಮೀಕ್ಷೆಯನ್ನು ನಿಲ್ಲಿಸುವಂತೆ ಪ್ರತಿಭಟನೆ ನಡೆಸುತ್ತಿದ್ದರು. ಪೊಲೀಸರು ಪ್ರತಿಭಟನಕಾರರ ಮೇಲೆಯೇ ಸಮೀಕ್ಷೆ ನಡೆಸಿ, ಬುದ್ಧಿ ಕಲಿಸಿದ್ದಾರೆ' ಎಂದು ವಿವರಣೆ ನೀಡಲಾಗಿದೆ. ಪೊಲೀಸರು ಸರಿಯಾಗಿ ಮಾಡಿದ್ದಾರೆ ಎಂದು ಹಲವರು ಟ್ವೀಟ್ ಮಾಡಿದ್ದಾರೆ.

ಈ ವಿಡಿಯೊ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ನವಭಾರತ್ ಟೈಮ್ಸ್ ವೆಬ್‌ಸೈಟ್‌ನಲ್ಲಿ ವರದಿ ಸಮೇತ ಈ ವಿಡಿಯೊವನ್ನು 2021ರ ಜುಲೈ 3ರಂದು ಪ್ರಕಟಿಸಲಾಗಿದೆ. ಉತ್ತರ ಪ್ರದೇಶದ ಪ್ರಯಾಗರಾಜ್ ಜಿಲ್ಲೆಯಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಚುನಾವಣೆಯ ಮತ ಎಣಿಕೆಯಲ್ಲಿ ಮೋಸ ನಡೆದಿದೆ ಎಂದು ಸಮಾಜವಾದಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಈ ವೇಳೆ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದರು ಎಂದು ಲಾಜಿಕಲ್ ಇಂಡಿಯನ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜೂನ್ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಚತುರ್ಥಿ ಗಂ. 26-42 ನಕ್ಷತ್ರ: ಪುನರ್ವಸು ಗಂ. 19-05 ಯೋಗ: ವೃದ್ಧಿ ಗಂ. 27-33, ಕರಣ: ವಣಿಜ ಗಂ. 13-31, ವೃಷಭ ಮಾಸದ 19 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-06 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ : 03 ಜುಲ್ಕಾಯಿದ್ ದಿನ ವಿಶೇಷ : ಶ್ರೀ ಗುರು ಅರ್ಜುನ ದೇವರ ಮೃತ ದಿನ (ಸಿಖ್)
ಅದೃಷ್ಟ ಸಂಖ್ಯೆ: 2, 8

ಮೇಷ: ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚತೆಯಿಂದ ಇರಬೇಕಾಗುತ್ತದೆ. ಕಾರ್ಖಾನೆ ಕೆಲಸಗಾರರಿಗೆ ಹೆಚ್ಚಿನ ಕೆಲಸ. ಕೆಲಸದ ಮುಕ್ತಾಯದ ಸಮಯದಲ್ಲಿ ಬಹಳ ಆಯಾಸ.

ವೃಷಭ: ಧರ್ಮ ಕಾರ್ಯಗಳಿಗಾಗಿ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ. ವ್ಯಾಪಾರ, ವ್ಯವಹಾರಗಳಲ್ಲಿ ತೀವ್ರವಾ ಪೈಪೋಟಿ ಆತಂಕಕ್ಕೆ ಕಾರಣವಾಗಲಿದೆ. ದೇವ ಕೋಪಕ್ಕೆ ಪಾತ್ರರಾಗದಂತೆ ಜಾಗ್ರತೆ ವಹಿಸಿರಿ.

ಮಿಥುನ: ಚರ್ಮದ ವಸ್ತು ವ್ಯಾಪಾರಿಗಳಿಗೆ ಲಾಭದ ದಿನ. ವೈದ್ಯರನ್ನು ಭೇಟಿ ಮಾಡುವ ಸ್ಥಿತಿ ಎದುರಾಗಬಹುದು. ಆಡಳಿತಾತ್ಮಕ ಕ್ಷೇತ್ರದಲ್ಲಿರುವವರಿಗೆ ಉತ್ತಮ ಫಲ. ಸ್ನೇಹಿತರ ಸಹಾಯ ನಿಮಗೆ ಇದೆ.

ಕರ್ಕಾಟಕ: ಷರತ್ತುಗಳಿರುವ ಯಾವುದೇ ರೀತಿಯ ವ್ಯವಹಾರಕ್ಕೂ ಕೈ ಹಾಕದಿರಿ. ಕುಟುಂಬದ ಗಣ್ಯರಿಂದ ನಿಮ್ಮ ಮುಂದಿನ ಬದುಕಿನ ದಾರಿಯ ಬಗ್ಗೆ ಮಾರ್ಗದರ್ಶನ. ರಿಯಲ್ ಎಸ್ಟೇಟ್‌ದಾರರಿಗೆ ಉತ್ತಮ ಆದಾಯ.

ಸಿಂಹ: ಶಿಕ್ಷಕ ವರ್ಗದವರಿಗೆ ಹೆಚ್ಚಿನ ಜವಾಬ್ದಾರಿಯುತ ಕೆಲಸಗಳು ಬರಲಿವೆ. ವಿಲಾಸೀ ಜೀವನದ ಶೈಲಿ ಅನುಭವಿಸುವ ಆಸೆ ಈಡೇರುವುದು. ಸೃಜನಶೀಲತೆ ತೋರುವುದರಿಂದ ಗೌರವ ಹೆಚ್ಚಲಿದೆ.

ಕನ್ಯಾ: ಸಹೋದ್ಯೋಗಿಗಳ ಅನಗತ್ಯ ಮಾತಿನಿಂದಾಗಿ ಭಿನ್ನಾಭಿಪ್ರಾಯ ಸೃಷ್ಟಿ. ಉದಾರ ಮನೋಭಾವದಿಂದ ಅನುಕೂಲ. ಕದಡಿದ ಮನಸ್ಸಿಗೆ ಸಂಜೆಯ ವೇಳೆಗೆ ತಣ್ಣನೆಯ ವಾತಾವರಣ ಮೂಡಲಿದೆ.

ತುಲಾ: ದೈವಾನುಗ್ರಹದಿಂದ ಸಕಲ ಅಭೀಷ್ಟವು ನೆರವೇರುವುದು. ನಿಮ್ಮದೇ ಆದ ಭಾವನಾ ಪ್ರಪಂಚ ಇಂದು ನಿಮ್ಮನ್ನು ಮತ್ತೆ ಮತ್ತೆ ಸೆಳೆಯುತ್ತದೆ. ನೌಕರಿಯಲ್ಲಿ ಬಡ್ತಿ ಹೊಂದುವ ಪ್ರಯತ್ನ ಹೆಚ್ಚಾಗಿ ಇರಲಿ.

ವೃಶ್ಚಿಕ: ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ಸಾಂಸಾರಿಕ ಜೀವನದಲ್ಲಿ ಬಿರುಕು ಮೂಡದಂತೆ ನೋಡಿಕೊಳ್ಳಿ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ.

ಧನು: ದೈವಬಲದಿಂದ ನಿಮ್ಮ ಪ್ರಯತ್ನ ಕಾರ್ಯಗಳೆಲ್ಲ ಶುಭ ಫಲಗಳನ್ನೇ ನೀಡಲಿದೆ. ನೀವು ಕಷ್ಟಪಟ್ಟು ದುಡಿಯುವ ಸ್ವಭಾವದವರು. ಆದ್ದರಿಂದ ವ್ಯವಹಾರದಲ್ಲಿ ಜೀವನದಲ್ಲಿ ಕೊರತೆ ಕಾಣುವುದಿಲ್ಲ.

ಮಕರ: ಇಂದು ಮುಂಜಾನೆ ಏಳುವಾಗಲೇ ನೀವು ಉತ್ಸಾಹಿಗಳಾಗಿರುತ್ತೀರಿ. ಹಾಗೆಯೇ ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರಿಂದ ಕರ್ತವ್ಯ ಲೋಪಗಳು ಸಂಭವಿಸಬಹುದು.

ಕುಂಭ: ವಾಸ್ತುಶಿಲ್ಪ ಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಅನುಕೂಲ. ನಿಮ್ಮ ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಈ ದಿನ ಪ್ರಾರಂಭಿಸಿ.

ಮೀನ: ಲೇವಾದೇವಿ ವ್ಯವಹಾರಗಳು ಇಂದು ತೃಪ್ತಿಕರವಾಗಿರುವುದು. ಕಚೇರಿಯ ಕೆಲಸಗಳನ್ನು ಮಾಡಿ ಮುಗಿಸುವಲ್ಲಿ ಆತುರ ಬೇಡ. ಹೂವು ಮತ್ತು ಹಣ್ಣಿನ ವ್ಯಾಪಾರಿಗಳಿಗೆ ಅಧಿಕ ಲಾಭ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಗೊತ್ತುಗುರಿಯಿಲ್ಲದ ಬದುಕು

ದಾರಿಗುರಿಗಳ ಗೊತ್ತು ಕಾಗೆಗುಂಟೇನಯ್ಯ? |
ಆರ ಮನೆ ಸಂಡಿಗೆಯೊ, ಚುಂಡಿಲಿಯೊ, ಹುಳುವೊ ||
ಆರ ಪಿಂಡವೊ, ಏನೊ, ಎಂತೊ, ಆ ಬಾಳ ಗತಿ ! |
ಮೀರಿದವನೇಂ ನೀನು? – ಮಂಕುತಿಮ್ಮ || 642 ||

ಪದ-ಅರ್ಥ: ಕಾಗೆಗುಂಟೇನಯ್ಯ = ಕಾಗೆಗೆ + ಉಂಟೇನಯ್ಯ, ಚುಂಡಿಲಿ = ಬೇಯಿಸಿದ ಕಾಳು, ಸೊಂಡೆ ಇಲಿ, ಮೀರಿದವನೇಂ = ಮೀರಿದವನೇ?

ವಾಚ್ಯಾರ್ಥ: ಕಾಗೆಗೆ ದಾರಿ, ಗುರಿಗಳು ಇರುತ್ತವೆಯೇ? ಎಲ್ಲಿ ಊಟ ಸಿಗುತ್ತದೋ ಅಲ್ಲಿಗೆ ಪ್ರಯಾಣ, ಯಾರ ಮನೆ ಸಂಡಿಗೆಯೋ, ಬೇಯಿಸಿದ ಕಾಳೋ, ಇಲಿಯೋ, ಹುಳುವೊ, ಅಥವಾ ಯಾರ ಮನೆ ಪಿಂಡವೊ, ಅದರ ಬಾಳಗತಿ ಹೇಗೋ, ಏನೋ? ನಿನ್ನ ಬಾಳು ಅದನ್ನು ಮೀರಿದ್ದೇ?

ವಿವರಣೆ: ಮೊನ್ನೆ ದಿನ ನ್ಯೂಯಾರ್ಕಿನಲ್ಲಿ ಒಬ್ಬರ ಮನೆಯಲ್ಲಿ ಕುಳಿತು ಮಾತನಾಡುತ್ತಿದ್ದೆ. ಅಲ್ಲಿ ಹತ್ತಾರು ತರುಣ-ತರುಣಿಯರು. ಎಲ್ಲರೂ ಭಾರತೀಯರೇ. ಅನ್ನ ಅರಸಿ ಇಲ್ಲಿಗೆ ಬಂದಿದ್ದಾರೆ. ಕೆಲವರು ಕಾಯಂ ಆಗಿ ನೆಲೆಸಿದ್ದಾರೆ, ಕೆಲವರು ನೆಲೆಸಲು ಕಷ್ಟಪಡುತ್ತಿದ್ದಾರೆ. ಅವರಿಗೆ ಅಮೇರಿಕೆಯೆಂದರೆ ಸ್ವರ್ಗ. ಹೇಗಾದರೂ ಮಾಡಿ ಇಲ್ಲಿಯೇ ಉಳಿಯಬೇಕು. ಅವರಲ್ಲಿ ಬಹಳಷ್ಟು ಜನ ಕೆಳಮಧ್ಯಮ ವರ್ಗಗಳಿಂದ ಬಂದವರು. ಒಬ್ಬ ವೀಸಾಕ್ಕೋಸ್ಕರ ಯಾವುದೋ ಕಂಪನಿಗೆ ದುಡ್ಡು ಕೊಟ್ಟು, ಅದನ್ನು ತೀರಿಸಲು ನಾಲ್ಕಾರು ಕಡೆಗೆ ಓಡಾಡಿದ್ದಾನೆ. ಮತ್ತೊಬ್ಬ ಹುಡುಗ ಮುಂದಿನ ತಿಂಗಳು ಒಬ್ಬ ಅಮೇರಿಕನ್ ಹುಡುಗಿಯನ್ನು ಮದುವೆಯಾಗುತ್ತಿದ್ದಾನೆ. 'ಆಕೆಯನ್ನು ಬಹಳ ಪ್ರೀತಿಸುತ್ತೀಯೇನೋ?' ಎಂದು ಕೇಳಿದರೆ ಅವನು ನೇರವಾಗಿ ಹೇಳಿದ, 'ಪ್ರೀತಿ ಆಮೇಲೆ, ಆಕೆಯನ್ನು ಮದುವೆಯಾದರೆ ನನಗೂ ಅಮೇರಿಕನ್ ಪೌರತ್ವ ದೊರಕುತ್ತದೆ. ಆಗ ಕೆಲಸಕ್ಕಾಗಿ ದಿಕ್ಕುದಿಕ್ಕಿಗೆ ಅಲೆಯಬೇಕಾಗಿಲ್ಲ'. ನನಗೆ ಆಶ್ಚರ್ಯ! ಪ್ರೀತಿಗಾಗಿ ಮದುವೆಯಲ್ಲ, ಕೆಲಸಕ್ಕಾಗಿ ಮದುವೆ. ನಾವು ಮಾತನಾಡುತ್ತಿರುವಾಗ ಹಿಂದೆ ವಯಸ್ಸಾದ ಗುಜರಾತೀ ದಂಪತಿಗಳು ಕುಳಿತಿದ್ದರು. ಅವರನ್ನು ಕೇಳಿದೆ, 'ಪ್ರತಿವರ್ಷ ಭಾರತಕ್ಕೆ ಹೋಗಿ ಬರುತ್ತೀರಾ?'. ಆ ತಾಯಿಯ ಕಣ್ಣಿಂದ ನೀರು ಚಿಮ್ಮಿದವು. ಗಂಡ ಹೇಳಿದರು, 'ಸಾರ್, ನಾವು ಇಲ್ಲಿಗೆ ಬಂದು ಇಪ್ಪತ್ತೈದು ವರ್ಷಗಳಾದವು. ಒಂದು ಬಾರಿಯೂ ಭಾರತಕ್ಕೆ ಹೋಗಲಾಗಲಿಲ್ಲ'. 'ಕೆಲಸ ತುಂಬ ಜಾಸ್ತಿಯಾಗಿದೆಯೋ, ಸಮಯ ಸಿಗುತ್ತಿಲ್ಲವೇ?' ಎಂದು ಕೇಳಿದೆ. ಅವರು, 'ನಿಮಗೆ ನಮ್ಮ ಕಷ್ಟ ಗೊತ್ತಿಲ್ಲ. ಇಲ್ಲಿಗೆ ಬರಲೇಬೇಕೆಂದು, ಹೇಗೋ ವೀಸಾ ಮಾಡಿಸಿಕೊಂಡು ಬಂದೆವು. ವೀಸಾ ಅವಧಿ ಎಂದೋ ಮುಗಿದು ಹೋಗಿದೆ. ನಾವು ಜಾಗೆಗಳನ್ನು ಬದಲಾಯಿಸುತ್ತಾ ಇಲ್ಲಿ ಬಂದಿದ್ದೇವೆ. ಯಾರೋ ಒಂದು ಸೋಶಿಯಲ್ ಸೆಕ್ಯೂರಿಟಿ ನಂಬರ್ ಮಾಡಿಸಿಕೊಟ್ಟಿದ್ದಾರೆ. ನಾವು ಏರಪೋರ್ಟ್ ಹತ್ತಿರ ಹೋದೊಡನೆ ನಮ್ಮನ್ನು ಇಲ್ಲಿಗೆ ಬರದಂತೆ ಭಾರತಕ್ಕೆ ಕಳುಹಿಸಿಬಿಡುತ್ತಾರೆ. ಅದಕ್ಕೇ ಫೋನ್‌ನಲ್ಲಿಯೇ ವಿಡಿಯೋ ಕಾಲ್ ಮಾಡಿ ಭಾರತದೊಂದಿಗೆ ಸಂಪರ್ಕದಲ್ಲಿದ್ದೇವೆ. ನಮ್ಮಂತಹವರು ಇಲ್ಲಿ ಬಹಳ ಜನರಿದ್ದಾರೆ' ಎಂದರು!

ಇದನ್ನೆಲ್ಲ ಕಂಡಾಗ ಈ ಕಗ್ಗ ತುಂಬ ಪ್ರಸ್ತುತ ಎನ್ನಿಸಿತು. ಡಿ.ವಿ.ಜಿ. ಕಾಗೆಯ ಉದಾಹರಣೆ ಕೊಡುತ್ತಾರೆ. ಎಲ್ಲಿ ಹೊಟ್ಟೆಗೆ ಆಹಾರ ಸಿಕ್ಕೀತೋ ಅಲ್ಲಿಗೆ ಕಾಗೆ ಧಾವಿಸುತ್ತದೆ. ಅದು ಸಂಡಿಗೆ, ಇಲಿ, ಹುಳ, ಪಿಂಡ ಏನಾದರೂ ಆಗಬಹುದು. ಅದಕ್ಕೆ ನಿಶ್ಚಿತವಾದ ದಾರಿ, ಗುರಿ ಎಂಬುದೇನಿಲ್ಲ, ನಮ್ಮ ಪರಿಸ್ಥಿತಿಯೂ ಅದೇ ಅಲ್ಲವೇ? ಹೊಟ್ಟೆ, ಭದ್ರತೆಗಾಗಿ ನಾವು ದಿಕ್ಕುದಿಕ್ಕಿಗೆ ಸುತ್ತುತ್ತಿಲ್ಲವೆ? ಕಾಗೆಗೆ ಬಹುಶ: ಹೊಟ್ಟೆಯದೊಂದೇ ಸೆಳೆತ. ನಮಗೆ ಐದು ಸೆಳೆತಗಳು! ಪಂಚೇಂದ್ರಿಯಗಳು ನಮ್ಮನ್ನು ಎಳೆಎಳೆದು, ಸುತ್ತಿಸಿ ಬದುಕನ್ನು ಕಾಗೆಯ ಬದುಕಿಗಿಂತ ಕಷ್ಟತರವನ್ನಾಗಿ ಮಾಡುತ್ತವೆ.

ಪದಬಂಧ 4977

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಭಾವ ಕಾಲದಲ್ಲಿಅಕ್ಕನ ಗಂಡ ಬಂದಿಹನಲ್ಲಾ! (2)
3.ಪ್ರವಾಸದಲ್ಲಿ ಪಟ್ಟಿರುವ ಶ್ರಮ (3)
6.ವಿಷಯಾಸಕ್ತ ಇಲ್ಲಿದ್ದಾನೆ (3)
8.ಕರದಲ್ಲಿ ಹಿಡಿದಿರುವ ಸಾಮಾನು! (4)
10.ಅತಿ ತೀಕ್ಷ್ಣವಾದುದು (3)
11.ಕನ್ನ ಹಾಕಿ ಕದ್ದಿರುವ ಚಿನ್ನ (3)
12.ಕ್ಷುದ್ರಲೋಹವನ್ನು ಚಿನ್ನವನ್ನಾಗಿ ಪರಿವರ್ತಿಸುವುದು (4)
15.ಮರದ ಬಳಿಯಿರುವ ಮೊಸಳೆ (3)
17.ಈತ ಕಬ್ಬಿಣದ ಕೆಲಸಗಾರ (3)
18.ಜನನಿ ನುಡಿದಿರುವ ಸತ್ಯ (2)

ಮೇಲಿಂದ ಕೆಳಕ್ಕೆ
2.ಚನ್ನಾಗಿ ಮಾತನಾಡುವವನು (3)
3.ಪ್ರತಿಬಿಂಬ ಇಲ್ಲಿ ಕಾಣುತ್ತಿದೆ (3)
4.ಸರಸವಾದ ಮಾತುಕತೆ (3)
5.ಸಂಕಟದಿಂದ ಕಟ್ಟದ ತೆರಿಗೆ (2)
7.ತಾರ ನುಡಿಸಿದ ತಂತಿ ವಾದ್ಯ (3)
9.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
10.ಸೇವಕ ಕೊನೆಗಿದ್ದಾಗ ಹರಡುವಿಕೆ! (3)
11.ಕಲೆಸಿದ ಗೋಧಿ ಹಿಟ್ಟು (3)
13.ಸೊಸೆ ನೆಟ್ಟರುವ ಎಳೆಯ ಗಿಡ! (2)
14.ಹತ್ತು ವರ್ಷಗಳ ಕಾಲದ ಅವಧಿ (3)
15.ಮರದೊಳಗೆ ಸವಿಯಾದುದು ಇದೆ (3)
16.ನಿಜವಾಗಿಯೂ ರಜದಲ್ಲಿನ ಇರುಳು! (3)



4976ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನ್ವಂತರ 3.ಪಾರಂಗತ
5.ತಿಕ್ಕಲು 6.ನಿಯೋಗ
8.ಬಾವಲಿ 9.ನಯನ
10.ತ್ರಿಶಂಕು 12.ಚಾಳೀಸು
14.ಕಳೇಬರ 15.ಮನೋಹರ

ಮೇಲಿಂದ ಕೆಳಕ್ಕೆ:
1.ಮಯನಿ 2.ರತಿ
3.ಪಾಲು 4.ತಕಲಿ
7.ಗಜಗಮನ 8.ಬಾಜಾಬಜಂತ್ರಿ
9.ನರ್ತಕ 11.ಕುಬೇರ
12.ಚಾರ 13.ಸುಮ

ಸುಡೊಕು 5363

				5		2		8
		4	1		8			
	8	3		7			5	
	6		9	3		1		2
2		5						
	3			8	2	5		6
			5		6		2	
3		2						
	5			2		4		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5362 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಷೇರುಪೇಟೆ ವಹಿವಾಟು 437



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	16,522
ಇಂದಿನ ಅಂತ್ಯ	16,628
▲	106
ದಿನದ ಗರಿಷ್ಠ	16,646

ವಿನಿಮಯ ದರ

$ ಡಾಲರ್	77.60
£ ಪೌಂಡ್	97.36
€ ಯುರೊ	82.97
¥ ಯೆನ್ (100ಕ್ಕೆ)	60

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹497

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1610)
ಸೋಯಾ (ರಿಫೈನ್ಡ್)	₹1500 (1500)
ಸೂರ್ಯಕಾಂತಿ (ರಿಫೈನ್ಡ್)	₹1790 (1800)
ಪಾಮೋಲಿನ್	₹1480 (1480)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹289-589
ದ್ವಿತಳಿ (ಬಿ.ವಿ)	₹321-813

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹171
ಆರ್ಎಸ್ಎಸ್-5	₹164
ಗುಡ್ ಲಾಟ್	₹158

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-26000
2ನೇ ದರ್ಜೆ	₹10000-15000

ರೆಪೋಸ್‌ನಿಂದ ಸ್ಮಾರ್ಟ್‌ಗ್ರಿಡ್ ಶ್ರೇಣಿಯ ಮ್ಯಾಟ್ರಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಪೋಸ್ ಮ್ಯಾಟ್ರಸ್ ಕಂಪನಿಯು ದೇಶದ ಮಾರುಕಟ್ಟೆಗೆ ಸ್ಮಾರ್ಟ್ ಗ್ರಿಡ್ ಶ್ರೇಣಿಯ ಮ್ಯಾಟ್ರಸ್‌ಗಳನ್ನು ಬಿಡುಗಡೆ ಮಾಡಿದೆ.

ಹೈಪರ್–ಎಲಾಸ್ಟಿಕ್ ಪಾಲಿಮರ್ಸ್ ಬಳಸಿ ಇದನ್ನು ತಯಾರಿಸಲಾಗಿದೆ.ಪ್ಯಾಕೆಟೆಡ್ ಸ್ಪ್ರಿಂಗ್ ವಿತ್ ಗ್ರಿಡ್ ಮ್ಯಾಟ್ರಸ್ ಮತ್ತು ಫೋಮ್ ವಿತ್ ಗ್ರಿಡ್ ಮ್ಯಾಟ್ರಸ್ ಎಂದು ಎರಡು ವಿಧಗಳಲ್ಲಿ ಲಭ್ಯವಿದೆ. ದೇಹದ ಚಲನೆಗೆ ತಕ್ಷಣದ ಬೆಂಬಲ ನೀಡುವುದರಿಂದ ನಿದ್ರೆಗೆ ತೊಂದರೆ ಆಗುವುದಿಲ್ಲ. ಎಂದು ಕಂಪನಿಯು ತಿಳಿಸಿದೆ.

‘ಡ್ಯಾನ್ಸ್ ಸೂಪರ್‌ಸ್ಟಾರ್’ ಪ್ರಭುದೇವ ಅವರನ್ನು ಬ್ರ್ಯಾಂಡ್ ರಾಯಭಾರಿ ಆಗಿ ಮಾಡಲಾಗಿದೆ. ಅವರ ವರ್ಚಸ್ಸಿನಿಂದ ದೇಶದ ಬ್ರ್ಯಾಂಡ್ ಆಗಿ ಬೆಳೆಯಲು ವಿಶ್ವಾಸ ಹೊಂದಿದ್ದೇವೆ. ಈಚೆಗಷ್ಟೇ ಟಿ.ವಿ. ಮತ್ತು ಸ್ಟ್ರೀಮಿಂಗ್ ಪ್ಲಾಟ್‌ಫಾರಂಗಳಲ್ಲಿ ಸರಣಿ ಪ್ರಚಾರವನ್ನೂ ಆರಂಭಿಸಲಾಗಿದೆ ಎಂದು ಕಂಪನಿಯ ಸಿಒಒ ರಮಾನಾಥ್ ಭಟ್ ತಿಳಿಸಿದರು.

ಉತ್ತರ ಭಾರತದ ಹೊಸ ಪ್ರದೇಶಗಳಿಗೂ ವಹಿವಾಟು ವಿಸ್ತರಣೆ ಮಾಡಲಾಗುತ್ತಿದೆ. ದೆಹಲಿ, ಪಂಜಾಬ್ ಮತ್ತು ಹರಿಯಾಣದಲ್ಲಿ ವಹಿವಾಟು ವಿಸ್ತರಿಸುವ ಗುರಿ ಹೊಂದಿದ್ದು, ಇದಕ್ಕೆ ಅನುಕೂಲ ಆಗುವಂತೆ 200 ಹೊಸ ಡೀಲರ್‌ಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಒಡಿಶಾದ ಭುವನೇಶ್ವರದಲ್ಲಿ ಫ್ಯಾಕ್ಟರಿ ಸ್ಥಾಪಿಸುವ ಪ್ರಯತ್ನದಲ್ಲಿದ್ದೇವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನಮ್ಮ ವಹಿವಾಟನ್ನು ₹ 200 ಕೋಟಿಗೆ ಹೆಚ್ಚಿಸುವುದು ನಮ್ಮ ಗುರಿಯಾಗಿದೆ ಎಂದು ಕಂಪನಿಯ ಮಾರಾಟ ಮತ್ತು ವಹಿವಾಟು ಅಭಿವೃದ್ಧಿಯ ಉಪಾಧ್ಯಕ್ಷ ರವಿ ಪಂಡಿತ್ ತಿಳಿಸಿದರು.

ಪೆಟ್ರೋಲಿಯಂ, ಕಚ್ಚಾ ತೈಲ, ಚಿನ್ನ ಆಮದು ಏರಿಕೆ ಪರಿಣಾಮ

ವ್ಯಾಪಾರ ಕೊರತೆ ಅಂತರ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ವ್ಯಾಪಾರ ಕೊರತೆ ಅಂತರವು 2021ರ ಮೇ ತಿಂಗಳಿನಲ್ಲಿ ₹ 50,678 ಕೋಟಿ ಇದ್ದಿದ್ದು, 2022ರ ಮೇನಲ್ಲಿ ₹ 1.81 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಆಮದು ವಹಿವಾಟಿನ ಮೌಲ್ಯವು ರಫ್ತು ವಹಿವಾಟಿನ ಮೌಲ್ಯಕ್ಕಿಂತಲೂ ಹೆಚ್ಚಾಗಿದೆ. ಹೀಗಾಗಿ ಮೇ ನಲ್ಲಿ ವ್ಯಾಪಾರ ಕೊರತೆ ಅಂತರದಲ್ಲಿ ಏರಿಕೆ ಆಗಿದೆ.

ಏಪ್ರಿಲ್–ಮೇ ಅವಧಿಯಲ್ಲಿ ವ್ಯಾಪಾರ ಕೊರತೆ ಅಂತರವು ₹ 1.69 ಲಕ್ಷ ಕೋಟಿಯಿಂದ ₹ 3.39 ಲಕ್ಷ ಕೋಟಿಗೆ ಏರಿಕೆ ಆಗಿದೆ.

ರಫ್ತು ವಹಿವಾಟು ಕಳೆದ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಈ ವರ್ಷದ ಮೇನಲ್ಲಿ ಶೇ 15.46ರಷ್ಟು ಹೆಚ್ಚಾಗಿದ್ದು, ₹ 2.89 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ರಫ್ತು ವಹಿವಾಟು (ಲಕ್ಷ ಕೋಟಿ)

₹5.98	₹4.89
2022-23ರ ಏಪ್ರಿಲ್–ಮೇ ಅವಧಿ	2021-22ರ ಏಪ್ರಿಲ್–ಮೇ ಅವಧಿ

ಪೆಟ್ರೋಲಿಯಂ ಉತ್ಪನ್ನಗಳು, ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ರಾಸಾಯನಿಕ ವಲಯಗಳ ಉತ್ತಮ ಬೆಳವಣಿಗೆಯಿಂದ ಈ ಪ್ರಗತಿ ಸಾಧ್ಯವಾಗಿದೆ.

ಎಂಜಿನಿಯರಿಂಗ್ ಸರಕುಗಳ ರಫ್ತು ಶೇ 7.84ರಷ್ಟು, ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಶೇ 53ರಷ್ಟು ಹೆಚ್ಚಾಗಿದೆ. ಹರಳು, ಚಿನ್ನಾಭರಣ ಹಾಗೂ ರಾಸಾಯನಿಕ, ಔಷಧ ಉತ್ಪನ್ನಗಳು, ಸಿದ್ಧ ಉಡುಪು ರಫ್ತು ಸಹ ಹೆಚ್ಚಾಗಿದೆ.

ಆಮದು ವಹಿವಾಟು ₹ 41,360 ಕೋಟಿಯಿಂದ ₹ 4.70 ಲಕ್ಷ ಕೋಟಿಗೆ ಶೇ 56.14ರಷ್ಟು ಏರಿಕೆ ಕಂಡಿದೆ.

ಪೆಟ್ರೋಲಿಯಂ ಮತ್ತು ಕಚ್ಚಾ ತೈಲ ಆಮದು ಶೇ 91.6ರಷ್ಟು ಭಾರಿ ಏರಿಕೆ ಕಂಡಿದ್ದು, ₹ 1.40 ಲಕ್ಷ ಕೋಟಿಗೆ ಏರಿಕೆ ಆಗಿದೆ. ಚಿನ್ನದ ಆಮದು ₹ 5,253 ಕೋಟಿಯಿಂದ ₹ 45,136 ಕೋಟಿಗೆ ಏರಿಕೆ ಆಗಿದೆ ಎಂದು ತಿಳಿಸಿದೆ.

‘ಜವಳಿ ರಫ್ತು ಗುರಿ ಸಾಧನೆಗೆ ಯತ್ನ’

ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 1.55 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ಗುರಿ ತಲುಪಲು ಜವಳಿ ಉದ್ಯಮವು ಎಲ್ಲಾ ರೀತಿಯ ಪ್ರಯತ್ನ ನಡೆಸಲಿದೆ ಎಂದು ಉಡುಪು ರಫ್ತು ಉತ್ತೇಜನ ಮಂಡಳಿಯು (ಎಇಪಿಸಿ) ಗುರುವಾರ ಹೇಳಿದೆ.

ದೇಶದಲ್ಲಿ ಹತ್ತಿ ಲಭ್ಯತೆ ಖಾತರಿಪಡಿಸಿಕೊಳ್ಳುವ ಉದ್ದೇಶದಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕೆಲವು ತಿಂಗಳುಗಳವರೆಗೆ ಹತ್ತಿ ರಫ್ತು ನಿಷೇಧಿಸುವಂತೆ ಮಂಡಳಿಯ ಅಧ್ಯಕ್ಷ ನರೇಂದ್ರ ಗೋಯೆಂಕಾ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕಳೆದ 18 ತಿಂಗಳಿನಿಂದ ಹತ್ತಿ ನೂಲಿನ ಬೆಲೆಯು ಶೇ 125ರಷ್ಟು ಹೆಚ್ಚಾಗಿದೆ. ಹೀಗಾಗಿ ಬೆಲೆ ನಿಯಂತ್ರಿಸಲು ತಕ್ಷಣವೇ ಕ್ರಮ ಕೈಗೊಳ್ಳುವಂತೆ ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

4.69 ಲಕ್ಷ ಟನ್ ಗೋಧಿ ರಫ್ತಿಗೆ ಕೇಂದ್ರದಿಂದ ಅವಕಾಶ

ಮುಂಬೈ/ನವದೆಹಲಿ (ರಾಯಿಟರ್ಸ್): ಭಾರತವು 4.69 ಲಕ್ಷ ಟನ್‌ಗಳಷ್ಟು ಗೋಧಿ ರಫ್ತು ಮಾಡಲು ಅವಕಾಶ ನೀಡಿದೆ. ಮುಖ್ಯವಾಗಿ ಬಾಂಗ್ಲಾದೇಶ, ಫಿಲಿಪ್ಪೀನ್ಸ್, ತಾಂಜೇನಿಯಾ ಮತ್ತು ಮಲೇಷ್ಯಾ ದೇಶಗಳಿಗೆ ರಫ್ತು ಆಗಲಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಕಳೆದ ತಿಂಗಳಷ್ಟೇ ಗೋಧಿ ರಫ್ತು ನಿಷೇಧ ಮಾಡಿದೆ. ಇದರಿಂದಾಗಿ 17 ಲಕ್ಷ ಟನ್‌ಗಳಷ್ಟು ಗೋಧಿ ಬಂದರುಗಳಲ್ಲಿಯೇ ಉಳಿದಿದ್ದು, ಮುಂಗಾರು ಮಳೆಯಿಂದಾಗಿ ನಷ್ಟವಾಗುವ ಸಾಧ್ಯತೆ ಇದೆ ಎಂದೂ ಹೇಳಿದ್ದಾರೆ.

ಬಿಸಿಗಾಳಿಯಿಂದಾಗಿ ಉತ್ಪಾದನೆ ಪ್ರಮಾಣ ಕಡಿಮೆ ಆಗಿರುವುದು ಹಾಗೂ ಬೆಲೆಯು ದಾಖಲೆ ಮಟ್ಟಕ್ಕೆ ಏರಿಕೆ ಕಂಡಿರುವುದರಿಂದ ಕೇಂದ್ರ ಸರ್ಕಾರವು ಗೋಧಿ ರಫ್ತಿನ ಮೇಲೆ ನಿಷೇಧ ಹೇರಿದೆ. ಮೇ 13 ಅಥವಾ ಅದಕ್ಕೂ ಮೊದಲು ಗೋಧಿ ಖರೀದಿಗೆ, ‘ಬದಲಾಯಿಸಲು ಸಾಧ್ಯವಿಲ್ಲದ ಎಲ್‌ಒಸಿ’ (ಲೆಟರ್ ಆಫ್ ಕ್ರೆಡಿಟ್) ನೀಡಿದ್ದಲ್ಲಿ ರಫ್ತಿಗೆ ಅವಕಾಶ ಕಲ್ಪಿಸಲಾಗಿದೆ.

ಏಪ್ರಿಲ್‌ನಲ್ಲಿ 14.6 ಲಕ್ಷ ಟನ್ ಪ್ರಮಾಣದ ಗೋಧಿ ರಫ್ತು ಮಾಡಲಾಗಿತ್ತು. ಮೇನಲ್ಲಿ ರಫ್ತು ಪ್ರಮಾಣವು 11.3 ಲಕ್ಷ ಟನ್‌ಗಳಿಗೆ ಇಳಿಕೆ ಆಗಿದೆ.

ಕಿಯಾ ಇವಿ6 ಬೆಲೆ ₹ 59.95 ಲಕ್ಷ

ನವದೆಹಲಿ (ಪಿಟಿಐ): ಕಿಯಾ ಇಂಡಿಯಾ ಕಂಪನಿಯು ‘ಇವಿ6’ ಬಿಡುಗಡೆ ಮಾಡುವ ಮೂಲಕ ವಿದ್ಯುತ್ ಚಾಲಿತ ವಾಹನ ವಿಭಾಗವನ್ನು ಪ್ರವೇಶಿಸಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 59.95 ಲಕ್ಷ ಇದೆ.

ವಿದ್ಯುತ್ ಚಾಲಿತ ವಾಹನ ವಿಭಾಗದಲ್ಲಿ ತನ್ನ ಅಸ್ತಿತ್ವವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಹೂಡಿಕೆ ಮಾಡುವುದಾಗಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಟೇ ಜಿನ್ ಪಾರ್ಕ್ ಹೇಳಿದ್ದಾರೆ.

ದೇಶದಾದ್ಯಂತ 12 ನಗರಗಳಲ್ಲಿ ಇರುವ 15 ವಿತರಣಾ ಕೇಂದ್ರಗಳ ಮೂಲಕ ‘ಕಿಯಾ ಇವಿ6’ ಮಾರಾಟ ಮಾಡಲಾಗುವುದು. ವಿತರಣಾ ಕೇಂದ್ರಗಳಲ್ಲಿ 150 ಕಿಲೋ ವಾಟ್ ಫಾಸ್ಟ್ ಚಾರ್ಜರ್ ವ್ಯವಸ್ಥೆ ಇರಲಿದೆ ಎಂದು ತಿಳಿಸಿದೆ.

ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ 528 ಕಿಲೋ ಮೀಟರ್‌ವರೆಗೆ ಚಲಾಯಿಸಬಹುದು. 5.2 ಸೆಕೆಂಡ್‌ಗಳಲ್ಲಿ ಈ ಕಾರು ಪ್ರತಿ ಗಂಟೆಗೆ 100 ಕಿ.ಮೀ. ವೇಗವನ್ನು ತಲುಪಬಲ್ಲದು. 350 ಕಿಲೋ ವಾಟ್ ಚಾರ್ಜರ್ ಮೂಲಕ 18 ನಿಮಿಷಗಳಲ್ಲಿ ಶೇ 10 ರಿಂದ 80ರಷ್ಟು ಚಾರ್ಜ್ ಮಾಡಬಹುದು ಎಂದು ಕಂಪನಿ ತಿಳಿಸಿದೆ.

ಸನ್‌ರೂಫ್, ಮಲ್ಟಿ ಡ್ರೈವ್ ಮೋಡ್ ಸೇರಿದಂತೆ ಇನ್ನೂ ಹಲವು ವೈಶಿಷ್ಟ್ಯಗಳನ್ನು ಇದು ಹೊಂದಿದೆ ಎಂದು ಕಂಪನಿ ಮಾಹಿತಿ ನೀಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

‘ಜಿಡಿಪಿ ಶೇ 7.5ರಷ್ಟು ಬೆಳವಣಿಗೆ ನಿರೀಕ್ಷೆ’

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷಕ್ಕೆ ಭಾರತದ ಆರ್ಥಿಕ ಬೆಳವಣಿಗೆಯ ಅಂದಾಜನ್ನು ಎಸ್‌ಬಿಐ ಪರಿಷ್ಕರಣೆ ಮಾಡಿದೆ. 2022–23ನೇ ಹಣಕಾಸು ವರ್ಷದಲ್ಲಿ ಆರ್ಥಿಕತೆಯು ಶೇ 7.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಎಸ್‌ಬಿಐನ ಸಂಶೋಧನಾ ವರದಿ ಹೇಳಿದೆ. ಆರ್ಥಿಕತೆಯು ಶೇ 7.25ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಹಿಂದೆ ಎಸ್‌ಬಿಐ ಅಂದಾಜು ಮಾಡಿತ್ತು.

ಚಿನ್ನ ₹ 434 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ 10 ಗ್ರಾಂ ಚಿನ್ನದ ದರ ₹ 434ರಷ್ಟು ಹೆಚ್ಚಾಗಿ ₹ 50,887ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 918 ರಷ್ಟು ಹೆಚ್ಚಾಗಿ ₹ 61,776ಕ್ಕೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಹಾಗೂ ರೂಪಾಯಿ ಮೌಲ್ಯ ಇಳಿಕೆಯೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ರಿಲಯನ್ಸ್ ಷೇರು ಗಳಿಕೆ ಷೇರುಪೇಟೆ ಚೇತರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಎರಡು ದಿನಗಳ ನಕಾರಾತ್ಮಕ ಚಲನೆಯಿಂದ ಹೊರಬಂದು ಗುರುವಾರ ವಹಿವಾಟು ನಡೆಸಿದವು. ರಿಲಯನ್ಸ್ ಇಂಡಸ್ಟ್ರಿಸ್ ಷೇರು ಮೌಲ್ಯ ಹೆಚ್ಚಳದಿಂದಾಗಿ ಸೂಚ್ಯಂಕಗಳು ಏರಿಕೆ ಕಾಣುವಂತಾಯಿತು.

ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿರುವುದು ಷೇರುಪೇಟೆಗಳ ಗಳಿಕೆಯನ್ನು ಮಿತಿಗೊಳಿಸಿದವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 437 ಅಂಶ ಹೆಚ್ಚಾಗಿ 55,818 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಸೆನ್ಸೆಕ್ಸ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶೇ 3.51ರಷ್ಟು ಗರಿಷ್ಠ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 105 ಅಂಶ ಹೆಚ್ಚಾಗಿ 16,628 ಅಂಶಗಳಿಗೆ ತಲುಪಿತು.



ಜಿಎಸ್‌ಟಿ ಸಂಗ್ರಹ ಮತ್ತು ಪಿಎಂಐ ಅಂಕಿ–ಅಂಶವು 2022–23ನೇ ಹಣಕಾಸು ವರ್ಷದ ಉತ್ತಮ ಆರಂಭವನ್ನು ಸೂಚಿಸುತ್ತಿವೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಭಾರತ ಮತ್ತು ಅಮೆರಿಕದ ಕೇಂದ್ರೀಯ ಬ್ಯಾಂಕ್‌ಗಳ ನಿರ್ಧಾರವು ಮುಂದಿನ ವಾರ ಹೊರಬೀಳಲಿದ್ದು, ಷೇರುಪೇಟೆಗಳ ಮೇಲೆ ಹೆಚ್ಚಿನ ಪ್ರಭಾವ ಬೀರಲಿವೆ ಎಂದೂ ಅವರು ತಿಳಿಸಿದ್ದಾರೆ.

‘ಉಜ್ವಲ ಯೋಜನೆ ಫಲಾನುಭವಿಗೆ ಮಾತ್ರ ಎಲ್‌ಪಿಜಿ ಸಬ್ಸಿಡಿ’

ನವದೆಹಲಿ (ಪಿಟಿಐ): ಉಜ್ವಲ ಯೋಜನೆಯ ಫಲಾನುಭವಿಗಳು ಮಾತ್ರವೇ ಎಲ್‌ಪಿಜಿ ಸಿಲಿಂಡರ್‌ಗೆ ಸಬ್ಸಿಡಿ ಪಡೆಯಲಿದ್ದಾರೆ. ಉಳಿದವರು ಮಾರುಕಟ್ಟೆ ದರದಲ್ಲಿಯೇ ಖರೀದಿಸಬೇಕು ಎಂದು ತೈಲ ಕಾರ್ಯದರ್ಶಿ ಪಂಕಜ್ ಜೈನ್ ತಿಳಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಾರ್ಚ್ 21ರಂದು ಘೋಷಿಸಿದಂತೆ ಉಜ್ವಲ ಯೋಜನೆಯ 9 ಕೋಟಿ ಫಲಾನುಭವಿಗಳು ಮಾತ್ರವೇ ಪ್ರತಿ ಸಿಲಿಂಡರ್‌ಗೆ ₹ 200ರಂತೆ ಸಬ್ಸಿಡಿ ಪಡೆಯಲಿದ್ದಾರೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

2-6-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1620)
ಒಂದು ವಾರದ ಡೆಲಿವರಿ	1625 (1615)
ಸೋಯಾ ಕಚ್ಚಾ	1430 (1440)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,100 (50,100)
ಬೆಳ್ಳಿ ಕೆ.ಜಿ 62,000 (60,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	21000-32169
ಕೋಕ	17299-27899
ಹಳೆಚಾಲಿ	33299-47099
ಹೊಸಚಾಲಿ	33600-37511
ಸಿದ್ದಾಪುರ	
ಬಿಳಿಗೋಟು	24699-34699
ಚಾಲಿ	35099-38199
ಕೋಕ	21299-30889
ಕೆಂಪುಗೋಟು	26199-33900
ರಾಶಿ	47009-49099
ತಟ್ಟಿಬೆಟ್ಟೆ	38219-46219
ಶಿರಸಿ	
ಬೆಟ್ಟೆ	23119-45499
ಬಿಳಿಗೋಟು	21099-30499
ಚಾಲಿ	34561-38389
ರಾಶಿ	40509-49899
ಶಿವಮೊಗ್ಗ	
ಬೆಟ್ಟೆ	50029-53699
ಗೊರಬಲು	18099-37909
ರಾಶಿ	44269-50500
ಸರಕು	58699-80600
ಸಾಗರ	
ಬಿಳಿಗೋಟು	15100-29129
ಚಾಲಿ	31009-38711
ಕೋಕ	10569-34799
ಕೆಂಪುಗೋಟು	22989-38699
ರಾಶಿ	32989-50319
ಸಿಪ್ಪೆಗೋಟು	6969-21169

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	17000	16500	16650	239.45 ಸೆಂಟ್ಸ್
ಎಸಿ	9100	8600	9200	
ಆರ್‌ಪಿ	9750	10000	10100	ಲಂಡನ್
ಆರ್‌ಸಿ	4800	4500	4650	2136 ಡಾಲರ್ಸ್

ಸಾಮಾಜಿಕ ಮಾಧ್ಯಮ: ಮೇಲ್ಮನವಿ ಸಮಿತಿ ರಚನೆ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮಗಳ ಕುಂದು ಕೊರತೆ ಅಧಿಕಾರಿಗಳು ನೀಡುವ ತೀರ್ಪಿನ ವಿರುದ್ಧ ಸಲ್ಲಿಕೆಯಾಗುವ ಅರ್ಜಿಗಳ ವಿಚಾರಣೆಗಾಗಿ ಕೇಂದ್ರ ಸರ್ಕಾರ ಮೇಲ್ಮನವಿ ಸಮಿತಿಯೊಂದನ್ನು ರಚಿಸಲು ಮುಂದಾಗಿದೆ.

ಈ ಸಂಬಂಧ ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ಸಂಹಿತೆ) ನಿಯಮಗಳು–2021ಕ್ಕೆ ತಿದ್ದುಪಡಿ ತರಲು ಉದ್ದೇಶಿಸಿದೆ.

ಮಾರ್ಗಸೂಚಿಗಳ ಉಲ್ಲಂಘನೆ ಕಾರಣ ನೀಡಿ, ಕೆಲ ಸಾಮಾಜಿಕ ಮಾಧ್ಯಮಗಳು ಗಣ್ಯರು ಸೇರಿದಂತೆ ಅನೇಕ ಬಳಕೆದಾರರ ಖಾತೆಗಳನ್ನು ಸ್ಥಗಿತಗೊಳಿಸಿರುವ ನಿದರ್ಶನಗಳಿವೆ. ಹೀಗಾಗಿ, ಕುಂದುಕೊರತೆ ಮೇಲ್ಮನವಿ ಸಮಿತಿ ರಚಿಸುವ ಕೇಂದ್ರದ ಪ್ರಸ್ತಾವಕ್ಕೆ ಈಗ ಮಹತ್ವದ ಬಂದಿದೆ.

‘ಸಾಮಾಜಿಕ ಮಾಧ್ಯಮ ವೇದಿಕೆಗಳ ಕುಂದುಕೊರತೆ ಅಧಿಕಾರಿಗಳ ವಿರುದ್ಧದ ದೂರುಗಳನ್ನು ಸ್ವೀಕರಿಸಿದ 30 ದಿನಗಳ ಒಳಗಾಗಿ ಮೇಲ್ಮನವಿ ಸಮಿತಿಯು ಅವುಗಳನ್ನು ಇತ್ಯರ್ಥಪಡಿಸಬೇಕು.’ ಎಂದು ನಿಯಮಗಳ ತಿದ್ದುಪಡಿಗೆ ಸಂಬಂಧಿಸಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಹೊರಡಿಸಲಾಗಿರುವ ಕರಡು ಅಧಿಸೂಚನೆಯಲ್ಲಿ ತಿಳಿಸಿದೆ.

‘ಕೇಂದ್ರ ಸರ್ಕಾರವು ಒಂದು ಅಥವಾ ಅದಕ್ಕಿಂತ ಹೆಚ್ಚು ಕುಂದುಕೊರತೆ ಮೇಲ್ಮನವಿ ಸಮಿತಿಗಳನ್ನು ರಚಿಸಬಹುದು. ಯಾವುದೇ ವ್ಯಕ್ತಿ, ಸಾಮಾಜಿಕ ಮಾಧ್ಯಮ ವೇದಿಕೆಗಳ ಕುಂದುಕೊರತೆ ಅಧಿಕಾರಿಯ ತೀರ್ಮಾನದ ವಿರುದ್ಧ, ಆದೇಶದ ಪ್ರತಿ ಕೈಸೇರಿದ 30 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸಬಹುದು’ ಎಂದು ತಿಳಿಸಲಾಗಿದೆ.

‘ಸ್ವಯಂವಿವಾಹ’ ಆಗುವುದಾಗಿ ಘೋಷಿಸಿದ ಯುವತಿ!

ಅಹಮದಾಬಾದ್ (ಪಿಟಿಐ): ಗುಜರಾತ್‌ನ ವಡೋದರಾ ನಗರದಲ್ಲಿ 24 ವರ್ಷದ ಕನ್ಯೆ ಜೂನ್ 11ರಂದು ಗುಜರಾತ್‌ನ ಸಾಂಪ್ರದಾಯಿಕ ವಿಧಿ ವಿಧಾನಗಳ ಮೂಲಕ ತನ್ನನ್ನು ತಾನೇ (ಸ್ವಯಂ ಮದುವೆ) ವಿವಾಹವಾಗುತ್ತಿರುವುದಾಗಿ ಘೋಷಿಸಿ, ಸಂಚಲನ ಮೂಡಿಸಿದ್ದಾರೆ.

‘ಸ್ವಯಂ ವಿವಾಹ’ ನೆರವೇರಿದರೆ ದೇಶದ ಮೊದಲ ಪ್ರಕರಣ ಎನಿಸಲಿದೆ. ಭಾರತದಲ್ಲಿ ‘ಏಕ ಪತ್ನಿತ್ವ’ ಅಥವಾ ಸ್ವಯಂ-ವಿವಾಹಕ್ಕೆ ಯಾವುದೇ ಕಾನೂನು ಮಾನ್ಯತೆ ಇಲ್ಲ ಎನ್ನುವುದು ಕಾನೂನು ತಜ್ಞರ ಅಭಿಮತ.

ವಡೋದರಾದಲ್ಲಿರುವ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕ್ಷಮಾ ಬಿಂದು ಅವರು ದ್ವಿಲಿಂಗಿಯಾಗಿ ಗುರುತಿಸಿಕೊಂಡಿದ್ದು, ಈ ಸ್ವಯಂ ಮದುವೆಗೆ, ಅವರ ಕುಟುಂಬವೂ ಎಲ್ಲ ಸಿದ್ಧತೆ ನಡೆಸುತ್ತಿದೆ. ವಡೋದರಾದ ಕಲ್ಯಾಣ ಮಂಟಪದಲ್ಲಿ ಮದುವೆ, ಗೋವಾದಲ್ಲಿ ಮಧುಚಂದ್ರ ನಡೆಯಲಿದೆ.

ಸೋನಿಯಾ ಗಾಂಧಿಗೆ ಕೋವಿಡ್ ದೃಢ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಕೋವಿಡ್ ದೃಢಪಟ್ಟಿದ್ದು, ವೈದ್ಯರ ಸಲಹೆ ಮೇರೆಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಸುರ್ಜೇವಾಲ, ‘ಬುಧವಾರ ಸಾಯಂಕಾಲ ಸೋನಿಯಾ ಅವರಿಗೆ ಸಣ್ಣ ಪ್ರಮಾಣದ ಜ್ವರ ಕಾಣಿಸಿಕೊಂಡಿತ್ತು. ಪರೀಕ್ಷೆಯ ನಂತರ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ’ ಎಂದು ತಿಳಿಸಿದ್ದಾರೆ.

3,712 ಕೋವಿಡ್ ಸೋಂಕಿತರು: ಒಂದೇ ದಿನದಲ್ಲಿ ದೇಶದಲ್ಲಿ 3,172 ಹೊಸ ಕೋವಿಡ್ ಪ್ರಕರಣಗಳು ದಾಖಲಾಗುವುದರ ಮೂಲಕ ಭಾರತದಲ್ಲಿ ಸೋಂಕಿತರ ಸಂಖ್ಯೆ 4,31,64,544ಕ್ಕೆ ಏರಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 19,509ಕ್ಕೆ ಏರಿದೆ. ಕೇರಳದಲ್ಲಿ ಕೋವಿಡ್ ಸೋಂಕಿನಿಂದ ಒಟ್ಟು ಐವರು ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಅತ್ಯಾಚಾರ, ಹತ್ಯೆ: ಅಪರಾಧಿಗೆ ಮರಣದಂಡನೆ

ಪ್ರಜಾವಾಣಿ ವಾರ್ತೆ

ಮುಂಬೈ: ಇಲ್ಲಿನ ಸಾಕಿನಾಕಾ ಪ್ರದೇಶದಲ್ಲಿ ನಡೆದ ಅತ್ಯಾಚಾರ, ಕೊಲೆ ಪ್ರಕರಣದ ಆರೋಪಿಗೆ ಮುಂಬೈ ನ್ಯಾಯಾಲಯ ಮರಣದಂಡನೆ ವಿಧಿಸಿ ಗುರುವಾರ ಆದೇಶಿಸಿದೆ.

ನಿರ್ಭಯಾ ಪ್ರಕರಣದಂತೆ ಈ ಪ್ರಕರಣದಲ್ಲೂ ಕ್ರೌರ್ಯದ ಪರಾಕಾಷ್ಠೆಯನ್ನು ಮೆರೆಯಲಾಗಿತ್ತು.

ಅತ್ಯಂತ ಭೀಕರ ಪ್ರಕರಣ ಎಂದು ಪರಿಗಣಿಸಿ, ದಿಂಡೋಶಿಯ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ತ್ವರಿತ ನ್ಯಾಯಾಲಯದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಚ್.ಸಿ.ಶೇಂಡೆ ಅವರು ಅಪರಾಧಿ ಮೋಹನ್ ಚೌಹಾಣ್‌ಗೆ (45) ಗಲ್ಲಿಗೇರಿಸಲು ಆದೇಶಿಸಿದರು.

ಅತ್ಯಾಚಾರ, ಕೊಲೆ ಘಟನೆ 2021ರ ಸೆಪ್ಟೆಂಬರ್ 10 ರಂದು ಸಾಕಿ ನಾಕಾ ಪ್ರದೇಶದ ಖೈರಾನಿ ರಸ್ತೆಯಲ್ಲಿ ನಡೆದಿತ್ತು. ಚಾಲಕನಾಗಿದ್ದ ಅಪರಾಧಿ ಚೌಹಾಣ್, 32ರಿಂದ 34 ವರ್ಷದೊಳಗಿನ ಸಂತ್ರಸ್ತೆಯ ಮೇಲೆ ಚಾಂಡಿವಲಿ ಸ್ಟುಡಿಯೋಸ್‌ನ ರಶೀದ್ ಕಾಂಪೌಂಡ್‌ನಲ್ಲಿ ನಿಲ್ಲಿಸಿದ್ದ ಟೆಂಪೋದಲ್ಲಿ ಅತ್ಯಾಚಾರ ಎಸಗಿದ್ದನು. ಅಪರಾಧಿಯು ಮಹಿಳೆಯ ಗುಪ್ತಾಂಗಕ್ಕೆ ಕಬ್ಬಿಣದ ಸಲಾಕೆ ಹಾಕಿ ಕ್ರೂರವಾಗಿ ಹತ್ಯೆ ಮಾಡಿದ್ದನು.

ಪುರುಷನೊಬ್ಬ ಮಹಿಳೆಗೆ ಥಳಿಸುತ್ತಿರುವ ಬಗ್ಗೆ ಪೊಲೀಸ್ ಮುಖ್ಯ ನಿಯಂತ್ರಣ ಕೊಠಡಿಗೆ ಕಾವಲುಗಾರರೊಬ್ಬರು ಘಟನೆ ನಡೆದ ಸಂದರ್ಭದಲ್ಲಿಯೇ ಮಾಹಿತಿ ನೀಡಿದ್ದರು. ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದ ಪೊಲೀಸರು ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಿಸದೇ ರಾಜವಾಡಿ ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದರು.

ಮುಂಬೈ ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿದ್ದರು ಮತ್ತು 2021ರ ಸೆಪ್ಟೆಂಬರ್ 28 ರಂದು ಆರೋಪಪಟ್ಟಿ ಸಲ್ಲಿಸಿದ್ದರು. ಭಾರತೀಯ ದಂಡ ಸಂಹಿತೆ ಮತ್ತು ಮಹಾರಾಷ್ಟ್ರ ಪೊಲೀಸ್ ಕಾಯ್ದೆಯ ಸೆಕ್ಷನ್‌ಗಳ ಅಡಿಯಲ್ಲಿ ಚೌಹಾಣ್‌ಗೆ ಶಿಕ್ಷೆ ವಿಧಿಸಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

★॥ಶ್ರೀಹುಲಿಗೆಮ್ಮ ಚೌಡೇಶ್ವರಿ ಜೋತಿಷ್ಯರು॥★ ಸ್ತ್ರೀಪುರುಷ_ವಶೀಕರಣ ಸಂಭೋಗ ವಶೀಕರಣ ಇನ್ನುಯಾವುದೇ ಘೋರ ನಿಗೂಢ ಗುಪ್ತಕಠಿಣ ಸಮಸ್ಯೆಗಳಿಗೆ 11ನಿಮಿಷಗಳಲ್ಲಿ ಶಾಶ್ವತ_ಪರಿಹಾರ ನಂಬಿ_ಕರೆಮಾಡಿ 9606735267

★॥ಶ್ರೀಪಾತಾಳಭುವನೇಶ್ವರಿ॥★ ಆರಾಧನೆಯಿಂದ ಪ್ರೀತಿಪ್ರೇಮ ಸ್ತ್ರೀಪುರುಷ ವಶೀಕರಣ, ದಾಂಪತ್ಯಕಿರಿಕಿರಿ, ಕಂಕಣಬಾಗ್ಯ, ಸಾಲದಬಾಧೆ, ಸಂತಾನಭಾಗ್ಯ ಇನ್ನೂಯಾವುದೇ ಕಠಿಣ ಸಮಸ್ಯೆಗಳಿಗೆ ಶಾಶ್ವತ_ಪರಿಹಾರ. ''ಆತ್ಮರಾಮ್_ಭಟ್'' 9900933145

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★॥ಶ್ರೀಶಾಕಾಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1ದಿನದಲ್ಲಿ ಶಾಶ್ವತ ಪರಿಹಾರ. 9900222591

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

North

3 ACRES Land For Sale in Survey No. 61/2/A, North of National Highway No.9 in Manik Nagar Village, Humnabad, Karnataka State.Contact : 9393333321/8074222930/9848038381.

1768 SQ.YARDS Commercial Land for Sale in Survey No.169/A&K, Main Highway Road No 9 Humnabad, Karnataka, State. Contact:9393333321/ 8074222930/9848038381

Sites

Airport Road

BDA BIAAPA approved Corner Sites for Sale 14 kms Before Airport 500 meters from Stone Hill School Direct Owner 7337616557 8904050690

ಉದ್ಯೋಗಾವಕಾಶ

General

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,25 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ, ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿರಿ:9663987757.

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿ ಇದೆ. 10,000 -15,000. 8951315839, 9880545002

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಪ್ರವಾಸ

Travel

ಪ್ರವಾಸ:11.06.2022 ರಿಂದ 5 ದಿನ ಶಿರಡಿ, ಪಂಡರಾಪುರ,ಕೊಲ್ಲಾಪುರ,ಕೂಡಲ ಸಂಗಮ,ಬಿಜಾಪುರ. 09.07.2022 ರಿಂದ 6 ದಿನ ರಾಮೇಶ್ವರ,ಕನ್ಯಾಕುಮಾರಿ, ತ್ರಿವೇಂದ್ರಂ,ಗುರುವಾಯೂರು. 21.07.2022 ರಿಂದ 4 ದಿನ 9 ನವಗ್ರಹ ದೇವರುಗಳು,ತಿರುನಲ್ಲೂರ್,ತಂಜಾವೂರು,ಚಿದಂಬರಂ. 11.08.2022 ರಿಂದ 5 ದಿನ ವಿಮಾನದಲ್ಲಿ 2+2 ಎ/ಸಿ ಬಸ್ಸಿನಲ್ಲಿ ಕಾಶಿ,ಗಯಾ,ಅಯೋಧ್ಯ,ಅಲಹಾಬಾದ್,ಬುದ್ಧಗಯಾ. ಶ್ರೀಗುರುರಾಜ ಟ್ರಾವೆಲ್ಸ್, ಕೋಲಾರ. 9900124333, 9611082432, 8123099913.

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು 16.06.2022 ಅಹೋಬಲ ನವನರಸಿಂಹ,ಶ್ರೀಶೈಲಾ ಮಂತ್ರಾಲಯಾ ಇತ್ಯಾದಿ 7200/-. 22.06.2022 ರಾಮೇಶ್ವರ ಕನ್ಯಾಕುಮಾರಿ ಮದುರೈ ಇತ್ಯಾದಿ 7200. 06.07.2022 ಶಿರಡಿ,ಪಂಡರಾಪುರ ಇತ್ಯಾದಿ 6800 14.07.2022 ನವಗ್ರಹ ದರ್ಶನಸೇರಿ 18 ಕ್ಷೇತ್ರಗಳು 6200 26.07.2022 ಕಾಶಿ,ಅಯೋಧ್ಯ ಇತ್ಯಾದಿ 17500 16.08.2022 ವೈಷ್ಣೋದೇವಿ 01.09.2022 ಚಾರ್‌ಧಾಮ್ 06.09.2022 ಗುಜರಾತ್ ಮಧ್ಯಪ್ರದೇಶ 9448390735 9449721678

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 23/06/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ. 14/07/22 ಶಿರಡಿ, ಪಂಡರಾಪುರ. 21/07/22 ನೇಪಾಳ ಮುಕ್ತಿನಾಥ, ಪಶುಪತಿನಾಥ. 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
ಪ್ರಜಾವಾಣಿ



Classifieds
EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಮೊದಲ ಬಾರಿ ಸೆಮಿಫೈನಲ್ ತಲುಪಿದ ಮರಿನ್ ಸಿಲಿಚ್, ಕಾಸ್ಪರ್ ರೂಡ್

ಪ್ರಶಸ್ತಿ ಸುತ್ತಿಗೆ ಗಫ್, ಸ್ವೈಟೆಕ್

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್/ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಪೋಲೆಂಡ್‌ನ ಇಗಾ ಸ್ವೈಟೆಕ್ ಮತ್ತು ಅಮೆರಿಕದ ಯುವ ಆಟಗಾರ್ತಿ ಕೊಕೊ ಗಫ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಫೈನಲ್ ತಲುಪಿದ್ದಾರೆ.

ಗುರುವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ ಸ್ವೈಟೆಕ್ 6–2, 6–1ರಿಂದ ರಷ್ಯಾದ ದರಿಯಾ ಕಾಸ್ತಕಿನಾ ಸವಾಲು ಮೀರಿದರು. ಸತತ 34ನೇ ಪಂದ್ಯದಲ್ಲಿ ವಿಜಯದ ನಗೆ ಬೀರಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಸ್ವೈಟೆಕ್, ಫಿಲಿಪ್ ಚಾಟ್ರಿಯರ್ ಅಂಗಣದಲ್ಲಿ ಆರಂಭದಿಂದಲೇ ಹಿಡಿತ ಸಾಧಿಸಿದರು. ದರಿಯಾ ಅವರ ಸ್ವಯಂಕೃತ ತಪ್ಪುಗಳೂ ಪೋಲೆಂಡ್ ಆಟಗಾರ್ತಿಯ ಗೆಲುವನ್ನು ಸುಲಭವಾಗಿಸಿದವು.

ಶನಿವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಸ್ವೈಟೆಕ್ ಅಮೆರಿಕದ ಕೊಕೊ ಗಫ್ ಅವರನ್ನು ಎದುರಿಸಲಿದ್ದಾರೆ.

ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ 18 ವರ್ಷದ ಗಫ್ 6-3, 6-1ರಿಂದ ಇಟಲಿಯ ಮಾರ್ಟಿನಾ ಟ್ರೆವಿಸನ್ ಅವರಿಗೆ ಸೋಲುಣಿಸಿದರು.

ಹಿಂಸೆ ನಿಲ್ಲಲಿ ಎಂದ ಗಫ್: ಪಂದ್ಯದ ನಂತರ ಗಫ್ ತಮ್ಮ ದೇಶ ಅಮೆರಿಕದಲ್ಲಿ ಶಾಂತಿ ನೆಲೆಸುವ ಸಂದೇಶ ಸಾರಿದರು. ಅಂಗಣದಲ್ಲಿಯ ಕ್ಯಾಮರಾ ಮೇಲೆ ‘ಬಂದೂಕಿನಿಂದ ನಡೆಸುವ ಹಿಂಸೆ ಕೊನೆಗೊಂಡು ಶಾಂತಿ ನೆಲೆಸಲಿ’ ಎಂದು ಸಂದೇಶ ಬರೆದರು.

‘ಮೊದಲ’ ಸೆಮಿಗೆ ಸಿಲಿಚ್, ರೂಡ್: ಜಿದ್ದಾಜಿದ್ದಿನ ಹಣಾಹಣಿಗಳಲ್ಲಿ ಗೆದ್ದ ಕ್ರೊವೇಷ್ಯಾದ ಮರಿನ್ ಸಿಲಿಚ್ ಮತ್ತು ನಾರ್ವೆಯ ಕಾಸ್ಪರ್ ರೂಡ್, ಟೂರ್ನಿಯಲ್ಲಿ ಮೊದಲ ಬಾರಿಗೆ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಬುಧವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ಸಿಲಿಚ್ 5-7, 6-3, 6-4, 3-6, 7-6 (10/2)ರಿಂದ ರಷ್ಯಾದ ಆ್ಯಂಡ್ರೆ ರುಬ್ಲೆವ್ ಅವರಿಗೆ ಸೋಲುಣಿಸಿದರು. ಎಂಟರಘಟ್ಟದ ಇನ್ನೊಂದು ಪಂದ್ಯದಲ್ಲಿ ರೂಡ್ 6-1, 4-6, 7-6 (7/2), 6-3ರಿಂದ ಡೆನ್ಮಾರ್ಕ್‌ನ ಯುವ ಆಟಗಾರ ಹೋಲ್ಗರ್ ರೂನೆ ಅವರನ್ನು ಮಣಿಸಿದರು.

ಶಿಬಾರ–ಕೂಲೋಫ್‌ಗೆ ಮಿಶ್ರ ಡಬಲ್ಸ್ ಗರಿ: ಜಪಾನ್‌ನ ಎನಾ ಶಿಬಾರ ಮತ್ತು ನೆದರ್ಲೆಂಡ್ಸ್‌ನ ವೇಸ್ಲಿ ಕೂಲೋಫ್ ಮಿಶ್ರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.ಗುರುವಾರ ನಡೆದ ಫೈನಲ್ ಪಂದ್ಯದಲ್ಲಿ ಈ ಜೋಡಿಯು 7-6(5), 6-2ರಿಂದ ನಾರ್ವೆಯ ಯುಲ್‌ರಿಕ್ ಐಕೇರಿ ಮತ್ತು ಬೆಲ್ಜಿಯಂನ ಜೋರಾನ್ ಲಿಜೆನ್ ವಿರುದ್ಧ ಗೆದ್ದರು.

ಕೊಕೊ ಗಫ್ ಆಟದ ವೈಖರಿ– ಎಎಫ್‌ಪಿ ಚಿತ್ರ

ಬೋಪಣ್ಣ ಜೋಡಿಗೆ ಸೋಲು

ಏಳು ವರ್ಷಗಳ ಬಳಿಕ ಗ್ರ್ಯಾನ್‌ಸ್ಲಾನ್ ಟೂರ್ನಿಯೊಂದರ ಸೆಮಿಫೈನಲ್ ತಲುಪಿದ್ದ ಭಾರತದ ರೋಹನ್ ಬೋಪಣ್ಣ ಅವರ ಫೈನಲ್ ಪ್ರವೇಶದ ಕನಸು ನನಸಾಗಲಿಲ್ಲ.

ಗುರುವಾರ ನಡೆದ ನಾಲ್ಕರ ಘಟ್ಟದ ಪುರುಷರ ಡಬಲ್ಸ್ ಪಂದ್ಯದಲ್ಲಿ ಕನ್ನಡಿಗ, 16ನೇ ಶ್ರೇಯಾಂಕದ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮ್ಯಾಟ್‌ವೆ ಮಿಡಲ್‌ಕೂಪ್ ಜೋಡಿಯು 6-4, 3-6, 6-7 (8-10)ರಿಂದ ಮಾರ್ಸೆಲೊ ಅರೆವಾಲೊ ಮತ್ತು ಜೀನ್ ಜೂಲಿಯನ್ ರೋಜರ್ ಎದುರು ಸೋತರು.

ಎರಡು ತಾಸು ಏಳು ನಿಮಿಷಗಳ ಕಾಲ ನಡೆದ ಈ ಪಂದ್ಯದಲ್ಲಿ ಎಲ್ ಸಲ್ವಡಾರ್‌ನ ಮಾರ್ಸೆಲೊ ಮತ್ತು ನೆದರ್ಲೆಂಡ್ಸ್‌ನ ಜೀನ್ ಜಯ ಸಂಪಾದಿಸಿದರು.

2013ರಲ್ಲಿ ಲಿಯಾಂಡರ್ ಪೇಸ್ ಅಮೆರಿಕ ಓಪನ್‌ನ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು. ಇಲ್ಲಿ ಫೈನಲ್ ತಲುಪಿದ್ದರೆ ಒಂಬತ್ತು ವರ್ಷಗಳ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಫೈನಲ್ ತಲುಪಿದ ಭಾರತದ ಆಟಗಾರ ಎಂಬ ಶ್ರೇಯ ಬೋಪಣ್ಣ ಅವರದಾಗುತ್ತಿತ್ತು.

ಮ್ಯಾಟ್‌ವೆ ಮಿಡಲ್‌ಕೂಪ್ ಮತ್ತು ರೋಹನ್ ಬೋಪಣ್ಣ– ಟ್ವಿಟರ್ ಚಿತ್ರ

ಇಂದಿನ ಪಂದ್ಯಗಳು
ಪುರುಷರ ಸೆಮಿಫೈನಲ್ಸ್
ರಫೆಲ್ ನಡಾಲ್ (ಸ್ಪೇನ್) ಅಲೆಕ್ಸಾಂಡರ್ ಜ್ವೆರೆವ್ (ಜರ್ಮನಿ)
ಆರಂಭ: ಸಂಜೆ 6.15ರಿಂದ
ಕಾಸ್ಪರ್ ರೂಡ್ (ನಾರ್ವೆ) ಮರಿನ್ ಸಿಲಿಚ್ (ಕ್ರೊವೇಷ್ಯಾ)
ಆರಂಭ: ರಾತ್ರಿ 9 ಗಂಟೆ
ಸಮಯ: ಭಾರತೀಯ ಕಾಲಮಾನ
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ನಡಾಲ್ – ಜ್ವೆರೆವ್ ಹಣಾಹಣಿ ಇಂದು

ಶುಕ್ರವಾರ 36ನೇ ವಸಂತಕ್ಕೆ ಕಾಲಿರಿಸಲಿರುವ ರಫೆಲ್ ನಡಾಲ್ ಫ್ರೆಂಚ್ ಓಪನ್ ಟೆನಿಸ್ ಸೆಮಿಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಎದುರಿಸಲಿದ್ದಾರೆ. 13 ಬಾರಿಯ ಚಾಂಪಿಯನ್ ನಡಾಲ್ ಕ್ವಾರ್ಟರ್‌ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಅವರನ್ನು ಸೋಲಿಸಿದ್ದರು. ಸ್ಪೇನ್‌ನ ನಡಾಲ್ 21 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಜಯಿಸಿದ್ದಾರೆ.

ಕೊಕ್ಕೊ ಟೂರ್ನಿಯಲ್ಲಿ ನವ ಮುಂಬೈ ಕಾರ್ಪೊರೇಷನ್ ಆಟಗಾರನನ್ನು ಮಹಾರಾಷ್ಟ್ರ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ತಂಡದ ಆಟಗಾರ ಔಟ್ ಮಾಡಲು ಯತ್ನಿಸಿದರು.

ಕೊಕ್ಕೊ: ನವಮುಂಬೈ ಶುಭಾರಂಭ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಮಹಾರಾಷ್ಟ್ರದ ತಂಡಗಳು ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮದ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ದಿವಂಗತ ಕೆ.ಎಸ್. ಪುಟ್ಟಣ್ಣಯ್ಯ ಸ್ಮರಣಾರ್ಥ ಅಖಿಲ ಭಾರತ ಪುರುಷರ ಹೊನಲು-ಬೆಳಕಿನ ಕೊಕ್ಕೊ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ಮೊದಲ ಪಂದ್ಯದಲ್ಲಿ ನವಮುಂಬೈ ಕಾರ್ಪೊರೇಷನ್ ತಂಡ ಮಹಾರಾಷ್ಟ್ರ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ ತಂಡದ ವಿರುದ್ಧ 1 ಅಂಕದೊಂದಿಗೆ ಜಯಗಳಿಸಿತು.

ಇನ್ನೊಂದು ಪಂದ್ಯದಲ್ಲಿ ಮುಂಬೈನ ಪಶ್ಚಿಮ ರೈಲ್ವೆ ತಂಡ ಆರು ಅಂಕಗಳಿಂದ ಮುಂಬೈ ಮಹಾನಗರಪಾಲಿಕೆ ಎದುರು ಗೆದ್ದಿತು. ಪಶ್ಚಿಮ ರೈಲ್ವೆ ತಂಡದ ಆಟಗಾರ ಮಹೇಶ್ ಪಂದ್ಯಶ್ರೇಷ್ಠರಾಗಿ ಹೊರಹೊಮ್ಮಿದರು. ಟೂರ್ನಿಯಲ್ಲಿ ದೇಶದ 11 ಪ್ರಮುಖ ತಂಡಗಳು ಭಾಗವಹಿಸಿವೆ.

ಟೆಸ್ಟ್: ಜಿಮ್ಮಿ, ಮ್ಯಾಟಿ ದಾಳಿಗೆ ತತ್ತರಿಸಿದ ಕಿವೀಸ್

ಲಂಡನ್ (ರಾಯಿಟರ್ಸ್): ಇಂಗ್ಲೆಂಡ್ ತಂಡದ ಅನುಭವಿ ವೇಗಿ ಜೇಮ್ಸ್ ಆ್ಯಂಡರ್ಸನ್ ಮತ್ತು ಪದಾರ್ಪಣೆ ಮಾಡಿದ ಮ್ಯಾಟಿ ಪಾಟ್ಸ್ ದಾಳಿಗೆ ಗುರುವಾರ ಆರಂಭವಾದ ಟೆಸ್ಟ್ ನಲ್ಲಿ ನ್ಯೂಜಿಲೆಂಡ್ ತಂಡ ದೂಳೀಪಟವಾಯಿತು.

ಲಾರ್ಡ್ಸ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನ್ಯೂಜಿಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 40 ಓವರ್‌ಗಳಲ್ಲಿ 132 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಬ್ಯಾಟಿಂಗ್ ಆರಂಭಿಸಿರುವ ಇಂಗ್ಲೆಂಡ್ ಕೂಡ ವೈಫಲ್ಯ ಅನುಭವಿಸಿದ್ದು, ದಿನದಾಟದ ಅಂತ್ಯಕ್ಕೆ 7 ವಿಕೆಟ್‌ಗೆ 116 ರನ್ ಗಳಿಸಿದೆ.

ಕಿವೀಸ್ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ವಿಲ್ ಯಂಗ್ ಮತ್ತು ಐದನೇ ಓವರ್‌ನಲ್ಲಿ ಟಾಮ್ ಲಥಾಮ್ ವಿಕೆಟ್ ಗಳಿಸಿದ ಜಿಮ್ಮಿ ಬಲವಾದ ಪೆಟ್ಟುಕೊಟ್ಟರು.

ಇದರಿಂದ ಹುರುಪುಗೊಂಡಂತೆ ಕಂಡ ಬಲಗೈ ವೇಗಿ, 23 ವರ್ಷದ ಮ್ಯಾಟಿ ಕಿವೀಸ್ ನಾಯಕ ಕೇನ್ ವಿಲಿಯಮ್ಸನ್ ವಿಕೆಟ್ ಗಳಿಸಿದರು. ಇದರೊಂದಿಗೆ ಟೆಸ್ಟ್ ಕ್ರಿಕೆಟ್ ತಮ್ಮ ವಿಕೆಟ್ ಖಾತೆ ತೆರೆದರು. ಇಷ್ಟೇ ಅಲ್ಲ; ಡೆರಿಲ್ ಮಿಚೆಲ್ ಮತ್ತು ಟಾಮ್ ಬ್ಲಂಡೆಲ್ ಅವರ ವಿಕೆಟ್‌ಗಳನ್ನೂ ಕಬಳಿಸಿದರು. ಇದರಿಂದಾಗಿ ಮಧ್ಯಮ ಕ್ರಮಾಂಕ ಕುಸಿಯಿತು. 27 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡ ಕಿವೀಸ್ ಬಳಗದ ಗಾಯಕ್ಕೆ ಮತ್ತೆ ಆ್ಯಂಡರ್ಸನ್ ಬರೆ ಎಳೆದರು. ಕೈಲ್ ಜೆಮಿಸನ್ ಮತ್ತು ಟಿಮ್ ಸೌಥಿ (26 ರನ್) ವಿಕೆಟ್‌ಗಳನ್ನು ಕಬಳಿಸಿದರು.



ಆ್ಯಂಡರ್ಸನ್

ಇದೆಲ್ಲದರ ನಡುವೆಯೂ ಕಾಲಿನ್ ಡಿ ಗ್ರ್ಯಾಂಡ್‌ಹೋಮ್ (ಔಟಾಗದೆ 42) ದಿಟ್ಟತನ ತೋರಿದರು. ಇದರಿಂದಾಗಿ ತಂಡವು 100ರ ಗಡಿ ದಾಟಲು ಸಾಧ್ಯವಾಯಿತು.

ನ್ಯೂಜಿಲೆಂಡ್ ಪರ ಬೌಲಿಂಗ್‌ನಲ್ಲಿ ಮಿಂಚಿದ ಟಿಮ್ ಸೌಥಿ, ಟ್ರೆಂಟ್ ಬೌಲ್ಟ್ ಮತ್ತು ಕೈಲ್ ಜೆಮಿಸನ್ ತಲಾ ಎರಡು ವಿಕೆಟ್ ಉರುಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 40 ಓವರ್‌ಗಳಲ್ಲಿ 132 (ಕಾಲಿನ್ ಡಿ ಗ್ರ್ಯಾಂಡ್‌ಹೋಮ್ ಔಟಾಗದೆ 42, ಟಿಮ್ ಸೌಥಿ 26, ಟ್ರೆಂಟ್ ಬೌಲ್ಟ್ 14, ಟಾಮ್ ಬ್ಲಂಡೆಲ್ 14, ಡೆರಿಲ್ ಮಿಚೆಲ್ 13, ಜೇಮ್ಸ್ ಆ್ಯಂಡರ್ಸನ್ 66ಕ್ಕೆ4, ಮ್ಯಾಟಿ ಪಾಟ್ಸ್ 13ಕ್ಕೆ4). ಇಂಗ್ಲೆಂಡ್: 36 ಓವರ್‌ಗಳಲ್ಲಿ 7ಕ್ಕೆ 116 (ಅಲೆಕ್ಸ್ ಲೀಸ್ 25, ಜಾಕ್ ಕ್ರಾವ್ಲಿ 43, ಜೊ ರೂಟ್ 11; ಟಿಮ್ ಸೌಥಿ 40ಕ್ಕೆ 2, ಟ್ರೆಂಟ್ ಬೌಲ್ಟ್ 15ಕ್ಕೆ 2, ಕಾಲಿನ್ ಡಿ ಗ್ರ್ಯಾಂಡ್‌ಹೋಮ್ 24ಕ್ಕೆ 1, ಕೈಲ್ ಜೆಮಿಸನ್ 20ಕ್ಕೆ 2).

ಮೆಸ್ಸಿ ಪಡೆಗೆ ಫೈನಲಿಸಿಮಾ ಕಿರೀಟ

ಲಂಡನ್ (ಎಪಿ): ಲಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟಿನಾ ತಂಡವು ಬುಧವಾರ ತಡರಾತ್ರಿ ನಡೆದ ಫೈನಲಿಸಿಮಾ ಕಪ್ ಗೆದ್ದುಕೊಂಡಿತು.

ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ದಕ್ಷಿಣ ಅಮೆರಿಕಾ ಫುಟ್‌ಬಾಲ್ ಚಾಂಪಿಯನ್ ಅರ್ಜೆಂಟಿನಾ ತಂಡವು 3–0 ಗೋಲುಗಳಿಂದ ಯುರೋಪ್ ಚಾಂಪಿಯನ್ ಇಟಲಿ ವಿರುದ್ಧ ಜಯಿಸಿತು.

ಏಳು ಬಾರಿಯ ಬ್ಯಾಲನ್ ಡಿ ಓರ್ ಪ್ರಶಸ್ತಿ ವಿಜೇತ ಮೆಸ್ಸಿಗೆ ಇದು ಎರಡನೇ ಅಂತರರಾಷ್ಟ್ರೀಯ ಟ್ರೋಫಿ. 11 ತಿಂಗಳುಗಳ ಅಂತರದಲ್ಲಿ ಅವರ ನಾಯಕತ್ವದಲ್ಲಿ ಅರ್ಜೆಂಟಿನಾ ತಂಡವು ಈ ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ. ಇದೇ ವರ್ಷ ನಡೆಯಲಿರುವ ಫಿಫಾ ವಿಶ್ವಕಪ್ ಜಯಿಸುವತ್ತ 34 ವರ್ಷದ ಮೆಸ್ಸಿ ಚಿತ್ತ ನೆಟ್ಟಿದ್ದಾರೆ.

ಈ ಪಂದ್ಯದಲ್ಲಿ ಅರ್ಜೆಂಟಿನಾ ತಂಡಕ್ಕೆ 28ನೇ ನಿಮಿಷದಲ್ಲಿ ಲಾಟೆರೊ ಮಾರ್ಟಿನೇಜ್ ಮೊದಲ ಗೋಲು ಕಾಣಿಕೆ ನೀಡಿದರು. ಈ ಗೋಲು ಗಳಿಕೆಯಲ್ಲಿ ಮೆಸ್ಸಿ ಕಾಲ್ಚಳಕವೂ ಇತ್ತು. ಗೋಲ್ ಪೋಸ್ಟ್ ಸನಿಹ ಅವರು ಕೊಟ್ಟ ಚುರುಕಿನ ಪಾಸ್ ಪಡೆದ ಮಾರ್ಟಿನೇಜ್ ಮಿಂಚಿದರು. ಏಂಜೆಲ್ ಡಿ ಮಾರಿಯಾ (45 + 1ನಿ) ಮತ್ತು ಪಾಲೋ ದೈಬಲಾ (90 + 4) ಅವರು ತಲಾ ಒಂದು ಗೋಲು ಕಾಣಿಕೆ ನೀಡಿದರು.

ಹೋದ ವರ್ಷವಷ್ಟೇ ಇದೇ ಕ್ರೀಡಾಂಗಣದಲ್ಲಿ ಇಟಲಿ ತಂಡವು ಯುರೋ ಕಪ್ ಜಯಿಸಿತ್ತು. ಇಟಲಿ ತಂಡದ ನಾಯಕ ಜಾರ್ಜಿಯೊ ಚೀಲಿನಿಗೆ ಇದು ಕೊನೆಯ ಅಂತರರಾಷ್ಟ್ರೀಯ ಪಂದ್ಯವಾಗಿದೆ. 37 ವರ್ಷದ ಜಾರ್ಜಿಯೊ 117 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ.

ಫೈನಲಿಸಿಮಾ ಟ್ರೋಫಿಯೊಂದಿಗೆ ಅರ್ಜೆಂಟಿನಾ ನಾಯಕ ಲಯೊನೆಲ್ ಮೆಸ್ಸಿ ಮತ್ತು ಸಹ ಆಟಗಾರರು –ಎಎಫ್‌ಪಿ ಚಿತ್ರ

ಬಾಕ್ಸಿಂಗ್: ಅಮಿತ್, ಶಿವ ಥಾಪಾಗೆ ಸ್ಥಾನ

ಶಿವ ಥಾಪಾ

ಪಟಿಯಾಲ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತರಾದ ಅಮಿತ್ ಪಂಘಾಲ್ ಮತ್ತು ಶಿವ ಥಾಪಾ ಅವರನ್ನು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಭಾರತದ ಪುರುಷರ ಬಾಕ್ಸಿಂಗ್ ತಂಡಕ್ಕೆ ಆಯ್ಕೆ ಮಾಡಲಾಗಿದೆ.

2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅಮಿತ್ ಬೆಳ್ಳಿ ಮತ್ತು 2015ರ ಕಂಚಿನ ಪದಕವಿಜೇತ ಶಿವ ಕ್ರಮವಾಗಿ 51 ಕೆ.ಜಿ ಮತ್ತು 63 ಕೆ.ಜಿ ವಿಭಾಗಗಳಲ್ಲಿ ಸ್ಥಾನ ಪಡೆದಿದ್ದಾರೆ. ಥಾಪಾ ಇತ್ತೀಚೆಗೆ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಯ ಅಥ್ಲೀಟ್ಸ್ ಸಮಿತಿಗೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆ ಟ್ರಯಲ್ಸ್‌ನಲ್ಲಿ ಅಮಿತ್ 4–1ರಿಂದ ಸರ್ವಿಸಸ್ ತಂಡದ ದೀಪಕ್ ವಿರುದ್ಧ ಜಯಿಸಿದರು. ಥಾಪಾ 5–0ಯಿಂದ ಕಳೆದ ಸಲದ ಕಾಮನ್‌ವೆಲ್ತ್ ಕ್ರೀಡಾಕೂಟ ಪದಕವಿಜೇತ ಮನೀಷ್ ಕೌಶಿಕ್ ವಿರುದ್ಧ ಗೆದ್ದರು.

ಹಾಲಿ ರಾಷ್ಟ್ರೀಯ ಚಾಂಪಿಯನ್ ಸುಮಿತ್ ಅವರಿಗೆ 75 ಕೆ.ಜಿ ವಿಭಾಗದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ಜುಲೈ 28ರಿಂದ ಆಗಸ್ಟ್ 8ರವರೆಗೆ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯಲಿದೆ. ಮಹಿಳೆಯರ ಬಾಕ್ಸಿಂಗ್ ತಂಡದ ಆಯ್ಕೆ ಟ್ರಯಲ್ಸ್ ಮುಂದಿನ ವಾರ ಆಯೋಜಿಸಲಾಗಿದೆ.

ಪುರುಷರ ತಂಡ: ಅಮಿತ್ ಪಂಘಾಲ್ (51ಕೆ.ಜಿ), ಮೊಹಮ್ಮದ್ ಹಸಮುದ್ದೀನ್ (57 ಕೆ.ಜಿ), ಶಿವ ಥಾಪಾ (63ಕೆ.ಜಿ), ರೋಹಿತ್ ಟೋಕಾಸ್ (67ಕೆ.ಜಿ), ಸುಮಿತ್ (75ಕೆಜಿ), ಆಶಿಶ್ ಕುಮಾರ್ (80 ಕೆ.ಜಿ), ಸಂಜೀತ್ (92 ಕೆ.ಜಿ), ಸಾಗರ್ (92ಕೆ.ಜಿ +).

ಭಾರತ ಕ್ರಿಕೆಟ್ ತಂಡದ ಆಟಗಾರ ದೀಪಕ್ ಚಾಹರ್ ಅವರು ಗುರುವಾರ ತಮ್ಮ ಗೆಳತಿ ಜಯಾ ಭಾರದ್ವಾಜ್ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು – ಪಿಟಿಐ ಚಿತ್ರ

ನಾರ್ವೆ ಚೆಸ್ ಟೂರ್ನಿ: ಆನಂದ್‌ಗೆ ಮುನ್ನಡೆ

ಸ್ಟಾವೆಂಜರ್, ನಾರ್ವೆ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯ ಕ್ಲಾಸಿಕಲ್ ವಿಭಾಗದಲ್ಲಿ ಸತತ ಎರಡನೇ ಜಯ ಗಳಿಸಿದರು.

ಬುಧವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ 52 ವರ್ಷದ ಆನಂದ್, 36 ನಡೆಗಳಲ್ಲಿ ಬಲ್ಗೇರಿಯಾದ ವೆಸಲಿನ್ ಟೊಪಲೊವ್ ಅವರನ್ನು ಮಣಿಸಿದರು. ಇದರೊಂದಿಗೆ ಆರು ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನಕ್ಕೇರಿದರು. ಐದು ಬಾರಿಯ ವಿಶ್ವ ಚಾಂಪಿಯನ್ ಆನಂದ್, ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ವ್ಯಾಚಿರ್ ಲ್ಯಾಗ್ರೇವ್ ಅವರನ್ನು ಸೋಲಿಸಿದ್ದರು.

ಒಕ್ಲಹಾಮಾದ ಟಲ್ಸಾದಲ್ಲಿ ದುಷ್ಕರ್ಮಿಯಿಂದ ಗುಂಡಿನ ದಾಳಿ

ಅಮೆರಿಕ: ಆಸ್ಪತ್ರೆ ಆವರಣದಲ್ಲಿ 5 ಮಂದಿ ಸಾವು

ಒಕ್ಲಹಾಮಾ (ಎಪಿ/ ರಾಯಿಟರ್ಸ್): ಅಮೆರಿಕದಲ್ಲಿ ಮತ್ತೊಂದು ಗುಂಡಿನ ದಾಳಿ ನಡೆದಿದೆ. ಬಂದೂಕು ಹಿಡಿದು ಬಂದ ವ್ಯಕ್ತಿಯೊಬ್ಬ ಆಸ್ಪತ್ರೆಯ ಆವರಣದಲ್ಲಿ ಗುಂಡಿನ ದಾಳಿ ನಡೆಸಿದ್ದು, ನಾಲ್ಕು ಮಂದಿ ಸಾವಿಗೀಡಾಗಿರುವ ಘಟನೆ ಬುಧವಾರ ನಡೆದಿದೆ.

ಒಕ್ಲಹಾಮಾದ ಟಲ್ಸಾದಲ್ಲಿರುವ ಸೇಂಟ್ ಫ್ರಾನ್ಸಿಸ್ ಆಸ್ಪತ್ರೆಯಲ್ಲಿ ಗುಂಡಿನ ದಾಳಿ ನಡೆದಿದೆ. ದಾಳಿಕೋರ ಸಹ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಆಸ್ಪತ್ರೆ ಕಟ್ಟಡದ ಎರಡನೇ ಮಹಡಿಯಲ್ಲಿ ವ್ಯಕ್ತಿಯೊಬ್ಬ ಬಂದೂಕು ಹಿಡಿದಿರುವ ಬಗ್ಗೆ ಕರೆ ಬಂದಿತ್ತು. ಅಧಿಕಾರಿಗಳು ಸ್ಥಳಕ್ಕೆ ಬರುವಷ್ಟರಲ್ಲಿ ಕೆಲವು ಜನರ ಮೇಲೆ ಗುಂಡಿನ ದಾಳಿ ನಡೆದಿತ್ತು. ದಂಪತಿ ಸ್ಥಳದಲ್ಲೇ ಸಾವಿಗೀಡಾಗಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಂತಕನ ಬಳಿ ದೊಡ್ಡ ರೈಫಲ್ ಮತ್ತು ಪಿಸ್ತೂಲ್ ಇತ್ತು ಎಂದಿದ್ದಾರೆ.

ಮೇ ತಿಂಗಳು ಅಮೆರಿಕದಲ್ಲಿ ನಡೆದ ಎರಡು ದೊಡ್ಡ ಸಾಮೂಹಿಕ ಗುಂಡಿನ ದಾಳಿಗಳ ಬೆನ್ನಲ್ಲೇ ಈ ದಾಳಿ ನಡೆದಿದೆ. ಕಳೆದ ವಾರ ಬಂದೂಕುದಾರಿಯೊಬ್ಬ 19 ಮಕ್ಕಳು ಮತ್ತು ಇಬ್ಬರು ಶಿಕ್ಷಕರನ್ನು ಗುಂಡಿಕ್ಕಿ ಕೊಂದ ಘಟನೆ ಟೆಕ್ಸಾಸ್‌ನಲ್ಲಿ ನಡೆದಿತ್ತು. ನ್ಯೂಯಾರ್ಕ್‌ನಲ್ಲಿ ನಡೆದ ಮತ್ತೊಂದು ಘಟನೆಯಲ್ಲಿ ಸೂಪರ್‌ಮಾರ್ಕೆಟ್‌ನಲ್ಲಿ ಬಂದೂಕು ಹಿಡಿದ ವ್ಯಕ್ತಿಯು 10 ಜನರನ್ನು ಬಲಿ ಪಡೆದಿದ್ದ. ಈ ಘಟನೆಗಳು ಬಂದೂಕು ನಿಯಂತ್ರಣದ ಕುರಿತು ಭಾರಿ ಚರ್ಚೆಯನ್ನು ಸೃಷ್ಟಿಸಿದೆ.

ಬಂದೂಕು ಖರೀದಿ–ವಯೋಮಿತಿ ನಿಗದಿಗೆ ಮಸೂದೆ

ವಾಷಿಂಗ್ಟನ್ (ಎಪಿ): ಬಂದೂಕುಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದ ವಯೋಮಿತಿಯನ್ನು ಹೆಚ್ಚಿಸುವ ಮಸೂದೆಯನ್ನು ಅಮೆರಿಕ ಸಂಸತ್ ಸಿದ್ಧಪಡಿಸಿದೆ.

ಕೆಲ ಸೆಮಿ–ಆಟೊಮ್ಯಾಟಿಕ್ ಬಂದೂಕುಗಳನ್ನು ಖರೀದಿಸಲು ಇರುವ ವಯೋಮಿತಿಯನ್ನು 18 ರಿಂದ 25ಕ್ಕೆ ಹೆಚ್ಚಳ ಮಾಡುವ ಪ್ರಸ್ತಾವವನ್ನು ಈ ಮಸೂದೆ ಒಳಗೊಂಡಿದೆ.

ನ್ಯಾಯಾಂಗಕ್ಕೆ ಸಂಬಂಧಿಸಿದ ಸಂಸದೀಯ ಸಮಿತಿಯು ಈ ಕುರಿತು ಅಹವಾಲುಗಳನ್ನು ಆಲಿಸುವ ಪ್ರಕ್ರಿಯೆ ಆರಂಭಿಸಿದ್ದು, ಮಸೂದೆಯನ್ನು ಮುಂದಿನ ವಾರ ಸಂಸತ್‌ನಲ್ಲಿ ಮಂಡಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ದೇಶದಲ್ಲಿ ಇತ್ತೀಚೆಗೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಸಾಮೂಹಿಕ ಹತ್ಯೆ ಮಾಡಿದ ಘಟನೆಗಳು ವರದಿಯಾಗಿವೆ. ಟೆಕ್ಸಾಸ್ ಹಾಗೂ ನ್ಯೂಯಾರ್ಕ್‌ನಲ್ಲಿ ಇತ್ತೀಚೆಗೆ ನಡೆದ ಗುಂಡಿನ ದಾಳಿಯಲ್ಲಿ 19 ಮಕ್ಕಳು ಸೇರಿದಂತೆ 31 ಜನರು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಈ ಮಸೂದೆಗೆ ಮಹತ್ವ ಬಂದಿದೆ.

ಭಾರಿ ಸಾಮರ್ಥ್ಯದ ಮ್ಯಾಗಜಿನ್‌ಗಳ ಆಮದು, ತಯಾರಿಸುವುದು ಅಥವಾ ಸಂಗ್ರಹಿಸಿ ಇಟ್ಟುಕೊಳ್ಳುವುದನ್ನು ಅಪರಾಧ ಎಂಬುದಾಗಿ ಪರಿಗಣಿಸಲಾಗುತ್ತದೆ. ಒಂದು ವೇಳೆ ಇಂಥ ಮ್ಯಾಗಜಿನ್‌ಗಳು ಪತ್ತೆಯಾದಲ್ಲಿ, ಅವುಗಳನ್ನು ಸರ್ಕಾರ ವಶಪಡಿಸಿಕೊಳ್ಳುತ್ತದೆ ಎಂಬುದು ಸೇರಿದಂತೆ ಹಲವಾರು ಅಂಶಗಳನ್ನು ಈ ಮಸೂದೆ ಒಳಗೊಂಡಿದೆ.

ಟರ್ಕಿ ಹೆಸರು ಇನ್ನು ಮುಂದೆ ‘ಟರ್ಕಿಯೆ’

ಅಂಕಾರ (ಎಪಿ): ಟರ್ಕಿ ತನ್ನ ಹೆಸರನ್ನು ‘ಟರ್ಕಿಯೆ’ ಎಂದು ಬದಲಾಯಿಸಿಕೊಂಡಿದೆ. ಇನ್ನು ಮುಂದೆ ದೇಶವನ್ನು ‘ಟರ್ಕಿಯೆ’ ಎಂಬುದಾಗಿ ಕರೆಯುವಂತೆ ಕೋರಿ ವಿದೇಶಾಂಗ ಸಚಿವ ಮೆವ್ಲುಟ್ ಕಾವುಸೊಗ್ಲು ಅವರು ವಿಶ್ವಸಂಸ್ಥೆಗೆ ಪತ್ರ ಬರೆದಿದ್ದಾರೆ.

‘ಟರ್ಕಿಯೆ ವಿದೇಶಾಂಗ ಸಚಿವರ ಪತ್ರ ಕೈ ಸೇರಿದೆ. ಈ ಕ್ಷಣದಿಂದಲೇ ಆ ರಾಷ್ಟ್ರದ ಹೆಸರಿನಲ್ಲಿನ ಬದಲಾವಣೆಯನ್ನು ಅನುಷ್ಠಾನಗೊಳಿಸಲಾಗಿದೆ’ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರ ವಕ್ತಾರ ಸ್ಟೀಫನ್ ದುಜಾರಿಕ್ ಹೇಳಿದ್ದಾರೆ’ ಎಂದು ಮಾಧ್ಯಮಗಳು ವರದಿ ಮಾಡಿವೆ.

ದೇಶದ ಛಾಪನ್ನು ಮರು ಸ್ಥಾಪಿಸುವ ಉದ್ದೇಶದಿಂದ ಇಂಥ ನಿರ್ಧಾರ ಕೈಗೊಳ್ಳಲಾಗಿದೆ. ಅಲ್ಲದೆ, ಟರ್ಕಿ ಎಂಬುದು ಒಂದು ವಿಧದ ಕೋಳಿಯ ಹೆಸರು. ಈ ಪಕ್ಷಿಯ ಹೆಸರಿನೊಂದಿಗೆ ಕೆಲ ನಕಾರಾತ್ಮಕ ಅರ್ಥಗಳು ತಳಕುಹಾಕಿಕೊಂಡಿವೆ. ಈ ನಕಾರಾತ್ಮಕ ಅಂಶಗಳಿಂದ ದೇಶದ ಹೆಸರನ್ನು ಬೇರ್ಪಡಿಸಬೇಕು ಎಂಬ ಉದ್ದೇಶವೂ ಇದೆ ಎನ್ನಲಾಗಿದೆ. ಜಾಗತಿಕ ವೇದಿಕೆಗಳಲ್ಲಿ ದೇಶದ ಹೆಸರನ್ನು ಟರ್ಕಿಯೆ ಎಂದೇ ಬಳಸಬೇಕು ಎಂಬ ಪ್ರಚಾರಕ್ಕೆ ಚಾಲನೆ ನೀಡಲಾಗಿದೆ ಎಂದು ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೋಗನ್ ಅವರ ಕಚೇರಿ ಹೇಳಿದೆ.

ವಿಮಾನ ದುರಂತ: ನಾಲ್ವರು ಭಾರತೀಯರ ಅಂತ್ಯಕ್ರಿಯೆ

ಕಠ್ಮಂಡು: ಈಚೆಗೆ ನೇಪಾಳದ ತಾರಾ ಏರ್ ಸಂಸ್ಥೆಯ ವಿಮಾನ ಪತನವಾಗಿ ಮೃತಪಟ್ಟಿದ್ದ 22 ಜನರ ಪೈಕಿ ನಾಲ್ವರು ಭಾರತೀಯರ ಅಂತ್ಯಕ್ರಿಯೆಯನ್ನು ಇಲ್ಲಿನ ಪಶುಪತಿನಾಥ ದೇವಾಲಯದ ಸಮೀಪ ಗುರುವಾರ ನೆರವೇರಿಸಲಾಗಿದೆ.

ಕೆನಡಾದ 'ಡಿ ಹ್ಯಾವಿಲ್ಯಾಂಡ್' ನಿರ್ಮಿತ ಈ ವಿಮಾನದಲ್ಲಿ ನಾಲ್ವರು ಭಾರತೀಯರು, ಜರ್ಮನಿಯ ಇಬ್ಬರು, 13 ಮಂದಿ ನೇಪಾಳಿಗರು ಹಾಗೂ ಮೂವರು ಸಿಬ್ಬಂದಿ ಸೇರಿ 22 ಜನರು ಪೋಖರಾ ನಗರದಿಂದ ಮಧ್ಯ ನೇಪಾಳದ ಪ್ರಸಿದ್ಧ ಚಾರಣ ತಾಣ ಜೋಮ್ಸಮ್‌ಗೆ ಪಯಣಿಸುತ್ತಿದ್ದರು.

ಉದ್ಯಮಿಯಾದ ಅಶೋಕ್ ಕುಮಾರ್ ತ್ರಿಪಾಠಿ (54) ಹಾಗೂ ಅವರಿಂದ ವಿಚ್ಛೇದನ ಪಡೆದಿದ್ದ ವೈಭವಿ ಬಂದೇಕರ್ ತ್ರಿಪಾಠಿ (51) ಅವರು ತಮ್ಮ ಮಕ್ಕಳಾದ ಧನುಷ್ (22), ರಿತಿಕಾ (15) ಅವರೊಂದಿಗೆ ರಜೆ ಕಳೆಯುವುದ್ಕಾಗಿ ನೇಪಾಳಕ್ಕೆ ಆಗಮಿಸಿದ್ದರು.

ತ್ರಿಭುವನ್ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಸಂಕ್ಷಿಪ್ತ ಸುದ್ದಿ

ಪಂಜಾಬ್: ಜೂನ್ 7ರಿಂದ 424 ಗಣ್ಯರಿಗೆ ಭದ್ರತೆ

ಚಂಡೀಗಢ (ಪಿಟಿಐ): ರಾಜ್ಯದ 424 ಗಣ್ಯರಿಗೆ ಜೂನ್ 7ರಿಂದ ಭದ್ರತೆಯನ್ನು ಮತ್ತೆ ಒದಗಿಸಲಾಗುವುದು ಎಂದು ಪಂಜಾಬ್ ಹಾಗೂ ಹರಿಯಾಣ ಹೈಕೋರ್ಟ್‌ಗೆ ಪಂಜಾಬ್ ಸರ್ಕಾರ ಗುರುವಾರ ತಿಳಿಸಿದೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಜಮೋಹನ್ ಸಿಂಗ್ ಅವರಿದ್ದ ನ್ಯಾಯಪೀಠಕ್ಕೆ, ಹಿರಿಯ ಡೆಪ್ಯುಟಿ ಅಡ್ವೋಕೇಟ್ ಜನರಲ್ ಗೌರವ್ ಧುರಿವಾಲಾ ಈ ವಿಷಯ ತಿಳಿಸಿದರು.

ಗಣ್ಯರಿಗೆ ನೀಡಲಾಗಿದ್ದ ಭದ್ರತೆಯನ್ನು ಕಡಿಮೆ ಮಾಡಲಾಗಿತ್ತು. ಪ್ರಶ್ನಿಸಿ ಮಾಜಿ ಉಪಮುಖ್ಯಮಂತ್ರಿ ಒ.ಪಿ. ಸೋನಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮೂಸೆವಾಲಾ ದೇಹ ಹೊಕ್ಕಿದ್ದವು 19 ಗುಂಡು

ಚಂಡೀಗಢ (ಪಿಟಿಐ): ಹಂತಕರ ಗುಂಡೇಟುಗಳಿಂದ ಹತ್ಯೆಗೊಳಗಾದ ಪಂಜಾಬ್‌ನ ಜನಪ್ರಿಯ ಗಾಯಕ ಸಿಧು ಮೂಸೆವಾಲಾ ಅವರ ದೇಹದೊಳಗೆ 19 ಗುಂಡುಗಳು ಹೊಕ್ಕಿರುವುದು ಮರಣೋತ್ತರ ಪರೀಕ್ಷೆಯಲ್ಲಿ ಕಂಡುಬಂದಿದೆ.

ಸಿಧು ಅವರ ದೇಹದ ಬಲ ಭಾಗಕ್ಕೆ ಹೆಚ್ಚಿನ ಗುಂಡುಗಳು ಹೊಕ್ಕಿವೆ. ಗುಂಡುಗಳು ಅವರ ದೇಹ ಹೊಕ್ಕಿದ ಕೇವಲ 15 ನಿಮಿಷಗಳ ಅವಧಿಯಲ್ಲಿ ಅವರ ಜೀವ ಹಾರಿಹೋಗಿರುವ ಸಾಧ್ಯತೆ ಇದೆ ಎಂದು ಐವರು ವೈದ್ಯರ ತಂಡದ ವರದಿಯಲ್ಲಿ ಹೇಳಲಾಗಿದೆ.

ಮಾನನಷ್ಟ: ಜಾನಿ ಡೆಪ್ ಪರ ತೀರ್ಪು

ಲಾಸ್ ಏಂಜಲೀಸ್ (ಪಿಟಿಐ): ನಟಿ ಆ್ಯಂಬರ್ ಹರ್ಡ್ ವಿರುದ್ಧದ ಮಾನನಷ್ಟ ಮೊಕದ್ದಮೆಯಲ್ಲಿ ಹಾಲಿವುಡ್ ಸ್ಟಾರ್ ಜಾನಿ ಡೆಪ್ ಅವರ ಪರವಾಗಿ ಇಲ್ಲಿನ ಕೋರ್ಟ್ ತೀರ್ಪು ನೀಡಿದೆ.

ವಿಚಾರಣೆ ನಡೆಸಿದ ವರ್ಜಿನಿಯಾ ಕೋರ್ಟ್‌ನ ನ್ಯಾಯಾಧೀಶರು, ಡೆಪ್‌ಗೆ ₹ 80 ಕೋಟಿ (1 ಕೋಟಿ ಡಾಲರ್) ಪರಿಹಾರ ನೀಡುವಂತೆ ಆದೇಶಿಸಿದ್ದಾರೆ.

ಅಲ್ಲದೆ, ಡೆಪ್ ಪರ ವಕೀಲರೊಬ್ಬರು ನಟಿ ಆ್ಯಂಬರ್‌ಗೆ ಅವಮಾನಿಸಿದ್ದು, ಇದಕ್ಕೆ ಪರಿಹಾರವಾಗಿ ನಟಿಗೆ ₹ 15 ಕೋಟಿ (20 ಲಕ್ಷ ಡಾಲರ್) ನೀಡುವಂತೆಯೂ ನ್ಯಾಯಾಧೀಶರು ಆದೇಶಿಸಿದರು.

ತೀರ್ಪಿನ ಕುರಿತು ಪ್ರತಿಕ್ರಿಯಿಸಿದರುವ ಡೆಪ್, 'ಆರು ವರ್ಷಗಳ ನಂತರ ನ್ಯಾಯಾಧೀಶರು ನನ್ನ ಬದುಕನ್ನು ನನಗೆ ಮರಳಿಸಿದ್ದಾರೆ...' ಎಂದಿದ್ದಾರೆ. 'ಹೃದಯಕ್ಕೆ ಘಾಸಿಯಾಗಿದೆ ಮತ್ತು ನಿರಾಶೆಯಾಗಿದೆ. ಇದು ಮಹಿಳೆಗೆ ಆಗಿರುವ ಹಿನ್ನಡೆ’ ಎಂದು ಹರ್ಡ್ ಪ್ರತಿಕ್ರಿಯಿಸಿದ್ದಾರೆ.

ರಾಸಾಯನಿಕ ಗೊಬ್ಬರ ಪೂರೈಕೆ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿಗೆ ನಲುಗಿರುವ ಶ್ರೀಲಂಕಾಕ್ಕೆ ಅಗತ್ಯವಿರುವ ರಾಸಾಯನಿಕ ಗೊಬ್ಬರ ಪೂರೈಸುವುದಾಗಿ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.

ಮುಂಬರುವ ಕೊಯ್ಲು ಹಂಗಾಮಿಗೆ ಸಂಬಂಧಿಸಿ ಚರ್ಚಿಸಲು ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ನಡಸಿದ ಸಭೆಯಲ್ಲಿ ಅಧ್ಯಕ್ಷ ರಾಜಪಕ್ಸ ಈ ವಿಷಯ ತಿಳಿಸಿದರು ಎಂದು ಅಧ್ಯಕ್ಷರ ಕಚೇರಿ ಗುರುವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಕೊಡೈಕನಾಲ್, ಕುದುರೆಮುಖ, ಸಾವನದುರ್ಗ, ಉತ್ತರಹಳ್ಳಿಯಲ್ಲಿ ತರಬೇತಿಗೆ ಆದ್ಯತೆ

ಲಡಾಖ್ ರನ್‌ಗೆ ಗುಡ್ಡ–ಬೆಟ್ಟಗಳಲ್ಲಿ ಅಭ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದ ಅತ್ಯಂತ ಕಠಿಣ ಓಟದ ಸ್ಪರ್ಧೆ ಎಂದೇ ಹೇಳಲಾಗುವ ಲಡಾಖ್ ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳುವ ಬೆಂಗಳೂರಿನ ಅಥ್ಲೀಟ್‌ಗಳು ಈಗ ರಾಜ್ಯ ಮತ್ತು ನೆರೆರಾಜ್ಯಗಳ ಗುಡ್ಡ–ಬೆಟ್ಟಗಳಲ್ಲಿ ಕಠಿಣ ಅಭ್ಯಾಸದಲ್ಲಿ ತೊಡಗಿದ್ದಾರೆ.

2012ರಲ್ಲಿ ಆರಂಭಗೊಂಡ ಮ್ಯಾರಥಾನ್‌ನ 9ನೇ ಆವೃತ್ತಿ ಸೆಪ್ಟೆಂಬರ್ 7ರಿಂದ 11ರ ವರೆಗೆ ನಡೆಯಲಿದೆ. ಅಂತರರಾಷ್ಟ್ರೀಯ ಮ್ಯಾರಥಾನ್ ಮತ್ತು ದೂರ ಅಂತರದ ಓಟದ ಸಂಸ್ಥೆಯಿಂದ (ಎಐಎಂಎಸ್) ಮಾನ್ಯತೆ ಪಡೆದಿರುವ ರೇಸ್‌ನಲ್ಲಿ ವಾತಾವರಣವೇ ಪ್ರಮುಖ ಸವಾಲು. ಹೀಗಾಗಿ ಇದರಲ್ಲಿ ಭಾಗವಹಿಸಬೇಕಾದರೆ ವಿಶೇಷ ತಯಾರಿ ಅಗತ್ಯ. ಈ ಹಿನ್ನೆಲೆಯಲ್ಲಿ ಬೆಂಗಳೂರಿಗರು ಈಗಾಗಲೇ ಅಭ್ಯಾಸ ಆರಂಭಿಸಿದ್ದಾರೆ.

‘ಕೋವಿಡ್–19ರಿಂದಾಗಿ ಎರಡು ವರ್ಷ ಸ್ಪರ್ಧೆ ನಡೆದಿರಲಿಲ್ಲ. ಈಗ ಎಲ್ಲರೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮುಂದಾಗುತ್ತಿದ್ದಾರೆ. ಲಡಾಖ್ ರೇಸ್ ಬಗ್ಗೆ ಎರಡು ವರ್ಷಗಳಲ್ಲಿ ಹೆಚ್ಚು ಮಂದಿ ಆಸಕ್ತಿ ವಹಿಸಿದ್ದಾರೆ. ಆದ್ದರಿಂದ ಈ ಬಾರಿ ಬೆಂಗಳೂರಿನಿಂದ 50ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ಸಾಧ್ಯತೆ ಇದೆ’ ಎಂದು ದೂರ ಅಂತರದ ಓಟದ ಮಾರ್ಗದರ್ಶಕ, ‘ಓಡು ಬಾ ರನ್’ ಸಂಸ್ಥೆಯ ಸಹ ಸಂಸ್ಥಾಪಕ ದರ್ಶನ್ ಜೈನ್ ಅಭಿಪ್ರಾಯಪಡುತ್ತಾರೆ.

‘ಲಡಾಖ್ ಮ್ಯಾರಥಾನ್ ಮತ್ತು ಅದರಲ್ಲಿ ಪಾಲ್ಗೊಳ್ಳುವವರ ಅಭ್ಯಾಸ ವಿಶಿಷ್ಟ ರೀತಿಯಲ್ಲಿ ಇರುತ್ತದೆ. ಮ್ಯಾರಥಾನ್ ನಡೆಯುವ ನಾಲ್ಕೈದು ತಿಂಗಳ ಮೊದಲೇ ತಯಾರಿ ಮಾಡಬೇಕು. ಆಮ್ಲಜನಕದ ಕೊರತೆ ಇರುವಲ್ಲಿ ಉಸಿರಾಟವನ್ನು ಹೊಂದಿಸಿಕೊಳ್ಳುವುದು ಪ್ರಮುಖ ಸವಾಲು. ಗುಡ್ಡ–ಬೆಟ್ಟಗಳ ಏರಿಳಿತಗಳು, ಕಠಿಣ ತಿರುವುಗಳಲ್ಲಿ ಓಡುವುದಕ್ಕೂ ಅಭ್ಯಾಸ ಮಾಡಬೇಕು. ಅಲ್ಲಿನ ವಾತಾವರಣಕ್ಕೆ ಒಗ್ಗಿಕೊಳ್ಳುವುದು ಕೂಡ ಮುಖ್ಯ. ಈ ಎಲ್ಲ ಕಾರಣಗಳಿಂದ ಬೆಂಗಳೂರು ಸುತ್ತಮುತ್ತ ಸಾವನದುರ್ಗ, ಉತ್ತರಹಳ್ಳಿ, ಕುದುರೆಮುಖ, ತಮಿಳುನಾಡಿನ ಕೊಡೈಕನಾಲ್ ಮುಂತಾದ ಕಡೆಗಳಲ್ಲಿ ತರಬೇತಿ ನೀಡಲಾಗುತ್ತದೆ. ಸತಾರಾ ಹಿಲ್ ರನ್‌ಗೂ ಕರೆದುಕೊಂಡು ಹೋಗಲಾಗುತ್ತದೆ’ ಎಂದು ಅವರು ಹೇಳುತ್ತಾರೆ.

ಅಭ್ಯಾಸಕ್ಕೆ ತೆರಳಲು ಸಜ್ಜಾಗಿರುವ ಬೆಂಗಳೂರಿನ ಓಟಗಾರರು

ಹಾಫ್, ಫುಲ್ ಮತ್ತು ಚಾಲೆಂಜ್...

ಕೋವಿಡ್ ಪೂರ್ವದಲ್ಲಿ ಎರಡು ವರ್ಷ ಲಡಾಖ್ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿರುವ ರಮೇಶ್ ರಾವ್ ಈ ಬಾರಿ ಮತ್ತೆ ಸಜ್ಜಾಗಿದ್ದಾರೆ. ಮೊದಲ ಬಾರಿ ಹಾಫ್ ಮ್ಯಾರಥಾನ್‌ನಲ್ಲಿ ಸ್ಪರ್ಧಿಸಿದ್ದ ಅವರು ನಂತರ ಫುಲ್ ಮ್ಯಾರಥಾನ್‌ಲ್ಲಿ ಪಾಲ್ಗೊಂಡಿದ್ದರು. ಈ ಬಾರಿ ಅತ್ಯಂತ ಕಠಿಣ ಖರ್ದುಂಗ್ ಲಾ ಚಾಲೆಂಜ್‌ಗಾಗಿ ಸಜ್ಜಾಗುತ್ತಿದ್ದಾರೆ.

‘ಕನಿಷ್ಠ 10–15 ದಿನ ಮೊದಲೇ ಅಲ್ಲಿಗೆ ಹೋಗಬೇಕಾಗುತ್ತದೆ. ಮೊದಲ ದಿನ ಕೊಠಡಿಯಲ್ಲೇ ಕುಳಿತಿರಬೇಕು. ಎರಡನೇ ದಿನದಿಂದ ಬೆಟ್ಟದಲ್ಲಿ ನಡೆಯುವ ಅಭ್ಯಾಸ ಮಾಡಬೇಕು. ನೀರಡಿಕೆ ಆಗದೆ ಇದ್ದರೂ ನೀರು ಕುಡಿಯಲೇಬೇಕು. 3 ಮತ್ತು 4ನೇ ದಿನ 3 ಕಿಮೀನಿಂದ 5 ಕಿಮೀ ವರೆಗೆ ಓಡುವ ಅಭ್ಯಾಸ ಮಾಡಬೇಕು. ಸ್ಪರ್ಧೆಗೆ ಎರಡು ದಿನ ಉಳಿದಿರುವಾಗ ವಿಶ್ರಾಂತಿ ಪಡೆದುಕೊಂಡು ಪೌಷ್ಠಿಕ ಆಹಾರ ಹೆಚ್ಚು ಸೇವಿಸಬೇಕು’ ಎಂದು ರಮೇಶ್ ರಾವ್ ಹೇಳಿದರು.

‘ಆಮ್ಲಜನಕ ಕಡಿಮೆ ಇರುವ, ಅತ್ಯಂತ ಶೀತಲ ಪ್ರದೇಶದ ವಾತಾವರಣಕ್ಕೆ ಹೊಂದಿಕೊಳ್ಳುವುದೇ ದೊಡ್ಡ ಸವಾಲು. ಲಡಾಖ್‌ಗೆ ಸಮಾನವಾದ ವಾತಾವರಣ ದಕ್ಷಿಣ ಭಾರತದಲ್ಲಿ ಸಿಗಲಾರದು. ಇರುವುದರಲ್ಲಿ ಅತ್ಯಂತ ಸೂಕ್ತವಾದದ್ದನ್ನು ಆರಿಸಿಕೊಳ್ಳುತ್ತೇವೆ’ ಎಂದು ಬೆಂಗಳೂರಿನಲ್ಲಿ ನೆಲೆಸಿರುವ ಶಿಲಾಂಗ್‌ನ ಆಸಿಫ್ ಅಹಮ್ಮದ್ ತಿಳಿಸಿದರು.

ವಿಶ್ವಕಪ್ ಶೂಟಿಂಗ್: ಬೆಳ್ಳಿ ಜಯಿಸಿದ ಸ್ವಪ್ನಿಲ್

ನವದೆಹಲಿ (ಪಿಟಿಐ): ಭಾರತದ ಸ್ವಪ್ನಿಲ್ ಕುಶಾಲೆ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಅಜರ್‌ಬೈಜಾನ್‌ನ ಬಾಕುನಲ್ಲಿ ನಡೆಯುತ್ತಿರುವ ಟೂರ್ನಿಯ 50 ಮೀಟರ್ಸ್ ರೈಫಲ್ ತ್ರಿ ಪೋಸಿಷನ್ಸ್‌ನಲ್ಲಿ ಗುರುವಾರ ಅವರಿಗೆ ಪದಕ ಒಲಿದಿದೆ. 26 ವರ್ಷದ ಸ್ವಪ್ನಿಲ್, ಫೈನಲ್‌ನಲ್ಲಿ 10–16ರಿಂದ ಉಕ್ರೇನ್‌ನ ಸೆರಿಯ್ ಕಲಿಶ್ ಅವರಿಗೆ ಸೋತರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಕಲಿಶ್ ಬೆಳ್ಳಿ ಪದಕ ಗಳಿಸಿದ್ದರು. ರ‍್ಯಾಂಕಿಂಗ್ ಸುತ್ತಿನಲ್ಲಿ ಕಲಿಶ್ 411 ಪಾಯಿಂಟ್ಸ್ ಗಳಿಸಿದರೆ, ಸ್ವಪ್ನಿಲ್ 409.1 ಪಾಯಿಂಟ್ಸ್ ಕಲೆಹಾಕಿದ್ದರು. ಕಂಚು ಜಯಿಸಿದ ಫಿನ್ಲೆಂಡ್‌ನ ಅಲೆಕ್ಸಿ 407.8 ಪಾಯಿಂಟ್ಸ್ ಸಂಗ್ರಹಿಸಿದ್ದರು. ಫೈನಲ್‌ನಲ್ಲಿ ಸ್ವಪ್ನಿಲ್ ಅವರಿಂದ ಹೆಚ್ಚು ಪೈಪೋಟಿ ನೀಡಲು ಸಾಧ್ಯವಾಗಲಿಲ್ಲ. ಆದರೆ ಉಕ್ರೇನ್ ಶೂಟರ್ ಪ್ರಾಬಲ್ಯ ಸಾಧಿಸಿದರು.

ಸ್ವಪ್ನಿಲ್ ಕುಶಾಲೆ

ಟೆನಿಸ್: ಸೆಮಿಗೆ ಮನೀಷ್

ಬೆಂಗಳೂರು: ಕರ್ನಾಟಕದ ಮನೀಷ್ ಜಿ. ಅವರು ಇಲ್ಲಿ ನಡೆಯುತ್ತಿರುವ ಟಾಪ್‌ಸ್ಪಿನ್ ಎಐಟಿಎ ಪ್ರೊ ಸರ್ಕ್ಯೂಟ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಗುರುವಾರ ನಡೆದ ಪುರುಷರ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಮನೀಷ್ 3-6, 6-2, 6-0ಯಿಂದ ಕರ್ನಾಟಕದ ರಾಶೇನ್ ಸ್ಯಾಮ್ಯುಯೆಲ್ ಅವರನ್ನು ಸೋಲಿಸಿದರು.

ಎಂಟರಘಟ್ಟದ ಇನ್ನುಳಿದ ಪಂದ್ಯಗಳಲ್ಲಿ; ತಮಿಳುನಾಡಿನ ಮಯೂರ್ ಜಯಪ್ರಕಾಶ್ 6-2, 6-2ರಿಂದ ಕರ್ನಾಟಕದ ಅರ್ಣವ್ ಪತಂಗೆ ಎದುರು, ತಮಿಳುನಾಡಿನ ಭೂಪತಿ ಶಕ್ತಿವೇಲ್ 6-2, 6-1ರಿಂದ ತಮ್ಮದೇ ರಾಜ್ಯದ ಗುಹನ್ ರಾಜನ್ ಎದುರು ಜಯ ಸಾಧಿಸಿದರು. ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ರಾಜ್ಯದ ಎಸ್. ಶ್ರೀನಿಧಿ 6-7 (7), 6-3, 7-6 (3) ರಿಂದ ತಮಿಳುನಾಡಿನ ಜೋಯಿಲ್ ನಿಕೊಲ್ ಎದುರು ಪ್ರತಿಭಾ ಪ್ರಸಾದ್ ನಾರಾಯಣ್ 6-2, 6-1ರಿಂದ ದೆಹಲಿಯ ಸಮೀಕ್ಷಾ ದಬಾಸ್ ವಿರುದ್ಧ ಜಯಿಸಿದರು.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಉಕ್ರೇನ್‌ಗೆ ಜಯ

ಗ್ಲಾಸ್ಗೊ (ಎಎಫ್‌ಪಿ): ಉಕ್ರೇನ್ ಫುಟ್‌ಬಾಲ್ ತಂಡವು ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ 3–1ರಿಂದ ಸ್ಕಾಟ್ಲೆಂಡ್ ವಿರುದ್ಧ ಜಯಿಸಿ ವಿಶ್ವಕಪ್ ಪ್ಲೇ ಆಫ್ ಫೈನಲ್ ಪ್ರವೇಶಿಸಿತು.

ಯುದ್ಧಪೀಡಿತ ಉಕ್ರೇನ್ ದೇಶದ ಆಟಗಾರರು ಇಲ್ಲಿ ಛಲದ ಆಟ ವಾಡಿದರು. ರಷ್ಯಾ ಯುದ್ಧ ಸಾರಿದ ನಂತರ ಇದೇ ಮೊದಲ ಬಾರಿಗೆ ಉಕ್ರೇನ್ ಫುಟ್‌ಬಾಲ್ ತಂಡವು ಅಂತರರಾಷ್ಟ್ರೀಯ ಪಂದ್ಯ ಆಡಿತು. ಉಕ್ರೇನ್ ತಂಡದ ಆ್ಯಂಡ್ರಿಯಾ ಯಾರ್ಮೊಲೆಂಕೊ, ರೋಮನ್ ಯಾರೆಮ್‌ಚುಕ್ ಮತ್ತು ಆರ್ಟೆಮ್ ಡೊವ್‌ಬೈಕ್ ಗೋಲು ಗಳಿ ಸಿದರು.

ಯುದ್ಧ ನಿಲ್ಲಿಸಿ; ಪೆಲೆ ಕರೆ: ಫುಟ್‌ಬಾಲ್ ದಿಗ್ಗಜ ಪೆಲೆ ಅವರು ಉಕ್ರೇನ್ ಮೇಲಿನ ಯುದ್ಧವನ್ನು ನಿಲ್ಲಿಸಿ ಶಾಂತಿ ಸ್ಥಾಪಿಸಬೇಕು ಎಂದು ಕರೆ ನೀಡಿದ್ದಾರೆ.

‘ಇವತ್ತು ಉಕ್ರೇನ್ ದೇಶದವರು ಕನಿಷ್ಠ 90 ನಿಮಿಷಗಳ ಅವಧಿಗೆ ಯುದ್ಧದ ಕರಾಳತೆಯನ್ನು ಮರೆತಿರಬಹುದು. ಯುದ್ಧಕ್ಕೆ ಅವರ ದೇಶವು ತತ್ತರಿಸಿದೆ. ಹಲವರು ಜೀವ ಕಳೆದುಕೊಂಡಿದ್ದಾರೆ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿಯೂ ಆಟಗಾರರು ಉತ್ತಮವಾಗಿ ಸಾಧನೆ ಮಾಡಿದ್ದಾರೆ. ಆದ್ದರಿಂದ ಯುದ್ಧ ನಿಲ್ಲಿಸುವತ್ತ ಚಿತ್ತ ಹರಿಸಬೇಕು’ ಎಂದಿದ್ದಾರೆ.

ಬೆಂಗಳೂರಿನಲ್ಲಿ ಮಿನಿ ಗ್ರ್ಯಾನ್ ಪ್ರಿ

ಬೆಂಗಳೂರು: ಎಫ್‌ಐಎಮ್ ಮಿನಿ ಗ್ರ್ಯಾನ್ ಪ್ರಿ ವಿಶ್ವ ಸಿರೀಸ್ 2022ರ ಮೋಟರ್ ರೇಸ್‌ಗಳು ಬೆಂಗಳೂರು ಮತ್ತು ಹೈದರಾಬಾದ್‌ನಲ್ಲಿ ಜುಲೈನಿಂದ ನಡೆಯಲಿವೆ.

ಮಿನಿ ಜಿಪಿ ವಿಶ್ವ ಸರಣಿ ಇಂಡಿಯಾ 10ರಿಂದ 14 ವರ್ಷದೊಳಗಿನವರಿಗಾಗಿ ರೇಸ್‌ಗಳನ್ನು ಆಯೋಜಿಸಲಿದ್ದು, ಜುಲೈ 2 ಮತ್ತು 3ರಂದು ಮೆಕೊ ಕಾರ್ಟೊಪಿಯಾದಲ್ಲಿ ಆಯ್ಕೆ ಟ್ರಯಲ್ಸ್ ಮೂಲಕ ಆರಂಭವಾಗಲಿವೆ.

ಜುಲೈ 23 ಮತ್ತು 24ರಂದು ಇಲ್ಲಿ ಐದು ಸುತ್ತುಗಳು ನಡೆಯಲಿವೆ.

ಶೂಟಿಂಗ್: ನರೇನ್, ಜ್ಯೋತಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನರೇನ್ ಪ್ರಣವ್ ಗುರುವಾರ ಇಲ್ಲಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿ ಆಶ್ರಯದಲ್ಲಿ ನಡೆದ 2ನೇ ಓಪನ್ ಶೂಟಿಂಗ್ ಸ್ಪರ್ಧೆಯ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಅರ್ಜುನ್ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ 14 ವರ್ಷದ ನರೇನ್ ನಿಕಟ ಪೈಪೋಟಿಯನ್ನು ಎದುರಿಸಿ ಪ್ರಥಮರಾದರು. ತುಮಕೂರಿನ ವಿವೇಕಾನಂದ ಸ್ಪೋರ್ಟ್ಸ್ ಮತ್ತು ಕಲ್ಚರಲ್ ಅಸೋಸಿಯೇಷನ್‌ನ ಕಿರಣ್ ನಂದನ ಅವರು ಬೆಳ್ಳಿ ಮತ್ತು ಕರ್ನಾಟಕ ರೈಫಲ್ಸ್ ಅಸೋಸಿಯೇಷನ್‌ನ ಶ್ರೀಕೃಷ್ಣ ಕಂಚು ಗಳಿಸಿದರು. ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದವರಿಗೆ ಕ್ರಮವಾಗಿ ₹1 ಲಕ್ಷ, ₹ 50ಸಾವಿರ ಮತ್ತು ₹ 25 ಸಾವಿರ ನಗದು ಪ್ರಶಸ್ತಿ ನೀಡಲಾಯಿತು. ಅಂಗವಿಕಲರ ವಿಭಾಗದಲ್ಲಿ ಜ್ಯೋತಿ ಸಣ್ಣಕ್ಕಿ ಚಿನ್ನ ಗೆದ್ದರೆ, ಸಚಿನ್ ಸಿದ್ದಣ್ಣವರ್ ಬೆಳ್ಳಿ ಹಾಗೂ ಶಂಕರಲಿಂಗ ತವಳಿ ಕಂಚು ಗಳಿಸಿದರು.


ಅಂಗವಿಕಲರ ವಿಭಾಗದಲ್ಲಿ ಜ್ಯೋತಿ ಸಣ್ಣಕ್ಕಿ (ಪ್ರಥಮ), ಸಚಿನ್ ಸಿದ್ದಣ್ಣವರ್ (ದ್ವಿತೀಯ–ಎಡಭಾಗದಲ್ಲಿರುವವರು), ಶಂಕರಲಿಂಗ ತವಳಿ (ತೃತೀಯ) ಪದಕದೊಂದಿಗೆ ಸಂಭ್ರಮಿಸಿದರು

ಜುಲೈ– ಆಗಸ್ಟ್‌ನಲ್ಲಿ ಭಾರತ ವಿಂಡೀಸ್ ಕ್ರಿಕೆಟ್ ಸರಣಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ಜುಲೈ 22 ರಿಂದ ಆಗಸ್ಟ್ 7ರವರಗೆ ವೆಸ್ಟ್ ಇಂಡೀಸ್ ಪ್ರವಾಸ ಕೈಗೊಳ್ಳಲಿದೆ.

ಉಭಯ ತಂಡಗಳು 3 ಏಕದಿನ ಮತ್ತು 5 ಟಿ20 ಪಂದ್ಯಗಳ ಸರಣಿಗಳನ್ನು ಆಡಲಿವೆ. ಟ್ರಿನಿಡಾಡ್, ಟೊಬ್ಯಾಗೊ ಮತ್ತು ಸೇಂಟ್ ಕಿಟ್ಸ್ – ನೇವಿಸ್ ನಲ್ಲಿ ಏಕದಿನ ಸರಣಿ ಮತ್ತು ಮೂರು ಟಿ20 ಪಂದ್ಯಗಳು ನಡೆಯಲಿವೆ. ಅಮೆರಿಕದ ಫ್ಲಾರಿಡಾದ ಫೋರ್ಟ್ ಲಾಡರ್‌ಹಿಲ್‌ನಲ್ಲಿ ಎರಡು ಟಿ20 ಪಂದ್ಯಗಳ ಆಯೋಜಿಸಲಾಗುವುದು. ಜುಲೈ 22 ರಿಂದ 27ರವರೆಗೆ ಮೂರು ಏಕದಿನ ಪಂದ್ಯಗಳು ನಡೆಯಲಿವೆ. 29ರಂದು ಪೋರ್ಟ್ ಆಫ್ ಸ್ಪೇನ್‌ನಲ್ಲಿರುವ ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ 29ರಂದು ಮೊದಲ ಟಿ20 ನಡೆಯಲಿದೆ.